ಮಂಗಳವಾರ, ಜೂನ್ 16, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಕ್ತದಾನಿಗಳ ದಿನ

ಹುಬ್ಬಳ್ಳಿಯಲ್ಲಿ ವಿಶ್ವ ರಕ್ತದಾನಿಗಳ ದಿನದ ಪ್ರಯುಕ್ತ ಸೋಮವಾರ ಆಯೋಜಿಸಿದ್ದ ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು

ಪ್ರತಿಭಟನೆ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ ಅಪ್ನಾ ದಳ (ಕೆ) ಪಕ್ಷದ ಶಾಸಕಿ ಪಲ್ಲವಿ ಪಟೇಲ್ ಅವರು ಬೆಂಬಲಿಗರೊಂದಿಗೆ ವಾರಾಣಸಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

SYNDICATE FINANCE

www.syndicatefinance.in

LICENSED
LICENSED
ENTITY

Estd. 1977

BUSINESS LOAN

Against mortgage of immovable property

Long Term & Easy Instalment Facilities.

Pioneering a New Era of
Smart Lending for Corporates & MSMEs

Scan For Details

(022) 6581 0001 / 3565 7754 / 3565 7941

E-mail : info@syndicatefinance.in

428, Rawal Bldg. No. 1,
1st Floor Lamington Road,
Mumbai-400 004

Contact : 11 am to 5 pm

prajavani.net prajavani
ಮಂಗಳವಾರ, ಜೂನ್ 16, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 166 | ಪುಟ 16
www.prajavani.net


ಚೋಪ್ರಾ ಕಣಕ್ಕೆ
ಗಾಯದಿಂದ ಚೇತರಿಸಿಕೊಂಡಿರುವ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಇದೇ 19ರಂದು ನಡೆಯುವ ದೋಹಾ ಡೈಮಂಡ್ ಲೀಗ್ ಮೂಲಕ ಸ್ಪರ್ಧಾಕಣಕ್ಕೆ ಮರಳಲಿದ್ದಾರೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,264 | ನಿಫ್ಟಿ 23,853 | $/₹ 94.58 | ಚಿನ್ನ (Std. 10g) ₹1,56,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,66,700 (ಬೆಂಗಳೂರು)

ಆರ್‌ಟಿಐ ಚಳವಳಿ ಎಂಬುದು ಹೊಸ ವ್ಯವಹಾರವಾಗಿದೆ: ‘ಸುಪ್ರೀಂ’

ನವದೆಹಲಿ (ಪಿಟಿಐ): ‘ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಹೆಸರಿನಲ್ಲಿ ನಡೆಸುತ್ತಿರುವುದು ಚಳವಳಿಯಲ್ಲ ವ್ಯವಹಾರವಾಗಿದೆ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ

ರಸ್ತೆ ನಿರ್ಮಾಣದ ಮೇಲುಸ್ತುವಾರಿ ವಹಿಸಿದ್ದ ಸರ್ಕಾರಿ ನೌಕರರೊಬ್ಬರಿಗೆ ಅಡ್ಡಿಪಡಿಸಿದ ಆರ್‌ಟಿಐ ಹೋರಾಟಗಾರ ಹಾಗೂ ಇತರರಿಗೆ ನಿರೀಕ್ಷಣಾ ಜಾಮೀನು ನಿರಾಕರಿಸಿದ ನ್ಯಾಯಾಲಯ ಈ ಅಭಿಪ್ರಾಯಪಟ್ಟಿದೆ.

ಆರ್‌ಟಿಐ ಕಾರ್ಯಕರ್ತ ರಾಕೇಶ್ ಕುಮಾರ್ ಬೆಹ್ಲ್ ಹಾಗೂ ಅವರ ಆಪ್ತನಿಗೆ ಜಾಮೀನು ನೀಡಲು ನಿರಾಕರಿಸಿದ ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಹಾಗೂ ವಿಜಯ್ ಬಿಷ್ಣೋಯಿ ಅವರಿದ್ದ ನ್ಯಾಯಪೀಠವು, ರಸ್ತೆ ನಿರ್ಮಾಣದ ಮೇಲ್ವಿಚಾರಣೆಯ ಆರ್‌ಟಿಐ ಕಾರ್ಯಕರ್ತರ ಅಧಿಕಾರವನ್ನು ಪ್ರಶ್ನಿಸಿತು.

‘ಆರ್‌ಟಿಐ ಚಳವಳಿ ಎಂಬುದು ಹೊಸ ಮಾದರಿಯ ವ್ಯವಹಾರವಾಗಿದೆ. ರಸ್ತೆ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರವು ಅನುದಾನ ನೀಡುತ್ತದೆ. ನೀವೂ ಏನೂ ಅಲ್ಲ.. ಪೀತ ಪತ್ರಿಕೋದ್ಯಮ...ವಜಾಗೊಳಿಸಲಾಗಿದೆ’ ಎಂದು ನ್ಯಾಯಮೂರ್ತಿ ಮೆಹ್ತಾ ತಿಳಿಸಿದರು.

ಇದೇ ಧಾಟಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಮೂರ್ತಿ ಬಿಷ್ಣೋಯಿ ಅವರು, ‘ರಸ್ತೆ ನಿರ್ಮಾಣ ಕಾರ್ಯಕ್ಕೆ ಮೇಲುಸ್ತುವಾರಿ ವಹಿಸಲು ನೀವು ಯಾರು..? ನೀವೇನು ಮೇಲಧಿಕಾರಿಗಳೋ’ ಎಂದು ಪ್ರಶ್ನಿಸಿದ್ದಾರೆ.

ರಸ್ತೆ ನಿರ್ಮಾಣ ಕಾರ್ಯದಲ್ಲಿ ವ್ಯಾಪಕ ಭ್ರಷ್ಟಾಚಾರವೆಸಗಲಾಗಿದೆ. ಇಬ್ಬರನ್ನೂ ಈ ಪ್ರಕರಣದಲ್ಲಿ ತಪ್ಪಾಗಿ ಸಿಲುಕಿಸಲಾಗಿದೆ ಎಂದು ಅವರ ಪರ ವಕೀಲರು ವಾದ ಮಂಡಿಸಿದರು.

ಈ ಪ್ರಕರಣದಲ್ಲಿ ತಮ್ಮ ಕಕ್ಷಿದಾರರಿಗೆ ಪಂಜಾಬ್ ಹಾಗೂ ಹರಿಯಾಣ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಲು ನಿರಾಕರಿಸಿದ್ದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಪ್ರಕರಣವೇನು..?: ಆರ್‌ಟಿಐ ಕಾರ್ಯಕರ್ತ ರಾಕೇಶ್ ಕುಮಾರ್ ಬೆಹ್ಲ್ ಹಾಗೂ ಅವರ ಸಹವರ್ತಿ ಮಿಂಟೂ ಪಂಜಾಬ್‌ನ ಗುರುದಾಸ್‌ಪುರ ಜಿಲ್ಲೆಯ ಬಟಾಲಾದಲ್ಲಿ ನಡೆಯುತ್ತಿದ್ದ ರಸ್ತೆ ನಿರ್ಮಾಣ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದರು ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಅವಹೇಳನಕಾರಿಯಾಗಿ ನಿಂದಿಸಿದ್ದು, ದೂರುದಾರರ ಮೇಲೂ ಹಲ್ಲೆ ಮಾಡಿದ್ದರು ಎಂದು ತಿಳಿಸಲಾಗಿದೆ. ಆರೋಪಿಗಳ ವಿರುದ್ಧ ಬಿಎನ್‌ಎಸ್‌ನ ವಿವಿಧ ಸೆಕ್ಷನ್ ಹಾಗೂ ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ವಿರೋಧಿ ಕಾಯ್ದೆಯ ಅಡಿಯಲ್ಲೂ ಪ್ರಕರಣ ದಾಖಲಿಸಲಾಗಿತ್ತು.

ಆರ್‌ಎಸ್‌ಎಸ್‌ನ ಕಾನೂನುಬದ್ಧತೆ ಏನು?

‘ಆರ್‌ಎಸ್‌ಎಸ್‌ನ ಸಾಂಸ್ಥಿಕ ಮತ್ತು ಕಾನೂನುಬದ್ಧ ಸ್ಥಿತಿಗತಿ ಕುರಿತು ಸ್ಪಷ್ಟನೆ ನೀಡಬೇಕು’ ಎಂದು ಕೋರಿ, ಆರ್‌ಎಸ್‌ಎಸ್‌ನ ಸರ ಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ.

ವಿವರ 9

ಕರ್ನಾಟಕದ ಅರ್ಹರಿಗಷ್ಟೆ ಗ್ಯಾರಂಟಿ: ಡಿಕೆಶಿ

‘ಗೃಹ ಲಕ್ಷ್ಮಿ, ಗೃಹ ಜ್ಯೋತಿ ಯೋಜನೆಗಳು ಕರ್ನಾಟಕದ ಅರ್ಹರಿಗೆ ತಲುಪಬೇಕು ಎಂಬುದು ಸರ್ಕಾರದ ಉದ್ದೇಶವೇ ಹೊರತು, ಯೋಜನೆಗಳನ್ನು ನಿಲ್ಲಿಸುವುದು ಅಲ್ಲ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುನರುಚ್ಚರಿಸಿದರು.

ವಿವರ 8

ಚಿನಕುರುಳಿ ಪ್ರಕಾಶ್ ಶೆಟ್ಟಿ

ನೌಕರರಿಗೆ ‘ಕರ್ತವ್ಯ’ ಕಡ್ಡಾಯ

ಐಎಎಸ್ ಅಧಿಕಾರಿಗಳೂ ಸೇರಿದಂತೆ ಎಲ್ಲರ ಮೇಲೂ ‘ಎಐ’ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್, ಕೆಎಎಸ್ ಶ್ರೇಣಿಯ ಅಧಿಕಾರಿಗಳೂ ಸೇರಿದಂತೆ ಸರ್ಕಾರಿ ನೌಕರರು ಇನ್ನು ಮುಂದೆ ನೆಪ ಹೇಳಿ ಕಚೇರಿಗಳಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಮ್ಮ ಕರ್ತವ್ಯದ ಸ್ಥಳದಲ್ಲಿ ಇದ್ದಾರೋ, ಇಲ್ಲವೋ ಎನ್ನುವ ಪ್ರತಿ ದಿನದ ಸಂಪೂರ್ಣ ಮಾಹಿತಿ ಸರ್ಕಾರಕ್ಕೆ ಲಭ್ಯವಾಗಲಿದೆ.

ರಾಜ್ಯ ಸರ್ಕಾರಿ ನೌಕರರ ಚಲನವಲನ ದಾಖಲಿಸುವ ಜಿಯೊ ಟ್ಯಾಗ್, ಮುಖಚರ್ಯೆ ಒಳಗೊಂಡ ಇ–ಹಾಜರಾತಿಯನ್ನು (ಕರ್ತವ್ಯ) ಬಾಕಿ ಉಳಿದ ಎಲ್ಲ ಇಲಾಖೆ, ನಿಗಮ–ಮಂಡಳಿಗಳೂ ತಕ್ಷಣವೇ ಕಡ್ಡಾಯವಾಗಿ ಅಳವಡಿಸಿಕೊಂಡು ನಿತ್ಯದ ಹಾಜರಾತಿ ವಿವರ ಒದಗಿಸುವಂತೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ (ಸಿಇಒ) ಸಭೆಯಲ್ಲಿ, ‘ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಕೇಂದ್ರ ಕಚೇರಿಗಳಲ್ಲಿ ಬೆಳಿಗ್ಗೆ ಹಾಜರಿರಬೇಕು. ಶೇಕಡ 100 ಹಾಜರಾತಿ ಇರಬೇಕು. ಹೊರಗೆ ಹೋಗುವ ಅಗತ್ಯವಿದ್ದರೆ ಆಯಾ ದಿನದ ಪ್ರವಾಸದ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು’ ಎಂದು ತಾಕೀತು ಮಾಡಿದ್ದರು.

‘ಕಾಮ್ಸ್’ ಹಾಜರಾತಿಯಿಂದ ಅಧಿಕಾರಿಗಳ ಭೌತಿಕ ಲಭ್ಯತೆ, ವಿಶ್ವಾಸಾರ್ಹತೆ ಖಾತರಿ ಪಡಿಸಲಾಗುತ್ತಿದೆ. ಇದು ದೇಶದಲ್ಲೇ ಮೊದಲ ನಾಗರಿಕ ಕೇಂದ್ರಿತ ಸುಧಾರಣೆ
ಶಾಲಿನಿ ರಜನೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ

ಮುಖ್ಯಸ್ಥರೇ ಸರಿಯಾದ ಸಮಯಕ್ಕೆ ಹಾಜರಾಗುವುದು ಸಿಬ್ಬಂದಿಯ ಜವಾಬ್ದಾರಿ ಹೆಚ್ಚಿಸಲಿದೆ. ಹಾಗೆಯೇ, ತಾಂತ್ರಿಕ ಸಮಸ್ಯೆ ಬಗೆಹರಿಸಬೇಕು
ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

8

42	4.78 ಲಕ್ಷ	3.01 ಲಕ್ಷ	2.32
ರಾಜ್ಯ ಸರ್ಕಾರದ ಇಲಾಖೆಗಳು	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು	‘ಕಾಮ್ಸ್’ ಅಳವಡಿಸಿಕೊಂಡ ಉದ್ಯೋಗಿಗಳು	ಕಾಮ್ಸ್ ಬಳಸಿ ಹಾಜರಾತಿ ನೀಡುತ್ತಿರುವವರು

ವೈಶಿಷ್ಟ್ಯಗಳು

- ಕೃತಕ ಬುದ್ಧಿಮತ್ತೆ ಆಧಾರಿತ ಮುಖಚರ್ಯೆ ಗುರುತಿಸುವಿಕೆ ವ್ಯವಸ್ಥೆ
- ವಂಚನೆಯ ಹಾಜರಾತಿ ತಡೆಗೆ ಸ್ಥಳ ಗುರುತಿಸುವ ತಂತ್ರಜ್ಞಾನ
- ಕಚೇರಿಯ ನಿಗದಿತ ಪರಿಧಿಯ ಹಾಜರಿಗೆ ಜಿಯೋಫೆನ್ಸಿಂಗ್ ಜಿಐಎಸ್ ತಂತ್ರಜ್ಞಾನ
- ಆಧಾರ್ ಇ-ಕೆವೈಸಿ ಮತ್ತು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯೊಂದಿಗೆ ಸಂಯೋಜನೆ
- ಆ್ಯಂಡ್ರಾಯ್ಡ್ ಮತ್ತು ಐಒಎಸ್ ಆ್ಯಪ್‌ಗಳ ಮೂಲಕ ಹಾಜರಾತಿ, ರಜೆ, ಒಒಡಿ ದಾಖಲಿಸುವ ಸೌಲಭ್ಯ

‘ಕಾಮ್ಸ್’ ಹೇಗೆ ಕೆಲಸ ಮಾಡುತ್ತದೆ?

ಯಾವುದೇ ಬಾಹ್ಯ ಖಾಸಗಿ ತಂತ್ರಜ್ಞಾನ ಸಂಸ್ಥೆಗಳ ನೆರವಿಲ್ಲದೆ, ಸಂಪೂರ್ಣವಾಗಿ ಸರ್ಕಾರದ ಪರಿಸರ ವ್ಯವಸ್ಥೆಯಲ್ಲೇ ‘ಕರ್ತವ್ಯ (ಕಾಮ್ಸ್)’ ಸಾಫ್ಟ್‌ವೇರ್ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಉಸ್ತುವಾರಿಯಲ್ಲಿ, ಇ–ಆಡಳಿತ ಕೇಂದ್ರ ಮತ್ತು ಕೃತಕ ಬುದ್ಧಿಮತ್ತೆ ವಿಭಾಗ ಜಂಟಿಯಾಗಿ ಸಿದ್ಧಪಡಿಸಿವೆ. ಸರ್ಕಾರದ ಹಂತದಲ್ಲಿ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯೇ ಮುಂದು

ವಾರದ ಹಿಂದೆ 2.46 ಲಕ್ಷ ಇದ್ದ ನೋಂದಾಯಿತ ಉದ್ಯೋಗಿಗಳ ಸಂಖ್ಯೆ ಈಗ 3.01 ಲಕ್ಷಕ್ಕೆ ಏರಿಕೆಯಾಗಿದೆ. ಒಂದೇ ವಾರದಲ್ಲಿ ಶೇ 25ರಷ್ಟು ಹೆಚ್ಚಳವಾಗಿದ್ದು, ಸುಮಾರು 55,000 ನೌಕರರು ಸೇರ್ಪಡೆಯಾಗಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯಲ್ಲಿ ಅತಿ ಹೆಚ್ಚು ಅಂದರೆ 1,76,055 ನೌಕರರಲ್ಲಿ 1,68,252 ನೌಕರರು ನೋಂದಾಯಿಸಿಕೊಂಡಿದ್ದು, 1,41,800 ಮಂದಿ ಕಾಮ್ಸ್ ಬಳಸುತ್ತಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 66,969 ಅಧಿಕಾರಿಗಳು ಮತ್ತು ಸಿಬ್ಬಂದಿ ನೋಂದಣಿ ಮಾಡಿಕೊಂಡಿದ್ದು, 54,400 ಮಂದಿ ಬಳಕೆ ಮಾಡುತ್ತಿದ್ದಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆ, ಆಯುಷ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೈಗಾರಿಕೆ, ತರಬೇತಿ ಮತ್ತು ಉದ್ಯೋಗ ಇಲಾಖೆಗಳು ಈಗಾಗಲೇ ಶೇ 90ರಷ್ಟು ಬಳಸುತ್ತಿವೆ ಎಂದು ಶಾಲಿನಿ ರಜನೀಶ್ ಮಾಹಿತಿ ನೀಡಿದ್ದಾರೆ.

‘ಇರಾನ್ ಜೊತೆ ಶಾಂತಿ ಒಪ್ಪಂದಕ್ಕೆ ಶುಕ್ರವಾರ ಸಹಿ’

ವಾಷಿಂಗ್ಟನ್/ಇಸ್ಲಾಮಾಬಾದ್ (ಪಿಟಿಐ/ಎಪಿ): ಇರಾನ್ ವಿರುದ್ಧದ 107 ದಿನಗಳ ಯುದ್ಧ ಕೊನೆಗೊಳಿಸುವ ಶಾಂತಿ ಒಪ್ಪಂದದ ಅಂಶಗಳನ್ನು ಅಂತಿಮಗೊಳಿಸಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

‘ಇಸ್ಲಾಮಿಕ್ ರಿಪಬ್ಲಿಕ್ ಆಗಿರುವ ಇರಾನ್ ಜೊತೆಗಿನ ಒಪ್ಪಂದ ಅಂತಿಮಗೊಂಡಿದೆ. ಎಲ್ಲರಿಗೂ ಅಭಿನಂದನೆಗಳು’ ಎಂದು ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರೂತ್ ಸೋಷಿಯಲ್’ನಲ್ಲಿ ಭಾನುವಾರ ಬರೆದುಕೊಂಡಿದ್ದಾರೆ. ಆ ಮೂಲಕ, ಜಾಗತಿಕವಾಗಿ ತಲೆದೋರಿದ್ದ ಇಂಧನ ಬಿಕ್ಕಟ್ಟು ಕೊನೆಯಾಗುವ ನಿರೀಕ್ಷೆ ಹೆಚ್ಚಿದೆ.

‘ಹೊರ್ಮುಜ್ ಜಲಸಂಧಿ ಶುಲ್ಕರಹಿತ ಸಂಚಾರಕ್ಕೆ ಮುಕ್ತಗೊಳ್ಳುವುದು ಮತ್ತು ಇರಾನ್ ಬಂದರುಗಳ ಮೇಲೆ ಅಮೆರಿಕ ನೌಕಾ ಪಡೆಯ ದಿಗ್ಬಂಧನವನ್ನು ತೆರವುಗೊಳಿಸುವುದಕ್ಕೆ ನಾನು ಸಂಪೂರ್ಣ ಒಪ್ಪಿಗೆ ನೀಡುತ್ತಿದ್ದೇನೆ. ಜಗತ್ತಿನ ಹಡಗುಗಳ ಎಂಜಿನ್ ಕಾರ್ಯ ನಿರ್ವಹಿಸಲಿ ಮತ್ತು ತೈಲ ಸಾಗಣೆ ಆರಂಭವಾಗಲಿ’ ಎಂದು ಅವರು ಹೇಳಿದ್ದಾರೆ.

ಆದರೆ, ‘ಒಪ್ಪಂದಕ್ಕೆ ಜೂನ್ 19ರಂದು ಅಧಿಕೃತ ಸಹಿ ಬಿದ್ದ ನಂತರವಷ್ಟೇ ಜಲಸಂಧಿಯು ಸಂಚಾರಕ್ಕೆ ಮುಕ್ತವಾಗಲಿದೆ’ ಎಂದೂ ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ.


ಮಾತುಕತೆ ಯಶಸ್ವಿ: ಡೊನಾಲ್ಡ್ ಟ್ರಂಪ್

ವ್ಯಾನ್ಸ್ ನೇತೃತ್ವದ ತಂಡ: ಒಪ್ಪಂದಕ್ಕೆ ಸಹಿ ಹಾಕಲು ಸ್ವಿಟ್ಜರ್ಲೆಂಡ್‌ಗೆ ತೆರಳಲಿರುವ ಅಮೆರಿಕದ ನಿಯೋಗದ ನೇತೃತ್ವ ವನ್ನು ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ವಹಿಸಲಿದ್ದಾರೆ ಎಂದು ಟ್ರಂಪ್ ತಿಳಿಸಿದರು. ಜಿ–7ರ ಶೃಂಗದಲ್ಲಿ ಭಾಗವಹಿಸಲು ಫ್ರಾನ್ಸ್‌ಗೆ ಬಂದಿಳಿದ ಟ್ರಂಪ್ ಮಾಧ್ಯಮದವರ ಜತೆ ಮಾತನಾಡಿ, ‘ಒಪ್ಪಂದಕ್ಕೆ ಸಹಿ ಹಾಕಲು ವ್ಯಾನ್ಸ್ ಬರುತ್ತಾರೆ’ ಎಂದು ಪ್ರತಿಕ್ರಿಯಿಸಿದರು.

10

ಕಚ್ಚಾ ತೈಲ ದರ ಮೂರು ತಿಂಗಳ ಕನಿಷ್ಠಕ್ಕೆ

ಲಂಡನ್ (ರಾಯಿಟರ್ಸ್): ಶಾಂತಿ ಒಪ್ಪಂದದ ಕುರಿತು ಸೋಮವಾರ ಘೋಷಣೆಯಾಗುತ್ತಿದ್ದಂತೆಯೇ ತೈಲ ದರವು ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿಯಿತು.

ಬ್ರೆಂಟ್ ಕಚ್ಚಾ ತೈಲದ ದರವು ಶೇಕಡ 4.8ರಷ್ಟು ಕುಸಿದು, 83.17 ಡಾಲರ್‌ಗೆ ತಲುಪಿತು. ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾ ತೈಲ ದರವು ಶೇ 5.2ರಷ್ಟು ಕುಸಿದು 80.49 ಡಾಲರ್ ಆಗಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆಯಾಗಲಿದೆ.

‘ಕಸದ ಟೆಂಡರ್: ಪತ್ರ ಚಳವಳಿ ಮಾಡಿ’

ಹೈಕಮಾಂಡ್‌ಗೆ ಗಾರ್ಬೇಜ್‌ನಿಂದ ‘ಲಗೇಜ್’: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ಬೆಂಗಳೂರು: ‘ಎಲ್ಲ ಸಂಘಟನೆಗಳು, ನಾಗರಿಕರು ಕಸದ ಟೆಂಡರ್ ಹಗರಣದ ವಿರುದ್ಧ ರಾಜ್ಯಪಾಲರಿಗೆ ಹಾಗೂ ರಾಷ್ಟ್ರಪತಿಗೆ ಪತ್ರ ಬರೆಯಬೇಕು. ನಗರದ ಗಾರ್ಬೇಜ್‌ನಿಂದ ಕಾಂಗ್ರೆಸ್ ಹೈಕಮಾಂಡ್‌ಗೆ ಲಗೇಜ್ ಸಿಗುತ್ತಿದ್ದು, ಜನರಿಗೆ ಡ್ಯಾಮೇಜ್ ಆಗಲಿದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಕಸದ ಟೆಂಡರ್ ಬೆಂಗಳೂರಿನ ಜನರಿಗೆ ಹೊರೆಯಾಗಲಿದೆ. ಹೀಗಾಗಿ, ಈ ಕುರಿತು ಜನರು ಪತ್ರ ಚಳವಳಿ ಮಾಡಬೇಕು. ಎಲ್ಲ ಸಂಘ ಸಂಸ್ಥೆಗಳು, ಅಪಾರ್ಟ್‌ಮೆಂಟ್ ಸಂಘಗಳು, ಹಿರಿಯ ನಾಗರಿಕರು, ವಿದ್ಯಾರ್ಥಿಗಳು ಎಲ್ಲರೂ ಪತ್ರ ಬರೆಯಬೇಕು’ ಎಂದರು.

‘ಬೆಂಗಳೂರಿನ ಘನತ್ಯಾಜ್ಯ ಸಂಸ್ಕರಣೆಗೆ ಟೆಂಡರ್ ನೀಡಿರುವುದು ದೊಡ್ಡ ಹಗರಣ. ಪ್ರಾಮಾಣಿಕತೆಯಿಂದ ವರದಿ ತಯಾರಿಸಬೇಕೆಂದು ಉನ್ನತ ಮಟ್ಟದ ಪರಿಶೀಲನಾ ಸಮಿತಿಗೆ ನಾನು ಪತ್ರ ಬರೆದಿದ್ದೇನೆ’ ಎಂದರು.

‘ಕಸದ ಹಗರಣವನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಲು ಸಿದ್ಧ. ಆದರೆ, ಅದನ್ನು ಸರ್ಕಾರ ಅನುಮೋದಿಸಬೇಕು. ಶಿವಕುಮಾರ್ ಮುಂದಿನ 60 ವರ್ಷದ ಅವಧಿಗೆ ಕಸದ ಟೆಂಡರ್ ವಹಿಸಿದ್ದಾರೆ. ಇದು ಜಾತಿಯ ಪ್ರಶ್ನೆ ಅಲ್ಲ. ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಬೆಂಗಳೂರಿಗೆ ಬಂದು ಕಸ ಗುಡಿಸಿದ್ದಾರೆ ಎಂದರೆ ಅದರ ಸೂಕ್ಷ್ಮತೆ ಅರ್ಥ ಮಾಡಿಕೊಳ್ಳಬೇಕು’ ಎಂದರು.

ಮುಖ್ಯಾಂಶಗಳು
- ಬೆಂಗಳೂರಿನ ಜನರಿಗೆ ಹೊರೆಯಾಗಲಿರುವ ಕಸದ ಟೆಂಡರ್
- ಘನತ್ಯಾಜ್ಯ ಸಂಸ್ಕರಣೆ ಟೆಂಡರ್ ಅತಿ ದೊಡ್ಡ ಹಗರಣ–ಆರ್.ಅಶೋಕ

ವಿದ್ಯುತ್ ಖಾಸಗೀಕರಣ: ಸಂಘಟನೆಗಳ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು; ‘ರಾಜ್ಯದಲ್ಲಿ ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸಬಾರದು ಮತ್ತು ಟಾಟಾ ವಿದ್ಯುತ್ ಕಂಪನಿಗೆ ವಿದ್ಯುತ್ ವಿತರಣೆ ಜವಾಬ್ದಾರಿ ನೀಡಬಾರದು’ ಎಂದು ರೈತ– ಕನ್ನಡಪರ ಸಂಘಟನೆಗಳು, ಅಪಾರ್ಟ್‌ಮೆಂಟ್ ಮಾಲೀಕರ ಸಂಘ, ರಾಜ್ಯ ವಿದ್ಯುತ್ ಗ್ರಾಹಕರ ಸಂಘದ ಪದಾಧಿಕಾರಿಗಳು ಆಗ್ರಹಿಸಿದರು.

ರೇಸ್‌ಕೋರ್ಸ್ ರಸ್ತೆಯ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಸೋಮವಾರ ಸಮಾವೇಶಗೊಂಡಿದ್ದ ಮುಖಂಡರು, ಸರ್ಕಾರದ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರು ಮತ್ತು ಅಧಿಕಾರಿಗಳ ಒಕ್ಕೂಟದ ಅಧ್ಯಕ್ಷ ಕೆ. ಬಲರಾಂ, ‘ಖಾಸಗೀಕರಣವಾದರೆ ರೈತರು, ಜನ ಸಾಮಾನ್ಯರಿಗೆ ಹೊಡೆತ ಬೀಳಲಿದೆ. ಬಹುತೇಕ ಶಾಸಕರೂ ನಮ್ಮನ್ನು ಬೆಂಬಲಿಸಿದ್ದಾರೆ’ ಎಂದರು.

ರಾಜ್ಯ ರೈತ ಸಂಘದ ಮುಖಂಡ ಕುರುಬೂರು ಶಾಂತಕುಮಾರ್, ಒಕ್ಕೂಟದ ಮಹಾ ಪ್ರಧಾನ ಕಾರ್ಯದರ್ಶಿ ಸಿ. ಬಸವಣ್ಣ, ಕವಿಮಮಂ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ದೇಸಾಯಿ ಪಾಲ್ಗೊಂಡಿದ್ದರು.

ಇಸ್ಕಾನ್ ವರ್ಷಾಚರಣೆ ಸಂಭ್ರಮ

ಬೆಂಗಳೂರು: ಮಲ್ಲೇಶ್ವರದ ಗ್ಲೋಬಲ್ ಸಿಟಿ ಅಂತರರಾಷ್ಟ್ರೀಯ ಶಾಲೆಯಲ್ಲಿ ಇಸ್ಕಾನ್– ವೈಟ್‌ಫೀಲ್ಡ್‌ನ 60ನೇ ವರ್ಷಾಚರಣೆ ಪ್ರಯುಕ್ತ ಆಯೋಜಿಸಿದ್ದ ‘ಭಕ್ತಿ ನಡಿಗೆ’ಯಲ್ಲಿ 1,200ಕ್ಕೂ ಹೆಚ್ಚು ಭಕ್ತರು ಪಾಲ್ಗೊಂಡರು.

ವಿದ್ಯಾರ್ಥಿಗಳು, ಯುವಕರು, ನಾಗರಿಕರು ನಡಿಗೆಯಲ್ಲಿ ಭಾಗವಹಿಸಿ ಅಧ್ಯಾತ್ಮದ ಹವ್ಯಾಸಗಳು, ನಿರಂತರ ಧ್ಯಾನ, ಓದು, ನೈತಿಕ ಮೌಲ್ಯಗಳ ಅನುಸರಣೆ, ಶಿಸ್ತಿನ ಜೀವನಶೈಲಿಯ ಕುರಿತು ಅರಿತರು. ಇಸ್ಕಾನ್ ಸಂಸ್ಥಾಪಕರಾದ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರ ಕೊಡುಗೆಯನ್ನು ನೆನೆದರು.

ಶೂನ್ಯ ವೆಚ್ಚದಲ್ಲಿ ವಿದ್ಯುತ್ ಪ್ರಸರಣ ಸಾಮರ್ಥ್ಯ ಹೆಚ್ಚಳ

‘ಡಿಎಲ್‌ಆರ್’ ತಂತ್ರಜ್ಞಾನ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ವಿದ್ಯುತ್ ಪ್ರಸರಣ ಜಾಲದ ಆಧುನೀಕರಣದತ್ತ ಮಹತ್ವದ ಹೆಜ್ಜೆಯನ್ನಿಟ್ಟಿದ್ದು, ಶೂನ್ಯ ವೆಚ್ಚದಲ್ಲಿ ವಿದ್ಯುತ್ ಪ್ರಸರಣ ಸಾಮರ್ಥ್ಯವನ್ನು ಶೇಕಡಾ 25ರಷ್ಟು ಹೆಚ್ಚಳ ಮಾಡುವ ನಿಟ್ಟಿನಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಗೆ ಮುಂದಾಗಿದೆ.

ನಗರದ ಪುಟ್ಟೇನಹಳ್ಳಿ-ಸಹಕಾರ ನಗರ 220 ಕೆ.ವಿ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ‘ಡೈನಾಮಿಕ್ ಲೈನ್ ರೇಟಿಂಗ್’ (ಡಿಎಲ್‌ಆರ್) ಪ್ರಾಯೋಗಿಕ ಯೋಜನೆ ಆರಂಭಿಸಿದೆ. ಈ ಯೋಜನೆಯ ಅನುಷ್ಠಾನಕ್ಕೆ ಕಾರ್ಯಾದೇಶ ಪತ್ರವನ್ನು ನೀಡುವ ಮೂಲಕ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿರುವ ದಕ್ಷಿಣ ಭಾರತದ ಮೊದಲ ರಾಜ್ಯ ವಿದ್ಯುತ್ ಪ್ರಸರಣ ನಿಗಮವಾಗಿ ಹೊರಹೊಮ್ಮಿದೆ.

ಯಾವುದೇ ಹೆಚ್ಚುವರಿ ಟವರ್‌ಗಳ ನಿರ್ಮಾಣ ಅಥವಾ ಹೊಸ ಭೂಸ್ವಾಧೀನದ ಅಗತ್ಯವಿಲ್ಲದೆ, ಅಸ್ತಿತ್ವದಲ್ಲಿರುವ ಮೂಲಸೌಕರ್ಯದ ವಿದ್ಯುತ್ ಪ್ರಸರಣ ಸಾಮರ್ಥ್ಯವನ್ನು ಶೇಕಡಾ 25ರಷ್ಟು ಹೆಚ್ಚಿಸುವ ಗುರಿಯನ್ನು ನಿಗಮ ಹೊಂದಿದೆ.ಈ ಯೋಜನೆಯು ಪ್ರಸ್ತುತ ಜಾರಿಯಲ್ಲಿರುವ ಸಾಂಪ್ರದಾಯಿಕ ‘ಸ್ಟಾಟಿಕ್ ಲೈನ್ ರೇಟಿಂಗ್’ ವಿಧಾನದ ಬದಲಿಗೆ, ಐಒಟಿ ಸಂವೇದಕಗಳನ್ನು ಬಳಸುತ್ತದೆ. ಈ ಸಂವೇದಕಗಳು ತಾಪಮಾನ, ಗಾಳಿಯ ವೇಗ, ಸೌರ ವಿಕಿರಣ ಮತ್ತು ವಿದ್ಯುತ್ ತಂತಿಯ ಸ್ಥಿತಿಗತಿಯನ್ನು ನೈಜ ಸಮಯದಲ್ಲಿ ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತವೆ.

ಈ ದತ್ತಾಂಶವು, ಹವಾಮಾನ ಪರಿಸ್ಥಿತಿಗನುಗುಣವಾಗಿ ವಿದ್ಯುತ್ ಹರಿವನ್ನು ಹೆಚ್ಚಿಸಲು ಗ್ರಿಡ್ ನಿರ್ವಾಹಕರಿಗೆ ಸಹಾಯ ಮಾಡುತ್ತದೆ. ರಾಜ್ಯದಲ್ಲಿನ ನಗರೀಕರಣ, ಎಲೆಕ್ಟ್ರಿಕ್ ವಾಹನಗಳ ಹೆಚ್ಚಳ, ಡೇಟಾ ಸೆಂಟರ್‌ಗಳು ಮತ್ತು ಎಐ-ಚಾಲಿತ ಕೈಗಾರಿಕೆಗಳಿಂದ ವಿದ್ಯುತ್ ಬೇಡಿಕೆ ತೀವ್ರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ತಂತ್ರಜ್ಞಾನ ಅತ್ಯಂತ ಉಪಯುಕ್ತವಾಗಿದೆ.

ಪುಟ್ಟೇನಹಳ್ಳಿ-ಸಹಕಾರನಗರ 220 ಕೆ.ವಿ. ಲೈನ್ ಅನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದ್ದು, ಇಲ್ಲಿನ ಫಲಿತಾಂಶಗಳ ಆಧಾರದ ಮೇಲೆ ಕೆಪಿಟಿಸಿಎಲ್ ರಾಜ್ಯದ ಇತರ ಹೆಚ್ಚಿನ ಬೇಡಿಕೆ ಮತ್ತು ನವೀಕರಿಸಬಹುದಾದ ಇಂಧನ ಮಾರ್ಗಗಳಿಗೆ ಈ ತಂತ್ರಜ್ಞಾನವನ್ನು ವಿಸ್ತರಿಸಲು ಯೋಜನೆ ರೂಪಿಸಿದೆ.

ವಿದ್ಯುತ್ ಜಾಲದ ಸಾಮರ್ಥ್ಯ ಹೆಚ್ಚಳ

ಪುಟ್ಟೇನಹಳ್ಳಿ-ಸಹಕಾರನಗರ ಕಾರಿಡಾರ್‌ನಲ್ಲಿ ಅಳವಡಿಸಲಾಗುತ್ತಿರುವ ಈ ಡೈನಾಮಿಕ್ ಲೈನ್ ರೇಟಿಂಗ್ ಯೋಜನೆಯು, ಲಭ್ಯವಿರುವ ಮೂಲಸೌಕರ್ಯಗಳನ್ನು ಸಮರ್ಥವಾಗಿ ಬಳಸಿಕೊಂಡು ವಿದ್ಯುತ್ ಜಾಲದ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಲಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಹೆಚ್ಚಿನ ಬಂಡವಾಳ ಹೂಡಿಕೆಯಿಲ್ಲದೆ ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಇದು ಸಹಕಾರಿಯಾಗಲಿದೆ. ಈ ತಂತ್ರಜ್ಞಾನ ಅಳವಡಿಕೆ, ರಾಜ್ಯದಲ್ಲಿ ಭವಿಷ್ಯಕ್ಕೆ ಸಜ್ಜಾದ ವಿದ್ಯುತ್ ವ್ಯವಸ್ಥೆಯನ್ನು ನಿರ್ಮಿಸಲು ಅನುವು ಮಾಡಿಕೊಡಲಿದೆ ಎಂದರು.

ಡಿಎಲ್‌ಆರ್ ವ್ಯವಸ್ಥೆ, ಪ್ರಸರಣ ಜಾಲದ ಕಾರ್ಯಾಚರಣೆಯ ದಕ್ಷತೆ ಹೆಚ್ಚಿಸಲು, ವಿದ್ಯುತ್ ಬೇಡಿಕೆ ಪೂರೈಸಲು ನೆರವಾಗಲಿದೆ
ಡಾ. ವಿ. ರಾಮ್ ಪ್ರಸಾತ್ ಮನೋಹರ್,
ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಮುಖ್ಯಾಂಶಗಳು
- ‘ಸ್ಟಾಟಿಕ್ ಲೈನ್ ರೇಟಿಂಗ್’ ಬದಲಿಗೆ ಐಒಟಿ ಸಂವೇದಕ ಬಳಕೆ
- ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ವಿದ್ಯುತ್ ಹರಿವು ಹೆಚ್ಚಿಸಲು ನೆರವು

SANSERA ideas@work

ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್

ಸಿಐಎನ್: L34103KA1981PLC004542
ನೋಂದಾಯಿತ ಕಚೇರಿ: ಪ್ಲಾಂಟ್-7, ನಂ. 143/A, ಜಿಗಣಿ ಲಿಂಕ್ ರಸ್ತೆ, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಆನೇಕಲ್ ತಾಲೂಕು, ಬೆಂಗಳೂರು - 560105;
ದೂರವಾಣಿ: +91 80 27839081/82/83; **ಫ್ಯಾಕ್ಸ್:** +91 80 27839309
ವೆಬ್‌ಸೈಟ್: www.sansera.in; **ಇಮೇಲ್:** rajesh.modi@sansera.in

ಅಂಚೆ ಮತಪತ್ರ ನೋಟಿಸ್

ಕಂಪನಿಗಳ ಕಾಯ್ದೆ, 2013 **("ಕಾಯ್ದೆ")** ರ ತಿದ್ದುಪಡಿ ಮಾಡಲಾದ ಸೆಕ್ಷನ್ 108, 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ತಿದ್ದುಪಡಿ ಮಾಡಲಾದ ನಿಯಮ 20 ಮತ್ತು ನಿಯಮ 22, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಭಾರತೀಯ ಷೇರು ವಿನಿಮಯ ಮಂಡಳಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳು, 2015 **("SEBI LODR")** ರ ರೆಗ್ಯುಲೇಷನ್ 44, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, 17/2020 ದಿನಾಂಕ ಏಪ್ರಿಲ್ 13, 2020 ಮತ್ತು ಇದರೊಂದಿಗೆ ಓದಿಕೊಳ್ಳಲಾದ ಇತರ ಸಂಬಂಧಿತ ಸುತ್ತೋಲೆಗಳು (ಇವುಗಳಲ್ಲಿ ಇತ್ತೀಚಿನದು ಸೆಪ್ಟೆಂಬರ್ 22, 2025 ರ ಸುತ್ತೋಲೆ ಸಂಖ್ಯೆ 03/2025 ಆಗಿದೆ) **("MCA ಸುತ್ತೋಲೆಗಳು")**, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ಸ್, ಹಾಗೂ ಸದ್ಯ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು-ಅಧಿನಿಯಮ(ಗಳು) ಸೇರಿದಂತೆ ಅನ್ವಯವಾಗುವ ಇತರ ಯಾವುದೇ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಈ ಮೂಲಕ **ನೋಟಿಸ್** ನೀಡಲಾಗುತ್ತಿದ್ದು, ದಿನಾಂಕ ಮೇ 21, 2026 ರ ಅಂಚೆ ಮತದಾನದ ನೋಟಿಸ್ನಲ್ಲಿ ತಿಳಿಸಲಾಗಿರುವ ನಿರ್ಣಯಗಳಿಗೆ, ರಿಮೋಟ್ ಇ-ವೋಟಿಂಗ್ **("ಇ-ವೋಟಿಂಗ್")** ಪ್ರಕ್ರಿಯೆಯ ಮೂಲಕ ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ **("ಕಂಪನಿ")** ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ.

ಮೇಲೆ ತಿಳಿಸಲಾದ ನಿಬಂಧನೆಗಳಿಗೆ ಅನುಗುಣವಾಗಿ, ಅಂಚೆ ಮತದಾನದ ನೋಟಿಸ್ನ **("ನೋಟಿಸ್")** ಎಲೆಕ್ಟ್ರಾನಿಕ್ ಪ್ರತಿಗಳನ್ನು ಮತ್ತು ವಿವರಣಾತ್ಮಕ ಹೇಳಿಕೆಯನ್ನು, ಶುಕ್ರವಾರ, ಜೂನ್ 12, 2026 **("ಕಟ್‌ಆಫ್ ದಿನಾಂಕ")** ವ್ಯವಹಾರದ ಅವಧಿಯ ಮುಕ್ತಾಯದ ವೇಳೆಗೆ ಕಂಪನಿ/ಡಿಪಾಸಿಟರಿಗಳು ನಿರ್ವಹಿಸುತ್ತಿರುವ ಸದಸ್ಯರ ನೋಂದಣಿ ಪುಸ್ತಕ/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ದಾಖಲಾಗಿರುವ ಮತ್ತು ಇ-ಮೇಲ್ ಐಡಿಗಳು ಕಂಪನಿ/ಡಿಪಾಸಿಟರಿಗಳಲ್ಲಿ ನೋಂದಾಯಿಸಲ್ಪಟ್ಟಿರುವ ಸದಸ್ಯರಿಗೆ ಮಾತ್ರ ಜೂನ್ 15, 2026 ರಂದು ಕಳುಹಿಸಲಾಗಿದೆ. MCA ಸುತ್ತೋಲೆಗಳು ನೀಡಿರುವ ವಿನಾಯಿತಿಗಳಿಗೆ ಅನುಗುಣವಾಗಿ, ಈ ಅಂಚೆ ಮತದಾನಕ್ಕಾಗಿ ಅಂಚೆ ಮತದಾನದ ನೋಟಿಸ್ನ ಮುದ್ರಿತ ಪ್ರತಿಗಳನ್ನು, ಅಂಚೆ ಮತದಾನದ ನಮೂನೆಗಳು ಮತ್ತು ಮೊದಲೇ ಪಾವತಿ ಮಾಡಿದ ಲಕೋಟೆಗಳೊಂದಿಗೆ ಸದಸ್ಯರಿಗೆ ಕಳುಹಿಸಲಾಗುವುದಿಲ್ಲ.

ಕಂಪನಿಗಳ ಕಾಯ್ದೆಯ ಸೆಕ್ಷನ್ 108 ಮತ್ತು 110 ರ ನಿಬಂಧನೆಗಳು, ತಿದ್ದುಪಡಿ ಮಾಡಲಾದ ನಿಯಮಗಳು ಮತ್ತು ತಿದ್ದುಪಡಿ ಮಾಡಲಾದ ಲಿಸ್ಟಿಂಗ್ ರೆಗ್ಯುಲೇಷನ್ಸ್ನ ರೆಗ್ಯುಲೇಷನ್ 44ಕ್ಕೆ ಅನುಗುಣವಾಗಿ, ಕಂಪನಿಯು ಸದಸ್ಯರಿಗೆ ಕೇವಲ ಇ-ವೋಟಿಂಗ್ ಮೂಲಕ ಎಲೆಕ್ಟ್ರಾನಿಕ್ ಆಗಿ ತಮ್ಮ ಮತಗಳನ್ನು ಚಲಾಯಿಸಲು ಸೌಲಭ್ಯವನ್ನು ಒದಗಿಸಿದೆ. ಇದಕ್ಕಾಗಿ MUFG ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದೆ ಲಿಂಕ್ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ಒದಗಿಸಿರುವ ರಿಮೋಟ್ ಇ-ವೋಟಿಂಗ್ ಪ್ಲಾಟ್ಫಾರ್ಮ್ ಅನ್ನು ಬಳಸಿಕೊಳ್ಳಲಾಗುತ್ತದೆ. ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಅಗತ್ಯವಿರುವ ಲಾಗಿನ್ ವಿವರಗಳನ್ನು ಸದಸ್ಯರಿಗೆ ಕಳುಹಿಸಲಾದ ನೋಟಿಸ್ನ ಭಾಗವಾಗಿರುವ 'ಟಿಪ್ಪಣಿಗಳು' ವಿಭಾಗದಲ್ಲಿ ಉಲ್ಲೇಖಿಸಲಾಗಿದೆ. ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿವರವಾದ ವಿಧಾನವನ್ನು ಸಹ ನೋಟಿಸ್ನಲ್ಲಿ ನೀಡಲಾಗಿದೆ.

ಕಟ್‌ಆಫ್ ದಿನಾಂಕದಂದು ಸದಸ್ಯರ ನೋಂದಣಿ ಪುಸ್ತಕ/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ಮಾತ್ರ, ನೋಟಿಸ್ನಲ್ಲಿ ತಿಳಿಸಲಾದ ನಿರ್ಣಯಗಳ ಮೇಲೆ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಮತದಾನದ ಹಕ್ಕುಗಳನ್ನು ಆ ದಿನಾಂಕದಂದು ಸದಸ್ಯರ ಹೆಸರಿನಲ್ಲಿ ನೋಂದಾಯಿಸಲಾದ ಪಾವತಿಸಿದ ಈಕ್ವಿಟಿ ಷೇರುಗಳ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ. ಸದಸ್ಯರು ತಮ್ಮ ಸಮ್ಮತಿ (ಪರ - FOR) ಅಥವಾ ಅಸಮ್ಮತಿಯನ್ನು (ವಿರುದ್ಧ) ಕೇವಲ ರಿಮೋಟ್ ಇ-ವೋಟಿಂಗ್ ಮೂಲಕವೇ ದಾಖಲಿಸಲು ವಿನಂತಿಸಲಾಗಿದೆ. ಕಟ್‌ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಗಳು ಈ ನೋಟಿಸ್ ಅನ್ನು ಕೇವಲ ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

ಇ-ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ:

ಇ-ವೋಟಿಂಗ್ ಪ್ರಾರಂಭವಾಗುವ ದಿನ, ದಿನಾಂಕ ಮತ್ತು ಸಮಯ	ಬುಧವಾರ, ಜೂನ್ 17, 2026 ಬೆಳಗ್ಗೆ 9.00 ಗಂಟೆಯಿಂದ (ಭಾರತೀಯ ಕಾಲಮಾನ)
ಇ-ವೋಟಿಂಗ್ ಮುಕ್ತಾಯವಾಗುವ ದಿನ, ದಿನಾಂಕ ಮತ್ತು ಸಮಯ	ಗುರುವಾರ, ಜುಲೈ 16, 2026 ಸಂಜೆ 5.00 ಗಂಟೆಯವರೆಗೆ (ಭಾರತೀಯ ಕಾಲಮಾನ)

ಅಂಚೆ ಮತದಾನದ ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯನ್ನು ಮುಕ್ತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು, ಬೆಂಗಳೂರಿನ ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ ಸಂಸ್ಥೆಯಾದ ಮೆಸರ್ಸ್ ಬಿಎಂಪಿ ಆಂಡ್ ಕೋ. ಎಲ್‌ಎಲ್‌ಪಿಯ ಸಿಎಸ್ ಪ್ರಮೋದ್ ಎಸ್.ಎಂ. ಅಥವಾ ಅವರ ಅನುಪಸ್ಥಿತಿಯಲ್ಲಿ ಸಿಎಸ್ ಬಿಸ್ವಜಿತ್ ಘೋಷ್ ಅವರನ್ನು ಪರಿಶೀಲಕರನ್ನಾಗಿ ನೇಮಿಸಲಾಗಿದೆ. ಮತದಾನದ ಫಲಿತಾಂಶಗಳನ್ನು ಇ-ವೋಟಿಂಗ್ ಮುಕ್ತಾಯಗೊಂಡ 2 ಕೆಲಸದ ದಿನಗಳ ಒಳಗಾಗಿ ಪ್ರಕಟಿಸಲಾಗುವುದು. ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ www.sansera.in ನಲ್ಲಿ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಕ್ರಮವಾಗಿ ಪ್ರಕಟಿಸಲಾಗುವುದು.

ಸದಸ್ಯರು ನೋಟಿಸ್ನಲ್ಲಿ ನೀಡಲಾದ ಎಲ್ಲಾ ಟಿಪ್ಪಣಿಗಳನ್ನು, ವಿಶೇಷವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಜಾಗರೂಕತೆಯಿಂದ ಓದಬೇಕಾಗಿ ವಿನಂತಿಸಲಾಗಿದೆ. ನೋಟಿಸ್‌ನಲ್ಲಿ ಒದಗಿಸಲಾದ ಇ-ವೋಟಿಂಗ್‌ಗೆ ಸಂಬಂಧಿಸಿದ ಸೂಚನೆಗಳನ್ನು ಸದಸ್ಯರು ಗಮನವಿಟ್ಟು ಓದಬೇಕು. ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು ಷೇರುದಾರರಿಗಾಗಿರುವ 'ಪದೇ ಪದೇ ಕೇಳಲಾಗುವ ಪ್ರಶ್ನೆಗಳು' (FAQ ಗಳು) ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಕಂಪನಿಯಲ್ಲಿ ತಮ್ಮ ಇ-ಮೇಲ್ ಐಡಿಯನ್ನು ಇನ್ನೂ ನೋಂದಾಯಿಸದ / ನವೀಕರಿಸದ ಸದಸ್ಯರು, ತಮ್ಮ ಫೋಲಿಯೊ ಸಂಖ್ಯೆಯ ವಿವರಗಳೊಂದಿಗೆ, ಸ್ವಯಂ-ದೃಢೀಕರಿಸಿದ ಪಾನ್ ಕಾರ್ಡ್ ಪ್ರತಿ ಮತ್ತು ಇತರ ಯಾವುದೇ ದಾಖಲೆಯ (ಉದಾಹರಣೆಗೆ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಆಧಾರ್ ಕಾರ್ಡ್ ಇತ್ಯಾದಿ) ಸ್ವಯಂ-ದೃಢೀಕರಿಸಿದ ಪ್ರತಿಯನ್ನು ಲಗತ್ತಿಸಿ enotices@in.mpms.mufg.com ಗೆ ವಿನಂತಿಗಳನ್ನು ಕಳುಹಿಸುವ ಮೂಲಕ MUFG ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಲ್ಲಿ ತಮ್ಮ ಇ-ಮೇಲ್ ಐಡಿಯನ್ನು ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ. ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ಐಡಿಯನ್ನು ತಮ್ಮ ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಬಳಿ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ಈ ಅವಧಿಯಲ್ಲಿ, ಕಂಪನಿಯ ಭೌತಿಕ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಬಹುದು. ಇ-ವೋಟಿಂಗ್ನ ಕೊನೆಯ ದಿನಾಂಕದ ನಂತರ ಸದಸ್ಯರಿಗೆ ಮತ ಚಲಾಯಿಸಲು ಸಾಧ್ಯವಾಗುವುದಿಲ್ಲ. ನಿರ್ಣಯದ ಮೇಲೆ ಒಮ್ಮೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ತರುವಾಯ ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಅನುಮತಿಸಲಾಗುವುದಿಲ್ಲ.

ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ಸಹಿ/-
ರಾಜೇಶ್ ಕುಮಾರ್ ಮೋದಿ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂ. F5176

ಸ್ಥಳ: ಬೆಂಗಳೂರು
ದಿನಾಂಕ: ಜೂನ್ 16, 2026

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ , ಬೆಂಗಳೂರು- (ಡಿಆರ್‌ಟಿ -2)
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ನೋಡಿ ರೆಗ್ಯುಲೇಷನ್ 33(2))

ಡಿಮ್ಯಾಂಡ್ ನೋಟೀಸು

ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್
ಆರ್‌ಸಿ ನಂ. 217/2024 ಒ. ನಂ. 1496/2018

ಯೂಕೊ ಬ್ಯಾಂಕ್ V/s ಶ್ರೀಮತಿ ಹೇಮಲತಾ ಎಂ. ಸಿಂಗ್ ಮತ್ತು ಇತರರು

(ಸಿಹೆಚ್) **ಯೂಕೊ ಬ್ಯಾಂಕ್,** ಬೆಂಗಳೂರು ಕಂಟೋನ್ಮೆಂಟ್ ಶಾಖೆ, ಎಂ. ಜಿ. ರಸ್ತೆ, ಬೆಂಗಳೂರು, ಕರ್ನಾಟಕ ......**ಸರ್ಟಿಫಿಕೇಟ್ ಹೋಲ್ಡರ್**

Vs

(ಸಿಡಿ 1) **ಶ್ರೀಮತಿ ಹೇಮಲತಾ ಎಂ. ಸಿಂಗ್ ಕೋಂ.** ಶ್ರೀ ಮಂಜುನಾಥ್ ಎಂ. ಸಿಂಗ್, ಫ್ಲಾಟ್ ನಂ. 2122, ಶೋಭಾ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್, 12ನೇ ಮಹಡಿ, ಹೊಸಹಳ್ಳಿ, ಆಫ್ ಕನಕಪುರ ಮುಖ್ಯ ರಸ್ತೆ, ಬೆಂಗಳೂರು – 560 062, ಕರ್ನಾಟಕ.
(ಸಿಡಿ 2) **ಶ್ರೀ ಮಂಜುನಾಥ್ ಎಂ. ಸಿಂಗ್** ಬಿನ್. ಶ್ರೀ ಮಹೇಂದ್ರ ಸಿಂಗ್, ಫ್ಲಾಟ್ ನಂ. 2122, ಶೋಭಾ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್, 12ನೇ ಮಹಡಿ, ಹೊಸಹಳ್ಳಿ, ಆಫ್ ಕನಕಪುರ ಮುಖ್ಯ ರಸ್ತೆ, ಬೆಂಗಳೂರು – 560 062, ಕರ್ನಾಟಕ. ......**ಪ್ರತಿವಾದಿಗಳು**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ–2) ಇವರು, ಒ.ಎ. ನಂ./1496/2018 ಸರ್ಟಿಫಿಕೇಟ್‌ನಂತೆ **ರೂ.7986209.00** (ರೂಪಾಯಿ ಎಪ್ಪತ್ತೊಂಬತ್ತು ಲಕ್ಷ ಎಂಬತ್ತಾರು ಸಾವಿರದ ಇನ್ನೂರ ಒಂಬತ್ತು ಮಾತ್ರ) ಜೊತೆಗೆ ದಿನಾಂಕ 03.10.2018ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ವಾರ್ಷಿಕ ಶೇ. 10.20% ಬಡ್ಡಿ, ಮಾಸಿಕ ಚಕ್ರಬಡ್ಡಿ ಮತ್ತು ವೆಚ್ಚ **ರೂ.135005/–** (ರೂಪಾಯಿ ಒಂದು ಲಕ್ಷ ಮೂವತ್ತೈದು ಸಾವಿರದ ಐದು ಮಾತ್ರ) ಸರ್ಟಿಫಿಕೇಟ್ ಡೆಟರ್‌ರವರಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಇರುತ್ತದೆ. ಮತ್ತು ವಾರ್ಷಿಕ ಶೇ 2% ದಂಡ ಬಡ್ಡಿ ಮತ್ತು ಖರ್ಚು ಬಾಕಿ ಇರುತ್ತದೆ. (2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ. 4. ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸು ಪ್ರಕಟಣೆಯಾದ ದಿನಾಂಕದಿಂದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. 5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲ ವಸೂಲಾತಿ ಮಾಡುವಲ್ಲಿ ತಗಲುವ ಎಲ್ಲಾ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ 20.04.2024 ರಂದು ಕೊಡಲ್ಪಟ್ಟಿದೆ.
ಸಹಿ/–ವಸೂಲಾತಿ ಅಧಿಕಾರಿ
ಸಾಲವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ–2)

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧುವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ನಗರ ಯೋಜಕರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಮು.ನ.ಯೋ/ಜಿಬಿಎ/CLU–6/2025–26/ಇ–209706 ದಿನಾಂಕ: 15–06–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14ಎ–(1)(ಸಿ) ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಉದ್ಯಾನವನ (ಬಫರ್) ಭೂ ಉಪಯೋಗಕ್ಕೆ ಪರಿಷ್ಕೃತ ಮಹಾಯೋಜನೆ – 2015 ರಲ್ಲಿ ವರ್ಗೀಕರಿಸಿರುವುದು Cartographical Error ಆಗಿರುತ್ತದೆ. Cartographical Error ಇರುವ ಕಾರಣ ಸದರಿ ಜಮೀನನ್ನು **‘ಉದ್ಯಾನವನ (ಬಫರ್)’** ಭೂ ಉಪಯೋಗದಿಂದ **‘ಕೈಗಾರಿಕೆ (ಹೈ–ಟೆಕ್)’** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಚ.ಮೀಗಳಲ್ಲಿ)	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	**ಶ್ರೀಧರ್. ಎಮ್ ನಂ.105, ದೇವರಬೀಸನಹಳ್ಳಿ ಗ್ರಾಮ ವರ್ತೂರು ಹೋಬಳಿ, ಬೆಂಗಳೂರು ಪೂರ್ವ, ಬೆಳ್ಳಂದೂರು ಅಂಚೆ, ಬೆಂಗಳೂರು**	ಬೆಂಗಳೂರು ಪೂರ್ವ	ವರ್ತೂರು	ದೇವರ ಬೀಸನಹಳ್ಳಿ	46/6	00ಎ–03 ಗುಂಟೆ	ಉದ್ಯಾನವನ (ಬಫರ್)	ಕೈಗಾರಿಕೆ (ಹೈ–ಟೆಕ್)

ಷರಾ:– ಭೂದಾಖಲೆಗಳ ಸಹಾಯಕ ನಿರ್ದೇಶಕರು ರವರ ದೃಢೀಕೃತ ಸರ್ವೆ ನಕ್ಷೆಯಲ್ಲಿ ನಮೂದಿಸಿರುವಂತೆ, ಸರ್ವೆ ನಂ. 46/3 ರಲ್ಲಿ 01–07–1958 ರಂತೆ 2ನೇ ರೀಕ್ಲಾಸಿಫಿಕೇಷನ್ ಆಗಿ 0–05ಗು ಖರಾಬನ್ನು ಕಿರ್ದಿಸಾಗಿಗೆ (ಸಾಗುವಳಿ / ಐನುಗೆ ಮರು ಸ್ಥಾಪಿಸಲಾಗಿದೆ) ತಂದಿದ್ದು, ಅದರಂತೆ ಹಿಸ್ಸಾ ಪೋಡಿಗಳಾಗಿರುತ್ತವೆ. 2ನೇ ರೀಕ್ಲಾಸಿಫಿಕೇಷನ್ ನಂತೆ ಖರಾಬು ರದ್ದಾಗಿ ಕಿರ್ದಿಸಾಗಿಗೆ (ಸಾಗುವಳಿ/ಐನುಗೆ ಮರು ಸ್ಥಾಪಿಸಲಾಗಿದೆ) ತಂದಿರುವುದು ಗ್ರಾಮ ನಕಾಶೆಯಲ್ಲಿ ಮುದ್ರಣವಾಗಿರುವುದಿಲ್ಲ. ಅದರಂತೆ ಸರ್ವೆ 46/6 (ಹಳೆ ಸರ್ವೆ ನಂ. 46/3) ದಲ್ಲಿ ಆಕಾರ ಬಂದಿನಂತೆ ಯಾವುದೇ ಖರಾಬು ಇರುವುದಿಲ್ಲ. ಪ್ರಶ್ನಿತ ಜಮೀನಿನಲ್ಲಿ ಕೈಗಾರಿಕೆ (ಹೈ–ಟೆಕ್) ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡುವುದರಿಂದ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಸ್ಥಳೀಯರಿಗೆ ಉದ್ಯೋಗ ಅವಕಾಶಗಳು ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ಉದ್ಯಾನವನ (ಬಫರ್)’** ವಲಯದಿಂದ **‘ಕೈಗಾರಿಕೆ (ಹೈ–ಟೆಕ್)’** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ಜಿಲ್ಲಾ ಲೋಕ ಶಿಕ್ಷಣ ಸಮಿತಿ

ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್
ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ, 2ನೇ ಮಹಡಿ, ಪಂಚಾಯತ್ ಭವನ, ಬಿ. ಎಂ. ರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ – 562 159. ಇ–ಮೇಲ್ : zssramanagar@gmail.com

ಸಂಖ್ಯೆ : MASRMG-ADMNOVEH/01/2026-DAEDURMG
ದಿನಾಂಕ : 15–06–2026

ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ದಿನಾಂಕ : 01–07–2026 ರಿಂದ 30–06–2027 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನ, ಪರಿವೀಕ್ಷಣೆ ಹಾಗೂ ಪರಿಶೀಲನೆ ಮತ್ತು ಅಧಿಕೃತ ಕಛೇರಿ ಉಪಯೋಗಕ್ಕಾಗಿ ಟ್ರಾವೆಲ್ಸ್ / ವಾಹನದ ಮಾಲೀಕರಿಂದ ದ್ವಿ–ಲಕೋಟೆ ಪದ್ಧತಿ (Two Cover System) ಯಲ್ಲಿ ಡೀಸೆಲ್ ಕಾರನ್ನು ಪಡೆಯುವ ಟೆಂಡರ್‌ನ್ನು ಕರೆಯಲಾಗಿದೆ.

1) ಟೆಂಡರ್ ಪ್ರಾರಂಭ ದಿನಾಂಕ : 15–06–2026, 2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–06–2026 ರ ಸಂಜೆ 4.00 ಗಂಟೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24–06–2026 ರ ಬೆಳಿಗ್ಗೆ 11.00 ಗಂಟೆಗೆ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 25–06–2026 ರ ಮಧ್ಯಾಹ್ನ 3.00 ಗಂಟೆಗೆ, 5) ಕಾರ್ಯಾದೇಶ ನೀಡುವುದು : 30–06–2026.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಸಾಕ್ಷರತಾ ಸಮಿತಿ, ಬೆಂಗಳೂರು ದಕ್ಷಿಣ ಇವರನ್ನು ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು,
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/109/ಮಣಿಪಾಲ್/2026–27

ಬನ್ನೇರುಘಟ್ಟ ಜೈವಿಕ ಉದ್ಯಾನವನ

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಬಪಾ/ಟೆಂಡರ್/ಸಿವಿಲ್ ಕಾಮಗಾರಿ/ಸಿಆರ್–01/2026–27 ದಿನಾಂಕ: 10–06–2026

ಮರು ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ಇಲ್ಲಿನ ಬನ್ನೇರುಘಟ್ಟ ವೃತ್ತದಿಂದ ಮೃಗಾಲಯದ ಪಾರ್ಕಿಂಗ್ ಗೇಟ್‌ವರೆಗೆ ಹಾನಿಗೊಳಗಾದ ರಸ್ತೆಯ ಪುನರ್ ಸ್ಥಾಪನೆ ಮತ್ತು ಗುಂಡಿಗಳನ್ನು ಮುಚ್ಚುವ ಕಾಮಗಾರಿ ಕೈಗೊಳ್ಳಲು ಅರ್ಹ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿರುತ್ತದೆ. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: 10–06–2026 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ನ ವಿಚಾರಣೆಗಳು ಮತ್ತು ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ ಮತ್ತು ಸಮಯ: 23–06–2026. ನಿಗದಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 24–06–2026 ರ ಸಂಜೆ 4.00 ಗಂಟೆವರೆಗೆ. ಟೆಂಡರ್‌ನ್ನು ದಿನಾಂಕ: 26–06–2026 ರ ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.

ಸಹಿ/–
ಉಪ ನಿರ್ದೇಶಕರು

ವಾಸಾಸಂಇ/ವಾ.ಪ್ರ/1165/ಅಡ್ವಟೋರ್/2026–27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಅಇಂವಿ/ಪ್ರ(ಕಾ)/ವೃ–ದ/ಕಾನಿಇಂ(ಕ)/ಸಕಾನಿಇಂ–1/ಕ–180(10)/26–27/1254–55 ದಿ: 15.06.2026

ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಒಪಿ)/ವೃತ್ತ(ದ) /ಇಇ(ಓ)/ಎಇಇ–1/25–26/ಇ.ಪಿ.ಆರ್–24, ಕರೆ–3, ದಿನಾಂಕ: 06.03.2026 ದಕ್ಷಿಣ ವೃತ್ತದ ಅಡಿಯಲ್ಲಿ ಬರುವ **ಟಿಎಲ್‌ಎಂ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 220 ಕೆವಿ ಹೂಡಿ– ಬೇಗೂರ್ (ಬಯಾಲ್) ವಿದ್ಯುತ್ ಮಾರ್ಗದ ವೈಟ್ ಸಿಟಿಯಲ್ಲಿರುವ ಪ್ರಸರಣ ವಿದ್ಯುತ್ ಗೋಪುರ ಸಂಖ್ಯೆ: 13 ಮತ್ತು 16ರ ನಡುವೆ 220 ಕೆವಿ ಡಿಬಿ/ಡಿಇ+3 ಎನ್‌ಬಿಟಿ ಎನ್‌ಆರ್‌ಎಸ್–ಲಗ್ಗೆರೆ ವಿನ್ಯಾಸ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವ** ಕಾಮಗಾರಿ ನಿರ್ವಹಿಸಲು ಬಿಡ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in**ಗೆ ಹೈಪರ್‌ಲಿಂಕ್ **E Procurement KPTCL**ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in**ನಲ್ಲಿ **ದಿನಾಂಕ: 16.06.2026ರಂದು ಅಥವಾ ತದ ನಂತರ** ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾರ್ಯಾಚರಣೆ)
ವೃತ್ತ–ದಕ್ಷಿಣ, ನೆಲಮಹಡಿ, ಕವಿಪ್ರನಿನಿ ಕಛೇರಿ ಸಂಕೀರ್ಣ,
ಆನಂದರಾವ್ ವೃತ್ತ, ಬೆಂಗಳೂರು–560 009.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427, ಫ್ಯಾಕ್ಸ್: 08156 – 295427
ಇಮೇಲ್ – eemidcbpura@gmail.com
ಸಂಖ್ಯೆ : ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ /1408/2026–27 ದಿನಾಂಕ: 11/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 04/2026–27, ದಿನಾಂಕ: 11/06/2026.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ– 1 ಮತ್ತು 2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ವಿಶೇಷ ಘಟಕ ಯೋಜನೆ ಮತ್ತು 4702 ಗಿರಿಜನ ಉಪ ಯೋಜನೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಕನಿಷ್ಠ ಮತ್ತು ಗರಿಷ್ಠ ಅಂದಾಜು ಮೊತ್ತ ರೂ 7.00 ಲಕ್ಷ ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp. karnataka.gov.in ನಲ್ಲಿ ದಿನಾಂಕ: 11/06/2026ರ ಸಂಜೆ 4.30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ : 25/06/2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29/06/2026 ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ದಿಲೀಪ್ ಶ್ರೀಧರ್ ಹೆಗ್ಡೆ, ತಂದೆ ದಿ. ಶ್ರೀ ಶ್ರೀಧರ್ ವಿಶ್ವನಾಥ್ ಹೆಗ್ಡೆ (ಶ್ರೀ ಎಸ್.ವಿ. ಹೆಗ್ಡೆ), ಪ್ರಸ್ತುತ ವಾಸ: ನಂ. 623, 1ನೇ ಹಂತ, 2ನೇ ಮುಖ್ಯ ರಸ್ತೆ, ಇಂದಿರಾನಗರ (ಬಿನ್ನಮಂಗಲ ಲೇಔಟ್), ಬೆಂಗಳೂರು – 560038, ಇವರು ಈ ಕೆಳಕಂಡ ದಾಖಲೆಗಳನ್ನು ಕಳೆದುಕೊಂಡಿರುತ್ತಾರೆ: ಮೂಲ ಕ್ರಯಪತ್ರ ದಿನಾಂಕ 20–09–1968 ರಂದು ನೋಂದಾಯಿತವಾಗಿದ್ದು, ದಾಖಲೆ ಸಂಖ್ಯೆ 1760/1968–69, ಪುಸ್ತಕ 1, ಸಂಪುಟ 1524, ಪುಟ 99 ರಿಂದ 102, ಉಪ ನೋಂದಣಾಧಿಕಾರಿ ಕಚೇರಿ, ಸಿವಿಲ್ ಏರಿಯಾ, ಬೆಂಗಳೂರು ಇಲ್ಲಿ ನೋಂದಾಯಿಸಲಾಗಿದ್ದು, ಬೃಹತ್ ಬೆಂಗಳೂರು ನಗರ ಸುಧಾರಣಾ ಮಂಡಳಿ ಇವರಿಂದ ಶ್ರೀ ಶ್ರೀಧರ್ ವಿಶ್ವನಾಥ್ ಹೆಗ್ಡೆ ಇವರ ಪರವಾಗಿ ನಿರ್ವಹಿಸಲಾದ ದಾಖಲೆ. ಈ ಬಗ್ಗೆ ಶ್ರೀ ದಿಲೀಪ್ ಶ್ರೀಧರ್ ಹೆಗ್ಡೆ ಪರವಾಗಿ ದಿನಾಂಕ 10–05–2026 ರಂದು ದಾಖಲೆ ಕಳೆದು ಹೋಗಿದೆ ಎಂಬುದಾಗಿ ಕೆಳಸಹಿದಾರರಿಂದ ಬೆಂಗಳೂರು ನಗರ ಪೊಲೀಸ್ ಘಟಕದಲ್ಲಿ ದೂರು ನೀಡಲಾಗಿದ್ದು, ದೂರು ಸಂ. 2195691/2026 ಆಗಿರುತ್ತದೆ.

ಮೇಲೆ ತಿಳಿಸಿದ ದಾಖಲೆಗಳು ಯಾರಿಗಾದರೂ ಲಭ್ಯವಾದರೆ, ಅವುಗಳನ್ನು ಕೆಳಸಹಿದಾರರಿಗೆ ಹಸ್ತಾಂತರಿಸಬೇಕೆಂದು ಕೋರಲಾಗಿದ್ದು, ಅಂತಹವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಈ ಮೇಲೆ ಹೇಳಲಾದ ಕಳೆದುಹೋದ ದಾಖಲೆಗಳ ಆಧಾರದ ಮೇಲೆ ಯಾರೂ ಯಾವುದೇ ವ್ಯವಹಾರ ನಡೆಸಬಾರದು. ಅಂತಹ ಯಾವುದೇ ವ್ಯವಹಾರಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ ಮತ್ತು ಷೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ಹಕ್ಕು ಹೊಂದಿದ್ದಲ್ಲಿ ಅವರು, ಈ ಸೂಚನೆ ಪ್ರಕಟವಾದ ದಿನದಿಂದ 7 ದಿನಗಳ ಒಳಗಾಗಿ, ಎಲ್ಲಾ ಪೂರಕ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆ ಅಥವಾ ಹಕ್ಕಿನ ವಿವರವನ್ನು ನೋಂದಾಯಿತ ಅಂಚೆ ಮೂಲಕ ಕೆಳಸಹಿದಾರರಿಗೆ ಸಲ್ಲಿಸಬೇಕು. ನಿಗದಿತ ಸಮಯದ ನಂತರ ಸಲ್ಲಿಸಲಾದ ಯಾವುದೇ ಕ್ಲೈಮ್‌ನ್ನು ನನ್ನ ಕಕ್ಷಿದಾರರು ಪರಿಗಣಿಸುವುದಿಲ್ಲ.

ಷೆಡ್ಯೂಲ್

ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಸೈಟ್ ನಂ. 623, ಖಾತಾ ನಂ. 82–1–623, 1ನೇ ಹಂತ, 2ನೇ ಮೈನ್, ಇಂದಿರಾನಗರ (ಬಿನ್ನಮಂಗಲ ಲೇಔಟ್) ಬೆಂಗಳೂರು – 560038 ಇಲ್ಲಿದ್ದು, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 60 ಅಡಿ ಮತ್ತು 6 ಇಂಚುಗಳು ಹಾಗೂ ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟು ವಿಸ್ತೀರ್ಣ 2424 ಚದರ ಅಡಿ ಮತ್ತು ಆಸ್ತಿಯ ಚಕ್ಕುಬಂದಿ :
ಪೂರ್ವಕ್ಕೆ: ಸೈಟ್ ನಂ. 622
ಪಶ್ಚಿಮಕ್ಕೆ : ಸೈಟ್ ನಂ. 624
ಉತ್ತರಕ್ಕೆ: ಸೈಟ್ ನಂ. 632
ದಕ್ಷಿಣಕ್ಕೆ: ರಸ್ತೆ.

ದಿನಾಂಕ : 16/06/2026
ವಸಂತ ಕೃಷ್ಣ ಕೆ & ವನಿತ ವಿಕೆ
ನ್ಯಾಯವಾದಿಗಳು
ನಂ. 202, ಜಯಾ ಸ್ಪ್ಲೆಂಡರ್, ನಂ. 45 1ನೇಮೈನ್, 3ನೇ ಕ್ರಾಸ್, ಎಸ್‌ವಿ ಲೇಔಟ್ ಸಂಜಯನಗರ, ಬೆಂಗಳೂರು–560094

PERSONAL

Change of Name

CHANGE OF NAME
I, **MUJUBUR RAHAMAN**, holder of Indian Passport No. S9722754, Issued at, DUBAI on 26/09/2018, permanent residing at LINGAMANAHALLI PALYA, CHAKENAHALLI, TUMKUR, KARNATAKA,PIN 572216, INDIA and presently residing at SHARJAH, UAE. I have proof with AADHAR CARD and INDIAN PAN CARD, so I change my name from **MUJUBUR RAHAMAN** to **MUJUBURRAHAMAN** with immediate effect. In this I want to submit to Indian consulate Dubai for new passport with change of name.

I, MOHAMMED ZIAULLA, Residing at #206, Hegganahalli, Vishwaneedam Post, Bengaluru-91 have changed my name as MOHAMED ZIA ULLA, vide affidavit dated 15/06/2026 before Notary V.Anjanappa, Bengaluru

I, ABISHREE D/o Srinivas B R aged about 24 years residing of #1091, New Extension, Kolar 563101, have changed my name from Abishree to Abhishri B S & my date of birth in some documents is mentioned as 02.12.2002 correct date of birth is 02.08.2002 Hence this affidavit is to produce before the concerned authorities to correct my name as Abhishri B S and date of birth as 02.08.2002 vide affidavit dated 15.06.2026 before Notary Bisappa Gowda Kolar.

CONNECT

CHANGE OF NAME
I, D. MANI, R/a, No.845, 1st Cross, Chennakeshava Nagar, Hosa Road, Electronic City, Bengaluru-560 100 have changed my name from **D. MANIGANDAN** to **D. MANI** vide affidavit dated 12-06-2026 Sworn before Notary V. Rangaraju, Bengaluru.

CHANGE OF NAME
I, **THIMMARAYA GOWDA G,** S/o GANGANNA, residing at No. 18, 5th Cross, Madduramma Layout, Gajanana Nagar, Bangalore - 560091, have changed my name to **JAYANTH GOWDA G** vide Affidavit dated 12/06/2026 sworn before Notary Devaraja E., Bangalore.

CHANGE OF NAME
I, ARUNA R/a, No. 845, 1st Cross, Chennakeshava Nagar, Hosa Road, Electronic City, Bengaluru-560 100 have changed my name from **K.S. ARUNA SHIVANI** to **ARUNA** vide affidavit dated 12-06-2026 Sworn before Notary V. Rangaraju, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

JOB
To Place your Classified Ads Contact:
9886213331

ಬಿಬಿಸಿ: ಕಾಮಗಾರಿ ಶೀಘ್ರ

ಪ್ಯಾಕೇಜ್ -1ರ ನಿರ್ಮಾಣ: ಬಿಡಿಎಯಿಂದ ಎಸ್ಎನ್‌ಸಿ ಸಂಸ್ಥೆಗೆ ಒಪ್ಪಿಗೆ ಪತ್ರ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1, ಬಿಬಿಸಿ) ಯೋಜನೆಯ ಪ್ಯಾಕೇಜ್–1ರ ನಿರ್ಮಾಣ ಕಾಮಗಾರಿಗೆ ಶಂಕರ ನಾರಾಯಣ ಕನ್‌ಸ್ಟ್ರಕ್ಷನ್ಸ್ ಪ್ರೈವೆಟ್ ಲಿಮಿಟೆಡ್ (ಎಸ್ಎನ್‌ಸಿ) ಸಂಸ್ಥೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಒಪ್ಪಿಗೆ ಪತ್ರ ನೀಡಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ.

ಇದರೊಂದಿಗೆ ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಪಿಆರ್‌ಆರ್–1 ಯೋಜನೆಯು ಕೊನೆಗೂ ಕಾರ್ಯಗತವಾಗುವ ಹಂತಕ್ಕೆ ಬಂದಿದೆ.

ಮೊದಲ ಪ್ಯಾಕೇಜ್‌ನಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ) ಸಮೀಪದ ಮಾದಾವರದಿಂದ ಬಳ್ಳಾರಿ ರಸ್ತೆಯವರೆಗೆ 21 ಕಿಲೋಮೀಟರ್ ಉದ್ದದ ಮಾರ್ಗ ನಿರ್ಮಾಣವಾಗಲಿದ್ದು, ಇದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲಿದೆ. ಈ ಕಾಮಗಾರಿಯ ಗುತ್ತಿಗೆಯನ್ನು ₹3,253.14 ಕೋಟಿಗೆ ನೀಡಲಾಗಿದೆ.

ತುಮಕೂರು ರಸ್ತೆಯ ಮಾದಾವರದಿಂದ ಆರಂಭಿಸಿ ಹೆಸರಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ ಮಾರ್ಗವಾಗಿ ಯಲಹಂಕದ ವೆಂಕಟಾಲ ಬಳಿ ಬಳ್ಳಾರಿ ರಸ್ತೆವರೆಗಿನ 21 ಕಿಲೋಮೀಟರ್ ಉದ್ದದ ರಸ್ತೆ ನಿರ್ಮಾಣ ಕಾಮಗಾರಿಗೆ ಬಿಡಿಎ ಟೆಂಡರ್ ಕರೆದಿತ್ತು.

ಬಿಡ್ ಸಲ್ಲಿಸಿದ್ದ ಎಸ್ಎನ್‌ಸಿ ಮತ್ತು ವಿಶ್ವ ಸಮುದ್ರ ಎಂಜಿನಿಯರಿಂಗ್ ಕಂಪನಿಗಳು ತಾಂತ್ರಿಕವಾಗಿ ಅರ್ಹವಾಗಿದ್ದವು. ಆದರೆ, ಕಡಿಮೆ ಮೊತ್ತ ಬಿಡ್ ಸಲ್ಲಿಸಿದ್ದ ಬೆಂಗಳೂರಿನ ಎಸ್ಎನ್‌ಸಿ ಕಂಪನಿಯು ಟೆಂಡರ್ ಪಡೆದುಕೊಂಡಿದೆ.

ನಗರದ ಸಂಚಾರ ದಟ್ಟಣೆ ಕಡಿಮೆ ಮಾಡಲು ರೂಪಿಸಿರುವ 73 ಕಿ.ಮೀ. ಉದ್ದದ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈಗ ಪ್ಯಾಕೇಜ್–1ರ ಕಾಮಗಾರಿ ಟೆಂಡರ್ ಅಂತಿಮಗೊಳಿಸಿದೆ.

21 ಕಿ.ಮೀ. ಉದ್ದದ ರಸ್ತೆ ನಿರ್ಮಾಣಕ್ಕೆ ₹3,348.05 ಕೋಟಿ ವೆಚ್ಚ ಅಂದಾಜಿಸಲಾಗಿತ್ತು. ಎಸ್ಎನ್‌ಸಿ ಕಂಪನಿಯು ಅಂದಾಜು ವೆಚ್ಚಕ್ಕಿಂತ ಶೇಕಡ 4.93ರಷ್ಟು (₹3,515 ಕೋಟಿ) ಹೆಚ್ಚು ಮೊತ್ತಕ್ಕೆ ಬಿಡ್ ಸಲ್ಲಿಸಿತ್ತು. ತಾಂತ್ರಿಕ ಹಾಗೂ ಹಣಕಾಸು ಬಿಡ್ ಪರಾಮರ್ಶೆ ನಡೆಸಿದ ಬಿಡಿಎ ಆಡಳಿತ ಮಂಡಳಿಯು ಸಭೆಯಲ್ಲಿ ಅನುಮೋದನೆ ಪಡೆದ ಬಳಿಕ ಒಪ್ಪಿಗೆ ನೀಡಿದೆ.

‘ತುಮಕೂರು ರಸ್ತೆಯಿಂದ ಯಲಹಂಕ, ಎಲೆಕ್ಟ್ರಾನಿಕ್ ಸಿಟಿ- ಮೈಸೂರು ರಸ್ತೆ ಮೂಲಕ ಬಿಐಇಸಿವರೆಗೂ ಕಾರಿಡಾರ್ ಸಾಗಲಿದೆ. ಈ ರಸ್ತೆಯು ಬೆಂಗಳೂರಿನ ಉತ್ತರ ಭಾಗದಲ್ಲಿ 73 ಕಿ.ಮೀ. ಸಾಗಲಿದ್ದು, ಉಳಿದದ್ದು ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಸಾಗಲಿದೆ. ಶೇ 40ರಷ್ಟು ದಟ್ಟಣೆ ಕಡಿಮೆಯಾಗಲಿದ್ದು, ಎಲೆಕ್ಟ್ರಾನಿಕ್ ಸಿಟಿ, ತುಮಕೂರು ರಸ್ತೆ, ನೆಲಮಂಗಲ, ಮೈಸೂರು ರಸ್ತೆ ಕಡೆ ಹೋಗುವ ವಾಹನಗಳು ಈ ರಸ್ತೆಯಲ್ಲಿ ಸಾಗಲಿವೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಮಾದಾವರದಿಂದ ಬಳ್ಳಾರಿ ರಸ್ತೆವರೆಗಿನ ಮಾರ್ಗದಲ್ಲಿ ಮೂರು ಕ್ಲೋವರ್ ಲೀಫ್ ಜಂಕ್ಷನ್‌ಗಳು, ಒಂದು ಗ್ರೇಡ್ ಸೆಪರೇಟರ್, ಎರಡು ರೈಲ್ವೆ ಮೇಲ್ಸೇತುವೆಗಳು, 7.5 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗಲಿವೆ.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಮಾದರಿ

ಪಿಆರ್‌ಆರ್–1ರ ಮೊದಲ ಪ್ಯಾಕೇಜ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿ ಎಸ್ಎನ್‌ಸಿ ಸಂಸ್ಥೆಗೆ ಅಧಿಕೃತ ಒಪ್ಪಿಗೆ ಪತ್ರ ನೀಡಲಾಗಿದೆ. ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ

ಎಲ್.ಕೆ.ಅತೀಕ್, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಅಧ್ಯಕ್ಷ

ಹತ್ತು ವರ್ಷ ನಿರ್ವಹಣೆ

ಬಿಬಿಸಿ ಯೋಜನೆಯನ್ನು ಡಿಬಿಒಟಿ (ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ) ಮಾದರಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. 36 ತಿಂಗಳ ನಿರ್ಮಾಣ ಅವಧಿಯ ಜೊತೆಗೆ 10 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಒಪ್ಪಂದ ಒಳಗೊಂಡಿದೆ.

ಗುತ್ತಿಗೆ ಪಡೆದಿರುವ ಎಸ್ಎನ್‌ಸಿ ಕಂಪನಿಯೇ ಹತ್ತು ವರ್ಷ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ₹248 ಕೋಟಿ ವೆಚ್ಚ ಮಾಡಲಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಟೋಲ್ ಶುಲ್ಕ ಪಾವತಿಸಬೇಕಾಗುತ್ತದೆ.

ಒಟ್ಟು 65 ಮೀಟರ್ ರಸ್ತೆ. 12 ಪಥದ ಮಾರ್ಗದಲ್ಲಿ 8 ಪಥ ಮುಖ್ಯ ಕ್ಯಾರೇಜ್ ಇರಲಿದ್ದು, ಉಳಿದ ನಾಲ್ಕು ಪಥಗಳು ಸರ್ವೀಸ್ ರಸ್ತೆಯಾಗಿರಲಿದೆ. ಜತೆಗೆ ಎರಡೂ ಬದಿ ಪ್ರತ್ಯೇಕ ಸೈಕಲ್ ಪಥವೂ ನಿರ್ಮಾಣವಾಗಲಿದೆ.

3 ಪ್ಯಾಕೇಜ್‌ಗಳಲ್ಲಿ ಕಾಮಗಾರಿ

ಬಿಬಿಸಿ ಯೋಜನೆಯ ಮೊದಲ ಹಂತದ 73.4 ಕಿ.ಮೀ. ಉದ್ದದ ರಸ್ತೆ ಕಾಮಗಾರಿ ವೇಗಗೊಳಿಸುವ ಉದ್ದೇಶದಿಂದ ಮೂರು ಪ್ಯಾಕೇಜ್‌ಗಳಾಗಿ ವಿಭಜಿಸಲಾಗಿದೆ.

- **ಪ್ಯಾಕೇಜ್-1:** ಮಾದಾವರದಿಂದ ಬಳ್ಳಾರಿ ರಸ್ತೆವರೆಗೆ
- **ಪ್ಯಾಕೇಜ್-2:** ಬಳ್ಳಾರಿ ರಸ್ತೆಯಿಂದ ಹಳೆ ಮದ್ರಾಸ್ ರಸ್ತೆವರೆಗೆ
- **ಪ್ಯಾಕೇಜ್-3:** ಹಳೆ ಮದ್ರಾಸ್ ರಸ್ತೆಯಿಂದ ಹೊಸೂರು ರಸ್ತೆವರೆಗೆ

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್

‘ಬೆಂಗಳೂರು ನಗರ ಎಲ್ಲರಿಗೂ ಸೇರಿದ್ದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾರಣಿಗಳು, ಅಧಿಕಾರಿಗಳಿಗಷ್ಟೇ ಬೆಂಗಳೂರು ಸೇರಿದ್ದಲ್ಲ; ಇಲ್ಲಿ ಬದುಕುವ, ನಗರದಿಂದ ಉಪಕೃತರಾದ ಎಲ್ಲರಿಗೂ ಸೇರಿದೆ. ಹಾಗಾಗಿ ಈ ನಗರವನ್ನು ರಕ್ಷಿಸುವ ಜವಾಬ್ದಾರಿ ಕೂಡಾ ಎಲ್ಲರಿಗೂ ಸೇರಿದ್ದಾಗಿದೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಹೇಳಿದರು.

ಟಿಜೆಎಸ್ ಜಾರ್ಜ್ ಅವರ ‘ಆಸ್ಕ್ಯೂ: ಎ ಶಾರ್ಟ್ ಬಯೋಗ್ರಫಿ ಆಫ್ ಬೆಂಗಳೂರು’ ಇದರ ಕನ್ನಡ ಅನುವಾದ ‘ಓರೆಕೋರೆ- ದೊಡ್ಡ ಬೆಂಗಳೂರಿನ ಸಣ್ಣ ಆತ್ಮಕಥೆ’ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಗತ್ತಿನಲ್ಲಿಯೇ ಸುಂದರವಾದ ನಗರ ಬೆಂಗಳೂರು. ಇದನ್ನು ಬೇರೆಯವರು ರಕ್ಷಿಸಲಿ ಎಂದು ಕಾಯದೇ ನಾವೇ ರಕ್ಷಿಸಬೇಕು’ ಎಂದು ಸಲಹೆ ನೀಡಿದರು.

ಈ ಕೃತಿಯ ಕನ್ನಡ ಅನುವಾದಕ ಕೆ.ಇ. ರಾಧಾಕೃಷ್ಣ ಮಾತನಾಡಿ, ‘ಮನುಷ್ಯರಿಗೆ ಆತ್ಮ ಇರುವಂತೆ ಪ್ರತಿ ನಗರಕ್ಕೂ ಅದರದ್ದೇ ಆದ ವಿಶಿಷ್ಟ ಆತ್ಮ ಇರುತ್ತದೆ. ಅದು ಸಂವೇದನಶೀಲವಾಗಿ ಮಾತನಾಡುತ್ತದೆ. ಟಿಜೆಎಸ್ ಜಾರ್ಜ್ ಅವರು ಬೆಂಗಳೂರಿನ ಆಧುನಿಕ ಅಭಿವೃದ್ಧಿಯ ಬಗ್ಗೆ ಬರೆಯದೇ ಇಲ್ಲಿನ ಸಾಂಸ್ಕೃತಿಕ ನೆಲೆಗಳನ್ನು, ರುಚಿಕರ ಹೋಟೆಲ್‌ಗಳನ್ನು, ಕಲಾಕೇಂದ್ರಗಳನ್ನು, ಪಾರಂಪರಿಕ ಸ್ಥಳಗಳ ಕುರಿತು ಬರೆದಿದ್ದಾರೆ’ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಸುಂದರ ಶಿವರಾಮ್, ಎ.ವಿ. ಚಂದ್ರಶೇಖರ್, ಕೆ.ಈ. ರಾಧಾಕೃಷ್ಣ, ಸುರೇಶ್‌ಕುಮಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ನಾನು ಬೆಂಗಳೂರಿನವನು ಅಲ್ಲದೇ ಇದ್ದರೂ ಬೆಂಗಳೂರೇ ನನ್ನ ಮನೆ ಎಂದು ಭಾವಿಸಿದ್ದೇನೆ ಎಂಬುದಾಗಿ ಬರೆದಿರುವ ಜಾರ್ಜ್ ಅವರು, ತಡವಾಗಿ ಏಳುವವರಿಗೆ ಮುಂಜಾನೆಯೂ ಇಲ್ಲ, ಸೂರ್ಯೋದಯವೂ ಇಲ್ಲ. ಮೂಲಸಂಸ್ಕೃತಿಯನ್ನು ಉಳಿಸದೇ ಇದ್ದರೆ ಅದುವೇ ನಾವು ನಗರದ ಮೇಲೆ ಮಾಡುವ ಅತ್ಯಾಚಾರ ಎಂದು ಕೃತಿಯಲ್ಲಿ ಬರೆದಿದ್ದಾರೆ’ ಎಂದು ತಿಳಿಸಿದರು.

ಶಾಸಕ ಎಸ್. ಸುರೇಶ್ ಕುಮಾರ್ ಮಾತನಾಡಿ, ‘ಟಿಜೆಎಸ್ ಜಾರ್ಜ್ ಅವರು ನಿರ್ಭೀತ ಪತ್ರಕರ್ತ, ಸಾಮಾಜಿಕ ಸಂವೇದನಾಶೀಲ ಬರಹಗಾರರು’ ಎಂದರು.

‘ಬೆಂಗಳೂರು ನಗರವನ್ನು ಸಹನೀಯವಾಗಿ ಬದುಕುವ ಸ್ಥಳವನ್ನಾಗಿ ಮಾಡಿಕೊಳ್ಳಬೇಕು. ಇದು ಸರ್ಕಾರ ಮಾಡುವ ಕೆಲಸವಲ್ಲ. ಎಲ್ಲರೂ ಸೇರಿ ಮಾಡಬೇಕು’ ಎಂದರು.

ಪಾರಂಪರಿಕ ಶಿಲ್ಪಿ ನರೇಶ್ ನರಸಿಂಹನ್, ಟಿಜೆಎಸ್ ಜಾರ್ಜ್ ಅವರ ಮೊಮ್ಮಗಳು ತೀಯಾ ಅನಸೂಯ, ಶತಾಯುಷಿ ಸುಂದರ ಶಿವರಾಮ್ ಉಪಸ್ಥಿತರಿದ್ದರು. ಎಂ.ಎಸ್. ಸುಬ್ಬಲಕ್ಷ್ಮೀ ಅವರ ಮರಿಮೊಮ್ಮಕ್ಕಳಾದ ಎಸ್. ಐಶ್ವರ್ಯ, ಎಸ್. ಸೌಂದರ್ಯ ಸುಶ್ರಾವ್ಯವಾಗಿ ಹಾಡಿದರು.

₹6 ಕೋಟಿಗೂ ಅಧಿಕ ವಂಚನೆ

ತುಮಕೂರು: ಮನೆಯಲ್ಲಿಯೇ ಕೆಲಸ ಮಾಡುತ್ತಾ, ತಿಂಗಳಿಗೆ ₹20 ಸಾವಿರದಿಂದ ₹28 ಸಾವಿರ ಸಂಪಾದನೆ ಮಾಡಬಹುದು ಎಂಬ ಆಮಿಷಕ್ಕೆ ಒಳಗಾಗಿ ಜಿಲ್ಲೆಯ ಹತ್ತಾರು ಜನ ಕೋಟ್ಯಂತರ ರೂಪಾಯಿ ಹಣ ಕಳೆದುಕೊಂಡಿದ್ದಾರೆ.

₹6 ಕೋಟಿಗೂ ಅಧಿಕ ಮೊತ್ತ ವಂಚಿಸಿದ ಆರೋಪದ ಮೇಲೆ ನಗರದ ಜಯನಗರದಲ್ಲಿರುವ ‘ಎಸ್‌ಎಲ್‌ವಿ ಮಹಿಳಾ ಮಾರ್ಟ್ ಮತ್ತು ಮಾರ್ಕೆಟಿಂಗ್’ ಕಂಪನಿಯ ಮಾಲೀಕ ಬೊಮ್ಮಲ ರಾಜೇಶ್, ಮ್ಯಾನೇಜರ್ ಕೃಷ್ಣಮೂರ್ತಿ, ಪಾರ್ವತಿ, ಕಾವ್ಯಾ, ಅಭಿಷೇಕ್, ಪ್ರಜ್ವಲ್, ಹೇಮಂತ್, ದುರ್ಗೇಶಪ್ಪ ಎಂಬುವರ ವಿರುದ್ಧ ತಿಲಕ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಜೇಶ್ ಕೋಲಾರ ಜಿಲ್ಲೆಯ ಮಾಲೂರಿನವರು. ಉಳಿದವರು ತುಮಕೂರು ನಗರದ ನಿವಾಸಿಗಳು.

‘ಸರ್ಕಾರದಿಂದ ಮಾನ್ಯತೆ ಪಡೆದ ಕಂಪನಿ ಎಂದು ನಂಬಿಸಿದ್ದರು. ‘ಅಗರಬತ್ತಿ, ನೆಲ ಒರೆಸುವ ಮ್ಯಾಟ್ ಮತ್ತು ಮೇಣದ ಬತ್ತಿ ಪ್ಯಾಕಿಂಗ್ ಮಾಡಲು ಕಚ್ಚಾ ವಸ್ತು ಪೂರೈಸಲಾಗುವುದು. ಮೊದಲಿಗೆ ₹1 ಲಕ್ಷ ಹೂಡಿಕೆ ಮಾಡಿದರೆ ತಿಂಗಳಿಗೆ ₹20 ಸಾವಿರದಿಂದ ₹28 ಸಾವಿರ ನೀಡಲಾಗುವುದು’ ಎಂದು ಆರೋಪಿಗಳು ತಿಳಿಸಿದ್ದರು. ಇದನ್ನು ನಂಬಿ ₹6.75 ಕೋಟಿ ಹೂಡಿಕೆ ಮಾಡಿದ್ದೇವೆ’ ಎಂದು ರಾಘವೇಂದ್ರ ನಗರದ ಸುನೀಲ್ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ.

‘ನಮ್ಮಂತೆ 600ಕ್ಕೂ ಹೆಚ್ಚು ಜನರಿಗೆ ₹60 ಕೋಟಿಯಿಂದ ₹70 ಕೋಟಿ ವಂಚಿಸಿದ್ದಾರೆ. ಹಣ ಪಡೆದು ಒಂದು ರಸೀದಿ ನೀಡಿದ್ದಾರೆ. ಹೊರ ಜಿಲ್ಲೆಯ ಜನರು ಮಹಿಳಾ ಮಾರ್ಟ್‌ನಲ್ಲಿ ಹಣ ಹೂಡಿಕೆ ಮಾಡಿದ್ದಾರೆ. ಸರ್ಕಾರದ ಅನುಮತಿ ಪಡೆಯದೆ, ಠೇವಣಿ ರೂಪದಲ್ಲಿ ಹಣ ಸಂಗ್ರಹಿಸಲಾಗಿದೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಬೆಂಗಳೂರು ಸಚಿವರಿಗೆ ಎಂಜಿನ್ ಇಲ್ಲದ ಕಾರು’

ಪ್ರಜಾವಾಣಿ ವಾರ್ತೆ

ತೇಜಸ್ವಿ ಸೂರ್ಯ

ಬೆಂಗಳೂರು: ‘ಬೆಂಗಳೂರು ಅಭಿವೃದ್ಧಿ ಸಚಿವರಿಗೆ ಬಿಡಿಎ, ಬಿಎಂಆರ್‌ಡಿಎ ಇಲ್ಲದ ಖಾತೆ ನೀಡುವುದು ಎಂದರೆ ಎಂಜಿನ್ ಇಲ್ಲದ ಕಾರು ಕೊಟ್ಟಂತಾಗಿದೆ. ಸಂಪೂರ್ಣ ಅಧಿಕಾರ ಇರುವ ಒಬ್ಬರೇ ಸಚಿವರನ್ನು ನೇಮಿಸಬೇಕು’ ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಸೋಮವಾರ ಅಭಿಯಾನ ಆರಂಭಿಸಿದ್ದಾರೆ.

‘ಬೆಂಗಳೂರಿಗೆ ಸಂಪೂರ್ಣ ಜವಾಬ್ದಾರಿಯುತ ಸಚಿವರನ್ನು ನೇಮಿಸುವವರೆಗೆ ತಮ್ಮ ಕಚೇರಿಯು ಪ್ರತಿದಿನ ಸಾಮಾಜಿಕ ಮಾಧ್ಯಮಗಳ ಮೂಲಕ ಮುಖ್ಯಮಂತ್ರಿಗೆ ನೆನಪೋಲೆಯನ್ನು ಕಳುಹಿಸಲಿದೆ’ ಎಂದು ಅಭಿಯಾನದ ಬಗ್ಗೆ ಅವರು ಸುದ್ದಿಗಾರರಿಗೆ ವಿವರ ನೀಡಿದರು.

ಸರ್ಕಾರದೊಳಗಿನ ಆಂತರಿಕ ಜಗಳದಿಂದಾಗಿ ಮೂಲ ಸೌಕರ್ಯ ಮತ್ತು ನಾಗರಿಕ ಸಮಸ್ಯೆಗಳಿಂದ ಕಂಗಾಲಾಗಿರುವ ಬೆಂಗಳೂರಿಗೆ ಜವಾಬ್ದಾರಿಯುತ ನಾಯಕತ್ವ ಇಲ್ಲದಂತಾಗಿದೆ ಎಂದು ತಿಳಿಸಿದರು.

‘ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 15 ದಿನ ಕಳೆದಿದ್ದರೂ, ಬೆಂಗಳೂರು ನಗರದ ಅಭಿವೃದ್ಧಿಗೆ ಸಂಪೂರ್ಣ ಜವಾಬ್ದಾರರಾಗಿರುವ ಒಬ್ಬ ಸಚಿವರನ್ನು ನೇಮಿಸಿಲ್ಲ. ಬಿಡಿಎ ಮತ್ತು ಬಿಎಂಆರ್‌ಡಿಎ ಸಂಸ್ಥೆಗಳ ನೇರ ನಿಯಂತ್ರಣವನ್ನು ಮುಖ್ಯಮಂತ್ರಿಯವರೇ ಇಟ್ಟುಕೊಂಡು, ಬೆಂಗಳೂರು ಉಸ್ತುವಾರಿ ಸಚಿವರಿಗೆ ಕೇವಲ ಜಿಬಿಎ ಮತ್ತು ಇನ್ನೂ ಕಾರ್ಯಾರಂಭ ಮಾಡದ ಐದು ನಿಗಮಗಳ ಜವಾಬ್ದಾರಿಯನ್ನು ನೀಡಿರುವುದು ವಿಚಿತ್ರವಾಗಿದೆ’ ಎಂದು ಟೀಕಿಸಿದರು.

ಇದು ಯಾವುದೇ ವೈಯಕ್ತಿಕ ಸಚಿವರ ವಿರುದ್ಧದ ವಿಷಯವಲ್ಲ, ಬದಲಿಗೆ ಇದು ಆಡಳಿತ, ಹೊಣೆಗಾರಿಕೆ ಮತ್ತು ಸ್ಪಷ್ಟತೆಯ ವಿಷಯ ಎಂದು ಸೂರ್ಯ ತಿಳಿಸಿದರು.

‘ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ ಅಥವಾ ಬೇರೆ ಯಾರನ್ನಾದರೂ ಸಚಿವರನ್ನಾಗಿ ಮಾಡುವುದು ಮುಖ್ಯಮಂತ್ರಿಯವರ ವಿವೇಚನೆಗೆ ಬಿಟ್ಟಿದ್ದು. ಆದರೆ ಬೆಂಗಳೂರಿನ ಬಗ್ಗೆ ಗಮನಹರಿಸಲು ಒಬ್ಬ ಶಕ್ತಿಶಾಲಿ ಸಚಿವರ ಅಗತ್ಯವಿದೆ. ಆಗ ಮಾತ್ರ ಜನ ಅವರನ್ನು ಪ್ರಶ್ನಿಸಲು ಸಾಧ್ಯವಾಗುತ್ತದೆ. ಮುಖ್ಯಮಂತ್ರಿ ಮತ್ತು ಬೆಂಗಳೂರು ಸಚಿವರ ನಡುವೆ ಜವಾಬ್ದಾರಿಗಳನ್ನು ಹಂಚುವುದರಿಂದ ಗೊಂದಲ ಉಂಟಾಗುತ್ತದೆ ಮತ್ತು ಆಡಳಿತ ಕುಂಠಿತಗೊಳ್ಳುತ್ತದೆ’ ಎಂದು ಹೇಳಿದರು.

ನಗರದಲ್ಲಿ ಇಂದು

ಕೋಟೆ ಮಾರಮ್ಮ ದೇವಸ್ಥಾನದ 48ನೇ ರಜತ ಮಹೋತ್ಸವ: ಕೋಟೆ ಜಲಕಂಠೇಶ್ವರದ ದೇವಸ್ಥಾನದಿಂದ ಪಲ್ಲಕ್ಕಿ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀ ಮಾರಮ್ಮ ದೇವಸ್ಥಾನ ಅನ್ನದಾನ ಸಮಿತಿ, ಕೋಟೆ ‘ಇ’ ಬೀದಿ, ಕಲಾಸಿಪಾಳ್ಯ, ಬೆಳಿಗ್ಗೆ 7.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ವಿಶ್ವ ರಕ್ತದಾನಿಗಳ ದಿನಾಚರಣೆ: ಉದ್ಘಾಟನೆ: ಡಾ.ಎಸ್.ಸಚ್ಚಿದಾನಂದ, ಡಾ.ಕೆ.ಎಸ್.ಗಂಗಾಧರ, ಡಾ.ವಿ.ಆರ್. ಕೃಷ್ಣಮೂರ್ತಿ, ಸ್ಥಳ: ಬಿಜಿಎಸ್ ಎಂಸಿಎಚ್ ಆಸ್ಪತ್ರೆ, ಕೆಂಗೇರಿ, ಬೆಳಿಗ್ಗೆ 11.30

ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ, ‘ಭಕ್ತಿ ಕುಸುಮ’ ಕೃತಿ ಜನಾರ್ಪಣೆ: ಉದ್ಘಾಟನೆ: ನಿರ್ಮಲಾನಂದನಾಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಸುಬ್ರಹ್ಮಣ್ಯಸ್ವಾಮಿ ಟ್ರಸ್ಟ್, ಕೆಎಚ್‌ಬಿ ಕಾಲೊನಿ, ಬಸವೇಶ್ವರ ನಗರ, ಮಧ್ಯಾಹ್ನ 3


ನಿರ್ಮಲಾನಂದನಾಥ ಸ್ವಾಮೀಜಿ

ಯುವ ನಾಟಕೋತ್ಸವ, ‘ಸಂಗ್ಯಾ- ಬಾಳ್ಯಾ’ ನಾಟಕ ಪ್ರದರ್ಶನ, ದೇವ ನಾಗೇಶ್ ಅವರಿಗೆ ರಂಗನಮನ: ಉದ್ಘಾಟನೆ: ರಾಜ ರವಿಶಂಕರ್, ಚಂದ್ರಶೇಖರ್, ಸಿ.ಎಂ.ತಿಮ್ಮಯ್ಯ, ನೃತ್ಯ: ಚಂದನ್ ಮತ್ತು ತಂಡ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಸಂಜೆ 5

26ನೇ ವರ್ಷದ ಪ್ರವಚನ ವಾಹಿನಿ: ‘ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮಾವಲೋಕನ’ ವಿಷಯದ ಬಗ್ಗೆ ಪ್ರವಚನ: ರಾಮಚಂದ್ರಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಕನಕದಾಸರ ವಿರಚಿತ ‘ಕೇಶವನಾಮ’ ಪ್ರವಚನ: ಕಲ್ಯಾ ನರಸಿಂಹಮೂರ್ತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

‘ಮಾಯಾದ್ವೀಪ’ ನಾಟಕ ಪ್ರದರ್ಶನ: ಮೂಲಪಠ್ಯ: ವಿಲಿಯಂ ಷೇಕ್ಸ್‌ಪಿಯರ್, ನಿರ್ದೇಶನ: ಪುನೀತ್ ಕರ್ತ, ತಂಡ: ನೆನಪು, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕ್ಷಮೆ ಕೇಳುವುದಾಗಿ ನಟಿಸಿ ಪತ್ನಿ ಕೊಲೆ

ಆರೋಪಿಯನ್ನು ಬಂಧಿಸಿದ ಮಹದೇವಪುರ ಠಾಣೆಯ ಪೊಲೀಸರು

ಪ್ರಜಾವಾಣಿ ವಾರ್ತೆ

ಮಂಜುಳಾ

ಬೆಂಗಳೂರು: ಪ್ರತ್ಯೇಕವಾಗಿ ವಾಸಿಸುತ್ತಿದ್ದ ಪತ್ನಿಯ ಮನೆಗೆ ನುಗ್ಗಿ ಮಕ್ಕಳ ಎದುರು ಚಾಕುವಿನಿಂದ ಇರಿದು ಪತ್ನಿಯ ಕೊಲೆ ಮಾಡಿದ ಆರೋಪಿಯನ್ನು ಮಹದೇವಪುರ ಠಾಣೆ ಪೊಲೀಸರು ಸೋಮವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಗೃಹ ರಕ್ಷಕ ದಳದ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಮಂಜುಳಾ (32) ಕೊಲೆಯಾದವರು. ಕೃತ್ಯ ಎಸಗಿದ ಪ್ರದೀಪ್ (38) ಅವರನ್ನು ಪೊಲೀಸರು ಬಂಧಿಸಿದ್ದಾರೆ.

10 ವರ್ಷದ ಹಿಂದೆ ಪ್ರದೀಪ್ ಮತ್ತು ಮಂಜುಳಾ ಮದುವೆಯಾಗಿತ್ತು. ಮಂಜುಳಾ ಅವರು ಮಹದೇವಪುರ ಪೊಲೀಸ್ ಠಾಣೆಯಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಈ ನಡುವೆ ಪ್ರದೀಪ್, ಆನ್‌ಲೈನ್ ಆ್ಯಪ್‌ಗಳಲ್ಲಿ ಬೆಟ್ಟಿಂಗ್ ಗೀಳಿಗೆ ಸಿಲುಕಿದ್ದರು. ಈ ಗೀಳಿನಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದರು. ಅಲ್ಲದೇ ಪತ್ನಿಯ ಜತೆಗೆ ಗಲಾಟೆ ಮಾಡುತ್ತಿದ್ದರು. ಅನುಮಾನವನ್ನೂ ಪಡುತ್ತಿದ್ದರು ಎಂದು ಮೂಲಗಳು ಹೇಳಿವೆ.

ಚಾಕು ಬಚ್ಚಿಟ್ಟುಕೊಂಡು ಬಂದಿದ್ದ ಆರೋಪಿ: ಪತಿಯ ಹಿಂಸೆ ತಾಳಲಾರದೆ ಮಂಜುಳಾ ಮಕ್ಕಳೊಂದಿಗೆ ಪ್ರತ್ಯೇಕವಾಗಿ ಬಾಡಿಗೆ ಮನೆ ಪಡೆದು ವಾಸವಿದ್ದರು. ಭಾನುವಾರ ರಾತ್ರಿ 9 ಗಂಟೆ ಸುಮಾರಿಗೆ ಮಂಜುಳಾ ಇದ್ದ ಮನೆಗೆ ಬಂದಿದ್ದ ಪ್ರದೀಪ್, ಮಾಡಿದ ತಪ್ಪಿಗೆ ಕ್ಷಮೆ ಕೇಳುವವನಂತೆ ನಟಿಸಿದ್ದರು. ‘ಕಾಲು ಹಿಡಿಯುತ್ತೇನೆ, ತಪ್ಪಾಯಿತು ಮನೆಗೆ ಬಾ...’ ಎಂದು ಕಾಲಿಗೆ ಬಿದ್ದದ್ದಂತೆ ನಟಿಸಿ ಬಚ್ಚಿಟ್ಟುಕೊಂಡು ತಂದಿದ್ದ ಚಾಕುವಿನಿಂದ ಮಂಜುಳಾಗೆ ಇರಿದು ಕೊಲೆ ಮಾಡಿದ್ದರು. ಕೃತ್ಯ ನಡೆದಾಗ ಇಬ್ಬರು ಮಕ್ಕಳು ಮನೆಯಲ್ಲೇ ಇದ್ದರು ಎಂದು ಪೊಲೀಸರು ಹೇಳಿದರು.

ಕೊಲೆಗೂ ಮುನ್ನ ವಿಡಿಯೊ

ಪ್ರದೀಪ್ ಕೃತ್ಯ ಎಸಗುವ ಮುನ್ನ ವಿಡಿಯೊ ಮಾಡಿದ್ದರು. ಪತ್ನಿಯಿಂದ ದೂರ ಇರಲು ಬಯಸುವುದಿಲ್ಲ. ಭಾಮೈದ ಮತ್ತು ಮಾವನಿಗೆ ಕರೆ ಮಾಡಿ ಪತ್ನಿಯನ್ನು ತನ್ನೊಂದಿಗೆ ಹೋಗುವಂತೆ ಬುದ್ಧಿಮಾತು ಹೇಳುವಂತೆ ಕೇಳಿಕೊಂಡಿದ್ದರು.

‘ಸಂಜೆ 6 ಗಂಟೆಗೆ ಕೆಲಸದಿಂದ ಬರುತ್ತಾಳೆ. ಬೇಗ ಮನೆಗೆ ಬರುವಂತೆ ಕೇಳುತ್ತೇನೆ. ಆದರೂ ಬರುವುದಿಲ್ಲ. ಆಕೆಯನ್ನು ಸಾಯಿಸುತ್ತೇನೆ. ನನ್ನ ನಾದಿನಿ ಮತ್ತು ಅತ್ತೆಯಿಂದಲೇ ನನ್ನ ಸಂಸಾರ ಹಾಳಾಗಿದೆ. ಯಾರೂ ಆನ್‌ಲೈನ್ ಬೆಟ್ಟಿಂಗ್ ಆಡಬೇಡಿ. ಅದರಿಂದ ನನ್ನ ಇಡೀ ಕುಟುಂಬ ಬೀದಿಗೆ ಬಿತ್ತು. ಅದರಿಂದ ನಾನು ಸಾಯುತ್ತಿದ್ದೇನೆ. ನನ್ನ ಹೆಂಡತಿ ಕೂಡ ಸಾಯುತ್ತಿದ್ದಾಳೆ. ನಾನು ಸಂಪೂರ್ಣವಾಗಿ ಹಾಳಾಗಿದ್ದೇನೆ. ಹಣ ಎಂಬುದು ಬಹಳ ಮುಖ್ಯ’ ಎಂದು ವಿಡಿಯೊದಲ್ಲಿ ಆರೋಪಿ ಹೇಳಿದ್ದಾರೆ.

ಆತ್ಮಹತ್ಯೆ ಯತ್ನ

ಪತ್ನಿಯನ್ನು ಕೊಲೆ ಮಾಡಿದ ಬಳಿಕ ಪ್ರದೀಪ್, ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಾಯಿಯ ಮೃತದೇಹ ಎದುರು ಮಕ್ಕಳ ಗೋಳಾಟ ನೋಡಲು ಸಾಧ್ಯವಾಗದೆ ಚಾಕುವಿನಿಂದ ಕೈ ಕೊಯ್ದುಕೊಂಡು ಆರೋಪಿ ಆತ್ಮಹತ್ಯೆಗೆ ಯತ್ನಿಸಿದ್ದರು. ಬಳಿಕ ಪೊಲೀಸರು ಸ್ಥಳಕ್ಕೆ ಬರುವಷ್ಟರಲ್ಲಿ ಪರಾರಿ ಆಗಿದ್ದರು ಎಂದು ಮೂಲಗಳು ಹೇಳಿವೆ.

ಮಗು ಕೊಲೆ ಪ್ರಕರಣ • ತನಿಖೆಗೆ ಎಂಟು ಪೊಲೀಸ್ ತಂಡಗಳ ರಚನೆ

ಪ್ರಕರಣ ಮುಚ್ಚಲು ವ್ಯವಹಾರ ಕಾರಣ

ಪ್ರಜಾವಾಣಿ ವಾರ್ತೆ

ಪ್ರಿಯಾಂಕಾ ಹಾಗೂ ಜಿ.ಮೋಹನ್

ಅಪರಾಧ ಸುದ್ದಿ

ಬೆಂಗಳೂರು: ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಸೀಗೇಹಳ್ಳಿ ವಿಲ್ಲಾದಲ್ಲಿ ನಡೆದಿದ್ದ ಪಿ.ವೆನ್ನೆಲಾ(6) ಎಂಬ ಮಗುವಿನ ಕೊಲೆ ಹಾಗೂ ಆ ಪ್ರಕರಣವನ್ನು ಮುಚ್ಚಿಹಾಕಲು ಮೂವರು ಪೊಲೀಸರು ನಡೆಸಿದ ಪ್ರಯತ್ನದ ತನಿಖೆಗೆಂದು ಎಂಟು ವಿಶೇಷ ತಂಡಗಳನ್ನು ರಚಿಸಲಾಗಿದೆ. ತಂಡ ರಚನೆಯ ಬೆನ್ನಲ್ಲೇ ಪ್ರಕರಣದ ತನಿಖೆ ಚುರುಕು ಪಡೆದಿದೆ.

ಕೊಲೆ ಪ್ರಕರಣದ ತನಿಖೆಯಲ್ಲಿ ಕರ್ತವ್ಯ ಲೋಪ ಎಸಗಿದ್ದ ಹಾಗೂ ಎಫ್ಐಆರ್ ದಾಖಲಿಸಲು ವಿಳಂಬ ಮಾಡಿದ್ದ ಕಾಡುಗೋಡಿ ಪೊಲೀಸ್ ಠಾಣೆಯ ಹಿಂದಿನ ಇನ್‌ಸ್ಪೆಕ್ಟರ್ ರಂಗಸ್ವಾಮಿ (ಪ್ರಸ್ತುತ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್), ಈಗಿನ ಪಿಎಸ್ಐ ನಿಂಗರಾಜು ಹಾಗೂ ಕಾನ್‌ಸ್ಟೆಬಲ್ (ಠಾಣಾ ಬರಹಗಾರ) ಹಾಲೇಶ್ ನಾಯ್ಕ್ ಅವರನ್ನು ಅಮಾನತು ಮಾಡಿ, ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಕಳೆದ ಶುಕ್ರವಾರ ಆದೇಶಿಸಿದ್ದರು. ಕೊಲೆ ಪ್ರಕರಣವನ್ನು ಮುಚ್ಚಿಹಾಕಲು ಪೊಲೀಸರು ಏಕೆ ಪ್ರಯತ್ನಿಸಿದ್ದರು? ಅವರ ಉದ್ದೇಶವೇನು ಎಂಬ ಸಂಗತಿಯನ್ನು ಬಯಲಿಗೆ ಎಳೆಯಲು ಮುಂದಾಗಿರುವ ತನಿಖಾ ತಂಡಕ್ಕೆ ಹಲವು ಅಚ್ಚರಿ ವಿಚಾರಗಳು ಪತ್ತೆ ಆಗಿವೆ.

ದಾವಣಗೆರೆಯ ಪ್ರವೀಣ್ ಹಾಗೂ ಬೆಂಗಳೂರಿನ ಪ್ರಿಯಾಂಕಾ ಅವರು 2007ರಲ್ಲಿ ಮದುವೆ ಆಗಿದ್ದರು. ಈ ದಂಪತಿಗೆ 17 ವರ್ಷ ಹಾಗೂ 6 ವರ್ಷದ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಪ್ರಿಯಾಂಕಾ ಅವರು ಕೆಲವು ತಿಂಗಳ ಹಿಂದೆ ಪತಿಗೆ ವಿಚ್ಛೇದನ ನೀಡಿ ಪ್ರಿಯಕರ, ರಿಯಲ್ ಎಸ್ಟೇಟ್ ಉದ್ಯಮಿ ಜಿ.ಮೋಹನ್ ಅವರೊಂದಿಗೆ ವಿಲ್ಲಾದಲ್ಲಿ ನೆಲಸಿದ್ದರು. ಕಿರಿಯ ಮಗಳು ಪ್ರಿಯಾಂಕಾ ಜತೆಗೇ ವಿಲ್ಲಾದಲ್ಲಿ ಇದ್ದಳು. ಮಾರ್ಚ್ 24ರಂದು ವೆನ್ನೆಲಾ ಕೊಲೆ ನಡೆದಿತ್ತು.

ರಿಯಲ್ ಎಸ್ಟೇಟ್ ವ್ಯವಹಾರದ ನಂಟು: ‘ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಪ್ರಿಯಾಂಕಾ ಅವರ ಪ್ರಿಯಕರ ಜಿ.ಮೋಹನ್ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದಾರೆ. ಮೋಹನ್ ಅವರೊಂದಿಗೆ ರಂಗಸ್ವಾಮಿಗೆ ಹಲವು ವರ್ಷದಿಂದ ಸ್ನೇಹವಿದೆ ಎಂಬ ವಿಚಾರ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಉಸಿರುಗಟ್ಟಿಸಿ ಮಗುವನ್ನು ಸಾಯಿಸಲಾಗಿದೆ’ ಎಂಬುದಾಗಿ ಏಪ್ರಿಲ್ 4ರಂದೇ ಮರಣೋತ್ತರ ವರದಿ ಬಂದಿತ್ತು. ವರದಿ ಬಂದಿದ್ದರೂ ಪ್ರಕರಣವನ್ನು ‘ಯುಡಿಆರ್’ ವ್ಯಾಪ್ತಿಯಲ್ಲೇ ಇಟ್ಟುಕೊಂಡಿದ್ದರು. ತನಿಖಾಧಿಕಾರಿಗಳು ಕೊಲೆ ಪ್ರಕರಣ ದಾಖಲು ಮಾಡಿರಲಿಲ್ಲ. ಗೆಳೆತನ, ರಿಯಲ್ ಎಸ್ಟೇಟ್ ವ್ಯವಹಾರದ ಋಣಕ್ಕಾಗಿಯೇ ಅಮಾನತುಗೊಂಡ ಪೊಲೀಸರ ಪೈಕಿ, ಒಬ್ಬ ಅಧಿಕಾರಿ ಆರೋಪಿಯ ಬೆನ್ನಿಗೆ ನಿಂತಿರುವುದು ತನಿಖೆ ವೇಳೆ ಪತ್ತೆ ಆಗಿದೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ್ತೆ ಕಸ್ಟಡಿಗೆ?

ಆರೋಪಿಗಳಾದ ಜಿ.ಮೋಹನ್ ಹಾಗೂ ಪ್ರಿಯಾಂಕಾ ಅವರನ್ನು ವಿಚಾರಣೆಗಾಗಿ ಐದು ದಿನ ಕಸ್ಟಡಿಗೆ ಪಡೆಯಲಾಗಿತ್ತು. ಇಬ್ಬರೂ ನೀಡಿರುವ ಹೇಳಿಕೆಗಳಲ್ಲಿ ಗೊಂದಲವಿದೆ. ನ್ಯಾಯಾಲಯಕ್ಕೆ ಇಬ್ಬರನ್ನೂ ಮತ್ತೆ ಹಾಜರುಪಡಿಸಿ, ಇನ್ನೂ ಹೆಚ್ಚಿನ ವಿಚಾರಣೆಗಾಗಿ ಮತ್ತಷ್ಟು ದಿನ ಕಸ್ಟಡಿಗೆ ಕೇಳಲಾಗುವುದು ಎಂದು ಮೂಲಗಳು ಹೇಳಿವೆ.

‘ತಂದೆಯನ್ನೂ ಭೇಟಿ ಮಾಡಿಲ್ಲ’

‘ಕೊಲೆಯಾದ ವೆನ್ನೆಲಾ ತಂದೆ ಪ್ರವೀಣ್ ಅವರು ಇನ್‌ಸ್ಪೆಕ್ಟರ್ ರಂಗಸ್ವಾಮಿ ಅವರನ್ನು ಭೇಟಿ ಮಾಡಲು ಸಾಕಷ್ಟು ಬಾರಿ ಪ್ರಯತ್ನಿಸಿದ್ದರು. ಆದರೆ, ಭೇಟಿಗೆ ಅವಕಾಶ ನೀಡಿರಲಿಲ್ಲ. ಸಾವಿನ ಬಗ್ಗೆ ಇನ್‌ಸ್ಪೆಕ್ಟರ್ ಮಾಹಿತಿಯನ್ನೂ ಪಡೆದುಕೊಂಡಿರಲಿಲ್ಲ’ ಎಂದು ತನಿಖಾಧಿಕಾರಿ ಒಬ್ಬರು ತಿಳಿಸಿದರು.

‘ಎಲ್ಲ ಆಯಾಮಗಳಲ್ಲೂ ಪ್ರಕರಣದ ತನಿಖೆ ನಡೆಸಲಾಗುತ್ತಿದೆ. ಮೊದಲ ಆರೋಪಿ ಮೋಹನ್ ಅವರನ್ನು ಬಾಣಸವಾಡಿ ಇನ್‌ಸ್ಪೆಕ್ಟರ್ ವಿಚಾರಣೆ ನಡೆಸುತ್ತಿದ್ದಾರೆ. ಮೋಹನ್ ವ್ಯತಿರಿಕ್ತ ಹೇಳಿಕೆ ನೀಡುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಇನ್ನು ಪ್ರಿಯಾಂಕಾ ಅವರನ್ನು ಎಸಿಪಿ ದರ್ಜೆಯ ಅಧಿಕಾರಿ ವಿಚಾರಣೆ ನಡೆಸುತ್ತಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಆರೋಪಿಗಳು ಬೇರೆ ಬೇರೆ ಹೇಳಿಕೆ ನೀಡುತ್ತಿರುವುದರಿಂದ, ವೈಜ್ಞಾನಿಕ ಹಾಗೂ ತಾಂತ್ರಿಕ ಸಾಕ್ಷ್ಯಾಧಾರ ಆಧರಿಸಿ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಲಂಚ ಆರೋಪ: ಮೂವರು ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಚ ಪಡೆದ ಆರೋಪದಲ್ಲಿ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರಿಂದ ಬಂಧನಕ್ಕೆ ಒಳಗಾಗಿರುವ ನಗರದ ಎಚ್‌ಎಎಲ್ ಮಹಿಳಾ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕೆ.ಅನಿತಾ, ಹೆಡ್ ಕಾನ್‌ಸ್ಟೆಬಲ್ ಉಳವಪ್ಪ ತೇಗೂರ, ಯತೀಶ್ ಅವರನ್ನು ಅಮಾನತು ಮಾಡಲಾಗಿದೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಸೂಚನೆಯ ಬೆನ್ನಲ್ಲೇ ಮೂವರನ್ನು ಅಮಾನತು ಮಾಡಿ ತನಿಖೆಗೆ ಆದೇಶಿಸಲಾಗಿದೆ.

‘ಈ ಪ್ರಕರಣದಲ್ಲೂ ಇನ್ನೂ ಯಾರ್‍ಯಾರು ಶಾಮೀಲಾಗಿದ್ದಾರೆ ಎಂಬುದನ್ನು ಪತ್ತೆಹಚ್ಚಲು ತನಿಖೆಗೆ ಆದೇಶಿಸಲಾಗಿದೆ. ಶಾಮೀಲಾಗಿರುವುದು ಕಂಡುಬಂದರೆ ಅಂತಹವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು. ವ್ಯವಸ್ಥೆಯನ್ನು ಸರಿಪಡಿಸಲು ಸ್ವಲ್ಪ ಸಮಯ ಬೇಕಾಗಿದೆ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

‘ಜನರಿಗೆ ತೊಂದರೆ ನೀಡಿದರೆ, ಪ್ರಕರಣ ದಾಖಲಿಸಲು ಹಣ ಕೇಳಿದರೆ ಅಂತಹ ಅಧಿಕಾರಿಗಳ ವಿರುದ್ಧ ದೂರು ನೀಡಲು ವ್ಯವಸ್ಥೆ ರೂಪಿಸಲಾಗುವುದು’ ಎಂದು ಮಾಹಿತಿ ನೀಡಿದರು.

ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ಜೈಪುರಕ್ಕೆ ಎಚ್‌ಎಎಲ್ ಪೊಲೀಸರು ತೆರಳಿದ್ದರು. ಆದರೆ, ಪ್ರಕರಣದಿಂದ ಕೈ ಬಿಡಲು ಆರೋಪಿಗಳ ಕುಟುಂಬದವರಿಂದ ₹2 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ದೂರಿನ ಆಧಾರದ ಮೇಲೆ ರಾಜಸ್ಥಾನದ ಎಸಿಬಿ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿ ಜೈಪುರದ ಹೋಟೆಲ್ ಗಂಗೌರ್‌ನಲ್ಲಿ ₹40 ಸಾವಿರ ಲಂಚ ಪಡೆಯುವಾಗ ಉಲ್ಲವ್ವ ತೆಗೂರು ಅವರನ್ನು ಹಣದ ಸಮೇತ ಬಂಧಿಸಿದ್ದಾರೆ. ಬಳಿಕ ನಡೆದ ವಿಚಾರಣೆಯಲ್ಲಿ ಕೆ.ಅನಿತಾ ಮತ್ತು ಯತೀಶ್ ಅವರ ಪಾತ್ರವೂ ಇರುವುದು ಗೊತ್ತಾಗಿ, ಅವರನ್ನೂ ಬಂಧಿಸಿದ್ದಾರೆ.

ವ್ಯಕ್ತಿ ದಿಢೀರ್ ನಾಪತ್ತೆ: ಕೊಲೆ ರಹಸ್ಯ ಬಯಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಠಾಣಾ ವ್ಯಾಪ್ತಿಯ ಎ.ಸಿ.ಎಸ್ ಲೇಔಟ್‌ನಲ್ಲಿ ಇತ್ತೀಚೆಗೆ ನಡೆದಿದ್ದ ಕಾರ್ಮಿಕನ ನಿಗೂಢ ಸಾವಿನ ಪ್ರಕರಣಕ್ಕೆ ತಿರುವುಸಿಕ್ಕಿದ್ದು, ಅದು ಕೊಲೆ ಎಂಬುದು ಪೊಲೀಸ್ ತನಿಖೆಯಿಂದ ದೃಢಪಟ್ಟಿದೆ.

2 ವಾರಗಳ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಬಾಷಾ (58) ಮೃತದೇಹ ಪತ್ತೆಯಾಗಿತ್ತು. ಅವರು ಕಟ್ಟಡದಿಂದ ಬಿದ್ದು ಮೃತಪಟ್ಟಿರಬಹುದು ಎಂದು ಭಾವಿಸಲಾಗಿತ್ತು. ಪೊಲೀಸರ ಚುರುಕಿನ ತನಿಖೆಯಿಂದ ಕೊಲೆ ಎಂಬುದು ಬಯಲಾಗಿದೆ. ಆರೋಪಿಯನ್ನು ಸುಂದರ್‌ನನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೊಲೆಯಾದ ಬಾಷಾ ಹಾಗೂ ಆರೋಪಿ ಸುಂದರ್ ಇಬ್ಬರೂ ಒಂದೇ ಜಾಗದಲ್ಲಿ ಕೆಲಸ ಮಾಡಿಕೊಂಡಿದ್ದರು. ಘಟನೆ ನಡೆದ ರಾತ್ರಿ ಇಬ್ಬರೂ ಒಟ್ಟಿಗೆ ಕುಳಿತು ಮದ್ಯಪಾನ ಮಾಡಿದ್ದರು. ಈ ವೇಳೆ ಇಬ್ಬರ ನಡುವೆ ಸಣ್ಣ ವಿಷಯಕ್ಕೆ ಗಲಾಟೆ ಆರಂಭವಾಗಿತ್ತು. ಜಗಳ ವಿಕೋಪಕ್ಕೆ ತಿರುಗಿದಾಗ ಸಿಟ್ಟಿಗೆದ್ದ ಸುಂದರ್, ಅಲ್ಲೇ ಇದ್ದ ಮರದ ಪಟ್ಟಿಯಿಂದ ಬಾಷಾ ತಲೆಗೆ ಹೊಡೆದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು. ಬಾಷಾ ಮೃತಪಟ್ಟ ಬಳಿಕ, ಆರೋಪಿ ಸ್ಥಳದಿಂದ ಪರಾರಿ ಆಗಿದ್ದರು ಎಂದು ಮೂಲಗಳು ಹೇಳಿವೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಮೃತ ವ್ಯಕ್ತಿಯ ತಲೆಯ ಮೇಲಿದ್ದ ಗಾಯದ ಗುರುತು ಬಿಟ್ಟರೆ, ಮೈಮೇಲೆ ಬೇರೆ ಯಾವುದೇ ಗಾಯಗಳು ಕಂಡುಬಂದಿರಲಿಲ್ಲ. ಆರಂಭದಲ್ಲಿ ಅಸಹಜ ಸಾವು ಎಂದು ಶಂಕಿಸಲಾಗಿತ್ತು.

‘ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಸಿ.ಸಿ.ಟಿ.ವಿ ಕ್ಯಾಮೆರಾ ಇರಲಿಲ್ಲ. ಮೃತ ವ್ಯಕ್ತಿಯ ಮೈಮೇಲೆ ಗಾಯದ ಗುರುತು ಹೊರತುಪಡಿಸಿದರೆ ಕೊಲೆ ಪ್ರಕರಣವನ್ನು ಸಾಬೀತು ಮಾಡುವುದೂ ಕಷ್ಟವಾಗಿತ್ತು. ನಿರ್ಮಾಣ ಹಂತದ ಅಕ್ಕಪಕ್ಕದ ನಿವಾಸಿಗಳನ್ನು ವಿಚಾರಣೆ ನಡೆಸಲಾಯಿತು. ಸುಂದರ್ ಎಂಬಾತ ಬಾಷಾ ಅವರೊಂದಿಗೆ ಓಡಾಟ ನಡೆಸುತ್ತಿದ್ದ. ಆತ ಇತ್ತೀಚೆಗೆ ಕಾಣಿಸುತ್ತಿಲ್ಲ ಎಂಬುದಾಗಿ ಹೇಳಿಕೆ ನೀಡಿದ್ದರು. ಆ ಸುಳಿವು ಆಧರಿಸಿ ತನಿಖೆ ನಡೆಸಿ ಸುಂದರ್‌ನನ್ನು ಪತ್ತೆಹಚ್ಚಿ ಬಂಧಿಸಲಾಯಿತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನಾಚರಣೆ

‘ಹಿರಿಯರಿಗೆ ಮಾನಸಿಕ, ಭಾವನಾತ್ಮಕ ನೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಹಾಗೂ ಭಾವನಾತ್ಮಕ ನೆರವು ಇಲ್ಲದೆ ಹಿರಿಯರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಜಂಟಿ ಪೊಲೀಸ್ ಕಮಿಷನರ್ ಬಿ.ರಮೇಶ್ ಹೇಳಿದರು.

ನಗರ ಪೊಲೀಸ್, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ (ಎನ್‌ಎಂಟಿ) ಮತ್ತು ಹಿರಿಯ ಸಹಾಯವಾಣಿ ಜಂಟಿಯಾಗಿ ಆಯೋಜಿಸಿದ್ದ ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನ ಉದ್ಘಾಟಿಸಿ ಮಾತನಾಡಿದರು.

‘ಹಿಂದಿನ ಕಾಲದಲ್ಲಿ ಅವಿಭಕ್ತ ಕುಟುಂಬಗಳು ಇದ್ದವು. ಹಿರಿಯರೊಬ್ಬರು ಕುಟುಂಬದ ಜವಾಬ್ದಾರಿ ನಿರ್ವಹಿಸುತ್ತಿದ್ದು, ಆಗ ನಿಂದನೆ ಆಗುತ್ತಿರಲಿಲ್ಲ. ಈಗ ತಂದೆ, ತಾಯಿ ಜತೆ ಇರುವ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿದೆ. ಪಾಲಕರ ಪೋಷಣೆ ಮಾಡುವುದು ಮಕ್ಕಳ ಕರ್ತವ್ಯ’ ಎಂದು ತಿಳಿಸಿದರು.

‘ಹಿರಿಯರು ಕಷ್ಟವಿದ್ದರೆ ಹಿರಿಯರ ಸಹಾಯವಾಣಿ 1090ಗೆ ಕರೆ ಮಾಡಬಹುದು. ಎಲ್ಲ ಸಮಸ್ಯೆ ಬಗೆಹರಿಸುತ್ತೇವೆ ಎಂಬ ಭರವಸೆ ನೀಡುವುದಿಲ್ಲ. ಸಹಾಯವಾಣಿ ಸಿಬ್ಬಂದಿ ಕೌನ್ಸೆಲಿಂಗ್ ಮಾಡುತ್ತಾರೆ, ಅಗತ್ಯ ಬಿದ್ದರೆ ಪ್ರಕರಣ ದಾಖಲಿಸುತ್ತಾರೆ’ ಎಂದು ಸಲಹೆ ನೀಡಿದರು.

ಆಸರೆ ಮತ್ತು ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಬಗ್ಗೆ ವಿವರಿಸಿದ ರಮೇಶ್, ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಿರಿಯರ ಅಂಕಿ ಅಂಶ ಸಂಗ್ರಹಿಸಲಾಗುತ್ತಿದೆ. ಒಂಟಿ ಇರುವವರು, ದಂಪತಿ ಹೆಸರು ನೋಂದಣಿ ಮಾಡಿಕೊಂಡು ವೈದ್ಯಕೀಯ, ಪಿಂಚಣಿ ಸಮಸ್ಯೆಗೆ ಸಂಬಂಧಪಟ್ಟ ಇಲಾಖೆ ಸಂಪರ್ಕಿಸಿ, ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದರು.

ಅಂಗವಿಕಲರು ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀನಿವಾಸ್ ವೈ ಅಲದರ್ತಿ, ಹಿರಿಯ ಸಹಾಯವಾಣಿ ಯೋಜನಾ ಸಂಯೋಜಕಿ ಸುರೇಖಾ, ವೃದ್ಧಾಪ್ಯ ತಜ್ಞೆ ಇಂದಿರಾ ಜೈ ಪ್ರಕಾಶ್, ಹಿರಿಯ ನಾಗರಿಕರ ನ್ಯಾಯಾಲಯದ ವಿಶೇಷ ಉಪ ಆಯುಕ್ತ ಜಯಮಾಧವ್, ಸಹಾಯಕ ಪೊಲೀಸ್ ಆಯುಕ್ತೆ ಪ್ರಿಯದರ್ಶಿನಿ ಸಾಣೆಕೊಪ್ಪ, ವಕೀಲೆ ವಾಣಿಶ್ರೀ ಹಾಜರಿದ್ದರು.

ಸಹಾಯವಾಣಿಗೆ 2.89 ಲಕ್ಷ ಕರೆ: ಹಿರಿಯರ ಸಹಾಯವಾಣಿ ಆರಂಭವಾದ ದಿನದಿಂದ ಈವರೆಗೆ 2.89 ಲಕ್ಷಕ್ಕೂ ಹೆಚ್ಚು ಕರೆಗಳು ಬಂದಿದೆ ಎಂದು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಡಾ.ರಾಧಾ ಹೇಳಿದರು.

2023ರಿಂದ 2026ರವರೆಗೆ ನಡೆಸಲಾದ ಅಧ್ಯಯನದ ಪ್ರಕಾರ ಸುಮಾರು ಶೇಕಡ 68 ಪ್ರಕರಣಗಳು ಕುಟುಂಬ ಸದಸ್ಯರಿಂದ ನಡೆದ ದೌರ್ಜನ್ಯಕ್ಕೆ ಸಂಬಂಧಿಸಿವೆ. ಈ ಪೈಕಿ ಮಾನಸಿಕ ದೌರ್ಜನ್ಯ ಸಾಮಾನ್ಯವಾಗಿದೆ. ಲಿಖಿತ ದೂರುಗಳ ವಿಶ್ಲೇಷಣೆಯಲ್ಲಿ ಶೇಕಡ 42 ಪ್ರಕರಣಗಳಲ್ಲಿ ಮಕ್ಕಳು ದೌರ್ಜನ್ಯವೆಸಗಿದ್ದು, ಶೇ 90 ಪ್ರಕರಣಗಳಲ್ಲಿ ಸೊಸೆಯಂದಿರು ದೌರ್ಜನ್ಯ ಎಸಗಿದ್ದಾರೆ ಎಂದು ವಿವರಿಸಿದರು.

ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನಾಚರಣೆ ಕಾರ್ಯಕ್ರಮದಲ್ಲಿ ಬಿ. ರಮೇಶ್, ರಾಧಾ ಎಸ್.ಮೂರ್ತಿ, ಶ್ರೀನಿವಾಸ್ ಅಲದರ್ತಿ ಅವರು ಹಿರಿಯ ನಾಗರಿಕರ ಜೊತೆ ಮಾತನಾಡಿದರು –ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಕಲೆಯಲ್ಲಿ ಅರಳಿದ ವಿಜ್ಞಾನ ಕಲಿಕೆ

ಹೆಬ್ಬಾಳದ ಬಳ್ಳಾರಿ ರಸ್ತೆಯ 'ಬೆಂಗಳೂರು ವಿಜ್ಞಾನ ಗ್ಯಾಲರಿ'ಯಲ್ಲಿ ಪ್ರತಿವರ್ಷವೂ ಹೊಸ ವಿಷಯದ ಕಲಾ ಆಕರ್ಷಣೆ

• ಮೋಹನ್ ಕುಮಾರ ಸಿ.

ಬ್ರ್ಯಾಂಡ್ ಬೆಂಗಳೂರು

ಬೆಂಗಳೂರು: 'ವಿಜ್ಞಾನ ಕಬ್ಬಿಣದ ಕಡಲೆಯಲ್ಲ. ಕಲೆಯ ಮೂಲಕ ಕಲಿಕೆಯೂ ಸುಲಭ' ಎಂಬುದನ್ನು ಸಾರುವ ಗ್ಯಾಲರಿಯಿದು. ಜಗದ ವಿಜ್ಞಾನ ಕಥನಗಳ ವಿಸ್ಮಯ ಲೋಕ ಕಲೆಯಲ್ಲಿ ಅರಳಿದೆ. ಹೆಜ್ಜೆ ಹೆಜ್ಜೆಗೂ ಸೋಜಿಗದ ಪುಳಕ...

ಇಂತಹ ಹೊಸ ಅನುಭವ ನೀಡುವ 'ಬೆಂಗಳೂರು ವಿಜ್ಞಾನ ಗ್ಯಾಲರಿ'ಯು ಹೆಬ್ಬಾಳದ ಬಳ್ಳಾರಿ ರಸ್ತೆಯಲ್ಲಿದೆ. ಪ್ರಾಕೃತಿಕ, ಮಾನವಿಕ, ತಾಂತ್ರಿಕ ವಿಷಯಗಳನ್ನು ಕಲಾ ವಿನ್ಯಾಸ ಗಳಲ್ಲಿ ಬಿತ್ತರಿಸಿರುವುದು ಗ್ಯಾಲರಿಯ ವಿಶೇಷ. ಈ ಮೂಲಕ ವಿಜ್ಞಾನ– ತಂತ್ರಜ್ಞಾನ ನಗರಿಗೆ ಮತ್ತೊಂದು ಗ್ಯಾಲರಿಯ ಗರಿ ಮುಡಿಗೇರಿದೆ.

ರಾಜ್ಯ ಸರ್ಕಾರದ ಸಂಸ್ಥಾಪನಾ ಸಹಭಾಗಿತ್ವವಿರುವ ಗ್ಯಾಲರಿಗೆ 'ಭಾರತೀಯ ವಿಜ್ಞಾನ ಸಂಸ್ಥೆ' (ಐಐಎಸ್‌ಸಿ), 'ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ' (ಎನ್‌ಸಿಬಿಎಸ್), 'ಸೃಷ್ಟಿ– ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಬಿಸಿನೆಸ್ ಅಂಡ್ ಟೆಕ್ನಾಲಜಿ' ಶೈಕ್ಷಣಿಕ ಸಹಯೋಗವನ್ನು ನೀಡಿವೆ. ಇಲ್ಲಿಗೆ ಪ್ರವೇಶವೂ ಉಚಿತ.

ಮೊದಲ ಗ್ಯಾಲರಿ: 'ಗ್ಲೋಬಲ್ ಸೈನ್ಸ್ ಗ್ಯಾಲರಿ ನೆಟ್‌ವರ್ಕ್' ಜಾಲವನ್ನು ಬೆಸೆದುಕೊಂಡಿರುವ ಏಷ್ಯಾದ ಮೊದಲ ಗ್ಯಾಲರಿ ಇದಾಗಿದ್ದು, 2024ರಿಂದ ಸಾರ್ವಜನಿಕರಿಗೆ ಮುಕ್ತವಾಗಿದೆ. ಪ್ರತಿ ವರ್ಷವೂ ಹೊಸತನದಲ್ಲಿ ಕಲಿಯುವ ಕಲೆಗಳು ಗ್ಯಾಲರಿಯಲ್ಲಿ ಅನಾವರಣಗೊಳ್ಳುತ್ತಿವೆ. ಜಾಹ್ನವಿ ಫಾಲ್ಕೆ ಇದರ ನಿರ್ದೇಶಕರಾಗಿದ್ದಾರೆ. ಅಮೆರಿಕದ ಅಟ್ಲಾಂಟ, ಮೆಕ್ಸಿಕೊದ ಮಾಂಟೆರ್ರಿ, ಇಂಗ್ಲೆಂಡ್‌ನ ಲಂಡನ್, ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲೂ ಇದರ ಸೋದರ ಸಂಸ್ಥೆಗಳು ಮೈದಾಳಿವೆ. ವಿಜ್ಞಾನ ಸಂಸ್ಕೃತಿಯನ್ನು ನವಪೀಳಿಗೆಗೆ ಸಮಕಾಲೀನ ಸ್ವರೂಪದಲ್ಲಿ ಹರಡುತ್ತಿವೆ.

ಮುಖ್ಯಾಂಶಗಳು

- ರಾಜ್ಯ ಸರ್ಕಾರದ ಸಂಸ್ಥಾಪನಾ ಸಹಯೋಗ
- ಐಐಎಸ್‌ಸಿ, ಎನ್‌ಸಿಬಿಎಸ್‌ನ ಶೈಕ್ಷಣಿಕ ನೆರವು
- ಗಮನ ಸೆಳೆಯುವ ರಾಗಿ ನೆಟ್, ಕ್ಯಾಲರಿ ಅಖಾಡ

ಕಲೆ– ವಿಜ್ಞಾನದ ಬೆಸುಗೆ: ಕೇರಳದ ಕೊಚ್ಚಿಯಲ್ಲಿ ನಡೆಯುವ 'ಬಿನಾಲೆ ಅಂತರರಾಷ್ಟ್ರೀಯ ಕಲಾ ಪ್ರದರ್ಶನ'ದಲ್ಲಿ ದೊರೆಯುವ ಅನುಭವ ಗ್ಯಾಲರಿ ಪ್ರವೇಶಿಸುತ್ತಿದ್ದಂತೆ ಸಿಗುತ್ತದೆ. ವಿಜ್ಞಾನದ ಸರಾಗ ಕಲಿಕಾ ಅನುಭವವನ್ನು ದೇಶ–ವಿದೇಶದ ಖ್ಯಾತ ಕಲಾವಿದರು ಕಲಾಕೃತಿಗಳಲ್ಲಿ ನೀಡಿದ್ದಾರೆ.

ಕ್ಯಾಲರಿ ಅಖಾಡ: ಪ್ರತಿ ವರ್ಷವೂ ವಿಷಯವೊಂದನ್ನು ಆಧರಿಸಿ ವಿಜ್ಞಾನಿಗಳು, ತಂತ್ರಜ್ಞರು, ಕಲಾವಿದರು ಸೇರಿ ಕಲಾಕೃತಿಗಳನ್ನು ರೂಪಿಸುತ್ತಾರೆ. ಈ ಹಿಂದೆ 'ಕಾರ್ಬನ್', 'ಸೈಕೀ' ವಿಷಯಗಳನ್ನು ಬಹು ಆಯಾಮದಲ್ಲಿ ಹೊಸ ತಲೆಮಾರಿಗೆ ತಲುಪಿಸುವ ಕೆಲಸವನ್ನು ಮಾಡಿತ್ತು. ಪ್ರಸ್ತುತ 'ಕ್ಯಾಲರಿ' ಪ್ರದರ್ಶನ ನಡೆಯುತ್ತಿದೆ. ದೇಹಕ್ಕೆ ಶಕ್ತಿ ತುಂಬುವ ಆಹಾರದಲ್ಲಿನ ಕ್ಯಾಲರಿಗಳ ವಿನ್ಯಾಸವನ್ನು ಹೇಳುವ 36 ಪ್ರದರ್ಶಿಕೆಗಳು ಇಲ್ಲಿವೆ.

ರಾಗಿ ನೆಟ್, ಕ್ಯಾಲರಿ ಅಖಾಡ, ಗುಲಿಸ್ತಾನ್, ಕೀಟ ಭಕ್ಷಣೆ, ಸ್ವರ್ಣಬೀಜ, ಚಿಪ್ಪುಗಳ ವೈವಿಧ್ಯ, ಬಾಂಬೆ ಡಾಕ್, ಮಾಪಸಾ ಮಾರುಕಟ್ಟೆ, ಕರುಳಿನ ಕರೆ, ಉದರದಲ್ಲಿ ಸೂಕ್ಷ್ಮಜೀವಿಗಳ ಪ್ರಪಂಚ, ಆಹಾರಗಳ ಅಖಾಡ, ಪರ್ಯಾಯ ಆಹಾರ, ಹಸಿವು, ಕ್ಷಾಮ, ಕಣಜದ ಕಲಾಕೃತಿಗಳು ವೀಕ್ಷಕರಿಗೆ ಕಥನಗಳನ್ನು ಹೇಳುತ್ತಿವೆ.

ಸುರೇಖಾ, ದಯಾನಂದ ನಾಗರಾಜು, ಎಲಿಯಾ ನುರ್ವಿಸ್ತಾ, ರುಕ್ರಾಲ್, ಟಾಗ್ರಾ, ಜ್ಯೂಲಿಯಾ ಟೆರ್ರಾ, ಗೋಪಾ ದ್ವಿವೇದಿ, ಓರಿಜಿತ್ ಸೇನ್, ಸಿ.ಎಂ.ಬೋಪಯ್ಯ, ರಿತಬಾನ್ ಘೋಷ್, ಎಚ್.ಜಿ.ಅರುಣ್ ಕುಮಾರ್ ಸೇರಿದಂತೆ 50ಕ್ಕೂ ಹೆಚ್ಚು ಕಲಾವಿದರು, ತಂತ್ರಜ್ಞರು ಕಲಾಕೃತಿಗಳನ್ನು ಸೃಷ್ಟಿಸಿದ್ದಾರೆ. ನಗರದ ಈ ಹೊಸ ಗ್ಯಾಲರಿಯು ವಿಜ್ಞಾನ ಕಥನಗಳನ್ನು ಭಿನ್ನವಾಗಿ ಹೇಳುತ್ತಿದೆ. ಭೂಮಿ ಮೇಲಿನ ಪ್ರೀತಿಯನ್ನು ಹೆಚ್ಚಿಸುತ್ತಿದೆ.

ಹೆಬ್ಬಾಳದ ಬಳ್ಳಾರಿ ರಸ್ತೆಯಲ್ಲಿರುವ 'ಬೆಂಗಳೂರು ವಿಜ್ಞಾನ ಗ್ಯಾಲರಿ'ಯ ನೋಟ —ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.


ಸಮುದ್ರ ವೈವಿಧ್ಯದ ನೈಜ ಅನುಭವ ನೀಡುವ ಕಲಾಕೃತಿ ಮೇಲೆ ವಿದ್ಯಾರ್ಥಿಗಳ ನಡಿಗೆ

ಮೂಟೆ ಚೀಲಗಳಲ್ಲಿ ರಚಿಸಿರುವ ರಾಗಿ ಕಣಜ

ಕಥನಗಳ ಲೋಕ

ಸ್ಥಳೀಯ ಆಹಾರ ಸಂಸ್ಕೃತಿಯ ಮೇಲೆ ವಸಾಹತುಶಾಹಿಯ ದಾಳಿ, ಇಂಡೊನೇಷ್ಯಾ ಸೇರಿದಂತೆ ಆಗ್ನೇಯ ಏಷ್ಯಾ ದೇಶಗಳು ತಾಳೆ, ರಬ್ಬರ್ ಕಣಜಗಳಾಗಿ ಬದಲಾದದ್ದು, ಜೀವವೈವಿಧ್ಯ ನಾಶವಾಗಿ ಓರಾಂಗುಟಾನ್, ಜಾವಾ– ಬಾಲಿ ಹುಲಿಗಳು ಮರೆಯದಾದ ಕಥನಗಳ ಓಟ ತೆರೆದುಕೊಳ್ಳುತ್ತದೆ.

ಬೆಳೆದ ಬೆಂಗಳೂರು ರಾಗಿ ಹೊಲ ನುಂಗಿದ ಕಥೆಯನ್ನು ಕಲಾವಿದೆ ಸುರೇಖಾ ಅವರ 'ರಾಗಿ ನೆಟ್' ಹೇಳುತ್ತಿದೆ. ಕಣಜ, ಕೃಷಿ ಪರಿಕರಗಳು, ಮಿಡತೆಗಳು, ಭವಿಷ್ಯದ ಆಹಾರಗಳು ಸೇರಿದಂತೆ ವಿವಿಧ ಕಲಾಕೃತಿಗಳ ನೈಜ ಅನುಭವ ಸಿಗಲು 'ದೃಶ್ಯ– ಶ್ರಾವ್ಯ' ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗಿದೆ.

ಕಾಫಿ, ಅಡಕೆ, ಹೊಗೆಸೊಪ್ಪು, ಪರಂಗಿ, ಟೀ, ಮೆಕ್ಕೆಜೋಳ, ವೀಳ್ಯದೆಲೆ ಮೊದಲಾದ ವಿದೇಶದ ಬೆಳೆಗಳು ದೇಶಕ್ಕೆ ಬಂದ ಕಥನಗಳು ಇಲ್ಲಿ ಮೈದಾಳಿವೆ. ಇರುಳ, ತೋಡ, ಸೋಲಿಗ ಬುಡಕಟ್ಟು ಸಮುದಾಯಗಳು, ಕರಾವಳಿ, ಮಲೆನಾಡಿನಲ್ಲಿ ಬಳಸುವ ಆಹಾರಗಳು ದೃಶ್ಯ ವೈಭವವೂ ಇಲ್ಲಿದೆ. ಸಂಪರ್ಕ: https://bengaluru.sciencegallery.com/

ಆಗಸ್ಟ್‌ನಿಂದ ಕ್ವಾಂಟಮ್...

ಇದೇ ಆಗಸ್ಟ್‌ನಿಂದ 2026ನೇ ಸಾಲಿನ 'ಕ್ವಾಂಟಮ್' ವಿಷಯಾಧರಿಸಿದ ವಸ್ತುಪ್ರದರ್ಶನ ಆರಂಭವಾಗಲಿದೆ. ಪ್ರಯೋಗಶೀಲ ಯುವ ಮನಸ್ಸುಗಳನ್ನು ಹೊಂದಿರುವ ಗ್ಯಾಲರಿಯಲ್ಲಿ 45ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ 30 ಮಂದಿ ಕಲಿಕೆ, ಕಾರ್ಯಾಗಾರ ಚಟುವಟಿಕೆಗಳನ್ನು ಮುನ್ನಡೆಸುತ್ತಿದ್ದಾರೆ. ಇವರಿಗೆ ಗ್ಲಾಸ್ಗೊ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪ್ರಮಾಣಪತ್ರವೂ ಸಿಗುತ್ತಿದೆ.

ಎಲಾನ್ ಮಸ್ಕ್ ವಿಶ್ವದ ಮೊದಲ ಟ್ರಿಲಿಯನೇರ್ ಆಗಿದ್ದಾರೆ!

ಆಸ್ತಿ ಘೋಷಿಸಲು ಎಚ್‌ಡಿಕೆ ಸಿದ್ಧವೇ?: ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿ.ಕೆ.ಶಿವಕುಮಾರ್ ಅವರಿಗೆ ₹1,400 ಕೋಟಿ ಎಲ್ಲಿಂದ ಉದುರಿತು' ಎಂದು ಕೇಳುವ ಕುಮಾರಸ್ವಾಮಿ, ಎಚ್.ಡಿ. ದೇವೇಗೌಡರನ್ನು ಬಿಟ್ಟು ತಮ್ಮ ಇಡೀ ಕುಟುಂಬದ ಆಸ್ತಿಯನ್ನು ಘೋಷಣೆ ಮಾಡಲು ಸಿದ್ಧರಿದ್ದಾರಾ?' ಎಂದು ಕಾಂಗ್ರೆಸ್ ಶಾಸಕ ಎನ್. ಚಲುವರಾಯಸ್ವಾಮಿ ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿಮ್ಮ ಇಡೀ ಜಾತಕ ಶಿವಕುಮಾರ್ ಅವರ ಬಳಿ ಇದೆ. ನೀವು ಇದೇ ರೀತಿ ಮುಂದುವರಿದರೆ ಎಲ್ಲ ದಾಖಲೆಗಳನ್ನು ಅವರು ಹೊರಹಾ- ಕಲಿದ್ದಾರೆ' ಎಂದು ಕುಮಾರಸ್ವಾಮಿ ಅವರಿಗೆ ಎಚ್ಚರಿಕೆ ನೀಡಿದರು.

'ಜೆಡಿಎಸ್‌ನಲ್ಲಿ ಟಿಕೆಟ್ ಕೊಡಲು ಹಾಗೂ ಇನ್ನೊಬ್ಬರನ್ನು ಸೋಲಿಸಲು ಡಮ್ಮಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಎಷ್ಟೆಷ್ಟು ಹಣ 'ಫಿಕ್ಸ್' ಮಾಡಲಾಗುತ್ತಿತ್ತು ಎಂಬುದು ನನಗೆ ಚೆನ್ನಾಗಿ ಗೊತ್ತು. ಏಕೆಂದರೆ, ನಾನು ಕೂಡ ದೀರ್ಘಕಾಲ ಅವರ ಜೊತೆಯಲ್ಲೇ ಇದ್ದವನು. ಭ್ರಷ್ಟಾಚಾರದ ವಿಚಾರವಾಗಿ ಬಹಿರಂಗ ಚರ್ಚೆಗೆ ನಾನು ಸಿದ್ಧ' ಎಂದರು.

'ಬಿಡದಿ ಟೌನ್‌ಶಿಪ್ ಯೋಜನೆಗೆ ರೈತರನ್ನು ಒಕ್ಕಲೆಬ್ಬಿಸುವುದು ನಮ್ಮ ಸರ್ಕಾರದ ಉದ್ದೇಶವಲ್ಲ. ರೈತರನ್ನು ಸಂಪೂರ್ಣ ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಯನ್ನು ಮುಂದುವರಿಸುತ್ತೇವೆ' ಎಂದೂ ಹೇಳಿದರು.

'ರಸಗೊಬ್ಬರ ಅಭಾವ ಮತ್ತು ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ವಿರೋಧ ಪಕ್ಷಗಳು ದ್ವಂದ್ವ ರಾಜಕಾರಣ ಮಾಡುತ್ತಿವೆ' ಎಂದು ವಾಗ್ದಾಳಿ ನಡೆಸಿದರು.

'ರೈತರಿಗೆ ಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಲು ಮುಖ್ಯಮಂತ್ರಿ ಶಿವಕುಮಾರ್ ಅವರು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ವಿಪಕ್ಷಗಳು ಇದನ್ನು ದೊಡ್ಡದಾಗಿ ಬಿಂಬಿಸಿ ರೈತರಲ್ಲಿ ಆತಂಕ ಸೃಷ್ಟಿಸಬಾರದು' ಎಂದು ಮನವಿ ಮಾಡಿದರು.

'ಡಿ.ಕೆ. ಶಿವಕುಮಾರ್ ಅವರು ಪದಗ್ರಹಣ ಮಾಡಿದ ದಿನದಿಂದಲೇ ಆರ್. ಅಶೋಕ ಅವರು ನಾಲಿಗೆ ಹರಿಬಿಡುತ್ತಿದ್ದಾರೆ. ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಉಳಿಸಿಕೊಳ್ಳಲು ಅವರು ದಿನನಿತ್ಯ ಇಂತಹ ಪ್ರದರ್ಶನ ನೀಡುತ್ತಿದ್ದಾರೆ. ಅಶೋಕ ಅವರು ತಮ್ಮ ಭಾಷೆಯ ಮೇಲೆ ಹಿಡಿತ ಸಾಧಿಸಿ ಮಾತನಾಡಿದರೆ ಒಳ್ಳೆಯದು' ಎಂದು ಎಚ್ಚರಿಕೆ ನೀಡಿದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಇದ್ದರು.

ದ್ವಿಚಕ್ರ ವಾಹನ ಸವಾರ ಸಾವು

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಕಸ ಸಾಗಣೆ ವಾಹನ ಹಾಗೂ ದ್ವಿಚಕ್ರ ನಡುವೆ ಮೈಸೂರು ರಸ್ತೆಯ ಸಿರ್ಸಿ ವೃತ್ತದ ಬಳಿ ಸೋಮವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಸವಾರ ಮೃತಪಟ್ಟಿದ್ದಾರೆ.

ಸತೀಶ್ (35) ಮೃತ ಸವಾರ. ಹಿಂಬದಿಯ ಸವಾರ ಪ್ರವೀಣ್ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಟೆಂಟ್‌ಹೌಸ್ ನಿರ್ಮಾಣ ಕೆಲಸ ಮಾಡಿಕೊಂಡಿದ್ದ ಸತೀಶ್ ಹಾಗೂ ಪ್ರವೀಣ್ ಅವರು ಗೋರಿಪಾಳ್ಯದಲ್ಲಿ ವಾಸವಿದ್ದರು. ಸೋಮವಾರ ಬೆಳಿಗ್ಗೆ 9.30ರ ಸುಮಾರಿಗೆ ಕೆಲಸಕ್ಕೆಂದು ಹೊರಟಿದ್ದರು. ಸಿರ್ಸಿ ವೃತ್ತದ ಕಸ ಸಾಗಣೆ ವಾಹನವು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಆಗ ದ್ವಿಚಕ್ರ ವಾಹನದಲ್ಲಿದ್ದ ಇಬ್ಬರೂ ಕೆಳಕ್ಕೆ ಬಿದ್ದಿದ್ದರು. ಲಾರಿ ಚಕ್ರ ಹರಿದ ಪರಿಣಾಮ ಸತೀಶ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದರು. ಲಾರಿ ಚಾಲಕನನ್ನು ಬಂಧಿಸಲಾಗಿದೆ. ಲಾರಿಯನ್ನು ಜಪ್ತಿ ಮಾಡಲಾಗಿದೆ. ಅತಿವೇಗ ಮತ್ತು ಅಜಾಗರೂಕ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಕಂಡುಬಂದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಚಿಟಿಕೆ ಸುದ್ದಿ

ಸಂಗೀತ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು: ನಗರದ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ 'ಬೆಂಗಳೂರು ಗಾಯನ ಸಮಾಜ'ವು ವಾರ್ಷಿಕ ಸಂಗೀತ ಸ್ಪರ್ಧೆಯನ್ನು ಆಗಸ್ಟ್ 1ರಿಂದ ಸೆಪ್ಟಂಬರ್ 6ರ ವರೆಗೆ ಆಯೋಜಿಸಿದೆ.

ಅರ್ಜಿಯು www.gayanasamaja.org ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಮೊ. 98431 24243, 99456 22450 ಸಂಪರ್ಕಿಸ ಬಹುದು ಎಂದು ಅಧ್ಯಕ್ಷ ಎಂಆರ್‌ವಿ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಶ್ಮಿ ಜಾಧವ್ ಹೆಚ್ಚುವರಿ ಎಸ್‌ಪಿಪಿ

ಬೆಂಗಳೂರು: ಹೈಕೋರ್ಟ್ ವಕೀಲೆ ರಶ್ಮಿ ಜಾಧವ್ ಅವರನ್ನು ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಲಾಗಿದೆ. ಈ ಕುರಿತಂತೆ ಕಾನೂನು ಇಲಾಖೆ ಇತ್ತೀಚೆಗೆ ಆದೇಶ ಹೊರಡಿಸಿದೆ.

ಶಿಕ್ಷಕರ ಭರ್ತಿಗೆ ಸಿ.ಎಂಗೆ ಮನವಿ

ಬೆಂಗಳೂರು: ದೈಹಿಕ ಶಿಕ್ಷಣ ಶಿಕ್ಷಕರ ಭರ್ತಿ ಮಾಡಬೇಕು. ಹೆಚ್ಚುವರಿ 1 ಲಕ್ಷ ಹುದ್ದೆಗಳು ಸೇರಿದಂತೆ ಒಂದೇ ಬಾರಿಗೆ 1.56 ಲಕ್ಷ ಹುದ್ದೆಗಳ ನೇಮಕ ಮಾಡಬೇಕು ಎಂದು ವಿವಿಧ ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದರು.

'ಪ್ರಾಥಮಿಕ ಶಾಲೆಗಳ 3,361 ಹಾಗೂ ಪ್ರೌಢಶಾಲೆಗಳ 1,861 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು ಹಾಗೂ ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ ಅನುಮೋದನೆಯಾಗಿರುವ 700 ಹುದ್ದೆಗಳನ್ನು ಭರ್ತಿ ಮಾಡಬೇಕು. ದೈಹಿಕ ಶಿಕ್ಷಣ ಸಮಗ್ರ ನಿಯಮ, ನೇಮಕಾತಿ ವೇಳೆ ಅಂಕಗಳ ಪರಿಗಣನೆ, ಹಾಸ್ಟಲ್ ವಾರ್ಡನ್ ಹುದ್ದೆಗೆ ಪರಿಗಣನೆ ಮಾಡಬೇಕು' ಎನ್ನುವುದೂ ಸೇರಿದಂತೆ 10 ಬೇಡಿಕೆಗಳನ್ನು ಒಳಗೊಂಡ ಪತ್ರವನ್ನು ಕರ್ನಾಟಕ ನಿರುದ್ಯೋಗಿ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪದಾಧಿಕಾರಿಗಳು ಸಲ್ಲಿಸಿದರು.

'ಸರ್ಕಾರ ಈಗಾಗಲೇ 56 ಸಾವಿರ ಖಾಲಿ ಹುದ್ದೆಗಳ ನೇಮಕಕ್ಕೆ ಮುಂದಾಗಿದೆ. ಜತೆಗೆ ಹೆಚ್ಚುವರಿ 1 ಲಕ್ಷ ಹುದ್ದೆಗಳನ್ನು ಸೇರಿಸಿ, ಡಿಸೆಂಬರ್ ವೇಳೆಗೆ 1.56 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಮನವಿ ಸಲ್ಲಿಸಿದರು.

ಸಂತ ಅಂಥೋಣಿ ಹಬ್ಬದ ಸಂಭ್ರಮ

ಸಂತ ಅಂಥೋಣಿಯ ಉತ್ಸವಮೂರ್ತಿಯ ಪಲ್ಲಕ್ಕಿ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಾಗಿತು

ಕೆ.ಆರ್.ಪುರ: ಇಲ್ಲಿನ ಟಿ.ಸಿ.ಪಾಳ್ಯದಲ್ಲಿ ಸಂತ ಅಂಥೋಣಿಯವರ 124ನೇ ವಾರ್ಷಿಕೋತ್ಸವದ ಅಂಗವಾಗಿ ಊರ ಹಬ್ಬ ವಿಜೃಂಭಣೆಯಿಂದ ಜರುಗಿತು. ಸಂತ ಅಂತೋಣಿ ಚರ್ಚಿನಲ್ಲಿ ಒಂಬತ್ತು ದಿನಗಳಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ- ಗಳು, ಪ್ರಾರ್ಥನಾ ಗೀತೆಗಳ ಗಾಯನವು ಭಕ್ತಿ, ಶಾಂತಿ, ಸೌಹಾರ್ದತೆಯಿಂದ ಗಮನ ಸೆಳೆಯಿತು.

ಸಂತ ಅಂಥೋಣಿ ಮೂರ್ತಿಯ ಹೂವಿನ ಪಲ್ಲಕ್ಕಿ ಉತ್ಸವ ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿತು. ಟಿ.ಸಿ.ಪಾಳ್ಯ ಸುತ್ತಮುತ್ತಲಿನ ಕೆ.ಆರ್.ಪುರ, ಬಸವನಪುರ, ಬಾಣಸವಾಡಿ, ರಾಮಮೂರ್ತಿನಗರದ ಭಕ್ತರು ಕ್ಯಾಂಡಲ್ ಹಿಡಿದು ಹರಕೆ ತೀರಿಸಿದರು.

ಸಂತ ಅಂಥೋಣಿ ಚರ್ಚ್‌ನ ಫಾದರ್ ಸಿ.ಫ್ರಾನ್ಸಿಸ್ ಮಾತನಾಡಿ, 'ಉತ್ಸವದಲ್ಲಿ ಎಲ್ಲಾ ಜಾತಿ, ಜನಾಂಗದ ಭಕ್ತರು ಪಾಲ್ಗೊಳ್ಳುವುದು ವಿಶೇಷ' ಎಂದರು. ಶಾಸಕ ಬೈರತಿ ಬಸವರಾಜ, ಬಿಜೆಪಿ ಮುಖಂಡರಾದ ಪ್ರವೀಣ್, ಅಂಥೋಣಿಸ್ವಾಮಿ ಪಾಲ್ಗೊಂಡರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಪಡೆದ ಅಲೆಮಾರಿ, ಅರೆ ಅಲೆಮಾರಿ ಮತ್ತು ಆದಿವಾಸಿ ಸಮುದಾಯಗಳ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು

ವಿದ್ಯಾರ್ಥಿಗಳಿಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಪಡೆದ ಅಲೆಮಾರಿ, ಅರೆ ಅಲೆಮಾರಿ ಮತ್ತು ಆದಿವಾಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ, ಆದಿವಾಸಿ ಅಲೆಮಾರಿ ಫೌಂಡೇಶನ್ ಸಹಯೋಗದಲ್ಲಿ ಶನಿವಾರ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ 33 ವಿದ್ಯಾರ್ಥಿ- ಗಳಿಗೆ ಶಾಲು ಹೊದಿಸಿ, ಸಂವಿಧಾನ ಮತ್ತು ಅಂಬೇಡ್ಕರ್ ಪುಸ್ತಕಗಳನ್ನು ನೀಡಲಾಯಿತು.

ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗರಾಜ ಅವರು ಸಂವಿಧಾನ ಪೀಠಿಕೆ ಓದಿದರು. ರಾಜ್ಯ ಘಟಕದ ಅಧ್ಯಕ್ಷ ಬಿ. ಎಲ್. ಹನುಮಂತಪ್ಪ ಅವರು ಸಂಘದ ಕುರಿತು ಮಾಹಿತಿ ನೀಡಿದರು.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ. ಎಸ್. ದ್ವಾರಕಾನಾಥ್ ಮಾತನಾಡಿ, 'ಅಲೆಮಾರಿ ಸಮುದಾಯ ಗಳ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳ- ಬೇಕು' ಎಂದರು.

ಪತ್ರಕರ್ತ ರಂಗನಾಥ್ ಭಾರದ್ವಾಜ್, ಪ್ರಾಧ್ಯಾಪಕ ಎಲ್ಲಪ್ಪ ಇಮ್ಮಡಿ, ರಾಧಾ ಪುಟ್ಟ ಸ್ವಾಮಿ, ಶಿವಕುಮಾರ್ ಸಿರುಗುಪ್ಪ, ಸಿಂಹಾದ್ರಿ ಭಾಗವಹಿಸಿದ್ದರು. ಹುಸೇನಪ್ಪ ವಿಭೂತಿ ವಂದಿಸಿದರು.

'ನೃತ್ಯಗಾರ್ತಿ' ಚಿತ್ರ ಮಾರ್ಪಾಡು: ಆಕ್ಷೇಪ

ನವದೆಹಲಿ (ಪಿಟಿಐ): ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಪ್ರಸಿದ್ಧ ಕಲಾಕೃತಿಗಳಲ್ಲಿ ಒಂದಾದ, ಮೊಹೆಂಜೊ–ದಾರೊದಲ್ಲಿ ಪತ್ತೆಯಾದ 'ನೃತ್ಯಗಾರ್ತಿ'ಯ ಕಂಚಿನ ಪ್ರತಿಮೆಯ ದೇಹವನ್ನು ಬಟ್ಟೆಯಿಂದ ಸುತ್ತಿರುವಂತೆ ಕಾಣುವ ಚಿತ್ರವನ್ನು 9ನೇ ತರಗತಿಯ ಎನ್‌ಸಿಇಆರ್‌ಟಿಯ ಪಠ್ಯಪುಸ್ತಕದಲ್ಲಿ ಮುದ್ರಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಇದರಿಂದ ಎಚ್ಚೆತ್ತ ಎನ್‌ಸಿಇಆರ್‌ಟಿ, ಮೂಲಚಿತ್ರವನ್ನು ಉಳಿಸಿಕೊಳ್ಳುವುದಾಗಿ ಸ್ಪಷ್ಟನೆ ನೀಡಿದೆ.

9ನೇ ತರಗತಿಯ ಹೊಸ ಕಲಾ ಶಿಕ್ಷಣ ಪಠ್ಯಪುಸ್ತಕ 'ಮಧುರಿಮಾ'ದ ಮೊದಲ ಅಧ್ಯಾಯದ 'ಕಲೆಗಳ ಇತಿಹಾಸ'ದಲ್ಲಿ ಈ ಚಿತ್ರವಿದೆ.

ಈ ಚಿತ್ರಕ್ಕಿಂತ ಭಿನ್ನವಾಗಿ, 6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿ 'ನೃತ್ಯಗಾರ್ತಿ'ಯ ಚಿತ್ರವಿದೆ. ಇದು ಮೂಲ ಕಂಚಿನ ಶಿಲ್ಪಕ್ಕೆ ಹೋಲುವ ರೂಪದಲ್ಲಿದೆ.

'ಐತಿಹಾಸಿಕ ಕಲಾಕೃತಿಗಳ ಚಿತ್ರಗಳನ್ನು ಮಾರ್ಪಡಿಸಬಾರದು. ಅವು ಕಲಾತ್ಮಕ ಹಾಗೂ ಸಾಂಸ್ಕೃತಿಕ ಮೌಲ್ಯವನ್ನು ಹೊಂದಿವೆ. 'ನೃತ್ಯಗಾರ್ತಿ' ಪ್ರತಿಮೆಯು ಮಕ್ಕಳಿಗೆ ಸೂಕ್ತವಲ್ಲ ಎಂದು ಪರಿಗಣಿಸುವುದೇ ತಪ್ಪು.' ಎಂದು ಎನ್‌ಸಿಇಆರ್‌ಟಿಯ 6ನೇ ತರಗತಿಯ ಹೊಸ ಸಮಾಜ ವಿಜ್ಞಾನ ಪಠ್ಯಪುಸ್ತಕ ಅಭಿವೃದ್ಧಿ ಸಮಿತಿಯ ಮುಖ್ಯಸ್ಥ ಮೈಕೆಲ್ ಡ್ಯಾನಿನೊ ಟೀಕಿಸಿದ್ದಾರೆ.

ಜಮೀರ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಜಮೀರ್ ಅಹಮದ್ ಖಾನ್ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಬೇಕು, ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆಯನ್ನೂ ನೀಡಬೇಕು' ಎಂದು ಆಗ್ರಹಿಸಿ ಪಾದರಾಯನಪುರದಲ್ಲಿ ಸೋಮವಾರ ಜಮೀರ್ ಬೆಂಬಲಿಗರು ಬೃಹತ್ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಮಾಜಿ ಸದಸ್ಯ ಇಮ್ರಾನ್ ಪಾಷಾ ನೇತೃತ್ವದಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದಾಗಿ ಎಚ್ಚರಿಸಿ, ಪ್ರತಿಭಟನಕಾರರು ಹೊರಟರು. ಸ್ಥಳದಲ್ಲಿದ್ದ ಪೊಲೀಸರು, ಪ್ರತಿಭಟನಕಾರರನ್ನು ವಶಕ್ಕೆ ಪಡೆದುಕೊಂಡರು. ಈ ವೇಳೆ ತಳ್ಳಾಟ ನಡೆಯಿತು.

'ಜಮೀರ್‌ಗೆ ಮೊದಲ ಹಂತದಲ್ಲಿ ಸಚಿವ ಸ್ಥಾನ ನೀಡಿಲ್ಲ. ಮುಂದಿನ ಹಂತದಲ್ಲಿ ನಡೆಯುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕು' ಎಂದು ಆಗ್ರಹಿಸಿದರು.

ಹೊಸಹಳ್ಳಿ ಮೇಲ್ಸೇತುವೆ ಮತ್ತು ಪಾದರಾಯನಪುರ ಮುಖ್ಯರಸ್ತೆ- ಯನ್ನು ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಬಂದ್ ಮಾಡಿದ್ದರು. ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾ- ಗಿತ್ತು.

ಪ್ರತಿಭಟನೆಗೆ ಬೆಂಬಲ ಸೂಚಿಸಿ ಪಾದರಾಯನಪುರ ಮುಖ್ಯರಸ್ತೆಯ ಕೆಲವು ವ್ಯಾಪಾರಿಗಳು ಸ್ವಯಂ ಪ್ರೇರಿತರಾಗಿ ಅಂಗಡಿಗಳನ್ನು ಬಂದ್ ಮಾಡಿದ್ದರು.

ಪೋಸ್ಟರ್ ಹಾಗೂ ಫೋಟೊಗಳನ್ನು ಹಿಡಿದು ಜಮೀರ್ ಅಹಮದ್ ಅವರ ಬೆಂಬಲಿಗರು ಆಕ್ರೋಶ ಹೊರಹಾಕಿದರು. 'ಸಚಿವ ಸ್ಥಾನ ನೀಡದಿದ್ದರೆ, ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

'ಜಮೀರ್ ಅವರು ಮುಸ್ಲಿಂ ಸಮುದಾಯದ ಪ್ರಮುಖ ಮುಖಂಡ. ಅವರಿಗೆ ಸಚಿವ ಸ್ಥಾನ ನೀಡದಿರುವುದು ಸಮುದಾಯಕ್ಕೆ ಮಾಡಿದ ಅನ್ಯಾಯ. ಈ ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಐವರು ಮುಸ್ಲಿಂ ಮುಖಂಡರಿಗೆ ಸಚಿವ ಸ್ಥಾನ ನೀಡಲಾಗಿತ್ತು. ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ನಾಲ್ಕು ಜನರಿಗೆ ಅವಕಾಶ ಸಿಗುವ ವಿಶ್ವಾಸವಿದ್ದು, ಅದರಲ್ಲಿ ಜಮೀರ್ ಅವರಿಗೂ ಸ್ಥಾನ ಸಿಗಲೇಬೇಕು. ನಾನು ಜೆಡಿಎಸ್‌ನಲ್ಲಿದ್ದರೂ ಜಮೀರ್ ಅವರಿಗಾಗಿ ಈ ಹೋರಾಟ ಮಾಡುತ್ತಿದ್ದೇನೆ' ಎಂದು ಇಮ್ರಾನ್ ಪಾಷಾ ಹೇಳಿದರು.

ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ, ಪಾದರಾಯನಪುರದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು

'ಬೆಂಗಳೂರು ಉಳಿಸಿ' ಹಸಿರು ಪ್ರಣಾಳಿಕೆ ಬಿಡುಗಡೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳಿಗೆ ಮುಂದೆ ನಡೆಯಲಿರುವ ಚುನಾವಣೆಗಾಗಿ ಆಮ್ ಆದ್ಮಿ ಪಕ್ಷವು (ಎಎಪಿ) 'ಬೆಂಗಳೂರು ಉಳಿಸಿ' ಎಂಬ ಶೀರ್ಷಿಕೆಯಡಿ ಹಸಿರು, ಸ್ವಚ್ಛ ಹಾಗೂ ವಾಸಯೋಗ್ಯ ಬೆಂಗಳೂರು ನಿರ್ಮಾಣದ ಕಾರ್ಯಸೂಚಿ ಪ್ರಣಾಳಿಕೆಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಎಎಪಿ ರಾಜ್ಯ ಉಸ್ತುವಾರಿ ಋತುರಾಜ್ ಗೋವಿಂದ್ ಝಾ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಬೆಂಗಳೂರು ಕೇವಲ ನಗರವಲ್ಲ. ಇದು ನಮ್ಮ ಮನೆ, ಮಕ್ಕಳ ಶಿಕ್ಷಣ, ಉದ್ಯೋಗ ಮತ್ತು ಭವಿಷ್ಯದ ಆಧಾರ. ಒಮ್ಮೆ ಉದ್ಯಾನ ನಗರ ಎನಿಸಿದ್ದ ಬೆಂಗಳೂರು ಇಂದು ಸಂಚಾರ ದಟ್ಟಣೆ, ಮಾಲಿನ್ಯ ಮುಂತಾದ ಸಮಸ್ಯೆಗಳಿಂದ ತತ್ತರಿಸುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಪೃಥ್ವಿ ರೆಡ್ಡಿ, ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ, ಪದಾಧಿಕಾರಿಗಳಾದ ಸತೀಶ್ ಕುಮಾರ್, ಲಕ್ಷ್ಮಿಕಾಂತ್ ರಾವ್, ಜಗದೀಶ್ ವಿ. ಸದಂ, ಉಷಾ ಮೋಹನ್ ಉಪಸ್ಥಿತರಿದ್ದರು.

ಇಂಥ ಪ್ರವೃತ್ತಿಯಿಂದ ವಕೀಲರ ಸ್ವಾತಂತ್ರ್ಯಕ್ಕೆ ಧಕ್ಕೆ: ಹೈಕೋರ್ಟ್

'ಕ್ರಿಮಿನಲ್ ಅಸ್ತ್ರ ಬಳಕೆ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವ್ಯಾಜ್ಯಕರ್ತರನ್ನು ಪ್ರತಿನಿಧಿಸುವ ವಕೀಲರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಕಿರುಕುಳದ ಅಸ್ತ್ರವಾಗಿ ಬಳಸುತ್ತಿರುವುದು ಹೆಚ್ಚುತ್ತಿದೆ' ಎಂದು ಹೈಕೋರ್ಟ್ ಮತ್ತೊಮ್ಮೆ ಕಳವಳ ವ್ಯಕ್ತಪಡಿಸಿದೆ.

ನಾಗರಬಾವಿ ಗ್ರಾಮದ ಸರ್ವೆ ನಂಬರ್ 25/2ರಲ್ಲಿ 5.20 ಎಕರೆ ಜಮೀನಿನ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಪಕ್ಷಗಾರರನ್ನು ಪ್ರತಿನಿಧಿಸುವ ವಕೀಲ ರಾಜೇಂದ್ರ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಇದನ್ನು ರದ್ದು- ಗೊಳಿಸುವಂತೆ ಕೋರಿ ರಾಜೇಂದ್ರ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಇಂತಹ ಪ್ರವೃತ್ತಿಯು ವಕೀಲರ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡಬಲ್ಲದು' ಎಂದು ಹೇಳಿದೆ.



ದೂರು ಮತ್ತು ಅಧೀನ ಕೋರ್ಟ್‌ನ ವಿಚಾರಣೆ ರದ್ದುಪಡಿಸಿ- ರುವ ನ್ಯಾಯಪೀಠ, 'ಅಗಾಧವಾದ ಅಪರಾಧವನ್ನು ಬಹಿರಂಗಪಡಿಸದ ಹೊರತು; ಹಕ್ಕುಪತ್ರಗಳು, ಕಂದಾಯ ನಮೂದುಗಳು, ವಕೀಲರ ಅಧಿಕಾರ ಅಥವಾ ಮಾರಾಟ ಪತ್ರಗಳಿಗೆ ಸಂಬಂಧಿಸಿದ ವಿವಾದಗಳಿಗೆ ಸಂಬಂಧಿಸಿದ ತನಿಖೆಯಲ್ಲಿ ಪ್ರಾಸಿಕ್ಯೂಷನ್ ಸಂಯಮದಿಂದ ಮುಂದಡಿ ಇರಿಸಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಪ್ರತಿಯೊಬ್ಬ ವಕೀಲರೂ ಕೇವಲ ದಾವೆದಾರರ ಪರವಾಗಿ ಹಾಜರಾಗುತ್ತಾರೆ. ಅವರ ಮನೋಬಲ ಕುಂದಿಸಲು ಅತೃಪ್ತ ದಾವೆದಾರರು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಮತ್ತು ದಾಖಲಿಸಿ ತನಿಖಾ ಪ್ರಕ್ರಿಯೆಗೆ ಒಳಪಡಿಸಿದರೆ ಅದು ವೃತ್ತಿಪರ ಜವಾಬ್ದಾರಿಗಳ ನಿರ್ಭೀತ ನಿರ್ವಹಣೆಯ ಮೇಲೆ ಗಾಢವಾದ ಪಾರ್ಶ್ವವಾಯು ಪರಿಣಾಮ ಬೀರುತ್ತದೆ' ಎಂದು ನ್ಯಾಯಪೀಠ ಹೇಳಿದೆ.

'ಅಗಾಧವಾದ ಅಪರಾಧವನ್ನು ಬಹಿರಂಗಪಡಿಸದ ಹೊರತು; ಹಕ್ಕು- ಪತ್ರಗಳು, ಕಂದಾಯ ನಮೂದುಗಳು, ವಕೀಲರ ಅಧಿಕಾರ ಅಥವಾ ಮಾರಾಟ ಪತ್ರಗಳಿಗೆ ಸಂಬಂಧಿಸಿದ ವಿವಾದಗಳಿಗೆ ಸಂಬಂಧಿಸಿದ ತನಿಖೆಯಲ್ಲಿ ಪ್ರಾಸಿಕ್ಯೂಷನ್ ಸಂಯಮದಿಂದ ಮುಂದಡಿ ಇರಿಸಬೇಕು' ಎಂದು ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದೆ.

ಪ್ರಾಸಿಕ್ಯೂಷನ್ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಅರ್ಜಿ: ಭಾರತೀಯ ದಂಡ ಸಂಹಿತೆ– 1860ರ ಕಲಂ 102, 420, 468 ವಂಚನೆ ಮಾಡುವ ಉದ್ದೇಶದಿಂದ ನಕಲಿ ಮಾಡುವುದು, 506 ಕ್ರಿಮಿನಲ್ ಬೆದರಿಕೆ (ಬಿ) ಅಡಿಯಲ್ಲಿ ಅರ್ಜಿದಾರರ ವಿರುದ್ಧ ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ಈ ಕುರಿತ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ 8ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ವಿಚಾರಣೆಯನ್ನು ರದ್ದುಪಡಿಸುವಂತೆ ಕೋರಿ ವಕೀಲ ಎಸ್.ರಾಜೇಂದ್ರ ಮತ್ತಿತರರು ಪ್ರತ್ಯೇಕ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು.

ಶಿಸ್ತಿನ ಕ್ರಮಗಳನ್ನು ಸಮರ್ಪಕವಾಗಿ ಪಾಲಿಸಿದರೆ ಮಳೆಗಾಲದಲ್ಲಿ ವೈರಾಣುಗಳಿಂದಾಗುವ ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದು

ಮಾನ್ಸೂನ್ ಜ್ವರಗಳು

• ಡಾ. ಶ್ರೀನಿವಾಸ ಹರಪನಹಳ್ಳಿ

ಅಂತೂ ಇಂತೂ ಈ ವರ್ಷದ ಬೇಸಿಗೆ ಮುಗಿಯಿತು. ಮಳೆಗಾಲ ನಿಧಾನವಾಗಿ ರಾಜ್ಯದಾದ್ಯಂತ ವ್ಯಾಪಿಸುತ್ತಿದೆ. ಬೇಸಿಗೆಯಿಂದ ಮಳೆಗಾಲಕ್ಕೆ, ಮಳೆಗಾಲದಿಂದ ಚಳಿಗಾಲಕ್ಕೆ, ಚಳಿಗಾಲದಿಂದ ಮತ್ತೆ ಬೇಸಿಗೆಗೆ ಪ್ರಕೃತಿ ತನ್ನ ಮಗ್ಗುಲನ್ನು ಬದಲಾಯಿಸುತ್ತ ಪ್ರತಿವರ್ಷ ಪರಿಸರದಲ್ಲೂ ಬದಲಾವಣೆ ತರುತ್ತದೆ. ಪ್ರಕೃತಿ ತರುವ ಈ ಬದಲಾವಣೆಗೆ ನಾವೆಲ್ಲರೂ ಒಗ್ಗಬೇಕು ಕೂಡ. ಇಷ್ಟು ದಿನ ಏಸಿ, ಫ್ಯಾನು, ತಂಪಾದ ಪಾನೀಯಗಳು ನಮ್ಮನ್ನು ಬೇಸಿಗೆಯ ಉರಿಯಿಂದ ಕೊಂಚಮಟ್ಟಿಗೆ ಪಾರು ಮಾಡಿದರೆ ಇನ್ನು ಮೇಲೆ ನಾವು ರೇನ್‌ಕೋಟು, ಛತ್ರಿ, ಟೊಪ್ಪಿಗಳ ಹುಡುಕಾಟದಲ್ಲಿ ತೊಡಗಬೇಕು. ಅಲ್ಲದೆ ಶಾಲಾ-ಕಾಲೇಜುಗಳೂ ಈಗ ಪ್ರಾರಂಭವಾಗುವುದರಿಂದ ಮಳೆಯಲ್ಲಿ ಸುರಕ್ಷಿತವಾಗಿ ಓಡಾಡುವುದನ್ನೂ ಪಾಲಿಸಬೇಕಾಗಿದೆ.

ಮಳೆಗಾಲ ಆರಂಭವಾಗುತ್ತಿದ್ದಂತೆಯೇ ಇಳೆ ಹಸಿರಿನಿಂದ ಮೈದುಂಬಿಕೊಂಡು ಸಂಪದ್ಭರಿತವಾಗುತ್ತದೆ. ನದಿ-ಕೆರೆಗಳು ತುಂಬಿ ಹರಿಯಲಾರಂಭಿಸುತ್ತವೆ. ಬಿಸಿಲಿನ ಬೇಗೆಯಿಂದ ಕಂಗೆಟ್ಟಿದ್ದ ಜಗತ್ತಿಗೆ ಮಳೆಗಾಲ ಒಟ್ಟಾರೆ ನವಚೇತನವನ್ನೇ ತರುತ್ತದೆ. ಆದರೆ ಈ ಮಳೆಗಾಲ ಆರೋಗ್ಯದ ದೃಷ್ಟಿಯಿಂದ ಕೊಂಚ ತೊಂದರೆಯನ್ನೂ ಉಂಟುಮಾಡುತ್ತದೆ. ಅದೇನು ತೊಂದರೆಗಳು ಮತ್ತು ಅವಕ್ಕೆ ಪರಿಹಾರವೇನು ಎಂಬುದನ್ನು ತಿಳಿದುಕೊಂಡರೆ ನಾವು ರೋಗ-ರುಜಿನಗಳನ್ನು ದೂರವಿಟ್ಟು ಮಳೆಗಾಲದ ಆಹ್ಲಾದಕರ ಸಮಯವನ್ನು ಆಸ್ವಾದಿಸಬಹುದು.

ಹವಾಮಾನ ಬದಲಾದಾಗ ವಾತಾವರಣದಲ್ಲಿನ ತೇವಾಂಶ, ತಾಪಮಾನದ ಇಳಿಕೆ ದೇಹದ ಮೇಲೂ ಪರಿಣಾಮಗಳನ್ನು ಉಂಟುಮಾಡುತ್ತವೆ. ಹೊಸನೀರು ನದಿ-ಕೆರೆಗಳನ್ನು ಸೇರುವುದರಿಂದ ನೀರಿನ ಗುಣದಲ್ಲಿ ಕೊಂಚ ಮಾರ್ಪಾಟು ಕಾಣುತ್ತದೆ. ವೈರಾಣುಗಳ ಪ್ರಬೇಧಗಳಲ್ಲೂ ಬದಲಾವಣೆ ಆಗುವುದರಿಂದ ಜನರು ಈ ಹೊಸ ವೈರಾಣುಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ. ಈ ಸಂದರ್ಭಗಳಲ್ಲಿ ಜನರನ್ನು ಹೆಚ್ಚು ಕಾಡುವ ರೋಗವೆಂದರೆ ವೈರಾಣುಜ್ವರ. ಬೇಸಿಗೆ ರಜೆ ಮುಗಿಸಿ ಶಾಲೆಗೆ ಮರಳುವ ಮಕ್ಕಳಲ್ಲಿ ಇದು ಸರ್ವೇಸಾಮಾನ್ಯ. ಮಳೆಗಾಲದಲ್ಲಿ ರಸ್ತೆ ಮೇಲೆ, ಚರಂಡಿಯಲ್ಲಿ ಮತ್ತು ಮನೆಯಲ್ಲಿನ ಹೂಕುಂಡಗಳಲ್ಲಿ ನೀರು ನಿಲ್ಲುವುದು ಸಾಮಾನ್ಯ. ಇದು ಸೊಳ್ಳೆಗಳ ಸಂತಾನೋತ್ಪತ್ತಿಗೆ ಕಾರಣವಾಗುತ್ತದೆ. ಈ ಸೊಳ್ಳೆಗಳ ಕಡಿತದ ಮೂಲಕ ವೈರಾಣುಗಳು ದೇಹವನ್ನು ಪ್ರವೇಶಿಸಿ ಡೆಂಗಿ, ಚಿಕುನ್‌ಗುನ್ಯಾದಂತಹ ರೋಗಗಳನ್ನು ಉಂಟು ಮಾಡುತ್ತವೆ. ಹಾಗಾಗಿ ಮನೆ ಸುತ್ತಲೂ ನೀರು ನಿಲ್ಲದಂತೆ ನೋಡಿಕೊಳ್ಳುವುದು ಈ ರೋಗಗಳ ವಿರುದ್ಧ ಕೈಗೊಳ್ಳುವ ಬಹುಮುಖ್ಯ ಮುಂಜಾಗ್ರತಾ ಕ್ರಮವೆನ್ನಬಹುದು.

> ಮಳೆಗಾಲದ ಬಹುತೇಕ ಜ್ವರಗಳು 3-5 ದಿನಗಳವರೆಗೆ ಇದ್ದು ಕ್ರಮೇಣ ವಾಸಿಯಾಗುತ್ತವೆ. ಜ್ವರದ ಜೊತೆಗೆ ತಲೆನೋವು, ಮೈಕೈ ನೋವು, ಕೆಮ್ಮು ನೆಗಡಿಗಳೂ ಕಾಣಿಸಿಕೊಳ್ಳಬಹುದು.

ಇನ್ನು ಕೆಲವು ವೈರಾಣುಗಳು ತಂಪಾದ ತೇವಾಂಶವುಳ್ಳ ಗಾಳಿಯಲ್ಲಿ ಹೆಚ್ಚುಕಾಲ ಉಳಿಯಬಲ್ಲುವು. ಇವುಗಳಿಂದ ಫ್ಲೂ, ಕೊರೋನಾದಂತಹ ರೋಗಗಳು ಬರುವ ಸಾಧ್ಯತೆ ಹೆಚ್ಚು. ಆದ್ದರಿಂದ ಫ್ಲೂ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳು ಹೊರಗಡೆ ಹೆಚ್ಚು ಓಡಾಡದೇ ಬೆಚ್ಚನೆಯ ಕೋಣೆಯಲ್ಲಿ ವಿಶ್ರಮಿಸಬೇಕು. ಅಲ್ಲದೇ, ಆರೋಗ್ಯವಂತ ವ್ಯಕ್ತಿಗಳೂ ಮಾಸ್ಕ್ ಧರಿಸುವ ಮೂಲಕ ಇಂತಹ ವೈರಾಣುಗಳಿಂದ ಬಚಾವಾಗಬಹುದು. ಇತ್ತೀಚೆಗೆ ಕೇಳಿಬರುತ್ತಿರುವ ಹಂಟಾವೈರಸ್ ಎಂಬ ವೈರಾಣುಜ್ವರ ಕೂಡ ಇಂತಹ ಕಲುಷಿತ ಗಾಳಿಯಿಂದಲೇ ಬರುತ್ತದೆ. ಸತ್ತ ಇಲಿ, ಹೆಗ್ಗಣಗಳ ಜೊಲ್ಲು, ರಕ್ತದಿಂದ ಅಥವಾ ರೋಗಿಷ್ಠ ಪ್ರಾಣಿಗಳ ಸ್ಪರ್ಶ, ಕಡಿತದಿಂದ ಕೂಡ ಈ ವೈರಾಣು ದೇಹವನ್ನು ಪ್ರವೇಶಿಸಬಹುದು.

ಇನ್ನೊಂದು ರೀತಿಯ ವೈರಾಣು ಜ್ವರವೆಂದರೆ ಕಲುಷಿತ ನೀರು ಅಥವಾ ಆಹಾರಪದಾರ್ಥಗಳ ಸೇವನೆಯಿಂದ ಬರುವ ಕಾಯಿಲೆ. ರೋಟಾವೈರಸ್, ನೋರಾವೈರಸ್ ಅಥವಾ ಹೆಪಟೈಟಿಸ್ ವೈರಾಣುಗಳು ಜ್ವರದ ಜೊತೆಗೆ ಹೊಟ್ಟೆನೋವು, ವಾಂತಿ-ಭೇದಿ ಮತ್ತು ಕಾಮಾಲೆಯನ್ನು ಉಂಟುಮಾಡಬಲ್ಲುವು. ಆದ್ದರಿಂದ ಮಳೆಗಾಲದ ಸಮಯದಲ್ಲಿ ತಾಜಾ, ಪೌಷ್ಟಿಕಾಂಶಭರಿತ ಆಹಾರವನ್ನೇ ಸೇವಿಸಬೇಕು. ಕುದಿಸಿದ ನೀರನ್ನು ಕುಡಿಯಬೇಕು. ಮಳೆಯಲ್ಲಿ ನೆನೆದ ತರಕಾರಿ ಮತ್ತು ಹಣ್ಣುಗಳು ಬಹುಬೇಗನೇ ಕೆಟ್ಟು ತಮ್ಮ ಸತ್ವವನ್ನು ಕಳೆದುಕೊಳ್ಳುತ್ತವೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡಿರಬೇಕು.

ಮಳೆಗಾಲದಲ್ಲಿ ಈ ವೈರಾಣು ಜ್ವರಗಳಲ್ಲದೆ ಬ್ಯಾಕ್ಟೀರಿಯಾಗಳ ಮೂಲಕ ಹರಡುವ ನ್ಯುಮೋನಿಯಾ, ಟೈಫಾಯ್ಡ್ ಮತ್ತು ಕಾಲರಾ ರೋಗಗಳೂ ಅನೇಕ ಜನರ ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಬಹುತೇಕ ವೈರಾಣು ಜ್ವರಗಳು ಹೆಚ್ಚಿನ ಚಿಕಿತ್ಸೆಯಿಲ್ಲದೇ ವಿಶ್ರಾಂತಿ ಮತ್ತು ಸೂಕ್ತ ಆಹಾರದ ಮೂಲಕ ಗುಣವಾಗುತ್ತವೆಯಾದರೂ, ಬ್ಯಾಕ್ಟೀರಿಯಾಗಳ ಮೂಲಕ ಹರಡುವ ಜ್ವರಕ್ಕೆ ವಿಶ್ರಾಂತಿ ಮತ್ತು ಸೂಕ್ತ ಆಹಾರದ ಜೊತೆ ಆ್ಯಂಟಿಬಯಾಟಿಕ್ ಔಷಧಗಳೂ ಬೇಕಾಗಿ ಬರಬಹುದು.

ಅನೇಕ ಜ್ವರಗಳನ್ನು ವೈದ್ಯರು ರೋಗಲಕ್ಷಣಗಳ ಮೇಲೆಯೇ ಊಹಿಸಿ ಸೂಕ್ತ ಚಿಕಿತ್ಸೆಯನ್ನು ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ರಕ್ತಪರೀಕ್ಷೆ, ಎದೆಯ ಕ್ಷ-ಕಿರಣ (ಎಕ್ಸ್‌ರೇ) ಮತ್ತು ಮಲ-ಮೂತ್ರಗಳ ಪರೀಕ್ಷೆಗಳೂ ಬೇಕಾಗುತ್ತವೆ. ಇದು ಜ್ವರದ ನಿಖರ ಕಾರಣವನ್ನು ಮತ್ತು ತೀವ್ರತೆಯನ್ನು ಪತ್ತೆ ಮಾಡಲು ಸಹಾಯಕ. ಈ ಜ್ವರಗಳು ತೀರಾ ಹೆಚ್ಚಿನ ತೊಂದರೆಯನ್ನು ಕೊಡದಿದ್ದರೂ ಒಬ್ಬರಿಂದ ಮತ್ತೊಬ್ಬರಿಗೆ ಬಹುಬೇಗ ಹರಡುತ್ತವೆ. ಅದರಲ್ಲೂ ತೀರಾ ಚಿಕ್ಕಮಕ್ಕಳು ಮತ್ತು ವೃದ್ಧರು ಇಂತಹ ರೋಗಗಳಿಗೆ ಸುಲಭವಾಗಿ ತುತ್ತಾಗುತ್ತಾರೆ. ಆದ್ದರಿಂದ ನಾವು ಮಳೆಗಾಲದಲ್ಲಿ ಯಾವುದೇ ರೋಗ-ರುಜಿನಗಳಿಲ್ಲದೆ ಆರೋಗ್ಯಯುತವಾಗಿ ಇರಬೇಕೆಂದರೆ ಮೇಲೆ ತಿಳಿಸಿದ ಶಿಸ್ತಿನ ಕ್ರಮಗಳನ್ನು ಪಾಲಿಸಲೇಬೇಕು. ಅಲ್ಲದೇ ಪ್ರವಾಸ, ಚಾರಣದಂತಹ ಸಂದರ್ಭಗಳಲ್ಲಿ ನಮ್ಮ ದೇಹವನ್ನು ಸಾಧ್ಯವಾದಷ್ಟು ಬೆಚ್ಚಗೆ ಇಟ್ಟುಕೊಳ್ಳಬೇಕು. ರಸ್ತೆಬದಿಯ ತಿನಿಸು-ಪಾನೀಯಗಳ ಬಗ್ಗೆ ಅತಿ ಜಾಗರೂಕರಾಗಿರಬೇಕು. ಜನಜಂಗುಳಿಯಲ್ಲಿದ್ದಾಗ ಮಾಸ್ಕ್ ಧರಿಸುವುದು ನಮಗೂ ಮತ್ತು ಇನ್ನೊಬ್ಬರಿಗೂ ಕ್ಷೇಮಕರ.

ಭಾವನೆಗಳನ್ನು ಹಂಚಿಕೊಳ್ಳಿ ಭಾರವನ್ನು ಇಳಿಸಿಕೊಳ್ಳಿ

• ರಮ್ಯಾ ಶ್ರೀಹರಿ

ಮನುಷ್ಯನಿಗೆ ಎಲ್ಲಕ್ಕಿಂತ ಕಷ್ಟ ಎನಿಸುವುದು ಯಾವುದು ಎಂದು ಕೇಳಿದರೆ 'ನನ್ನನ್ನು, ನನ್ನ ದುಃಖವನ್ನು ಯಾರೂ ನೋಡುತ್ತಿಲ್ಲ, ಪ್ರಪಂಚದಲ್ಲಿ ಎಲ್ಲೂ ನನಗೆ ಸ್ವೀಕೃತಿ, ಸಹಾನುಭೂತಿ ದೊರೆಯುವುದಿಲ್ಲ, ನನ್ನ ಅಂತರಂಗದ ಮಾತಿಗೆ ಎಲ್ಲರೂ ಕಿವುಡರಾಗಿದ್ದರೆ' ಎನ್ನುವ ಭಾವ.

ಇದರಿಂದ 'ನನ್ನನ್ನು ಯಾರೂ ನೋಡುತ್ತಿಲ್ಲ; ನನ್ನ ನೋವು ಯಾರಿಗೂ ಅರ್ಥವಾಗುತ್ತಿಲ್ಲ' ಎನಿಸಿದಾಗಲೇ ನಮಗೆ ಒಂಟಿತನ ಕಾಡುವುದು. 'ನಾನು ಒಂದು ಕಡೆ, ಪ್ರಪಂಚವೇ ಇನ್ನೊಂದು ಕಡೆ' (alienation) ಎನ್ನುವ ಭಾವ, 'ನಾನು ಸರಿಯಾಗಿಲ್ಲ, ನಾನು ಯಾರಿಗೂ ಬೇಡದ ಎಲ್ಲಿಯೂ ಸಲ್ಲದ, ಯಾವ ಬೆಲೆಯೂ ಗೌರವವೂ ಇಲ್ಲದ ಯಃಕಶ್ಚಿತ್ ಹುಳ' ಎನ್ನುವ ಅವಮಾನಭರಿತ ನೋವಿನ ಭಾವ ಕಾಡುತ್ತದೆ.

ನಾವು ನಮ್ಮ ದುಃಖ, ಕಷ್ಟ ನಷ್ಟ, ನೋವು, ಸಂಕಟಗಳನ್ನು ಆತ್ಮೀಯರ ಅಥವಾ ಸ್ಪಂದನಶೀಲ ಸ್ನೇಹಮಯ ವ್ಯಕ್ತಿಗಳಲ್ಲಿ ಹೇಳಿಕೊಂಡಾಗ 'ಈಗ ನನ್ನ ಕಷ್ಟವನ್ನು ನಾನೊಬ್ಬನೇ / ನಾನೊಬ್ಬಳೇ ಹೊರಬೇಕಾಗಿಲ್ಲ, ನನ್ನ ಆತ್ಮೀಯ ವ್ಯಕ್ತಿಯೂ ಈ ಕಷ್ಟದ ಸ್ವಲ್ಪ ಪಾಲನ್ನು ಹೊರುತ್ತಿದ್ದಾರೆ, ಅವರ ಹೃದಯವೂ ನನ್ನ ಕಷ್ಟಗಳಿಗೆ ಮರುಗುತ್ತಿದೆ, ಅವರೂ ತಮ್ಮ ಬುದ್ಧಿಯನ್ನು, ಮಾನಸಿಕ ಶಕ್ತಿಯನ್ನು ನನ್ನ ಕಷ್ಟಗಳನ್ನು ನಿವಾರಿಸಲು ಬಳಸುತ್ತಿದ್ದಾರೆ' ಎನಿಸಿದಾಗ ಏನೋ ಒಂದು ಬಗೆಯ ಧೈರ್ಯ, ಹೊಸ ಹುಮ್ಮಸ್ಸುಗಳು ನಮ್ಮಲ್ಲಿ ಮೂಡುತ್ತವೆ.

'ಮತ್ತೊಂದು ಜೀವ ಕರುಣೆ–ಪ್ರೀತಿಯ ಕಣ್ಣುಗಳಿಂದ ಸದಾ ನನ್ನನ್ನು ನೋಡುತ್ತಲಿರುತ್ತದೆ; ಆ ಕಣ್ಣೋಟದಲ್ಲೇ ನನ್ನನ್ನು ಕಾಪಾಡುತ್ತಿರುತ್ತದೆ' ಎನ್ನುವ ನಂಬಿಕೆ ಬದುಕಿಗೆ ದೊಡ್ಡ ಆಧಾರ; ಆ ನಂಬಿಕೆಯಿಲ್ಲದೆ ಭೌತಿಕವಾಗಿ ಜೀವಿಸಬಹುದಾದರೂ ಭಾವನಾತ್ಮಕವಾಗಿ ಸತ್ತಂತೆಯೇ ಇರುತ್ತೇವೆ. ಭಾವನಾತ್ಮಕ ಆಘಾತ (trauma) ದ ಮುಖ್ಯಲಕ್ಷಣವೇ ನಮಗಾಗುತ್ತಿರುವ ಸಂಕಟವನ್ನು, ನಮಗಾದ ವೇದನೆಯನ್ನು ಮಾತಿನಲ್ಲಿ ಹೇಳಿಕೊಳ್ಳಲಾಗದೇ ಇರುವುದು. ತೀವ್ರ ಆಘಾತವನ್ನು ಪದಗಳಲ್ಲಿ ಹಿಡಿದಿಡುವುದು ಸುಲಭವಲ್ಲ; ಹಾಗೆ ಆಘಾತವನ್ನು ಮಾತಿನ ಮೂಲಕವೋ ಅಥವಾ ಅಭಿನಯ, ಚಿತ್ರದ ಮೂಲಕವೋ ಅಭಿವ್ಯಕ್ತಿಸಲು ಸಾಧ್ಯವಾದರೆ ಆ ಆಘಾತದಿಂದ ಮುಕ್ಕಾಲು ಭಾಗ ಗುಣಮುಖರಾದಂತೆಯೇ ಸರಿ.

ಯಾವ ದುಃಖವೂ ಶಾಶ್ವತವಲ್ಲ, ಎಲ್ಲಾ ನೋವುಗಳೂ ಉಪಶಮನಗೊಳ್ಳುವುದು ಖಂಡಿತ ಎಂಬ ಭರವಸೆಯೂ ತನ್ನಿಂದ ತಾನೇ ಹುಟ್ಟುವುದಿಲ್ಲ; ಅದನ್ನು ನಮ್ಮ ಪ್ರೀತಿಪಾತ್ರರು ತಮ್ಮ ಪ್ರೀತಿ, ಸಹಾನುಭೂತಿ ತುಂಬಿದ ಮಾತುಗಳಿಂದ ಹೇಳಿದಾಗಷ್ಟೇ ಅದು ನಮ್ಮ ಮನಸ್ಸಿಗೆ ನಾಟುತ್ತದೆ. ಇಲ್ಲದಿದ್ದರೆ 'ಈ ದುಃಖ ಶಾಶ್ವತ, ಇದರಿಂದ ನಾನೆಂದಿಗೂ ಬಿಡಿಸಿಕೊಳ್ಳಲಾರೆ, ಇನ್ನು ಬದುಕು ಹೇಗೆ ಸಾಧ್ಯ' ಎಂಬ ಕತ್ತಲು ನಮ್ಮ ಕಣ್ಮುಂದೆ ಕವಿಯುತ್ತದೆ. 'ನನ್ನ ಬದುಕಿನ ನಿರ್ಮಾಣ, ಅವಸಾನ ನನ್ನ ಕೈಯಲ್ಲೇ ಇದೆ; ನಾನೇನೋ ಮಾಡಬಲ್ಲೆ, ಸಾಧಿಸಬಲ್ಲೆ; ಸದ್ಯದ ಪರಿಸ್ಥಿತಿ ನನ್ನನ್ನು ಕಂಗೆಡಿಸುತ್ತಿದೆಯಾದರೂ ಸ್ವಪ್ರಯತ್ನ ಮತ್ತು ಆತ್ಮವಿಶ್ವಾಸದ ಬಲದಿಂದ ಈ ಕಠಿಣ ಪರಿಸ್ಥಿತಿಯಿಂದ ಪಾರಾಗಬಲ್ಲೆ' ಎಂಬ ನಂಬಿಕೆಯೂ ನಮ್ಮ ಭಾವನೆಗಳನ್ನು ಆತ್ಮೀಯರೊಂದಿಗೆ ಹಂಚಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ.

ನಮ್ಮ ಹತ್ತಿರ ಹಣವೋ, ಮತ್ತೊಂದು ಪದಾರ್ಥವೋ ಕಡಿಮೆ ಬಿದ್ದಾಗ ನಾವು ಅದನ್ನು ಬೇರೆಯವರಿಂದ ಹೇಗೆ ಕೆಲಕಾಲದ ಮಟ್ಟಿಗೆ ಕಡ ತರುತ್ತೇವೋ ಹಾಗೆಯೇ ನಮ್ಮ ಹೃದಯದಲ್ಲಿ ತೀವ್ರ ಭಾವನೆಗಳ ಒತ್ತಡ ಜಾಸ್ತಿಯಾಗಿ ಅದಕ್ಕೆ ಸ್ಥಳಾವಕಾಶವೇ ಇಲ್ಲವಾದಾಗ ಆ ಭಾವನೆಗಳ ಒತ್ತಡ ಕಡಿಮೆಮಾಡಲು ಬೇರೆಯವರ ಹೃದಯದಲ್ಲಿ ಸ್ವಲ್ಪ ಸ್ಥಳಾವಕಾಶವನ್ನು ಕೋರುತ್ತೇವೆ. ಇದು ಮನುಷ್ಯಸಹಜ ನಡವಳಿಕೆ. ನಮ್ಮ ಭಾವನೆಗಳನ್ನು ನಾವು ಬೇರೆಯವರೊಂದಿಗೆ ಹಂಚಿ ಕೊಂಡಾಗ, ಬೇರೆಯವರು ತಮ್ಮ ಭಾವನೆಗಳನ್ನು ನಮ್ಮಲ್ಲಿ ಹೇಳಿಕೊಂಡಾಗ ನೆನಪಿಡಬೇಕಾದ ಕೆಲವು ವಿಷಯಗಳು ಇಲ್ಲಿವೆ:

- 'ಸಹಾನುಭೂತಿ' ಎನ್ನುವುದು ಕೇವಲ ಔಪಚಾರಿಕ ಶಿಷ್ಟಾಚಾರದ ಮಾತುಕತೆಯಲ್ಲ; ಕೇವಲ ಸಭ್ಯ ನಾಗರಿಕ ವರ್ತನೆಯೂ ಅಲ್ಲ. ಅದೊಂದು ಆಂತರಿಕ ಅನುಭೂತಿ. ಎದುರಿಗಿರುವ ಜೀವ ನೊಂದಿದೆ, ಆ ನೋವಲ್ಲಿ ಬೆಂದು ಒದ್ದಾಡುತ್ತಿದೆ – ಎನ್ನುವ ಸತ್ಯ ನಮ್ಮ ಹೃದಯದಲ್ಲಿ ಯಾವ ಸಂಚಲನವನ್ನೂ ಮೂಡಿಸದಿದ್ದರೆ, ನಮ್ಮ ಜೀವ ಅವರ ನೋವಿಗೆ ಕಂಪಿಸಿ ಮೃದುಗೊಂಡು ದನಿ ಭಾರವಾಗದಿದ್ದರೆ, ನೋವುಂಡ ಜೀವವನ್ನು ತಬ್ಬಿ ಸಂತೈಸಬೇಕೆಂದೆನಿಸದಿದ್ದರೆ ಸುಮ್ಮನೆ ಕುತೂಹಲಕ್ಕಾಗಿ ಪ್ರಶ್ನೆಗಳನ್ನು ಕೇಳುವುದು, ಮನಸ್ಸಿಗೆ ಬಂದ ಉತ್ತರವನ್ನು ಕೊಡುವುದು ಬೇಡ.
- 'ಬೇರೆಯವರು ತಮ್ಮ ದುಃಖ ತೋಡಿಕೊಂಡಾಗ, 'ನನ್ನ ದುಃಖ ಅದಕ್ಕಿಂತಾ ದೊಡ್ಡದು', 'ಇಂಥ ಕಷ್ಟಗಳು ಎಲ್ಲರಿಗೂ ಇರುವುದೇ', 'ಆನೆ ಭಾರ ಆನೆಗೆ ಇರುವೆ ಭಾರ ಇರುವೆಗೆ' ಎನ್ನುವಂತಹ ಅಸೂಕ್ಷ್ಮ ಮಾತುಗಳು ನೊಂದವರನ್ನು ಮತ್ತೂ ನೋಯಿಸುತ್ತವೆ.
- ಘಟನೆಗಳಲ್ಲಿ ಭಾವನೆಗಳು ಅಡಕವಾಗಿರುತ್ತವೆಯೇ ಹೊರತು ಘಟನೆಗಳನ್ನು ಹಂಚಿಕೊಳ್ಳುವುದೇ ಭಾವನೆಗಳನ್ನು ಹಂಚಿಕೊಂಡಂತಲ್ಲ. ಭಾವನೆಗಳನ್ನು ಹಂಚಿಕೊಳ್ಳುವಾಗ ನಿಮ್ಮ ಆಂತರಿಕ ಅನುಭವವನ್ನು ಹಂಚಿಕೊಳ್ಳಿ. ಆ ಭಾವಗಳಿಗೆ ಕಾರಣವಾದ ಘಟನೆಗಳ ಬಗೆಗೇ ಹೆಚ್ಚು ವಿಶ್ಲೇಷಣೆ ಮಾಡದೇ, ಆ ಘಟನೆ ನಿಮಗೆ ನಿಮ್ಮ ಬಗೆಗೆ ಯಾವ ರೀತಿಯ ಭಾವ ಉಂಟುಮಾಡಿತು ಎನ್ನುವುದನ್ನು ಬಿಚ್ಚಿಡಿ.
- ನಮಗಾಗುತ್ತಿರುವ ನೋವನ್ನು, ಮೂಡುತ್ತಿರುವ ಭಾವಗಳನ್ನು ಒಂದು ಸಾಂಕೇತಿಕ ಚಿತ್ರವನ್ನಾಗಿ ಬರೆಯುವುದು ಸಾಧ್ಯವಾದರೆ ಅದು ಭಾವನೆಗಳ ಸರಾಗ ಹರಿವಿಗೆ ಸಹಕಾರಿಯಾಗುತ್ತದೆ.
- ಕೆಲವೊಮ್ಮೆ ನಮ್ಮ ಭಾವನೆಗಳನ್ನು ಅನುಭವಿಸುವುದರಿಂದಲೇ ನಾವು ಹಿಂಜರಿಯುತ್ತೇವೆ; ಆ ಭಾವನೆಗಳೇ ಇಲ್ಲ ಎಂದು ಸುಳ್ಳು ಸುಳ್ಳೇ ನಮ್ಮನ್ನು ನಾವು ನಂಬಿಸಿಕೊಳ್ಳಲು ಪ್ರಯತ್ನಪಡುತ್ತೇವೆ. ಕಾರಣ ಆಳವಾಗಿ ಭಾವನೆಗಳನ್ನು ಅನುಭವಿಸುವಾಗ ನಾವು ಆ ಭಾವನೆಗಳ ರಭಸಕ್ಕೆ ಕೊಚ್ಚಿಹೋಗಿ ನಮ್ಮ ಮೇಲಿನ ನಿಯಂತ್ರಣ ಕಳೆದುಕೊಂಡು ಬಿಡುತ್ತೇವೆನ್ನುವ ಭಯ. ನೃತ್ಯ, ಅಭಿನಯ, ಹಾಡುಗಾರಿಕೆ- ಮುಂತಾದವು ನಮ್ಮ ಭಾವನೆಗಳು ಸುಲಲಿತವಾಗಿ ನಮ್ಮ ದೇಹದಲ್ಲಿ ನೆಲೆಯಾಗಲು, ಲಯಬದ್ಧವಾಗಿ ಭಾವನೆಗಳನ್ನು ಅನುಭವಿಸಲು, ನಮ್ಮ ದೇಹ-ಮನಸ್ಸಿನ ಮಾತನ್ನು ನಿರ್ಭಿಡೆಯಿಂದ ಆಡಲು ಅನುಕೂಲ ಮಾಡಿಕೊಡುತ್ತವೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.1

ಕೆಳಗೆ ನೀಡಿರುವ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ನಕ್ಷಾಕ್ರಮದಿಂದ ಅವುಗಳಿಗೆ ಪರಿಹಾರಗಳನ್ನು ಕಂಡಹಿಡಿಯಿರಿ.

(i) *X* ತರಗತಿಯ 10 ವಿದ್ಯಾರ್ಥಿಗಳು ಗಣಿತ ರಸಪ್ರಶ್ನೆಯಲ್ಲಿ ಭಾಗವಹಿಸಿದರು. ಹುಡುಗರ ಸಂಖ್ಯೆಗಿಂತ, ಹುಡುಗಿಯರ ಸಂಖ್ಯೆಯು 4 ಹೆಚ್ಚಾಗಿದ್ದರೆ, ರಸಪ್ರಶ್ನೆಯಲ್ಲಿ ಭಾಗವಹಿಸಿದ ಹುಡುಗರ ಮತ್ತು ಹುಡುಗಿಯರ ಸಂಖ್ಯೆಗಳನ್ನು ಕಂಡುಹಿಡಿಯಿರಿ.

(ii) 5 ಪೆನ್ಸಿಲು ಮತ್ತು 7 ಪೆನ್ನುಗಳ ಒಟ್ಟು ಬೆಲೆ ₹ 50. ಹಾಗೆಯೇ 7 ಪೆನ್ಸಿಲು ಮತ್ತು 5 ಪೆನ್ನುಗಳ ಒಟ್ಟು ಬೆಲೆ ₹ 46. ಪ್ರತಿಯೊಂದು ಪೆನ್ಸಿಲಿನ ಹಾಗೂ ಪೆನ್ನಿನ ಬೆಲೆಗಳನ್ನು ಕಂಡುಹಿಡಿಯಿರಿ.

ಪರಿಹಾರ(*i*): ಹುಡುಗಿಯರ ಸಂಖ್ಯೆ x ಮತ್ತು ಹುಡುಗರ ಸಂಖ್ಯೆ y ಆಗಿರಲಿ

ವಿದ್ಯಾರ್ಥಿಗಳ ಸಂಖ್ಯೆ = 10

$x + y = 10$

$x - y = 4$

ಈಗ $x+y = 10$ ಅಥವಾ $x = 10-y$ ಸಮೀಕರಣಕ್ಕೆ

x	5	4	6
y	5	6	4

ಹಾಗೂ $x - y = 4$ ಅಥವಾ $x = 4 + y$ ಸಮೀಕರಣಕ್ಕೆ

x	4	5	3
y	0	1	-1

(ಹಿಂದಿನ ಸಂಚಿಕೆಯಿಂದ)



ರೇಖೆಗಳು (3, 7) ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ.

ರೇಖಾತ್ಮಕ ಸಮೀಕರಣಗಳ ಜೋಡಿಗೆ ಪರಿಹಾರ $x = 3$ $y = 7$

ರಸ ಪ್ರಶ್ನೆಯಲ್ಲಿ ಭಾಗವಹಿಸಿದ ಹುಡುಗರ ಸಂಖ್ಯೆ= 3

ರಸ ಪ್ರಶ್ನೆಯಲ್ಲಿ ಭಾಗವಹಿಸಿದ ಹುಡುಗಿಯರ ಸಂಖ್ಯೆ= 7

(ii) 5 ಪೆನ್ಸಿಲು ಮತ್ತು 7 ಪೆನ್ನುಗಳ ಒಟ್ಟು ಬೆಲೆ ₹ 50. ಹಾಗೆಯೇ 7 ಪೆನ್ಸಿಲು ಮತ್ತು 5 ಪೆನ್ನುಗಳ ಒಟ್ಟು ಬೆಲೆ ₹ 46. ಪ್ರತಿಯೊಂದು ಪೆನ್ಸಿಲಿನ ಹಾಗೂ ಪೆನ್ನಿನ ಬೆಲೆಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ಪೆನ್ಸಿಲ್ ಸಂಖ್ಯೆ x ಮತ್ತೊಂದು ಪೆನ್ಸಿಲ್ ಸಂಖ್ಯೆ y ಆಗಿರಲಿ

5 ಪೆನ್ಸಿಲು ಮತ್ತು 7 ಪೆನ್ನುಗಳ ಒಟ್ಟು ಬೆಲೆ ರೂ= 50

ಈಗ ಸಮೀಕರಣ ಹೀಗಿವೆ

$5x + 7y = 50$

$7x + 5y = 46$

$5x + 7y = 50$ ಅಥವಾ $x = (50-7y)/5$,

x	3	10	-4
y	5	0	10

For $7x + 5y = 46$ ಅಥವಾ $x = (46-5y)/7$,

x	8	3	-2
y	-2	5	12



ರೇಖೆಗಳು (3, 5) ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ. ಎಂದು ನಕ್ಷೆಯಿಂದ ನಾವು ಗಮನಿಸಬಹುದು, ಆದ್ದರಿಂದ ಒಂದು ಪೆನ್ಸಿಲ್‌ನ ಬೆಲೆ ₹3 ಮತ್ತು ಮತ್ತೊಂದು ಪೆನ್ಸಿಲ್‌ನ ಬೆಲೆ ₹5

2) $\frac{a_1}{a_2}, \frac{b_1}{b_2}, \frac{c_1}{c_2}$ ಅನುಪಾತಗಳನ್ನು ಹೋಲಿಸುವ ಮೂಲಕ, ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು ಪ್ರತಿನಿಧಿಸುವ ಸರಳರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸುತ್ತವೆಯೆ? ಸಮಾಂತರವಾಗಿವೆಯೆ? ಅಥವಾ ಐಕ್ಯಗೊಂಡಿವೆಯೆ? ಎಂಬುದನ್ನು ಕಂಡುಹಿಡಿಯಿರಿ.

(i) $5x - 4y + 8 = 0$
$7x + 6y - 9 = 0$

(ii) $9x + 3y + 12 = 0$
$18x + 6y + 24 = 0$

(iii) $6x - 3y + 10 = 0$
$2x - y + 9 = 0$

ಪರಿಹಾರ:– (i) ನೀಡಿರುವ ಸಮೀಕರಣ

$5x-4y+8 = 0$

$7x+6y-9 = 0$

ಆದ್ದರಿಂದ ಸಮೀಕರಣಗಳನ್ನು $a_1x+b_1y+c_1=0$ ಮತ್ತು $a_2x+b_2y+c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 5,\ b_1 = -4,\ c_1 = 8$

$a_2 = 7,\ b_2 = 6,\ c_2 = -9$

$(a_1 / a_2) = 5 / 7$

$(b_1 / b_2) = -4 / 6 = -2 / 3$

$(c_1 / c_2) = 8 / -9$

ಹೀಗಾಗಿ $(a_1 / a_2) \neq (b_1 / b_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯನ್ನು ಪ್ರತಿನಿಧಿಸುವ ಸರಳ ರೇಖೆಗಳು ಒಂದೇ ಬಿಂದುವಿನಲ್ಲಿ ಛೇದಿಸುತ್ತದೆ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATRICES

4. What is a Column matrix?

Ans:- A matrix having only one column is called column matrix.

Eg: $\begin{bmatrix} 1 \\ 2 \\ 3 \end{bmatrix}$ is a column matrix of order 3 x 1.

In general, $A = \left[a_{ij}\right]_{m \times 1}$ is a column matrix of the order m x 1.

5. What is a Zero or Null matrix?

Ans:- A matrix in which all the elements are zeros is zero or null matrix and denoted by O.

Eg: $0 = \begin{bmatrix} 0 & 0 & 0 \\ 0 & 0 & 0 \end{bmatrix}$ is zero matrix of order 2 x 3

Problems:-

1. In the matrix $\begin{bmatrix} 2 & 5 & 19 & -7 \\ 35 & -2 & \frac{5}{2} & 12 \\ \sqrt{3} & 1 & -5 & 17 \end{bmatrix}$

Write: (a) the order of the matrix
(b) the number of elements
(c) write the elements $a_{13}, a_{21}, a_{33}, a_{24}, a_{23}$

Soln:- Given matrix is

$$\begin{bmatrix} 2 & 5 & 19 & -7 \\ 35 & -2 & \frac{5}{2} & 12 \\ \sqrt{3} & 1 & -5 & 17 \end{bmatrix}$$

Number of rows is 3; number of columns is 4;
Hence, the order of the matrix is 3 x 4.
The number of elements is 12.
The elements a_{13} is 19; a_{21} is 35;
a_{33} is -5; a_{24} is 12;
a_{23} is $\frac{5}{2}$

Answer the following:-

1. What is a rectangular matrix?

Ans:- A matrix in which the number of rows is not equal to the number of columns is called the rectangular matrix.

Eg:- **(1)** $A = \begin{bmatrix} a & h & g \\ -h & g & f \end{bmatrix}_{2\times 3}$

(2) $\begin{bmatrix} 2 & 4 \\ 5 & 6 \\ 1 & 8 \end{bmatrix}_{3\times 2}$

2. What is a Square matrix?

Ans:- A matrix in which the number of rows and the number of columns are equal is called Square matrix.

Eg:- $\begin{bmatrix} 1 & 2 & 3 \\ 4 & 5 & 6 \\ 7 & 8 & 9 \end{bmatrix}$ is the matrix of order 3.

3. What is a Diagonal matrix?

Ans:- A square matrix in which all the non – diagonal elements are equal to zero is said to be a diagonal matrix.

Eg:- $\begin{bmatrix} a & 0 & 0 \\ 0 & b & 0 \\ 0 & 0 & c \end{bmatrix}$ is a diagonal matrix

4. What is a scalar matrix?

Ans:- A diagonal matrix in which all the diagonal elements are equal is called a scalar matrix.

Eg:- $\begin{bmatrix} a & 0 & 0 \\ 0 & a & 0 \\ 0 & 0 & a \end{bmatrix}$ is a scalar matrix

5. Write a note on the Equality of matrices.

Ans:- The two matrices $A = \left[a_{ij}\right]$ and $B = \left[b_{ij}\right]$ are said to be equal if

(i) They are of the same order.
(ii) Each element of A is equal to the corresponding element of B, that is $a_{ij} = b_{ij}$ for all i and j.

$\text{Eg:} -\ A = \begin{bmatrix} a & b \\ c & d \end{bmatrix}$ and $B = \begin{bmatrix} 5 & 6 \\ 8 & 2 \end{bmatrix}$

A = B only if a=5, b=6, c=8 & d = 2

i.e., $a_{ij} = b_{ij}$ for each i and j

6. Write a brief note on the addition of two matrices.

Ans:- If A and B are matrices of the same order then A + B is defined to be a matrix obtained by adding the corresponding elements of A and B.

If A and B are matrices of the order m x n then A + B is also of the order m x n.

If $A = \left[a_{ij}\right]$; $B = \left[b_{ij}\right]$;

Wherein, i = 1, 2, 3.......m & j = 1, 2, 3........n

then $A + B = \left[a_{ij} + b_{ij}\right]$;

$\text{Eg:} -\text{If } A = \begin{bmatrix} 2 & 5 \\ 7 & 9 \end{bmatrix} \ \& \ B = \begin{bmatrix} 5 & 6 \\ 8 & 2 \end{bmatrix}$

then A + B=?

$\text{Soln:} - A + B = \begin{bmatrix} 2+5 & 5+6 \\ 7+8 & 9+2 \end{bmatrix} = \begin{bmatrix} 7 & 11 \\ 15 & 11 \end{bmatrix}$

7. Write a brief note on the Subtraction of matrices.

Ans:- If A and B are matrices of the same order then A - B is defined to be a matrix obtained by subtracting each element of B from the corresponding element of A.

If $A = \left[a_{ij}\right]$; $B = \left[b_{ij}\right]$;

Wherein, i = 1, 2, 3.......m & j = 1, 2, 3........n

then $A - B = \left[a_{ij} - b_{ij}\right]$;

$\text{Eg:} -\text{If } A = \begin{bmatrix} 8 & 5 \\ 4 & 9 \end{bmatrix} \ \& \ B = \begin{bmatrix} 5 & 3 \\ 8 & 2 \end{bmatrix}$ then A – B=?

$\text{Soln:} - A - B = \begin{bmatrix} 8-5 & 5-3 \\ 4-8 & 9-2 \end{bmatrix} = \begin{bmatrix} 3 & 2 \\ -4 & 7 \end{bmatrix}$

Problems:-

1. If $\begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$

Find the values of a, b, c, x, y and z.

Soln:- **Given that the matrices are equal**

$x + 3 = 0 \Rightarrow x = -3$

$z + 4 = 6 \Rightarrow z = 6 - 4 \Rightarrow z = 2$

$a - 1 = -3 \Rightarrow a = -3 + 1 \Rightarrow a = -2$

$2c + 2 = 0 \Rightarrow c = \frac{-2}{2} \Rightarrow c = -1$

$b - 3 = 2b + 4 \Rightarrow 2b - b = -4 - 3 \Rightarrow b = -7$

$2y - 7 = 3y - 2 \Rightarrow 3y - 2y = -7 + 2 \Rightarrow y = -5$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಅಪ್ಪ–ಮಗ 'ಲೋಕಾ' ಬಲೆಗೆ

ಪ್ರಜಾವಾಣಿ ವಾರ್ತೆ

ಸುರೇಶ ಹಾಗೂ ಸಂಜೀವನ್ ಪಾಟೀಲ

ಕಲಬುರಗಿ: ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರಕರಣವೊಂದರಲ್ಲಿ ಆರೋಪಿಗೆ ಸಹಕರಿಸಲು ವಿಶೇಷ ಸರ್ಕಾರಿ ಅಭಿಯೋಜಕರಿಗೆ (ಎಸ್‌ಪಿಪಿ) ₹5 ಸಾವಿರ ಲಂಚ ನೀಡಲು ಯತ್ನಿಸಿದ ಅಪ್ಪ ಹಾಗೂ ಮಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಜಿಲ್ಲಾ ಕೋರ್ಟ್ ಸಂಕೀರ್ಣದ ಕಟ್ಟಡದಲ್ಲಿ ಸೋಮವಾರ ಈ ಘಟನೆ ನಡೆದಿದ್ದು, ಲಂಚ ಕೊಡಲು ಬಂದವರು ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದ ಜಿಲ್ಲೆಯ ಮೊದಲ ಪ್ರಕರಣ ಇದಾಗಿದೆ.

ಆಳಂದ ತಾಲ್ಲೂಕಿನ ಕೊತನಹಿಪ್ಪರಗಾದ ಸಂಜೀವನ್ ದತ್ತಾತ್ರಿ ಪಾಟೀಲ (80) ಹಾಗೂ ಅವರ ಪುತ್ರ ಸುರೇಶ ಸಂಜೀವನ್ ಪಾಟೀಲ (44) ಲೋಕಾಯುಕ್ತರ ಬಲೆಗೆ ಬಿದ್ದವರು.

ಆಳಂದ ಪೊಲೀಸ್ ಠಾಣೆ ವ್ಯಾಪ್ತಿಯ ಎಸ್‌ಸಿ/ಎಸ್‌ಟಿ ದೌರ್ಜನ್ಯ ಪ್ರಕರಣದ ವಿಚಾರಣೆಯು ಕಲಬುರಗಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಈ ಪ್ರಕರಣದಲ್ಲಿ ಆರೋಪಿಯಾದ ತಮ್ಮನಿಗೆ ಸಹಕರಿಸುವಂತೆ ಅಣ್ಣ ಸಂಜೀವನ್ ಪಾಟೀಲ ಅವರು ತಮ್ಮ ಮಗ ಸುರೇಶ ಜೊತೆಗೆ ₹5 ಸಾವಿರ ಹಣವನ್ನು ಕವರ್‌ನಲ್ಲಿ ಇಟ್ಟು ಎಸ್‌ಪಿಪಿಗೆ ಲಂಚ ಕೊಡಲು ಮುಂದಾಗಿದ್ದರು. ಕಲಬುರಗಿ ವಿಭಾಗದ ವಿಶೇಷ ಸರ್ಕಾರಿ ಅಭಿಯೋಜಕ ಪ್ರಾಣೇಶ ಭರತನೂರ ಅವರು ಈ ಕುರಿತು ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಸಿ.ಸಿದ್ದರಾಜು ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್‌ಗಳಾದ ರಾಜಶೇಖರ ಬಡದೇಸಾರ, ಅರುಣಕುಮಾರ ಪಾಲ್ಗೊಂಡಿದ್ದರು.

ಬಾಲಕನಿಗೆ ಬೈಕ್ ಕೊಟ್ಟಿದ್ದಕ್ಕೆ ದಂಡ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು: ಬಾಲಕನಿಗೆ ಬೈಕ್ ಕೊಟ್ಟು ಅಪಘಾತವಾಗಲು ಕಾರಣವಾದ ಆರೋಪದ ಮೇಲೆ ಬಾಲಕನ ಸಂಬಂಧಿಯೊಬ್ಬರಿಗೆ 1 ದಿನ ಸಾದಾ ಶಿಕ್ಷೆ ಮತ್ತು ₹31 ಸಾವಿರ ದಂಡ ವಿಧಿಸಲಾಗಿದೆ.

ಪ್ರಕರಣದ ವಿಚಾರಣೆ ನಡೆಸಿದ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಅನಿತ್‌ಕುಮಾರ್ ಎಚ್. ಆರ್. ಬಾಲಕನ ಸಂಬಂಧಿಗೆ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಬಾಲಕ, ಅತಿ ವೇಗದಲ್ಲಿ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ. ಇದರಿಂದ ಅಪಘಾತವಾಗಿತ್ತು. ಇದರ ಬಗ್ಗೆ ತನಿಖೆ ನಡೆಸಿದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಇಂದಿರಾ ಲಂಕೇಶ್ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ, ಪತ್ರಕರ್ತ ಪಿ. ಲಂಕೇಶ್ ಅವರ ಪತ್ನಿ ಇಂದಿರಾ ಲಂಕೇಶ್ (84) ಅವರು ನಗರದಲ್ಲಿ ಸೋಮವಾರ ಹೃದಯಾಘಾತದಿಂದ ನಿಧನರಾದರು.

ನಗರದ ಉತ್ತರಹಳ್ಳಿಯಲ್ಲಿ ತಮ್ಮ ಪುತ್ರಿ, ಸಿನಿಮಾ ನಿರ್ದೇಶಕಿ ಕವಿತಾ ಲಂಕೇಶ್ ಅವರೊಂದಿಗೆ ವಾಸವಿದ್ದರು. ಅವರಿಗೆ ಪುತ್ರಿ ಕವಿತಾ ಅಲ್ಲದೆ ಪುತ್ರ, ಸಿನಿಮಾ ನಿರ್ದೇಶಕ ಇಂದ್ರಜಿತ್ ಲಂಕೇಶ್ ಇದ್ದಾರೆ. ಪತಿ ಲಂಕೇಶ್ ಅವರು 2000ದಲ್ಲಿ ನಿಧನರಾಗಿದ್ದರು. 2017ರ ಸೆಪ್ಟೆಂಬರ್‌ನಲ್ಲಿ ಹಿರಿಯ ಮಗಳು ಗೌರಿ ಲಂಕೇಶ್ ಅವರ ಹತ್ಯೆಯಾಗಿತ್ತು.

ಲಂಕೇಶ್ ಅವರು 'ಹುಳಿಮಾವಿನ ಮರ' ಎಂಬ ಶೀರ್ಷಿಕೆಯಲ್ಲಿ ಆತ್ಮಕಥೆ ಬರೆದರೆ, ಇಂದಿರಾ ಅವರು 'ಹುಳಿಮಾವು ಮತ್ತು ನಾನು' ಎಂಬ ಶೀರ್ಷಿಕೆಯಲ್ಲಿ ಆತ್ಮಕಥೆ ಬರೆದರು. ಅದನ್ನು ಬರೆಯುವಲ್ಲಿ ಗೌರಿಯವರ ಒತ್ತಾಸೆ ಇತ್ತು, ಪತ್ರಿಕೆ ಪ್ರಕಾಶನವೇ ಅದನ್ನು ಪ್ರಕಟಿಸಿತ್ತು.

ಪತಿ 'ಲಂಕೇಶ್ ಪತ್ರಿಕೆ'ಯನ್ನು ಆರಂಭಿಸುವ ಮುನ್ನ, ಉದ್ಯಮಿ ಆಗಿದ್ದ ಅವರು ಬಸವನಗುಡಿಯಲ್ಲಿ 'ಮಯೂರಿ' ಹೆಸರಿನ ಬಟ್ಟೆ ಅಂಗಡಿಯನ್ನು ನಡೆಸುತ್ತಿದ್ದರು.

ಕುಟುಂಬವು ಅವರ ಕಣ್ಣುಗಳನ್ನು ದಾನ ಮಾಡಿದೆ. ಇಂದಿರಾ ಅವರ ಅಂತ್ಯಸಂಸ್ಕಾರವು ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ನಡೆಯಲಿದೆ.

ನಿಕಟ ಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಬಿ.ಆರ್. ಪಾಟೀಲ, ವಿಧಾನಪರಿಷತ್‌ನ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ ಅವರು, ಇಂದಿರಾ ಅವರ ಅಂತಿಮ ದರ್ಶನ ಪಡೆದು, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು.

Infosys Limited
Navigate your next
Corporate Identification Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: +91 80 2852 0261, Fax: +91 80 2852 0362
investors@infosys.com, www.infosys.com

NOTICE

Notice is hereby given that a meeting of the Board of Directors of the Company will be held on Wednesday and Thursday, July 22 and 23, 2026 inter alia to:

1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter ending June 30, 2026;
2. Approve and take on record the audited standalone financial results of the Company as per INDAS for the quarter ending June 30, 2026;
3. Approve and take on record the audited financial statements of the Company and its subsidiaries as per INDAS and IFRS for the quarter ending June 30, 2026.

The financial results will be presented to the Board of Directors on July 23, 2026 for their approval.

The details will be made available on the website of the Company- www.infosys.com.

For Infosys Limited
sd/-
Manikantha AGS
Company Secretary
Membership No. A21918

June 15, 2026
Bengaluru, India

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ.
ಜಿಲ್ಲಾ ಪಂಚಾಯತ ಕಾರ್ಯಾಲಯ, ಗವಾನಚೌಕ್–ಕಿಲಾ ರಸ್ತೆ, ಬೀದರ–585 401. ದೂರವಾಣಿ 08482–231688, Email-eerdwsd.bdr1@gmail.com
ಸಂಖ್ಯೆ: ಕಾನಿಅ/ಗ್ರಾಕುನೀನೈ/ವಿ/ಬೀದರ/ಟೆಂಡರ/ತಾಶಾ–6/2026–27/277 ದಿನಾಂಕ: 25.02.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಜಿಲ್ಲಾ ಪಂಚಾಯತ, ಬೀದರ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು KW-3 (Standard Bid Document) ನಿಬಂಧನೆಗಳೊಪಟ್ಟಂತೆ. H/A KKRDB year 2024-25 ಯೋಜನೆ ಯಡಿಯಲ್ಲಿನ **ರೂ. 66.23 ಲಕ್ಷಗಳ** ಒಟ್ಟು 01 ಕಾಮಗಾರಿಗೆ ಅರ್ಹ ನೊಂದಾಯಿತ 3ನೇ ದರ್ಜೆ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ.ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ https://kppp.karnataka.gov.in ಸಂಪರ್ಕಿಸಬಹುದಾಗಿದೆ. 1) ಟೆಂಡರ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ ದಿನಾಂಕ: 12.06.2026 ರಿಂದ 02.07.2026 ವರೆಗೆ, 2) ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 02.07.2026 ರಂದು 17:00 ಗಂಟೆಯವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 03.07.2026 ರಂದು 17:30 ಗಂಟೆಯ ನಂತರ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ & ನೈ ವಿಭಾಗ–ಬೀದರ
ವಾ.ಸಾ.ಸಂ.ಇ/ಬೀದರ/58/ಕೆ.ಎಸ್.ಎಂ.ಸಿ.&ಎ/2026–27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096910 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಟೆಂಡರ್ ಪ್ರಕಟಣೆಗಳು (ಕೆಪಿಪಿ–ಪೋರ್ಟಲ್ ಮೂಲಕ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ತನ್ನ ಘಟಕಗಳಲ್ಲಿನ ತುಂಡು ಗುತ್ತಿಗೆ ಕೆಲಸಗಳ ನಿರ್ವಹಣೆಗೆ ಎರಡು ವರ್ಷದ ಅವಧಿಗೆ ಗುತ್ತಿಗೆ ಕಾರ್ಮಿಕರನ್ನು ಒದಗಿಸಲು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Tender Notification No.	Name of the Unit	Quantity	EMD (Rs.)
1.	KMF/PUR/Tender-869/2025-26/CALL-2	Nandini Packaging Film Plant, Bangalore	As detailed in tender document	3,63,000/-
2	KMF/PUR/Tender-914/2026-27	Nandini Sperm Station, Hesaraghatta	As detailed in tender document	11,00,000/-
3	KMF/PUR/Tender-915/2026-27	Mother Dairy, Bangalore (UHT Milk & Milk Products Packing)	As detailed in tender document	3,57,000/-

1) ಟೆಂಡರ್ ಪ್ರಾರಂಭವಾಗುವ ದಿನಾಂಕ : From 16.06.2026. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 30.06.2026 at 11.00 AM. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : on or before 15.07.2026 up to 5.30 PM. 4) ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : on 17.07.2026 at 11.00 AM. 5) ವಾಣಿಜ್ಯ ಟೆಂಡರ್ ತೆರಯುವ ದಿನಾಂಕ: ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಶಿವಮೊಗ್ಗ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಾಗರ
ನಂ.ಕಾಇಂ/ಪಂರಾಇಂ/ವಿಸಾ/ಸಾಗರ/K/C-7/2026–27/656 ದಿ: 08.06.2026

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಈ ವಿಭಾಗದಿಂದ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಸಾಗರ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿ ಅನುಮೋದಿತ ಕಾಮಗಾರಿಗಳಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ "ಕೆ.ಪಿ.ಪಿ.ಪಿ "ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ " ಕೆ.ಪಿ.ಪಿ.ಪಿ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Document for procurement of work K/C-7 ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು ' ಇ ಪೇಮೆಂಟ್‌ನಲ್ಲಿ (Credit Card/Direct Debit/NEFT & OTC) ಚಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ ಎರಡು ದಿನ ಮುಂಚಿತವಾಗಿ ಸಲ್ಲಿಸುವುದು.

ಲೆಕ್ಕಶೀರ್ಷಿಕೆ: 2059–00–101–0–26 (034)

ಕ್ರ.ಸಂ. 1. ಕೆಲಸದ ಹೆಸರು: ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಮತ್ತು ಈ ಕಛೇರಿ ವ್ಯಾಪ್ತಿಯ 4 ಉಪವಿಭಾಗ ಕಛೇರಿಗಳಿಗೆ ಮಂಜೂರಾಗಿ ಖಾಲಿ ಇರುವ ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು, 'ಡಿ' ದರ್ಜೆ ಹುದ್ದೆಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು. INDENT No : 3999 (KC-7) **ಟೆಂಡರ್‌ಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ):** 42.92 **ಇ.ಎಂ.ಡಿ ರೂ.ಗಳಲ್ಲಿ:** 85850/– **ಗುತ್ತಿಗೆದಾರರ ಅರ್ಜಿ ಶುಲ್ಕ:** ಕೆ.ಪಿ.ಪಿ.ಪಿ ನಿಯಮಾನುಸಾರ **ಕಾಮಗಾರಿ ಮೀಸಲಾತಿ ಪ.ಜಾ/ ಪ.ಪಂ./ಇತರೆ:** ಇತರೆ **ಕೆಲಸ ಮುಗಿಸುವ ಅವಧಿ:** 12 ತಿಂಗಳು

1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 08.06.2026 ರಿಂದ 22.06.2026 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 22.06.2026 ಸಮಯ 17:00:00 3) ಬಿಡ್ ತೆರೆಯುವ ದಿನಾಂಕ: 23.06.2026 ಸಮಯ 17:01:00.

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯುನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183–226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26–27/69/06/374

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ವಿಶೇಷ ವಿಭಾಗ, ಪಶ್ಚಿಮ ವಲಯ –2, 19ನೇ ಕ್ರಾಸ್, 2ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು –560010.
ನಂ.: ಕಾಅ/ಬೆಂಪನಪಾ/ಎಸ್‌ಡಿ/ಟೆಂಡರ್/07/2026–27/2ನೇ ಕರೆ ದಿನಾಂಕ : 15.06.2026

ವಿಭಾಗ–1 : ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) 2ನೇ ಕರೆ

(ಕೆಪಿಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ ರವರು ಬೆಂಗಳೂರು ಪಶ್ಚಿಮ ನಗರ ಪಾಲಿಕೆ (ಬೆಂಪನಪಾ) ದ ವ್ಯಾಪ್ತಿಯಲ್ಲಿ ಗುರುತಿಸಲಾದ ರಸ್ತೆಗಳನ್ನು ಗುಡಿಸಲು ಪ್ರತಿ ಕಿಲೋಮೀಟರ್ ಆಧಾರದ ಮೇಲೆ ಇತ್ತೀಚಿನ ಮೆಕ್ಯಾನಿಕಲ್ ರಸ್ತೆ ಗುಡಿಸುವ ಯಂತ್ರಗಳನ್ನು ನೇಮಿಸಿಕೊಳ್ಳಲು, ಕಾರ್ಯಾಚರಣೆ ಮಾಡಲು ಮತ್ತು ನಿರ್ವಹಣೆ ಮಾಡಲು ಅರ್ಹ ಮತ್ತು ಅನುಭವಿ ಖಾಸಗಿ ನಿರ್ವಾಹಕರಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಣೆ
1.	ಬೆಂಗಳೂರು ಪಶ್ಚಿಮ ನಗರಪಾಲಿಕೆಯ ವಲಯ–1 ಮತ್ತು 2 ರಲ್ಲಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯೊಳಗೆ 400 ಕಿ.ಮೀ ಉದ್ದದ ರಸ್ತೆಗಳನ್ನು ಗುಡಿಸಲು, ಇತ್ತೀಚಿನ ಯಾಂತ್ರಿಕ ರಸ್ತೆ ಗುಡಿಸುವ 10 ಸಂಖ್ಯೆಯ ಯಂತ್ರಗಳನ್ನು ಬಳಸಿಕೊಂಡು ಕಾರ್ಯಾಚರಣೆಗಳು ಮತ್ತು ನಿರ್ವಹಣೆ ಸೇರಿದಂತೆ 5 ಘನ ಮೀಟರ್‌ಗಿಂತ ಕಡಿಮೆಯಿಲ್ಲದ ಸಾಮರ್ಥ್ಯದ ವಿಭಾಗ ಮತ್ತು ಮಾನವಶಕ್ತಿ, ಇಂಧನ, ನಿರ್ವಹಣೆ ಮತ್ತು ಎಲ್ಲಾ ಉಪಭೋಗ್ಯ ವಸ್ತುಗಳನ್ನು ಒಳಗೊಂಡಂತೆ ಅಗತ್ಯವಿರುವ ಟಿಪ್ಪರ್ ಟ್ರಕ್‌ಗಳ ಸಂಖ್ಯೆ, ಪ್ರತಿ ಕಿಲೋಮೀಟರ್‌ಗೆ ಪಾವತಿ ಆಧಾರದ ಮೇಲೆ ರಸ್ತೆಗಳನ್ನು ಗುಡಿಸುವುದು. **ಪ್ರತಿ ಕಿ.ಮೀ.ಗೆ ದರ, ಉದ್ದ ಮತ್ತು ಅವಧಿ : ಅಂದಾಜು ದರ ಪ್ರತಿ ಕಿ.ಮೀ.ಗೆ ರೂ.699.00 ಮತ್ತು 7 ವರ್ಷಗಳು + 3 ವರ್ಷಗಳು** ವಿಸ್ತರಿಸಬಹುದಾಗಿದೆ. **ಇಎಂಡಿ : ಈ ಕೆಳಗಿನವುಗಳ ಅಡಿಯಲ್ಲಿ ಇ–ಪಾವತಿಯ ಮೂಲಕ ರೂ.1,00,000/– ಅನ್ನು ಅಂದರೆ ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಓಟಿಸಿ ಮೂಲಕ ಮತ್ತು ಉಳಿದ ರೂ.71,00,000/– ಅನ್ನು ರಾಷ್ಟ್ರೀಕೃತ/ ಪರಿಶಿಷ್ಟ ಬ್ಯಾಂಕ್ ನೀಡಿದ ಇ–ಬ್ಯಾಂಕ್ ಗ್ಯಾರಂಟಿ/ ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ಪಾವತಿಸಬೇಕು.**

ಟೆಂಡರ್‌ನ ಕಾರ್ಯಸೂಚಿ: (1) ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಯ ಲಭ್ಯತೆ: **16.06.2026** (2) ಪ್ರತಿ–ಬಿಡ್ ಸಭೆಯ ದಿನಾಂಕ ಮತ್ತು ಸಮಯ: **20.06.2026 ರಂದು 15:00 ಗಂಟೆಗಳು** (3) ಟೆಂಡರ್ ಬಗ್ಗೆ ವಿಚಾರಣೆಗಾಗಿ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ) : **20.06.2026 ರಂದು 16:00 ಗಂಟೆಗಳು**(4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **29.06.2026 ರಂದು 16:00 ಗಂಟೆಗಳು** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30.06.2026 ರಂದು 16:30 ಗಂಟೆಗಳು** (6) ಹಣಕಾಸು ಬಿಡ್ ತೆರೆಯುವುದು: (ಸಾಧ್ಯವಾದರೆ) : **ತಾಂತ್ರಿಕ ಮೌಲ್ಯಮಾಪನದ ಅನುಮೋದನೆಯ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ ವಲಯ–2, ಬೆಂಪನಪಾ

ಕರ್ನಾಟಕ ಸರ್ಕಾರ
ಕಾರ್ಯದರ್ಶಿ ಮತ್ತು ಉಪ ಆಯುಕ್ತರ ಕಛೇರಿ,
ಶ್ರೀಘಾಟಿ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್: 08029550091, 08029500191
ಇ–ಮೇಲ್: shrighatisubrahmanyatempleeo@gmail.com
ಸಂಖ್ಯೆ:ಎಸ್ಘಿಎಸ್/ಅಪ್ರಾ/ಸಿಆರ್;14/2026–27, ದಿನಾಂಕ: 14/06/2026

–:ಪತ್ರಿಕಾ ಪ್ರಕಟಣೆ:–

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಅಕ್ಕಿ ಮತ್ತು ಬೆಲ್ಲವನ್ನು ದಿನಾಂಕ: 22/06/2026 ರಂದು ಸೋಮವಾರ ಬೆಳಗ್ಗೆ 11.30 ಘಂಟೆಗೆ ದೇವಾಲಯದ ಅನ್ನದಾಸೋಹ ಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸುವುದು.

ಸಹಿ/– ಕಾರ್ಯದರ್ಶಿ ಮತ್ತು ಉಪ ಆಯುಕ್ತರು.
ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಎಸ್.ಎಸ್. ಘಾಟಿ.

ಕರ್ನಾಟಕ ಸರ್ಕಾರ
ಕಾರ್ಯದರ್ಶಿ ಮತ್ತು ಉಪ ಆಯುಕ್ತರ ಕಛೇರಿ,
ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್: 08029550091, 08029500191
ಇ–ಮೇಲ್: shrighatisubrahmanyatempleeo@gmail.com
ಸಂಖ್ಯೆ:ಎಸ್ಘಿಎಸ್/ಅಪ್ರಾ/ಸಿಆರ್;25/2026–27, ದಿನಾಂಕ: 14/06/2026

–:ಬಹಿರಂಗ ಹರಾಜು:–

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮುಡಿ ಭವನದಲ್ಲಿ ಬೀಳತಕ್ಕ ಕೂದಲನ್ನು ಒಂದು ವರ್ಷದ ಅವಧಿಗೆ ದಿನಾಂಕ:01/07/2026 ರಿಂದ ದಿನಾಂಕ: 30/06/2027 ರವರೆಗೆ ರೂಡಿಸಿಕೊಳ್ಳುವ ಹಕ್ಕನ್ನು ದಿನಾಂಕ:22/06/2026 ರಂದು ಸೋಮವಾರ ಬೆಳಿಗ್ಗೆ 11.30 ಘಂಟೆಗೆ ದೇವಾಲಯದ ಅನ್ನದಾಸೋಹ ಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಅಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸುವುದು.

ಸಹಿ/– ಕಾರ್ಯದರ್ಶಿ ಮತ್ತು ಉಪ ಆಯುಕ್ತರು.
ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಎಸ್.ಎಸ್. ಘಾಟಿ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ: ಕವಿನಿಆ/ಕೆಇಡಿಸಿ/2026–27/2151 ದಿನಾಂಕ:15.06.2026

ಸೂಚನೆ

ವಿಷಯ: ಕರಡು–ಕರ್ನಾಟಕ ವಿದ್ಯುಚ್ಛಕ್ತಿ ವಿತರಣಾ ಸಂಹಿತೆ (ಒಂದನೇ ತಿದ್ದುಪಡಿ), 2026.
ಉಲ್ಲೇಖ : ಕವಿನಿಆ/ಕೆಇಡಿಸಿ/2026–27/2080, ದಿನಾಂಕ : 04.06.2026.
ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಮಯಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 11.06.2026 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕಿ ನಿಯಂತ್ರಣ ಆಯೋಗದ ಅಂತರ್ಜಾಲ **https://kerc.karnataka.gov.in** ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ. ಆಸಕ್ತರು, ಸದರಿ ಕರಡು ಷರತ್ತುಗಳ ಬಗ್ಗೆ ಅಭಿಪ್ರಾಯ / ವಿಮರ್ಶೆ / ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ **ದಿನಾಂಕ 24.06.2026 ರೊಳಗೆ** ಲಿಖಿತವಾಗಿ ಸಲ್ಲಿಸಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/YC/1163/2026-27

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ: ಕವಿನಿಆ/ಎಫ್–32/ವಾ–27/2026–27/2133 ದಿನಾಂಕ:15.06.2026

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ರಾಜ್ಯದೊಳಗಿನ ಪ್ರಸರಣ ಮತ್ತು ರಾಜ್ಯ ವಿತರಣಾ ವ್ಯವಸ್ಥೆಗೆ ಸಂಪರ್ಕ ಮತ್ತು ಸಾಮಾನ್ಯ ಸಂಪರ್ಕಜಾಲ ಪ್ರವೇಶ) ವಿನಿಮಯಗಳು, 2026 ಬಗ್ಗೆ.
ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ರಾಜ್ಯದೊಳಗಿನ ಪ್ರಸರಣ ಮತ್ತು ರಾಜ್ಯ ವಿತರಣಾ ವ್ಯವಸ್ಥೆಗೆ ಸಂಪರ್ಕ ಮತ್ತು ಸಾಮಾನ್ಯ ಸಂಪರ್ಕ ಜಾಲ ಪ್ರವೇಶ) ವಿನಿಮಯಗಳು, 2026 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 11.06.2026 ರಂದು ಪ್ರಕಟಿಸಲಾಗಿದೆ. ಕ.ವಿ.ನಿ.ಆ.ದ ವೆಬ್‌ಸೈಟ್ **https://kerc.karnataka.gov.in** ನಲ್ಲಿ ಕರಡು ವಿನಿಮಯಗಳು ಲಭ್ಯವಿದೆ. ಆಸಕ್ತರು, ಕರಡು ವಿನಿಮಯಗಳ ಬಗ್ಗೆ ತಮ್ಮ ಲಿಖಿತ ಅಭಿಪ್ರಾಯ / ವಿಮರ್ಶೆ / ಸಲಹೆಗಳು ಇದ್ದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ ಮೇಲೆ ತಿಳಿಸಿದಂತೆ ಕರಡು ಅಧಿನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/YC/1162/2026-27

ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ (ಬಿಎಸ್‌ಸಿಎಲ್)
1ನೇ ಮಹಡಿ, ಬುಡಾ ಕಛೇರಿ, ಅಶೋಕ ನಗರ, ಬೆಳಗಾವಿ - 590016.
ದೂರವಾಣಿ ಸಂಖ್ಯೆ : 0831-2461352 / 2474166
ಇ-ಮೇಲ್: bscltd16@gmail.com ವೆಬ್‌ಸೈಟ್: www.bscl.in
ಕ್ರ.ಸಂ. ಬೆಸ್ಮಾಸಿಲಿ/ಆಡಳಿತ/ನೋಟಿಫಿಕೇಷನ್/2026–27/152 ದಿನಾಂಕ: 15.06.2026

ನೇಮಕಾತಿ ಅಧಿಸೂಚನೆ

ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್, ಬೆಳಗಾವಿ, CITIIS 2.0 ಯೋಜನೆಗೆ ಈ ಕೆಳಗೆ ವಿವರಿಸಿದ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

1. ಯೋಜನಾ ಸಂಯೋಜಕರು – 01 ಹುದ್ದೆ
2. ಪರಿಸರ ಮತ್ತು ಸಾಮಾಜಿಕ ಸುರಕ್ಷತಾ ನೋಡೆಲ್ ಅಧಿಕಾರಿ – 01 ಹುದ್ದೆ
3. ಸಾರ್ವಜನಿಕ ಎಂಗೇಜ್ ಮೆಂಟ್ ಅಧಿಕಾರಿ – 01 ಹುದ್ದೆ

ಹೆಚ್ಚಿನ ವಿವರಗಳಿಗಾಗಿ ಕಛೇರಿಯ ವೆಬ್‌ಸೈಟ್ **www.bscl.in**
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ **01.07.2026, ಸಾಯಂಕಾಲ 5:30 ಗಂಟೆಯವರೆಗೆ.**

ವ್ಯವಸ್ಥಾಪಕ ನಿರ್ದೇಶಕರು,
ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್,
ಬೆಳಗಾವಿ
ವಾಸಾಸಂಇ/ಬೆಳಗಾವಿ/434/ಅಡ್ವರ್ಟೋ/2026–27

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ–1/ಟೆಂಡರ್ ಪ್ರಕಟಣೆ/543/2026–27/ ದಿನಾಂಕ: 10.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 04/2026–27/ ದಿನಾಂಕ: 10.06.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–2&3 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 04 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ.80.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 50.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 10.06.2026 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download).** ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ಕೊನೆಯ ದಿನಾಂಕ: 17.06.2026 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 18.06.2026ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:114/ಕೆಎಸ್‌ಎಂಸಿಎ/2026–27

SELCO Foundation – Call for Vendors
The Supply, Installation and Commissioning & Comprehensive maintenance for 1 year of Solar Photovoltaic (SPV) Off-grid Systems.

SELCO Foundation – Procurement Officer
690, 15th Cross Rd, Jeewan Griha Colony,
2nd Phase, J P Nagar, Bengaluru, 560078
procurement@selcofoundation.org

SELCO Foundation hereby invites bids for the Supply, Installation and Commissioning & Comprehensive maintenance of Solar Photovoltaic (SPV) off-grid systems for 1 year – for 1900 Anganwadi centres across the state of Karnataka during the year 2026-2027
The detailed tender document can be downloaded from
https://selcofoundation.org/tender/
As per the terms and conditions herein, all Bids should be submitted through the online form (E-tender)
https://forms.gle/WmbbLCgRBLMkoua89
or submitted at the above-mentioned address
by 5 pm on or before 30th June 2026.
Chief Executive Officer – SELCO Foundation

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001
ದೂರವಾಣಿ: 080–22215601, ಫ್ಯಾಕ್ಸ್ : 080–22215602
ಸಂಖ್ಯೆ:ಯುಸಕ್ರೀಇ/ಯುನಿ/ಯುಸ/13/2025–26 ದಿನಾಂಕ:10.06.2026

ಮರು–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2026–27ನೇ ಸಾಲಿನಲ್ಲಿ ಯುವಜನರಿಗೆ ಶಿಕ್ಷಣ ಮತ್ತು ತರಬೇತಿಯ ಕುರಿತು ಮಾಹಿತಿಯನ್ನು ನೀಡಲು ಯುವ ಸಹಾಯವಾಣಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್ ದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಯುವಜನರಿಗೆ ಶಿಕ್ಷಣ ಮತ್ತು ತರಬೇತಿಯ ಕುರಿತು ಮಾಹಿತಿಯನ್ನು ನೀಡಲು ಯುವ ಸಹಾಯವಾಣಿ ಕಾರ್ಯಕ್ರಮ ಅನುಷ್ಠಾನ (2ನೇ ಕರೆ).	8.70	21,750/-

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : **24.06.2026ರ ಸಂಜೆ 16.30 ಗಂಟೆಯವರೆಗೆ. 2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **25.06.2026ರ ಸಂಜೆ 17.00 ಗಂಟೆಗೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ:** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾಹಿತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ),
ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾಸಾಸಂಇ/ವಾಪ್ರ/ಜಿಎ/1123/2026–27

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು–560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080–25586321
E-mail: ho@kspcb.gov.in, Website: https://kspcb.karnataka.gov.in
No. PCB 05 INFRA EPH 2026/985 Date:12/06/2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಕೊಡಿಗೆಹಳ್ಳಿ, ಕೆಂಚನಪುರ, ಬಳ್ಳಗೆರೆ ಮತ್ತು ಹುಲಿಕುಂಟೆ ಗ್ರಾಮಗಳಲ್ಲಿ ಒಟ್ಟು 969.76 ಎಕರೆ (392.45 ಹೆಕ್ಟೇರ್) ಪ್ರದೇಶದಲ್ಲಿ **ನಾಲೆಡ್ಜ್, ವೆಲ್ಬಿಂಗ್ ಮತ್ತು ಇನ್ನೊವೇಟಿವ್ ಸಿಟಿ 2ನೇ ಹಂತ (KWIN CITY- Phase 2)** ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ರಾಜ್ಯ ಪರಿಸರ ಆಘಾತ ಅಂದಾಜಿಕರಣ ಪ್ರಾಧಿಕಾರ–ಕರ್ನಾಟಕ ಇವರಿಂದ ಯೋಜನಾದಾರರು ಉಲ್ಲೇಖದ ನಿಯಮಗಳನ್ನು (Terms of Reference, TOR) ಪತ್ರ ದಿನಾಂಕ: 13.03.2026 ಕಡತ ಸಂಖ್ಯೆ : SEIAA 01 IND 2025, ಪ್ರಸ್ತಾವನೆ ಸಂಖ್ಯೆ : SIA/KA/INFRA1/557093/2026 ರಂತೆ ಪಡೆದಿರುತ್ತಾರೆ. ಪ್ರವರ್ತಕರ ಪತ್ರ ಸಂಖ್ಯೆ. KIADB/EE1/KWIN 2/PH/2139, ದಿನಾಂಕ 27.03.2026 ರ ಕೋರಿಕೆಯಂತೆ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ–ನೆಲಮಂಗಲ ರವರ ಪತ್ರ ಸಂಖ್ಯೆ: ಕರಾಮಾನಿಮಂ/ಪ್ರಾ.ಕ(ನೆಲಮಂಗಲ)/ಪರಿಸರ ಸಾರ್ವಜನಿಕ ಆಲಿಕೆ ಸಭೆ/2026–27/150 ದಿನಾಂಕ: 27.05.2026 ರಲ್ಲಿ ತಿಳಿಸಿರುವಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ದಿನಾಂಕ: **17ನೇ ಜುಲೈ 2026 ರಂದು ಶುಕ್ರವಾರ ಪೂರ್ವಾಹ್ನ 11 :00 ಗಂಟೆಗೆ** ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. ಸಂಸ್ಥೆಯ ಹೆಸರು ಮತ್ತು ವಿಳಾಸ : ಮುಖ್ಯ ಅಭಿಯಂತರರು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ನಂ. 49, 4th & 5th ಮಹಡಿ ಈಸ್ಟ ವಿಂಗ್ ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು
2. ಉದ್ದೇಶಿತ ಯೋಜನೆಯ ಸ್ಥಳ : ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಕೊಡಿಗೆಹಳ್ಳಿ, ಕೆಂಚನಪುರ, ಬಳ್ಳಗೆರೆ ಮತ್ತು ಹುಲಿಕುಂಟೆ ಗ್ರಾಮಗಳು.
3. ಯೋಜನೆಯ ಕಾರ್ಯಚಟುವಟಿಕೆ. : ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (KIADB) ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಂಚನಪುರ, ಬಳ್ಳಗೆರೆ ಮತ್ತು ಹುಲಿಕುಂಟೆ ಗ್ರಾಮಗಳಲ್ಲಿ 969.76 ಎಕರೆ (392.45 ಹೆಕ್ಟೇರ್) ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ "KWIN City 2ನೇ ಹಂತದ ಕೈಗಾರಿಕಾ ಪ್ರದೇಶ" ಯೋಜನೆಯು ಪರಿಸರ ಪರಿಣಾಮ ಮೌಲ್ಯಮಾಪನ (EIA) ಅಧಿಸೂಚನೆ, 2006ರ ಅನ್ವಯ 7(c), ವಿಭಾಗಗಳಡಿ ಬರುವ 'B1' ವರ್ಗದ ಯೋಜನೆಯಾಗಿದೆ.
4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ. : 17ನೇ ಜುಲೈ 2026 ರಂದು ಶುಕ್ರವಾರ ಸಮಯ: ಪೂರ್ವಾಹ್ನ 11 :00 ಗಂಟೆಗೆ, ಸ್ಥಳ : ಉದ್ದೇಶಿತ ಸ್ಥಳ ಸರ್ವೆ ನಂ. 145, 144/3, ಬಳ್ಳಗೆರೆ ಗ್ರಾಮ ಕೊಡಿಗೇಹಳ್ಳಿ ಗ್ರಾಮ ಪಂಚಾಯತ್ ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ– ದೊಡ್ಡಬಳ್ಳಾಪುರ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ.
5. ಯೋಜನೆಯ ವೆಚ್ಚ : ರೂ. 2830.94 ಕೋಟಿ (ಯೋಜನಾ ಮೊತ್ತ)

6. ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ.: **1**. ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, **2**. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ. **3**. ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. **4**. ತಹಶೀಲ್ದಾರ್ ಕಾರ್ಯಾಲಯ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **5**. ತಾಲ್ಲೂಕು ಪಂಚಾಯತ್ ಕಾರ್ಯಾಲಯ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **6**. ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **7**. ಗ್ರಾಮ ಪಂಚಾಯಿತಿ ಕಾರ್ಯಾಲಯ, ಹುಲಿಕುಂಟೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **8**. ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ– ಬೆಂಗಳೂರು ಉತ್ತರ. 1ನೇ ಮಹಡಿ, ಅರ್ಬನ್ ಇಕೋ ಪಾರ್ಕ್, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕ ಪ್ರದೇಶ, ಬೆಂಗಳೂರು–560058. **9**. ಪ್ರಾದೇಶಿಕ ಕಛೇರಿ – ನೆಲಮಂಗಲ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, 1ನೇ ಮಹಡಿ, ಅರ್ಬನ್ ಇಕೋ ಪಾರ್ಕ್, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕ ಪ್ರದೇಶ, ಬೆಂಗಳೂರು–560058. **10**. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. **11**. ರಾಜ್ಯ ಪರಿಸರ ಆಘಾತ ಅಂದಾಜಿಕರಣ ಪ್ರಾಧಿಕಾರ–ಕರ್ನಾಟಕ, 4ನೇ ಗೇಟ್, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560 001 **12**. ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಚೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ: **https://kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಒಳ್ಳೆಯ ಕೆಲಸವನ್ನು ಕೆಟ್ಟ ಕಾರಣಕ್ಕಾಗಿ ಮಾಡುವುದು ಒಂದು ರೀತಿಯ ದ್ರೋಹ.

–ಟಿ.ಎಸ್. ಎಲಿಯಟ್

ಸಂಪಾದಕೀಯ

ನಾಮಪತ್ರ ತಿರಸ್ಕರಿಸಿದ ಪ್ರಹಸನ ಬಿಜೆಪಿಗೆ ಆಯೋಗದ ಉಡುಗೊರೆ

ಮಧ್ಯಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆಯಾಗಲು ಬಯಸಿದ್ದ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಅವರ ಉಮೇದುವಾರಿಕೆಯನ್ನು ನಿರಾಕರಿಸಿದ ವಿದ್ಯಮಾನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಪ್ರಯತ್ನವಾಗಿದೆ. ನಾಮಪತ್ರ ತಿರಸ್ಕಾರ ಮತ್ತು ಪರಿಹಾರ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದ ಘಟನೆಗಳು, ಚುನಾವಣಾ ಪ್ರಕ್ರಿಯೆಯಲ್ಲಿನ ಪಾರದರ್ಶಕತೆಯ ಕುರಿತು ಮಾತ್ರವಲ್ಲದೆ, ಚುನಾವಣೆಗಳಲ್ಲಿ ಕಾನೂನುಬದ್ಧ ಪ್ರಕ್ರಿಯೆ ಪಾಲನೆಯಾಗುವುದನ್ನು ಖಚಿತಪಡಿಸಬೇಕಾದ ನ್ಯಾಯಾಂಗದ ಸಾಮರ್ಥ್ಯದ ಬಗ್ಗೆಯೂ ಗಂಭೀರ ಪ್ರಶ್ನೆಗಳಿಗೆ ಆಸ್ಪದ ಕಲ್ಪಿಸುವಂತಿವೆ. ಹೈದರಾಬಾದ್‌ನಲ್ಲಿ ಬಾಕಿ ಉಳಿದಿರುವ ಕ್ರಿಮಿನಲ್ ಪ್ರಕರಣದ ವಿಷಯವನ್ನು ಪ್ರಮಾಣಪತ್ರದಲ್ಲಿ ಬಹಿರಂಗಪಡಿಸಿಲ್ಲ ಎನ್ನುವ ಕಾರಣ ನೀಡಿ ಮೀನಾಕ್ಷಿ ನಟರಾಜನ್ ಅವರ ಉಮೇದುವಾರಿಕೆಯನ್ನು ನಿರಾಕರಿಸಲಾಗಿದೆ. ಕಾಂಗ್ರೆಸ್ ನಾಯಕರೊಬ್ಬರ ಅನುಚಿತ ವರ್ತನೆಗೆ ಸಂಬಂಧಿಸಿದ ಪ್ರಕರಣದಲ್ಲಿ, ಮೀನಾಕ್ಷಿ ನಟರಾಜನ್ ಅವರು ಕ್ರಮ ಕೈಗೊಳ್ಳುವಲ್ಲಿ ವಿಫಲರಾದರು ಎಂದು ಕಾರ್ಪೊರೇಟರ್ ಒಬ್ಬರು ಆರೋಪಿಸಿದ್ದರು. ಆದರೆ, ಆ ಘಟನೆ ನಡೆದ ಸಂದರ್ಭದಲ್ಲಿ ಅವರು 'ಎಐಸಿಸಿ'ಯ ತೆಲಂಗಾಣದ ಉಸ್ತುವಾರಿ ಆಗಿರಲಿಲ್ಲ. ಘಟನೆ ನಡೆದ ಬಹಳ ಕಾಲದ ನಂತರ ಅವರು ಆ ಸ್ಥಾನವನ್ನು ವಹಿಸಿಕೊಂಡಿದ್ದರು. ನ್ಯಾಯಾಲಯವು ನೀಡಿದ ನೋಟಿಸ್‌ಗೆ ಅವರು ಉತ್ತರವನ್ನೂ ಸಲ್ಲಿಸಿದ್ದರು. ಅಲ್ಲದೆ, ಇಲ್ಲಿಯವರೆಗೆ ಮೀನಾಕ್ಷಿ ಅವರ ಮೇಲಿನ ಆರೋಪಗಳ ಪ್ರಕರಣವನ್ನು ಕೋರ್ಟ್ ಪರಿಗಣನೆಗೆ ತೆಗೆದುಕೊಂಡಿಲ್ಲ. ವಾಸ್ತವ ಹೀಗಿದ್ದರೂ ಅವರ ನಾಮಪತ್ರವನ್ನು ತಿರಸ್ಕರಿಸಲಾಯಿತು. ಅವರಿಗಾದ ತೊಂದರೆಗೆ ಪರಿಹಾರ ದೊರಕಿಸಿ ಕೊಡಲು ತಕ್ಷಣದ ಪರಿಹಾರಗಳೂ ಇಲ್ಲ.

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವಲ್ಲಿ ಚುನಾವಣಾ ಆಯೋಗ ಮತ್ತೆ ಮತ್ತೆ ವಿಫಲವಾಗುತ್ತಿದೆ. ಆಯೋಗದ ರಾಜಕೀಯ ಹಿತಾಸಕ್ತಿಯ ನಿರ್ಧಾರಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತಿವೆ.

ಮೀನಾಕ್ಷಿ ನಟರಾಜನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಚುನಾವಣಾಧಿಕಾರಿ ತಮ್ಮ ಮನಸ್ಸಿಗೆ ಬಂದಂತೆ ತಪ್ಪು ನಿರ್ಣಯ ತೆಗೆದುಕೊಂಡಿದ್ದಾರೆ. ಜನ ಪ್ರತಿನಿಧಿತ್ವ ಕಾಯ್ದೆ 33ಎ(1) ಪ್ರಕಾರ, ಎರಡು ವರ್ಷ ಅಥವಾ ಅದಕ್ಕೂ ಹೆಚ್ಚಿನ ಶಿಕ್ಷೆ ವಿಧಿಸಬಹುದಾದ ಹಾಗೂ ನ್ಯಾಯಾಲಯವು ಆರೋಪಗಳನ್ನು ಅಧಿಕೃತವಾಗಿ ಪರಿಗಣಿಸಿರುವ ಸಂದರ್ಭದಲ್ಲಿ ಮಾತ್ರ, ಅಂಥ ಪ್ರಕರಣವನ್ನು ಉಮೇದುದಾರರು ಸಲ್ಲಿಸುವ ಪ್ರಮಾಣ ಪತ್ರದಲ್ಲಿ ಬಹಿರಂಗಪಡಿಸುವುದು ಕಡ್ಡಾಯವಾಗಿದೆ. ಕಾನೂನು ಸ್ಪಷ್ಟವಾಗಿದ್ದರೂ, ಅದನ್ನು ತಪ್ಪಾಗಿ ವ್ಯಾಖ್ಯಾನಿಸುವ ಮೂಲಕ ಚುನಾವಣಾಧಿಕಾರಿಯು ಮೀನಾಕ್ಷಿ ನಟರಾಜನ್ ಅವರ ಉಮೇದುವಾರಿಕೆಯನ್ನು ತಿರಸ್ಕರಿಸಿದ್ದಾರೆ ಹಾಗೂ ಬಿಜೆಪಿಯ ಮೂವರು ಅಭ್ಯರ್ಥಿಗಳ ಆಯ್ಕೆಯನ್ನು ಪ್ರಕಟಿಸಿದ್ದಾರೆ. ಆದರೆ, ಸದನದಲ್ಲಿ ಬಿಜೆಪಿಗೆ ಇರುವ ಶಾಸಕರ ಬಲವು ಇಬ್ಬರು ಅಭ್ಯರ್ಥಿಗಳ ಗೆಲುವಿಗೆ ಸಾಕಾಗುವಷ್ಟು ಮಾತ್ರವಿದೆ. ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದ ದಿನವೇ, ಜಾರ್ಖಂಡ್‌ನಲ್ಲಿನ ಬಿಜೆಪಿ ಬೆಂಬಲಿತ ಅಭ್ಯರ್ಥಿಗೆ ಅವರು ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿದ್ದ ಲೋಪ ಸರಿಪಡಿಸಲು 24 ಗಂಟೆಗಳ ಅವಕಾಶ ನೀಡಲಾಗಿತ್ತು. ಈ ಅನುಕೂಲಸಿಂಧು ಧೋರಣೆ ಗಮನಿಸಿದರೆ, ಮಧ್ಯಪ್ರದೇಶದ ಘಟನೆ ಸಂಪೂರ್ಣ ರಾಜಕೀಯಪ್ರೇರಿತ ಎನ್ನುವುದು ಸ್ಪಷ್ಟವಾಗುತ್ತದೆ; ಬಿಜೆಪಿಗೆ ರಾಜ್ಯಸಭಾ ಸ್ಥಾನವೊಂದನ್ನು ಉಡುಗೊರೆ ನೀಡುವಲ್ಲಿ ಚುನಾವಣಾ ಆಯೋಗದ ಪಾತ್ರವಿರುವುದೂ ತಿಳಿಯುತ್ತದೆ. ಪ್ರಜಾಪ್ರಭುತ್ವದ ಮೂಲಾಧಾರ ಆಗಿರುವ ಚುನಾವಣೆಗಳನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಚುನಾವಣಾ ಆಯೋಗ ಮತ್ತೆ ಮತ್ತೆ ವಿಫಲವಾಗಿದೆ. ಈ ವೈಫಲ್ಯ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವಂತಿದೆ.

ಯಾವುದೇ ಮುಚ್ಚುಮರೆಯಿಲ್ಲದೆ ತಿರುಚಲಾದ ಪ್ರಕರಣದಲ್ಲಿ 'ಪ್ರಜಾಪ್ರಭುತ್ವದ ನ್ಯಾಯ'ವನ್ನು ರಕ್ಷಿಸುವಲ್ಲಿ ಸುಪ್ರೀಂ ಕೋರ್ಟ್ ವಿಫಲವಾಗಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎ.ಎಸ್. ಚಂದುರ್ಕರ್ ಅವರನ್ನೊಳಗೊಂಡಿದ್ದ ಪೀಠವು, ಚುನಾವಣಾ ಪ್ರಕ್ರಿಯೆ ಆರಂಭಗೊಂಡ ನಂತರ ಮಧ್ಯಪ್ರವೇಶ ಮಾಡುವುದು ಸಾಧ್ಯವಿಲ್ಲ ಎನ್ನುವ ಕಾರಣ ನೀಡಿ ಮೀನಾಕ್ಷಿ ನಟರಾಜನ್ ಅವರ ಅಹವಾಲನ್ನು ತಿರಸ್ಕರಿಸಿದೆ. ಸಂವಿಧಾನದ 329ನೇ ವಿಧಿಯ ಅನ್ವಯ, ಸಂಸತ್ ಅಥವಾ ರಾಜ್ಯ ವಿಧಾನಮಂಡಲದ ಚುನಾವಣೆಗಳನ್ನು ಚುನಾವಣಾ ಪ್ರಕ್ರಿಯೆ ನಡೆಯುತ್ತಿರುವ ವೇಳೆ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ ಹಾಗೂ ಚುನಾವಣೆ ನಂತರವಷ್ಟೇ, 'ಚುನಾವಣಾ ಅರ್ಜಿ' ಸಲ್ಲಿಸಿ ಫಲಿತಾಂಶವನ್ನು ಪ್ರಶ್ನಿಸಬಹುದು. ಆದರೆ, ನೈಸರ್ಗಿಕ ನ್ಯಾಯದ ತತ್ತ್ವಗಳ ತೀವ್ರ ಉಲ್ಲಂಘನೆ ಆದಾಗ ಮಧ್ಯಪ್ರವೇಶಿಸುವ ಅಧಿಕಾರ ಸುಪ್ರೀಂ ಕೋರ್ಟ್‌ಗೆ ಇದೆ ಹಾಗೂ ಮೀನಾಕ್ಷಿ ನಟರಾಜನ್ ಅವರ ಪ್ರಕರಣ ಕೋರ್ಟ್ ಹಸ್ತಕ್ಷೇಪ ಅಗತ್ಯವಾಗಿದ್ದ ಸಂದರ್ಭವಾಗಿತ್ತು. ಚುನಾವಣಾ ಆಯೋಗದ ನೆರವು ಹಾಗೂ ವಾಮಮಾರ್ಗದ ಮೂಲಕ ಚುನಾವಣೆಗಳನ್ನು ವಿಕೃತಗೊಳಿಸುವ ಹೊಸ ದಾರಿಯೊಂದನ್ನು ಮಧ್ಯಪ್ರದೇಶದಲ್ಲಿನ ಚುನಾವಣಾ ಪ್ರಹಸನವು ಅನಾವರಣಗೊಳಿಸಿದೆ.

ಡಿಕೆಶಿ ಮುಂದೆ ಸವಾಲು ಸಾಲು

ಗತಿಬಿಂಬ

ವೈ.ಗ. ಜಗದೀಶ್

'ಪ್ರಯತ್ನ ಫಲಿಸದೇ ಇದ್ದರೂ ಪ್ರಾರ್ಥನೆ ಫಲಿಸುತ್ತದೆ' ಎಂಬ ನಂಬುಗೆಯಲ್ಲಿದ್ದ ಡಿ.ಕೆ. ಶಿವಕುಮಾರ್ ಅವರು ಕೊನೆಗೂ ರಾಜ್ಯದ ಚುಕ್ಕಾಣಿಯನ್ನು ದಕ್ಕಿಸಿಕೊಂಡಿದ್ದಾರೆ. 'ಅಜ್ಜಯ್ಯ'ನ ಭಕ್ತರಾದ ಅವರು ಈಚೆಗೆ 'ಅಜ್ಜ'ನಾಗಿಯೂ ಬಡ್ತಿ ಪಡೆದಿದ್ದಾರೆ. ಸರ್ಕಾರ ನಡೆಸುವ ಪಕ್ಷಗಳು ಬದಲಾಗುತ್ತಲೇ ಇದ್ದರೂ ನಾಡಿನ ಜನರ 'ಪ್ರಾರ್ಥನೆ'ಗಳು ಫಲಿಸಿಲ್ಲ. ಅದನ್ನು ಈಡೇರಿಸುವ ಗುರುತರ ಹೊಣೆ ಈಗ ಶಿವಕುಮಾರ್ ಮೇಲಿದೆ.

ಮುಖ್ಯಮಂತ್ರಿಯಾದ ದಿನದಿಂದ ಒಂದು ಚಣ ಬಿಡುವಿಲ್ಲದಂತೆ ಓಡಾಟ, ಸಭೆಗಳಲ್ಲಿ ಸಕ್ರಿಯರಾಗಿ ಇರುವ ಶಿವಕುಮಾರ್, ಆರಂಭದಲ್ಲಿಯೇ ಹೊಸ ಭರವಸೆಗಳನ್ನು ಬಿತ್ತಿದ್ದಾರೆ. ಬಿತ್ತಿದ ಬೀಜ ಕೊನರಿ, ಗಿಡವಾಗಿ, ಮರವಾಗಿ ಫಲ ಕೊಟ್ಟಾಗಲಷ್ಟೇ ಜನರ ವಿಶ್ವಾಸ ಉಳಿದೀತು.

ಹಿರಿಯ ಅಧಿಕಾರಿಗಳು ಹಾಗೂ ಜಿಲ್ಲಾಡಳಿತದ ಮುಖ್ಯಸ್ಥರ ಜತೆ ಶಿವಕುಮಾರ್ ಸಭೆ ನಡೆಸಿದರು. ಅಧಿಕಾರಿಗಳ ಮುಂದೆ ಕುಳಿತು 'ಕಟ್ಟುನಿಟ್ಟಿನ' ಆದೇಶ ಮಾಡುವುದು ಸಾಮಾನ್ಯ. ಅದು ಜಾರಿಗೆ ಬಂದಿರುವುದು ಕಡಿಮೆ. ಅಧಿಕಾರಿಗಳ ಸಭೆಗೆ ಹಾಜರಾದ ಶಿವಕುಮಾರ್, ಎಲ್ಲರ ಬಳಿ ಹೋಗಿ ಕೈ ಮುಗಿದು, ಅವರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವತ್ತ ಹೆಜ್ಜೆ ಇಟ್ಟರು. ಇದು ಸೌಜನ್ಯದ ನಡೆ. ಆಡಳಿತದ ದಕ್ಷತೆಗೆ ಅದಷ್ಟೇ ಸಾಲದು. 'ಯಾರೊಬ್ಬರೂ ₹10 ಲಂಚ ಕೊಡಬೇಡಿ' ಎಂಬ ಶಿವಕುಮಾರ್ ಮಾತು ಆಯಕಟ್ಟಿನ ಹುದ್ದೆ ನೀಡುವಾಗಲೂ ಕೃತಿಗಿಳಿಯಬೇಕು. ಲಂಚ ಕೊಟ್ಟರೆ, ಹುದ್ದೆ ಸಿಗುವುದಿಲ್ಲ ಎಂಬುದು ಅಧಿಕಾರಿಗಳಿಗೆ ಮನವರಿಕೆ ಆಗಬೇಕು. ಆಗ ಮಾತ್ರ ಅಧಿಕಾರಿ ವರ್ಗದಲ್ಲಿ, ಮರೆತೇ ಹೋದಂತಿರುವ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಮೊಳಕೆಯೊಡೆಯುತ್ತದೆ. ಆಯಕಟ್ಟಿನ ಯಾವುದೇ ಹುದ್ದೆಗೆ ₹10 ಲಕ್ಷದಿಂದ ₹10 ಕೋಟಿಯವರೆಗೆ ಕೊಟ್ಟು ಹೋಗಬೇಕೆಂಬ ಪರಿಸ್ಥಿತಿ ಮುಂದುವರಿದರೆ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂಬಂತಾಗುತ್ತದೆ.

'ಭ್ರಷ್ಟಾಚಾರವನ್ನು ಶೂನ್ಯಕ್ಕೆ ಇಳಿಸಿ ಲಂಚಮುಕ್ತ ಕರ್ನಾಟಕ ನಿರ್ಮಾಣವೇ ನನ್ನ ಗುರಿ. ಸಚಿವರು–ಶಾಸಕರು ಲಂಚ ಕೇಳಿದರೂ ಕರೆ ಮಾಡಿ. ಅದಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ದೂರವಾಣಿ ಸಂಖ್ಯೆ ನೀಡಲಾಗುವುದು' ಎಂದು ಮತ್ತೊಂದು ಹೇಳಿಕೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಇಂತಹ ಕೆಲಸಕ್ಕೆ ಇಂತಿಷ್ಟೇ ಲಂಚ ಎಂಬುದು ನಿಗದಿಯಾಗಿ ಬಹುಕಾಲವಾಗಿದೆ. ಗ್ರಾಮ ಪಂಚಾಯಿತಿ, ತಹಶೀಲ್ದಾರ್, ಉಪ ನೋಂದಣಾಧಿಕಾರಿ, ಪೊಲೀಸ್, ಸಾರಿಗೆ, ಅಬಕಾರಿ, ಪುರಸಭೆ–ಪಾಲಿಕೆ ಹೀಗೆ ಯಾವುದೇ ಕಚೇರಿಯಲ್ಲಿ ಲಂಚ ಕೊಡದೇ ಕೆಲಸ ಆಗುವುದಿಲ್ಲ ಎಂಬುದು ನಿತ್ಯವೂ ಕಚೇರಿಗೆ ಅಲೆದು ಸುಸ್ತೆದ್ದು ಹೋಗಿರುವ ಬಡ ಬೋರೇಗೌಡನ ಅಳಲು. ಲಂಚ ಕೊಟ್ಟು ಹುದ್ದೆ ಗಿಟ್ಟಿಸಿದರೆ, ಮತ್ತೊಂದು ವರ್ಗಾವಣೆಯ ಹೊತ್ತಿಗೆ ಹೆಚ್ಚಾಗಿರುವ ಲಂಚದ ಮೊತ್ತ ಹೊಂದಿಸಲು ಕಾಸು ಮಾಡಲೇಬೇಕು. ಹುದ್ದೆಗೆ ಲಂಚ ಕೊಡುವುದು ತಪ್ಪಿದರಷ್ಟೇ ಭ್ರಷ್ಟಾಚಾರ ನಿಯಂತ್ರಣಕ್ಕೆ ಬಂದೀತು. ಇದೊಂದು ಕೆಲಸ ಮೊದಲಾದರೆ, ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟಾರು.

ಕಾಂಗ್ರೆಸ್ ಸರ್ಕಾರದ ಮೊದಲ ಮೂರು ವರ್ಷ 'ಗ್ಯಾರಂಟಿ'ಗಳೇ ವಿಜೃಂಭಿಸಿದವು. ಬೆಲೆ ಏರಿಕೆಯ ಭಾರದಿಂದ ಕುಸಿದೇ ಹೋಗುವಂತಿದ್ದ ಬಡ–ಮಧ್ಯಮ ವರ್ಗದ ಕುಟುಂಬಗಳು ತುಸು ನೆಮ್ಮದಿ ಕಾಣಲು ಈ ಯೋಜನೆ ಆಸರೆಗೋಲಾಯಿತು. ಇದೇ ಹೊತ್ತಿನೊಳಗೆ ಅಭಿವೃದ್ಧಿ ಕಾಮಗಾರಿಗಳು ನಗಣ್ಯ ಎನಿಸಿದವು. ಆಡಳಿತಾತ್ಮಕವಾಗಿ ಮಾಡಲೇಬೇಕಾದ ಬದ್ಧವೆಚ್ಚದ ಜತೆಗೆ, 'ಗ್ಯಾರಂಟಿ'ಗಳಿಗೆ ಹಣ ಹೊಂದಿಕೆ ಹಾಗೂ ಹೆಚ್ಚುತ್ತಿರುವ ಸಾಲದ ಮೇಲಿನ ಬಡ್ಡಿ ಪಾವತಿಯ ಹೊರೆಯೂ ಇದಕ್ಕೆ ಕಾರಣವಿದ್ದೀತು. ಆದರೆ, ಜನಪ್ರಿಯ ಯೋಜನೆಗಳ ಜತೆಗೆ ರಾಜ್ಯವನ್ನು ಅಭಿವೃದ್ಧಿ ದಿಕ್ಕಿನತ್ತ ಕೊಂಡೊಯ್ಯಲು ಉತ್ಪಾದಕತೆ ಹೆಚ್ಚಿಸುವ, ಉದ್ಯೋಗ ಸೃಷ್ಟಿಯ ಯೋಜನೆಗಳು ಅಷ್ಟೇ ಮಹತ್ವದ್ದಾಗಿವೆ. ಇದಕ್ಕೆ ಪೂರಕವಾಗಿ ಮೂಲಸೌಕರ್ಯವೂ ಹೆಚ್ಚಳವಾಗಬೇಕಿದೆ. ಇನ್ನುಳಿದ ಅವಧಿ ಈ ಸವಾಲನ್ನು ಸರ್ಕಾರದ ಮುಂದೆ ಒಡ್ಡಲಿದೆ. ಇದನ್ನು ಶಿವಕುಮಾರ್ ಹೇಗೆ ಹಾಯಲಿದ್ದಾರೆ ಎಂಬುದು ಕುತೂಹಲ.

> ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರ ಬಗ್ಗೆ ನಾಡಿನ ನಿರೀಕ್ಷೆ ದೊಡ್ಡದಿದೆ. ಅದಕ್ಕೆ ತಕ್ಕಹಾಗೆ ಅವರ ಆರಂಭಿಕ ನಡೆಯೂ ಕುತೂಹಲ ಹುಟ್ಟಿಸುವಂತಿದೆ. ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಪ್ರಯೋಗಗಳಿಗೆ ಹೆಚ್ಚು ಅವಕಾಶವಿಲ್ಲದೆ, ನೇರವಾಗಿ ಚುರುಕು ಆಡಳಿತ ನೀಡಬೇಕಾದ ಅನಿವಾರ್ಯತೆ ಅವರದ್ದಾಗಿದೆ.

ಏಕೆಂದರೆ, 2028ರ ಮೇ ಆರಂಭದಲ್ಲೇ ವಿಧಾನಸಭೆ ಚುನಾವಣೆಯನ್ನು ಎದುರುಗೊಳ್ಳಬೇಕಿದೆ. ಶಿವಕುಮಾರ್‌ಗೆ ಲಭ್ಯವಾಗುವ ಸುಮಾರು ಎರಡು ವರ್ಷಗಳಲ್ಲಿನ ಕೊನೆಯ ಆರು ತಿಂಗಳು ಚುನಾವಣೆಯತ್ತ ಕೇಂದ್ರೀಕೃತವಾಗಲಿದೆ. ಈ ಮಧ್ಯೆ, ಎರಡು ಕ್ಷೇತ್ರದ ಉಪಚುನಾವಣೆಗಳು, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ, ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆಗಳನ್ನು ನಡೆಸಲೇಬೇಕಿದೆ. ಇವುಗಳ ನಡುವೆಯೇ ಉತ್ತಮ ಆಡಳಿತ ನೀಡದಿದ್ದರೆ ಮುಂದಿನ ಅವಧಿಗೆ ಮುಖ್ಯಮಂತ್ರಿಯಾಗುವ ಶಿವಕುಮಾರ್ ಕನಸು ಈಡೇರಿಕೆಯ ಹಾದಿ ಜಟಿಲವಷ್ಟೇ ಅಲ್ಲ, ದುರ್ಗಮ ಕೂಡ.

ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯನವರ ಕಾಲದಲ್ಲಿ ಕುಟುಂಬಸ್ಥರ ಹಸ್ತಕ್ಷೇಪದ ಬಗ್ಗೆ ತೀವ್ರತರದ ಆಕ್ಷೇಪಗಳಿದ್ದವು. ಆಡಳಿತ ಪಕ್ಷದ ಶಾಸಕರೇ ಈ ಬಗ್ಗೆ ತಕರಾರು ಹೊರಹಾಕಿದ್ದುಂಟು. ಶಿವಕುಮಾರ್ ಅವರ ಕುಟುಂಬದಲ್ಲಿಯೂ ಪ್ರಭಾವಿಗಳೇ ಇದ್ದಾರೆ. ಕುಟುಂಬದ 'ಬಂಧ'ವು ಸೋಕದಂತೆ ಸರ್ಕಾರದ ವರ್ಚಸ್ಸು ಕಾಪಾಡಬೇಕಾದರೆ ಸಚಿವರಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕಾದುದು ಆದ್ಯ ಕೆಲಸ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಹಿರಿಯ–ಕಿರಿಯರಿಗೆ ಪ್ರಾತಿನಿಧ್ಯದ ಸಮತೋಲನ ಇತ್ತು. ಹಿರಿಯರಿಗೆ ಹೋಲಿಸಿದರೆ ಕಿರಿಯರೇ ಅತ್ಯಂತ ಉತ್ಸಾಹದಿಂದ ಕೆಲಸ ಮಾಡಿ, ಇಲಾಖೆಯಲ್ಲಿ ಸುಧಾರಣೆಯ ಪರ್ವ ಆರಂಭಿಸಿದ್ದರು. ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಪ್ರಿಯಾಂಕ್ ಖರ್ಗೆ, ಎಂ.ಸಿ. ಸುಧಾಕರ್, ಶರಣ ಪ್ರಕಾಶ ಪಾಟೀಲ, ಜಮೀರ್ ಅಹಮದ್ ಖಾನ್, ಈಶ್ವರ ಖಂಡ್ರೆ ಅವರೆಲ್ಲ ಹಲವು ಕ್ರಮಗಳ ಮೂಲಕ ಆಡಳಿತಕ್ಕೆ ಚೈತನ್ಯ ತುಂಬುವ ಯತ್ನ ಮಾಡಿದ್ದರು. ಇವರಲ್ಲಿ ಕೆಲವರು ಸಂಪುಟಕ್ಕೆ ಸೇರಿದರೂ ಉಳಿದವರು ಹೊರಗಿದ್ದಾರೆ. ಹಿರಿಯರ ಅನುಭವದ ಜತೆಗೆ, ಕಿರಿಯರು ತರುವ ಕಿರೀಟವೂ ಸರ್ಕಾರಕ್ಕೆ ಮೆರುಗು ತರುತ್ತದೆ. ಸಮುದಾಯವನ್ನು ಪ್ರಭಾವಿಸಬಹುದಾದ ನಾಯಕರನ್ನು ಒಳಗೊಳ್ಳದೇ ಇದ್ದರೆ ಸರ್ಕಾರ ಎಲ್ಲರಿಗೂ ಸಮಾನವೆಂಬ ಭಾವವನ್ನು ಮೂಡಿಸದು.

ದೇಶದ ಅತಿ ಶ್ರೀಮಂತ ಶಾಸಕರಲ್ಲಿ ಎರಡನೆಯವರಾಗಿದ್ದ ಶಿವಕುಮಾರ್, ಅತಿ ಹೆಚ್ಚು ಸಂಪತ್ತು ಹೊಂದಿದ ಮುಖ್ಯಮಂತ್ರಿಗಳ ಪೈಕಿ ಮೊದಲ ಸ್ಥಾನ ದಲ್ಲಿದ್ದಾರೆ. ಅವರ ಘೋಷಿತ ಆಸ್ತಿ ₹1,413 ಕೋಟಿ. ಹಾಗಿರುವಾಗ, ಲಂಚಮುಕ್ತ ಆಡಳಿತ ನಡೆಸಲು ಸಾಧ್ಯವಿದೆ. ತಮ್ಮ ಕಾರ್ಯವೈಖರಿಯಲ್ಲಿ ಮುಖ್ಯಮಂತ್ರಿ ಅದನ್ನು ಪಾಲಿಸಿದರೆ ಸಚಿವರೂ ಸರಿದಾರಿಯಲ್ಲಿ ನಡೆಯುವುದು ಅನಿವಾರ್ಯ.

ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ'ಯಲ್ಲಿ ಸಭಾಪರ್ವದಲ್ಲಿ ಹೀಗೊಂದು ಪ್ರಸಂಗ ಬರುತ್ತದೆ. ಯುದ್ಧವೆಲ್ಲ ಮುಗಿದ ಮೇಲೆ ಯುಧಿಷ್ಠಿರ ರಾಜನಾಗಿ ಅಧಿಕಾರ ವಹಿಸಿಕೊಳ್ಳುತ್ತಾನೆ. ಆಗ ಒಡ್ಡೋಲಗಕ್ಕೆ ಆಗಮಿಸಿದ ನಾರದ, 'ಸಂಪತ್ತನ್ನು ಶಾಶ್ವತವೆಂದು ನೆಚ್ಚಿಕೊಳ್ಳದಿರು, ಮದದ ಬೆಂಕಿಯ ಉರಿಯಲ್ಲಿ ಬೇಯದಿರು. ಸತ್ಯವನ್ನು ಬಿಟ್ಟು ಚಲಿಸದಿರು, ಅಸತ್ಯವನ್ನು ಮೆಚ್ಚದಿರು, ಪರರ ಉತ್ತಮ ಗುಣವನ್ನು ಮುಚ್ಚಿಡದಿರು' ಎಂದು ಕಿವಿಮಾತು ಹೇಳುತ್ತಾನೆ. 'ಮಾನವಂತರನ್ನು ಧಿಕ್ಕರಿಸದೆ, ಅಯೋಗ್ಯರನ್ನು ಮನ್ನಿಸದೇ ಇರು. ಯೋಗ್ಯರನ್ನು ಸತ್ಕರಿಸು. ಪರನಿಂದೆ ಆಡುತ್ತಲೇ ಇರುವ ವಿಕಾರಿಗಳನ್ನು ಆಪ್ತರನ್ನಾಗಿ ಮಾಡಿಕೊಳ್ಳದಿರು, ಆಪ್ತರಾಗಲು ಯೋಗ್ಯರಲ್ಲದವರನ್ನು ದೂರವಿರಿಸು' ಎಂದೂ ಸಲಹೆ ನೀಡುತ್ತಾನೆ.

ಯಾರೇ ಅಧಿಕಾರಕ್ಕೆ ಏರಲಿ, ಅವರ ಸುತ್ತ ಅಪಮಾರ್ಗಿಗಳು ಠಳಾಯಿಸುತ್ತಾರೆ; ಅವರನ್ನು ನೋಡಿ ಸಜ್ಜನರು ದೂರ ಸರಿಯುತ್ತಾರೆ. ಈ ಎಚ್ಚರ ಇದ್ದರಷ್ಟೇ, ನಾಯಕನೊಬ್ಬ ಜನಹಿತದ ಮಾರ್ಗದಲ್ಲಿ ನಡೆಯುತ್ತಾನೆ. ಅದು ಪಾಲನೆಯಾದರಷ್ಟೇ, ಶಿವಕುಮಾರ್ ಒಳ್ಳೆಯ ಆಡಳಿತಗಾರರಾಗಲು ಸಾಧ್ಯ.

ಉಪ ಮುಖ್ಯಮಂತ್ರಿಯಾಗಿದ್ದಾಗ ಶಿವಕುಮಾರ್ ಅವರು ಬಿಡದಿಯಲ್ಲಿ ಟೌನ್‌ಶಿಪ್ ಅಥವಾ ಎಐಸಿಟಿ ನಿರ್ಮಿಸುವ ಗುರಿ ಹಾಕಿಕೊಂಡರು. 'ಬಿಟ್ಟರೂ ಬಿಡದೀ ಮಾಯೆ' ಎಂಬಂತೆ ಈಗ ಅದನ್ನು ಅವರು ತಮ್ಮ ಕನಸಿನ ಕೂಸಂತೆ ಸಾಕಲೇಬೇಕಿದೆ. ಆದರೆ, ಫಲವತ್ತಾದ ರೈತರ ಭೂಮಿಯನ್ನು ಹೊರಗಿಟ್ಟು ಯೋಜನೆ ರೂಪಿಸುವತ್ತ ಮತ್ತೊಮ್ಮೆ ಆಲೋಚಿಸುವುದು ಋಜುಮಾರ್ಗ.

'ಸಾಕ್ಷಿಗುಡ್ಡೆ ಬಿಟ್ಟುಹೋಗಬೇಕು' ಎಂದು ಶಿವಕುಮಾರ್ ಹೇಳುತ್ತಿರುತ್ತಾರೆ. ಎಸ್. ನಿಜಲಿಂಗಪ್ಪ ಅವರು ಶರಾವತಿ ಯೋಜನೆ, ದೇವರಾಜ ಅರಸು ಅವರು ಉಳುವವನೆ ಹೊಲದೊಡೆಯ ಸೇರಿದಂತೆ ಅನೇಕ ಕಾನೂನುಗಳನ್ನು ಜಾರಿಗೆ ತಂದರು. ನನೆಗುದಿಗೆ ಬಿದ್ದಿದ್ದ ಆಲಮಟ್ಟಿ ಯೋಜನೆಗೆ 'ಕೃಷ್ಣಾ ಬಾಂಡ್' ಮೂಲಕ ಹಣ ಸಂಗ್ರಹಿಸಿದ ಎಚ್.ಡಿ. ದೇವೇಗೌಡರು ಯೋಜನೆ ಚುರುಕುಗೊಳಿಸಿದರು. ಶಿವಕುಮಾರ್ ಅವರ ತವರು ಜಿಲ್ಲೆಯವರಾದ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ, ಅವರದ್ದೇ ಸಮುದಾಯವರಾದ ಎಸ್.ಎಂ. ಕೃಷ್ಣ ವಿಕಾಸಸೌಧ ನಿರ್ಮಿಸಿದರು. ಬಿ.ಎಸ್. ಯಡಿಯೂರಪ್ಪ ಬೆಳಗಾವಿಯ ಸುವರ್ಣ ಸೌಧಕ್ಕೆ ಚಾಲನೆ ಕೊಟ್ಟರು. ಕರ್ನಾಟಕವನ್ನು ಆಳಿದ ಅನೇಕರು ಹೀಗೆ ಹೆಗ್ಗುರುತುಗಳನ್ನು ಉಳಿಸಿ ಹೋಗಿದ್ದಾರೆ.

ಹಿಂದಿನವರು ದೂರದೃಷ್ಟಿಯಿಂದ ಮುಖ್ಯಮಂತ್ರಿ ವಾಸಕ್ಕಾಗಿ 'ಕಾವೇರಿ', ಗೃಹ ಕಚೇರಿಗಾಗಿ 'ಕೃಷ್ಣಾ' ನಿರ್ಮಿಸಿದ್ದರು. ಬಳಿಕ ನಿವಾಸಕ್ಕಾಗಿ 'ಅನುಗ್ರಹ'ವನ್ನೂ ಕಟ್ಟಲಾಯಿತು. ಸರ್ಕಾರಿ ಅತಿಥಿಗೃಹವಾಗಿ ಕುಮಾರಕೃಪಾ ಇತ್ತು. ಹೀಗಿರುವಾಗ, ಮುಖ್ಯಮಂತ್ರಿ ಕಚೇರಿಗಾಗಿ ಕುಮಾರಕೃಪಾವನ್ನು ಒಡೆಸಿ ಹಾಕಲು ಮುಂದಾಗಿರುವುದು ಸರಿಯಲ್ಲ. ಇರುವ ಕಟ್ಟಡಗಳನ್ನು ಹಾಗೆಯೇ ಉಳಿಸಿ ಚೆಂದಗಾಣಿಸಬೇಕು. ಕಟ್ಟುವುದು ಮುಖ್ಯವೇ ಹೊರತು ಕೆಡಹುವುದಲ್ಲ. 'ಸಾಕ್ಷಿಗುಡ್ಡೆ' ಬಿಟ್ಟು ಹೋಗದಿದ್ದರೂ ಪರವಾಗಿಲ್ಲ, ಗುಡ್ಡೆ ಅಳಿಸಿ ಹೋಗುವುದಂತೂ ತರವಲ್ಲ.

ವಾಚಕರ ವಾಣಿ

ಗಣತಿ: ಗೌರವಧನ ಬಿಡುಗಡೆಗೆ ತಡವೇಕೆ?

ಪ್ರಥಮ ಹಂತದ ಮನೆಗಣತಿ ಹಾಗೂ ಜನಗಣತಿ ಪ್ರಕ್ರಿಯೆ ಮುಗಿದು ತಿಂಗಳು ಕಳೆದಿದೆ. ಇದರಲ್ಲಿ ಪಾಲ್ಗೊಂಡಿದ್ದ ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ ಇನ್ನೂ ಗೌರವಧನ ಬಿಡುಗಡೆಯಾಗಿಲ್ಲ. ಸಕಾಲದಲ್ಲಿ ಗೌರವಧನ ನೀಡುವುದಾಗಿ ಘೋಷಿಸಿದ್ದ ಕೇಂದ್ರ ಸರ್ಕಾರವು ಮಾತು ಮರೆತಿದೆ. ತ್ವರಿತವಾಗಿ ಗೌರವಧನ ಬಿಡುಗಡೆ ಮಾಡಿದಾಗಷ್ಟೇ ಎರಡನೇ ಹಂತದ ಗಣತಿ ಸಾಂಗವಾಗಿ ನಡೆಯಲು ಸಾಧ್ಯ. ಅಲ್ಲದೆ, ರಾಜ್ಯ ಸರ್ಕಾರವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸ್ವೀಕರಿಸಿದೆ. ಆದರೆ, ಬಹಳಷ್ಟು ಗಣತಿದಾರರಿಗೆ ಗೌರವಧನ ಬಿಡುಗಡೆಯಾಗಿಲ್ಲ. ಕೆಲವರ ಹೆಸರು ಪಟ್ಟಿಯಿಂದ ಬಿಟ್ಟುಹೋಗಿದೆ; ಸೇರ್ಪಡೆಗೊಳಿಸುವ ಕೆಲಸವಾಗುತ್ತಿಲ್ಲ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಪಾಲಿಕೆಗಳಿಗೆ ಗಣತಿದಾರರು ನಿತ್ಯವೂ ಅಲೆಯುವಂತಾಗಿದೆ.

ವಿ.ಎಸ್. ಕುಮಾರ್, ಬೆಂಗಳೂರು

ಲಂಚ: ರಾಜ್ಯ ಪೊಲೀಸರ ಮಾನ ಹರಾಜು

ವರದಕ್ಷಿಣೆ ಕಿರುಕುಳ ಪ್ರಕರಣದಿಂದ ಹೆಸರು ಕೈಬಿಡಲು ಆರೋಪಿಗಳ ಕುಟುಂಬದಿಂದ ಲಂಚ ಪಡೆಯುತ್ತಿದ್ದ ಬೆಂಗಳೂರಿನ ಎಚ್‌ಎಎಲ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್‌ಸ್ಪೆಕ್ಟರ್ ಸೇರಿ ಮೂವರು ಸಿಬ್ಬಂದಿಯನ್ನು ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳ ಬಂಧಿಸಿದೆ. ರಾಜ್ಯದ ಪೊಲೀಸರ ಆತ್ಮಸ್ಥೈರ್ಯಕ್ಕೆ ಧಕ್ಕೆ ತರುವ ಪ್ರಕರಣ ಇದಾಗಿದೆ. ಜೊತೆಗೆ, ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಪೊಲೀಸರ ಮಾನವನ್ನೂ ಹರಾಜು ಹಾಕಿದೆ. ಸಾಮಾಜಿಕ ಜಾಲತಾಣಗಳಲ್ಲಿ ತಮ್ಮನ್ನು ನಿಂದಿಸಿ ಧಮಕಿ ಹಾಕಿದವರನ್ನು ಹೆಡೆಮುರಿ ಕಟ್ಟಲು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಪೊಲೀಸರಿಗೆ ಸೂಚಿಸಿದ್ದಾರೆ. ಇಲಾಖೆಯಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತಾರೆ? ಯಾರಿಗೆ ನಿರ್ದೇಶಿಸುತ್ತಾರೆ?

ಪಿ.ಜೆ. ರಾಘವೇಂದ್ರ, ಮೈಸೂರು

ಬಸ್‌ಪಾಸ್: ದೂರದ ಮಿತಿ ಹೆಚ್ಚಾಗಲಿ

ರಾಜ್ಯ ಸರ್ಕಾರವು ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಬಸ್‌ಪಾಸ್ ಸೌಲಭ್ಯ ಕಲ್ಪಿಸಿರುವುದು ಸರಿಯಷ್ಟೆ. ಆದರೆ, ಸಾರಿಗೆ ನಿಗಮಗಳು ಪಾಸ್ ವಿತರಿಸಲು ಅನುಸರಿಸುತ್ತಿರುವ 60 ಕಿ.ಮೀ. ದೂರದ ಮಿತಿಯಲ್ಲಿ ಬದಲಾವಣೆ ಮಾಡಿಲ್ಲ. ಆದರೆ, ಹಲವು ವಿದ್ಯಾರ್ಥಿಗಳು 100 ಕಿ.ಮೀ.ಗಿಂತಲೂ ಹೆಚ್ಚಿನ ದೂರದಿಂದ ಶಾಲಾಕಾಲೇಜುಗಳಿಗೆ ಹೋಗುತ್ತಾರೆ. ಅವರೆಲ್ಲರೂ ತಮ್ಮೂರುಗಳಿಂದ ಹೋಗುವಾಗ ಮತ್ತು ಬರುವಾಗ ಪಾಸ್ ನಿಗದಿಯಾಗಿರುವ ಸ್ಥಳದವರೆಗೆ ಟಿಕೆಟ್ ಪಡೆದು ಸಂಚರಿಸಬೇಕಿದೆ. ಇದು ಆರ್ಥಿಕ ಹೊರೆಯಾಗಿದೆ. ದೂರದ ಮಿತಿ ಹೆಚ್ಚಿಸಿದರೆ ಅನುಕೂಲವಾದೀತು.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ

ಕಾಡುಪ್ರಾಣಿಗಳ ಉದರಕ್ಕೆ ಪ್ಲಾಸ್ಟಿಕ್ ವಿಷ

ಚಾಮರಾಜನಗರದ ಮಲೆಮಹದೇಶ್ವರ ಬೆಟ್ಟದ ಅರಣ್ಯದಂಚಿನಲ್ಲಿ ಸುರಿದಿರುವ ಪ್ಲಾಸ್ಟಿಕ್ ಕಸದ ರಾಶಿಯಲ್ಲಿ ಆನೆಯೊಂದು ಆಹಾರ ಅರಸುತ್ತಿರುವ ಫೋಟೊ (ಪ್ರ.ವಾ., ಜೂನ್ 15) ನೋಡಿ ಮನಸ್ಸನ್ನು ವಿಷಾದ ಆವರಿಸಿತು. ವನ್ಯಜೀವಿಗಳನ್ನು ಅವುಗಳ ಆವಾಸದಲ್ಲಿ ನೆಮ್ಮದಿಯಾಗಿರಲು ನಾವು ಬಿಡುತ್ತಿಲ್ಲ. ಅರಣ್ಯ ಒತ್ತುವರಿ, ಗಣಿಗಾರಿಕೆ, ರೆಸಾರ್ಟ್, ಕಳ್ಳಬೇಟೆಯಿಂದ ಅವುಗಳ ಬದುಕಿಗೆ ಸಂಚಕಾರ ತಲೆದೋರಿದೆ. ಮತ್ತೊಂದೆಡೆ ಪರಿಸರ ಪ್ರವಾಸೋದ್ಯಮದ ಹೆಸರಿನಲ್ಲಿ ಅವುಗಳ ಬದುಕು ಅಡಕತ್ತರಿಗೆ ಸಿಲುಕಿದೆ. ಕೊಳ್ಳುಬಾಕ ಸಂಸ್ಕೃತಿಯ ಫಲವಾಗಿ ನಗರ ಪ್ರದೇಶಗಳಲ್ಲಿನ ತ್ಯಾಜ್ಯ ಕಾಡಂಚಿಗೆ ತಲುಪುತ್ತಿರುವುದು ಕಳವಳಕಾರಿ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

ಸರ್ವರ್ ಸಮಸ್ಯೆ: ಶಿಕ್ಷಕರಿಗೆ 'ಕರ್ತವ್ಯ'ದ ಬರೆ

ಸರ್ಕಾರಿ ನೌಕರರ ಸಮಯಪಾಲನೆಗೆ 'ಕರ್ತವ್ಯ' ಆ್ಯಪ್‌ನ (ಕೆಎಎಂಎಸ್) ಬೇಲಿ ಕಟ್ಟಲಾಗಿದೆ. ಕಚೇರಿ ಸ್ಥಳದಲ್ಲಿ ನಿಗದಿತ ಸಮಯದೊಳಗೆ ಮತ್ತು ಸಮಯದವರೆಗೆ ಇರುವುದನ್ನು ಮುಖಚಹರೆ ಮೂಲಕ ದೃಢೀಕರಿಸುವ ವ್ಯವಸ್ಥೆ ಇದು. ಆದರೆ, ಶಿಕ್ಷಕರಿಗೆ ಸಂಬಂಧಿಸಿದಂತೆ ಕೆಲವು ಗೊಂದಲಗಳಿವೆ. ಶಿಕ್ಷಕರಾದವರು ಸಮಯ ಪಾಲನೆ ಮಾಡಿದರೆ ಸಾಲದು; ಉಳಿದ ಸಮಯದಲ್ಲಿ ಮಕ್ಕಳೊಂದಿಗೆ ಎಷ್ಟುಹೊತ್ತು ಕ್ರಿಯಾಶೀಲರಾಗಿ ಸಮಯ ಕಳೆಯುತ್ತಾರೆ ಎಂಬುದು ಮುಖ್ಯ. ಆದರೆ, ಬಹುಪಾಲು ಶಿಕ್ಷಕರು ಬೆಳಗ್ಗೆ 9:30 ಗಂಟೆಯೊಳಗೆ ಶಾಲೆ ಬಳಿ ಇರಬೇಕು; ಸಂಜೆ 4:30ರ ಬಳಿಕ ಮನೆಗೆ ತೆರಳಬೇಕಿದೆ. ಸರ್ವರ್ ನಿಧಾನಗತಿ ಯಲ್ಲಿ ಇರುವುದರಿಂದ ಹಾಜರಾತಿ ದಾಖಲಿಸಲು ಸಮಸ್ಯೆ ಆಗುತ್ತಿದೆ. ಬಹುಪಾಲು ಶಿಕ್ಷಕರು ಬೆಳಗ್ಗೆ 9:30ರಿಂದ ಬಹುಹೊತ್ತಿನವರೆಗೂ ಕೈಯಲ್ಲಿ ಮೊಬೈಲ್ ಹಿಡಿದು ಅದರೊಳಗಿನ ಕ್ಯಾಮೆರಾಕ್ಕೆ ಮುಖವೊಡ್ಡುವುದೇ ಕೆಲಸವಾಗಿದೆ. 'ಕರ್ತವ್ಯ' ತಪ್ಪಿದರೆ ಗೈರುಹಾಜರಿ ನಮೂದಾಗುತ್ತದೆ. ಸರ್ವರ್ ಅಪ್‌ಡೇಟ್ ಮಾಡಿದರೆ ಶಿಕ್ಷಕರಿಗೆ ಅನುಕೂಲವಾಗಲಿದೆ.

ಮಹೇಶ್ ಮುನಿಯಪ್ಪ, ಹೆಬ್ಬಾಳ

ಬಿಸಿಯೂಟ: ಜಾತಿ–ದ್ವೇಷದ ಲೇಪ ಬೇಡ

ಮಸ್ಕಿ ತಾಲ್ಲೂಕಿನ ಎಂ. ರಾಮಲದಿನ್ನಿ ಗ್ರಾಮದಲ್ಲಿ ಬಿಸಿಯೂಟದ ಸಿಬ್ಬಂದಿ ಮತ್ತು ಗ್ರಾಮಸ್ಥರ ನಡುವಿನ ವೈಯಕ್ತಿಕ ಕಲಹದಿಂದಾಗಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲ ಎಂಬುದು ವರದಿಯಾಗಿದೆ. ಈ ಜಟಾಪಟಿಯಲ್ಲಿ ತೊಂದರೆಗೆ ಸಿಕ್ಕಿಕೊಂಡು ಒದ್ದಾಡುತ್ತಿರುವುದು ಮಕ್ಕಳು ಮತ್ತು ಶಿಕ್ಷಕರು. ಅಡುಗೆ ಕಾಯಕ ಬರೀ ಕೆಲಸವಲ್ಲ; ಅದೊಂದು ಕಲೆ. ಇಷ್ಟವಿಲ್ಲದವರಿಗೆ ಅಡುಗೆ ಮಾಡುವುದಾಗಲೀ ಅದನ್ನು ಬಡಿಸುವುದಾಗಲೀ ಹೊರೆ ಎನಿಸುತ್ತದೆ. ಇಷ್ಟವಿಲ್ಲದವರಿಂದ ತಯಾರಾದ ಊಟವನ್ನು ಸೇವಿಸುವವರಿಗೆ ಅದು ರುಚಿ ಎನಿಸುವುದಿಲ್ಲ. ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಗ್ರಾಮಸ್ಥರು ಮತ್ತು ಅಡುಗೆ ಸಿಬ್ಬಂದಿಯು ವೈಯಕ್ತಿಕ ದ್ವೇಷವನ್ನು ಕೈಬಿಡಬೇಕು. ಕೆಲವೆಡೆ ಜಾತಿಯ ಕಾರಣವೊಡ್ಡಿ ಮಕ್ಕಳು ಬಿಸಿಯೂಟ ಸೇವಿಸದಿರುವ ಪ್ರಕರಣಗಳು ನಡೆದಿವೆ. ಸಾಮರಸ್ಯ ಕಾಯ್ದುಕೊಳ್ಳುವುದೇ ಇದಕ್ಕೆ ಮದ್ದು.

ಹರೀಶ್ ಹಂದನಕೆರೆ, ಬೆಂಗಳೂರು

ಚಾಟಿ

ಕನ್ನಡಿಗರಿಗೆ ದ್ರೋಹ

ನೈರುತ್ಯ ರೈಲ್ವೆಯು ಮತ್ತೆ ಕನ್ನಡವಿಲ್ಲದೆ ಪದೋನ್ನತಿ ಪರೀಕ್ಷೆ ನಡೆಸಲು ಮುಂದಾಗಿದೆ. ಇದು ಕನ್ನಡಿಗರ ಮೇಲೆ ಹೂಡಲಾಗಿರುವ ಮೋಸದ ಯುದ್ಧ; ಕನ್ನಡಿಗರ ಹಕ್ಕುಗಳನ್ನು ಹೊಸಕಿ ಹಾಕುವ ದ್ರೋಹ.

ಟಿ.ಎ. ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ, 'ಎಕ್ಸ್'ನಿಂದ

ಕಿಡಿನುಡಿ

ಬಿಜೆಪಿಯವರು ಗ್ಯಾರಂಟಿ ಯೋಜನೆಗಳನ್ನು ಮೊದಲ ದಿನದಿಂದಲೇ ವಿರೋಧಿಸುತ್ತಿದ್ದಾರೆ. ಮೊದಲು ಗ್ಯಾರಂಟಿ ಯೋಜನೆಗಳ ಜಾರಿಯೇ ಅಸಾಧ್ಯ ಎಂದರು. ಆನಂತರದ ದಿನಗಳಲ್ಲಿ, ಹಣಕಾಸಿನ ಕೊರತೆಯಿಂದ ಸರ್ಕಾರ ದಿವಾಳಿಯಾಗಲಿದೆ ಎಂದರು. ಈಗ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುವುದು ಎನ್ನುವ ಪುಕಾರು ಹಬ್ಬಿಸುತ್ತಿದ್ದಾರೆ. ಇದು ಅವರ ರಾಜಕೀಯ ಹತಾಶೆಯ ಪ್ರತೀಕ.

ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 16-6-2001

• ಪೌರಸಂಸ್ಥೆ ಅಧ್ಯಕ್ಷ, ಉಪಾಧ್ಯಕ್ಷ ಮೀಸಲು ನಿಗದಿ ಆದೇಶ ರದ್ದು

ಬೆಂಗಳೂರು, ಜೂನ್ 15– ರಾಜ್ಯದ ನಗರ ಪ್ರದೇಶದ 131 ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿಯನ್ನು ನಿಗದಿಪಡಿಸಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ನ್ಯಾಯಮೂರ್ತಿ ವಿ. ಗೋಪಾಲಗೌಡ ಇಂದು ರದ್ದುಗೊಳಿಸಿ ಮಹತ್ವದ ತೀರ್ಪು ನೀಡಿದ್ದಾರೆ.

ಹುಕ್ಕೇರಿಯ ಜನತಾದಳ (ಯು) ಶಾಸಕ ಉಮೇಶ ಕತ್ತಿ ಮತ್ತು ಇತರ ಅನೇಕರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ಅಂಗೀಕರಿಸಿದ ನ್ಯಾಯಮೂರ್ತಿಗಳು ಸರ್ಕಾರ ಈಗ ನಿಗದಿಗೊಳಿಸಿರುವ ಮೀಸಲಾತಿ ಸಂವಿಧಾನದ ವಿಧಿಗಳಿಗೆ ವಿರುದ್ಧವಾದುದು ಎಂದು ಅಭಿಪ್ರಾಯಪಟ್ಟರು.

ಆದರೆ, ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ಎಲ್ಲ ದುರ್ಬಲ ವರ್ಗಗಳಿಗೆ ಸಂವಿಧಾನಬದ್ಧವಾದ ಪ್ರಾತಿನಿಧ್ಯವನ್ನು ದೊರೆಯುವಂತೆ ಸರ್ಕಾರವು ನಿಯಮಾವಳಿ ರೂಪಿಸಬೇಕು ಎಂದು ಅವರು ಆದೇಶಿಸಿದರು.

75 ವರ್ಷಗಳ ಹಿಂದೆ

ಶನಿವಾರ, 16-6-1951

• ಡಾಕ್ಟರ್ ಲೋಹಿಯಾ ಮತ್ತಿತರರ ಬಂಧನ

ಸಾಗರ, ಜೂನ್ 15– ಸೋಷಲಿಸ್ಟ್ ಮುಖಂಡ ಡಾ. ರಾಮಮನೋಹರ ಲೋಹಿಯಾ ಅವರನ್ನು ಸಾಗರದಲ್ಲಿ ನಿನ್ನೆ ಮಧ್ಯರಾತ್ರಿ ನಂತರ 1 ಗಂಟೆಯಲ್ಲಿ ಪೊಲೀಸರು ಬಂಧಿಸಿದರು.

ನಿನ್ನೆಯ ದಿನ ಕಾಗೋಡು ರೈತ ಚಳವಳಿ ಸಂಬಂಧದ ಸೋಷಲಿಸ್ಟ್ ಸತ್ಯಾಗ್ರಹದಲ್ಲಿ ಲೋಹಿಯಾ ಅವರು ಭಾಗವಹಿಸಿದರು. ಸಾಗರದ ರೈಲ್ವೆ ನಿಲ್ದಾಣದ ವಿಶ್ರಾಂತಿ ಗೃಹದಲ್ಲಿ ರಾತ್ರಿ ಅವರನ್ನೂ ಖಾದ್ರಿ ಶಾಮಣ್ಣ, ಈಶ್ವರಪ್ಪ, ಗುರುರಾಜ್ ಮತ್ತು ಮುಲ್ಲಾ ಗೋವಿಂದರೆಡ್ಡಿಯವರನ್ನೂ ಬಂಧಿಸಲಾಯಿತು.

ಸತ್ಯಾಗ್ರಹದಲ್ಲಿ ಸುಮಾರು 500 ಮಂದಿ ರೈತರು ಭಾಗವಹಿಸಿದ್ದರು. ಶಾಂತ ರೀತಿಯಿಂದ ಸತ್ಯಾಗ್ರಹ ನಡೆಸಬೇಕೆಂದು ಲೋಹಿಯಾ ಅವರು ರೈತರಿಗೆ ಮನವಿ ಮಾಡಿಕೊಂಡರು.

ಚುರುಮುರಿ

ಚಿಗವ್ವನ ಚಕಮಕಿ

• ಡಿ.ಎಸ್.ಲಿಂಗರಾಜು

ತುರೇಮಣೆ ವಾಕಿಂಗಿಗೆ ಯಾಕೆ ಬರಲಿಲ್ಲ ಅಂತ ತಿಳಕೊಳ್ಳೋಕೆ ಮನೆತಕ್ಕೋದೆ. ಅಲ್ಲಿ ಚಿಗವ್ವ ಈವಯ್ಯನಿಗೆ ಮಕ್ಕೆ ಮಂಗಳಾರತಿ ಎತ್ತುತ್ತಿತ್ತು.

'ಏನಾತು ಚಿಗವ್ವ?' ಅಂದೆ.

'ಬಂದಾ ಮರಿ. ನೋಡಪ್ಪ ಸರ್ಕಾರ ನಮಗೆ ತಿಂಗಳಿಗೆ ಏಡು ಸಾವಿರ ಕಾಸು ಕೊಟ್ಟು, ಫ್ರೀ ಬಸ್ಸು ಬುಟ್ಟದೆ ಅಂತ ಓಡಾಕ್ಯಂದಿದ್ರೆ ಈವಯ್ಯ ನನ್ನ ಮೊಬೈಲಿಗೆ ಲೈವ್ ಮ್ಯಾಪಿಂಗು, ಜಿಪಿಎಸ್ ಲೊಕೇಶನ್ ಟ್ರಾಕಿಂಗ್ ಹಾಕಿ ಸಿಐಡಿ ಕೆಲಸ ಮಾಡ್ತಾವನೆ' ಚಿಗವ್ವ ಉರಕಂತು.

'ಅದ್ಯಾಕಣ್ಣೆ ಇವೆಲ್ಲಾ ಮಾಡ್ತುದ್ದೆ?' ಅಂತ ಕೇಳಿದೆ.

'ಕಾಮಗಾರಿ ಯಂಗೆ ನಡೀತಾ ಅದೆ ಅಂತ ತಿಳಕಣಕೆ ಮ್ಯಾಪಿಂಗು, ಟ್ರಾಕಿಂಗು ಮಾಡಬಕು ಅಂತ ಸರ್ಕಾರ ಹೇಳ್ಯದಲ್ಲೊ' ತುರೇಮಣೆ ಸಮರ್ಥಿಸಿಕೊಂಡರು.

'ಇಂಥಾ ಬ್ಯಾಳೆ ಮಾತಾಡಕ್ಕೆ ಸರಿ ನೀನು. ಮೊನ್ನೆ 'ಪಲಾವ್ ಮಾಡ್ತೀನಿ ಅಂತ ವರ್ಕ್ ಆರ್ಡರ್ ತಕ್ಕಂದಿದ್ದಲ್ಲಮ್ಮಿ, ಚಿತ್ರಾನ್ನ ಯಾಕೆ ಸಪ್ಲೈ ಮಾಡಿದ್ದಯ್?' ಅಂತಂದೆ.

'ಗ್ಯಾಸು, ಅಕ್ಕಿ, ಎಣ್ಣೆ ರೇಟು ಜಾಸ್ತಿಯಾಗಿರದು ಕಾಣಕ್ಕುಲ್ವಾ?' ಚಿಗವ್ವ ದೂರಿತು.

'ಮೊನ್ನೆ ತರಕಾರಿ ತರಕ್ಕೋಗಿದ್ದಳವಾ ಇವಳ ಮೊಬೈಲು ಚಿನ್ನದ ಅಂಗಡಿ ತಾವ ಲೊಕೇಶನ್ ತೋರಿಸ್ತಿತ್ತು. ಯಾಕಮ್ಮಿ ಅಂದ್ರೆ, ಭವಿಷ್ಯಕ್ಕೆ ಹೂಡಿಕೆ ಮಾಡೋದರ ಬಗ್ಗೆ ಚರ್ಚೆ ಮಾಡ್ತಿದ್ದೆ ಅನ್ನದಾ?' ತುರೇಮಣೆ ಉವಾಚ.

'ದಿಟವಾ ಚಿಗವ್ವ?' ಕೇಳಿದೆ.

'ಹೆಂಗುಸ್ರು ರಾಷ್ಟ್ರ ನಿರ್ಮಾಪಕರು ಅಂದದೆ ಸುಪ್ರೀಂ ಕೋರ್ಟು. ಅದರ ಬಾಬ್ತು ನನಗೆ ತಿಂಗಳಿಗೆ ಮೂವತ್ತು ಸಾವಿರ ಪೀಜು ಕೊಡಕ್ಕೇಳು' ಅಂತು.

ಚಿಗವ್ವನಿಗೆ ಶಾಕ್ ಕೊಡಕ್ಕೆ ಒಂದು ನ್ಯೂಸ್ ಬುಟ್ಟೆ. 'ಚಿಗವ್ವ ಗೃಹಲಕ್ಷ್ಮಿ ಕಾಸು ತಗಣೋರು ಹೊಸದಾಗಿ ಅರ್ಜಿ ಹಾಕಬಕು ಅಂದಿರದು ಗೊತ್ತಿಲ್ಲವಾ? ಇನ್ನು ಮುಂದ್ಕೆ ಸುಪ್ರೀಂ ಕೋರ್ಟು ಹೇಳಿದಂಗೆ ತಿಂಗಳಿಗೆ ಮೂವತ್ತು ಸಾವಿರ ಕೊಡಬಕು ಅಂತ ಡಿಕೆಗೆ ಕೇಳ್ರಿ'.

ಕೂಡಲೇ ಚಿಗವ್ವ 'ದಿಟ್ವೇನ್ಲಾ ಮಗಾ. ಹೋಯ್ತಿನಿರು' ಅಂತ ಹೊಂಟಳು.

ತುರೇಮಣೆ ನಿಟ್ಟುಸಿರು ಬುಡ್ತು.

ಸಂಗತ

ಅಭಿವೃದ್ಧಿಯ ಚಕ್ರವ್ಯೂಹದಲ್ಲಿ ಮಲೆನಾಡು

ಅಭಿವೃದ್ಧಿ ಯೋಜನೆಗಳ ಚಕ್ರವ್ಯೂಹ ಪಶ್ಚಿಮಘಟ್ಟಗಳನ್ನು ಉಸಿರುಗಟ್ಟಿಸುತ್ತಿದೆ. ಶಿವಮೊಗ್ಗ–ಮಂಗಳೂರು ರೈಲುಮಾರ್ಗ ಮಲೆನಾಡಿಗೆ ಒದಗಿರುವ ಹೊಸ ಕುತ್ತು.

• ಕೇಶವ ಎಚ್. ಕೊರ್ಸೆ

ಹೊಸ ಅಣುಸ್ಥಾವರ ಹಾಗೂ ನದಿ ಜೋಡಣೆಯಂಥ ಅಪಾಯಕಾರಿ ಪ್ರಸ್ತಾವಗಳಿಗೆ ಮಲೆನಾಡಿನಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿರುವಾಗಲೇ, ಶಿವಮೊಗ್ಗ–ಮಂಗಳೂರು ಹೊಸ ರೈಲುಮಾರ್ಗದ ಪ್ರಸ್ತಾಪವಾಗಿದೆ! ಪರಿಸರ ಸುಸ್ಥಿರತೆಯ ನೆಲೆಗಟ್ಟಾದ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ನಿರ್ಣಾಯಕ ಕ್ರಮ ಕೈಗೊಳ್ಳುವುದು ಯಾವಾಗ?

ಅತಿವೃಷ್ಟಿ–ಅನಾವೃಷ್ಟಿ, ನೆರೆ–ಬರ, ಅಂತರ್ಜಲ ಕುಸಿತ, ಭೂಕುಸಿತ, ಅಸಂಖ್ಯ ಕೃಷಿಬೆಳೆ ರೋಗಗಳು, ಇವೆಲ್ಲವುಗಳಿಂದಾಗಿ ಈಗಾಗಲೇ ಮಲೆನಾಡಿನ ಸಂಕಷ್ಟ ಮಿತಿಮೀರುತ್ತಿದೆ. ಇವಕ್ಕೆಲ್ಲ ಸಮಗ್ರ ಪರಿಹಾರ ಒದಗಿಸಿಕೊಳ್ಳಲು ನಡೆಸಿರುವ ಮಲೆನಾಡಿಗರ ದೈನಂದಿನ ಹೋರಾಟಗಳನ್ನೇ ಲೆಕ್ಕಿಸದೆ, ಪಶ್ಚಿಮಘಟ್ಟವನ್ನು ಮತ್ತಷ್ಟು ಸೀಳುವ ಶಿವಮೊಗ್ಗ–ಮಂಗಳೂರು ಹೊಸ ರೈಲುಮಾರ್ಗ ಯೋಜನೆಗೆ ಸರ್ಕಾರ ಮುಂದಾಗಿದೆ. ಸಹ್ಯಾದ್ರಿಯ ಒಡಲನ್ನು ಮತ್ತಷ್ಟು ಸ್ಫೋಟಿಸಿ ಕತ್ತರಿಸುವ ಬೃಹತ್ ಕಾಮಗಾರಿಯಿದು.

ರಾಜ್ಯದ ನಾಲ್ಕನೇ ಒಂದು ಭಾಗಕ್ಕಿಂತಲೂ ಕಡಿಮೆ ವಿಸ್ತಾರದಲ್ಲಿರುವ ಪಶ್ಚಿಮಘಟ್ಟಗಳು, ನಾಡಿನ ಮುಕ್ಕಾಲು ಪಾಲಿಗಿಂತ ಹೆಚ್ಚು ಜೀವವೈವಿಧ್ಯವನ್ನು ಪೋಷಿಸುತ್ತ, ಪರಿಸರ ಮತ್ತು ಜನಜೀವನದ ಸುರಕ್ಷತೆಯನ್ನು ಕಾಯುತ್ತಿವೆ. ಇಂಥ ಘಟ್ಟ ಪ್ರದೇಶದ ಸ್ವರೂಪ ಹಾಗೂ ಸುರಕ್ಷತೆ ಕುರಿತು ಕನಿಷ್ಠ ಕಾಳಜಿಯೂ ಇಲ್ಲದೆ, ಪರಿಸರ ವ್ಯವಸ್ಥೆಯ ಅಡಿಪಾಯವನ್ನೇ ಮತ್ತಷ್ಟು ದುರ್ಬಲಗೊಳಿಸುವ ಚಿಂತನೆ ಮತ್ತು ಯೋಜನೆ ದುರದೃಷ್ಟಕರ.

ಮಲೆನಾಡಿನ ಇಂದಿನ ಸವಾಲುಗಳನ್ನು ಮೂರು ಆಯಾಮಗಳಲ್ಲಿ ಗಮನಿಸಬಹುದು. ಮೊದಲಿನದು, ಭಾರೀ ಮೂಲಸೌಕರ್ಯ ಯೋಜನೆಗಳ ಒತ್ತಡ. ಹೊಸ ರಾಷ್ಟ್ರೀಯ ಹೆದ್ದಾರಿಗಳು, ನವ ರೈಲುಮಾರ್ಗಗಳು, ಶರಾವತಿ ಭೂಗತ ಜಲವಿದ್ಯುತ್ ಯೋಜನೆ, ಬೇಡ್ತಿ ಹಾಗೂ ಅಘನಾಶಿನಿ ನದಿತಿರುವು ಯೋಜನೆ, ಇತ್ಯಾದಿ. ಒಂದರ ಹಿಂದೆ ಒಂದರಂತೆ ಹೊಸ ಹೊಸ ಯೋಜನೆಗಳು ಪ್ರಸ್ತಾಪವಾಗುತ್ತಲೇ ಇವೆ. ಕಾಡಿನ ಛಿದ್ರೀಕರಣ ಹೆಚ್ಚಿದಂತೆ ಭೂಕುಸಿತ, ಜಲಮೂಲಗಳ ಕ್ಷೀಣತೆ ಮತ್ತು ಜೀವವೈವಿಧ್ಯ ನಷ್ಟ ಹೆಚ್ಚುವುದು ಸಹಜ ತಾನೆ?

ಎರಡನೆಯದು, ಕೃಷಿ ಕ್ಷೇತ್ರದ ಬಿಕ್ಕಟ್ಟು. ಮಲೆನಾಡಿಗರ ಆತ್ಮವಾಗಿರುವ ತೋಟಗಾರಿಕಾ ಬೆಳೆಗಳು ನೆಲಕಚ್ಚುತ್ತಿವೆ. ಕಾಳುಮೆಣಸು ಸೊರಗುರೋಗಕ್ಕೆ ಬಲಿಯಾಗುತ್ತಿದ್ದರೆ, ಏಲಕ್ಕಿ ಬೆಳೆ ವೈರಸ್ ರೋಗಕ್ಕೆ ನೆಲಕ್ಕೊರಗಿದೆ. ಇತ್ತೀಚಿನ ವರ್ಷಗಳಲ್ಲಿ ಅಡಿಕೆಯಲ್ಲಿ ಎಲೆಚುಕ್ಕೆ ರೋಗದಂಥ ಶಿಲೀಂಧ್ರಜನ್ಯ ರೋಗಗಳು ಹೆಚ್ಚುತ್ತಿದ್ದು, ರೈತರು ಕಂಗಾಲಾಗಿದ್ದಾರೆ. ಜೊತೆಗೆ, ಮೇಲ್ಮಣ್ಣಿನ ಫಲವತ್ತತೆ ನಾಶ, ಮಳೆಯ ಅನಿಶ್ಚಿತತೆ, ಕಾಡುಪ್ರಾಣಿಗಳ ಹಾವಳಿ, ಇವೆಲ್ಲ ಬೇಸಾಯವನ್ನು ಸಂಪೂರ್ಣ ನಷ್ಟಕ್ಕೆ ತಳ್ಳುತ್ತಿವೆ. ಬಹುಪಾಲು ರೈತರು ಒಂದೆರಡು ಎಕರೆ ಹಿಡುವಳಿಯ ಸಣ್ಣರೈತರಾಗಿರುವಾಗ, ಅವರಿಗೆ ಕನಿಷ್ಠ ಜೀವನ ನಿರ್ವಹಣೆಯೂ ಇದೀಗ ಕಷ್ಟವಾಗುತ್ತಿದೆ.

ಮೂರನೆಯದು, ಸಾಮಾಜಿಕ ಪರಿಸ್ಥಿತಿ. ಕೃಷಿಯಲ್ಲಿ ಭವಿಷ್ಯ ಕಾಣದ ಮಲೆನಾಡಿನ ಯುವಜನರು ಬದುಕು ಕಟ್ಟಿಕೊಳ್ಳಲಿಕ್ಕಾಗಿ ದೊಡ್ಡ ಪ್ರಮಾಣದಲ್ಲಿ ನಗರಗಳತ್ತ ವಲಸೆ ಹೋಗುತ್ತಿದ್ದಾರೆ. ಹೀಗಾಗಿ, ಗ್ರಾಮೀಣ ಉತ್ಪಾದನೆ ಕುಸಿಯುತ್ತಿದ್ದು, ಹಳ್ಳಿಗಳ ಜನಸಂಖ್ಯಾ ರಚನೆಯೇ ಬದಲಾಗುತ್ತಿದೆ. ಆದರೆ, ಈ ಪ್ರಮುಖ ಕೃಷಿ ಬಿಕ್ಕಟ್ಟನ್ನು ನಿವಾರಿಸುವಲ್ಲಿ ಸರ್ಕಾರದ್ದು ದಿವ್ಯನಿರ್ಲಕ್ಷ್ಯದ ನಡವಳಿಕೆ.

ಮಲೆನಾಡಿನಲ್ಲಿನ ಸವಾಲುಗಳನ್ನು ಎದುರಿಸಲು ಎರಡು ರೀತಿಯ ತುರ್ತುಕ್ರಮಗಳು ಆಗಬೇಕೆಂದು ತೋರುತ್ತದೆ. ಮೊದಲನೆಯದು, 'ಸಮಗ್ರ ಭೂಬಳಕೆ ನೀತಿ'ಯ ಜಾರಿ. ಇಲ್ಲಿನ ನಗರೀಕರಣ, ಕೈಗಾರಿಕೆ, ಕೃಷಿ, ಎಲ್ಲವನ್ನೂ ಆಗ ಸುಸ್ಥಿರ ಅಭಿವೃದ್ಧಿ ಆಶಯಗಳ ಚೌಕಟ್ಟಿನಲ್ಲಿ ತರಲು ಸಾಧ್ಯ. ಅತಿಸೂಕ್ಷ್ಮ ಮತ್ತು ವಿಪತ್ತು ಸಂಭಾವ್ಯ ಪ್ರದೇಶಗಳಲ್ಲಿ ಗಣಿಗಾರಿಕೆ, ಕಾಡುನಾಶ, ಅವೈಜ್ಞಾನಿಕ ಮೂಲಸೌಕರ್ಯ ಯೋಜನೆಗಳು ಇತ್ಯಾದಿಗಳನ್ನು ನಿಯಂತ್ರಿಸಲೂಬಹುದು. ಅರಣ್ಯ, ಗೋಮಾಳ, ನದಿ ಜಲಾನಯನ ಪ್ರದೇಶ, ಜೌಗುಪ್ರದೇಶ, ವನ್ಯಜೀವಿ ಕಾರಿಡಾರ್, ಇವೆಲ್ಲವುಗಳ ಪುನಶ್ಚೇತನವನ್ನು ಆದ್ಯತೆಯಲ್ಲಿ ಕೈಗೊಳ್ಳಬಹುದು.

ಎರಡನೆಯದು, ಅರಣ್ಯ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ, ಇತ್ಯಾದಿ ಪರಿಸರಸ್ನೇಹಿ ಅಭಿವೃದ್ಧಿ ಮತ್ತು ಉದ್ಯೋಗಾಭಿವೃದ್ಧಿಗೆ ಆದ್ಯತೆ ನೀಡುವ ನೀತಿ ರೂಪಿಸುವುದು. ಕೃಷಿ–ಅರಣ್ಯ ಪದ್ಧತಿ, ಸಾವಯವ ಕೃಷಿ, ಪರಿಸರಸ್ನೇಹಿ ಪ್ರವಾಸೋದ್ಯಮ, ಅರಣ್ಯೇತರ ಉತ್ಪನ್ನಗಳ ಆಧಾರಿತ ಜೀವನೋಪಾಯ ಇತ್ಯಾದಿಗಳನ್ನು ಆಗ ಉತ್ತೇಜಿಸಬಹುದು. ಈ ಕ್ಷೇತ್ರಗಳಲ್ಲಿ ಯುವಕರಿಗೆ ಸೂಕ್ತ ಕೌಶಲ ತರಬೇತಿ ನೀಡಿ, ಉದ್ಯೋಗಾವಕಾಶ ಹೆಚ್ಚಿಸಿ, ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಬಹುದು.

ಸಮಗ್ರ ಪರಿಹಾರ ದೊರಕಬೇಕಾದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜೊತೆಯಾಗಿ ಕಾಲಬದ್ಧ ಕಾರ್ಯಯೋಜನೆ ರೂಪಿಸಬೇಕು. ಅದನ್ನು ಮರೆತು, ಅಗತ್ಯವಿರದ ಹೊಸ ರೈಲುಮಾರ್ಗ ಅಥವಾ ನದಿತಿರುವು ಯೋಜನೆಗಳಂತಹ ಅವೈಜ್ಞಾನಿಕ ಕಾಮಗಾರಿಗಳಿಗೆ ಹಣ ಹರಿಸುವಲ್ಲೇ ಸರ್ಕಾರ ಮೈಮರೆತರೆ, ಇನ್ನೊಂದು ದಶಕದಲ್ಲಿ ಮಲೆನಾಡು ಅಪಾಯಕಾರಿಯಾದ ಪರಿಸರ ಬಿಕ್ಕಟ್ಟಿಗೆ ಜಾರಲಿರುವ ಸ್ಪಷ್ಟ ಸೂಚನೆಗಳು ಈಗಾಗಲೇ ಕಾಣತೊಡಗಿವೆ. ಆ ಬಿಕ್ಕಟ್ಟು ಗಂಭೀರ ಆರ್ಥಿಕ ಅಸ್ಥಿರತೆ ಹಾಗೂ ಸಾಮಾಜಿಕ ಸ್ಥಿತ್ಯಂತರಕ್ಕೆ ಎಡೆಮಾಡಿಕೊಡಬಹುದು. ಹಾಗಾದಲ್ಲಿ ನಮ್ಮನ್ನು ಕ್ಷಮಿಸಲು ಇತಿಹಾಸಕ್ಕೆ ಸಾಧ್ಯವಾಗದು; ಭವಿಷ್ಯವಂತೂ ಇರದು!

ನಾಡು ಮತ್ತು ಸಮುದಾಯದ ಬೆಳವಣಿಗೆಗಾಗಿ ಅಭಿವೃದ್ಧಿ ಯೋಜನೆಗಳು ಅತ್ಯಗತ್ಯ. ಆದರೆ, ಅಭಿವೃದ್ಧಿಯ ಹೆಸರಿನಲ್ಲಿ ಜೀವತಂತುಗಳನ್ನೇ ನಾಶ ಮಾಡುವ ಪ್ರಯತ್ನಗಳು ನಡೆಯಬಾರದು. ಆರ್ಥಿಕ ಉದ್ದೇಶಗಳಷ್ಟೇ ಮುಖ್ಯವಾದ ವಿವೇಚನಾರಹಿತ ಯೋಜನೆಗಳು ಅಭಿವೃದ್ಧಿಯ ಹೆಸರಿನಲ್ಲಿ ಸೃಷ್ಟಿಸುವ ಅಪಾಯಗಳು ಅನೂಹ್ಯವಾಗಿರುತ್ತವೆ ಎನ್ನುವುದನ್ನು ಮರೆಯಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಂಗಳೂರಿಗೆ ಹೈಕೋರ್ಟ್ ಪೀಠ?

ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪಿಸಬೇಕು ಎನ್ನುವ ಬೇಡಿಕೆ ತೀವ್ರಗೊಳ್ಳುತ್ತಿದೆ. ಇದರಿಂದ ಆಜುಬಾಜಿನ ಆರು ಜಿಲ್ಲೆಗಳ ಜನರಿಗೆ ಸಹಾಯವಾಗುತ್ತದೆ ಎನ್ನುವುದು ಈ ಭಾಗದ ಜನರ ವಾದ. ಆದರೆ, ಕೆಲವರು ಈ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕೆಲವರು ಪೀಠ ಸ್ಥಾಪನೆಗೆ ಶಿವಮೊಗ್ಗ ಸೂಕ್ತ ಎನ್ನುತ್ತಿದ್ದಾರೆ. ಇನ್ನು ಕೆಲವರು ದಾವಣಗೆರೆಗೆ ಪೀಠ ಬೇಕು ಎಂದು ಹೇಳುತ್ತಿದ್ದಾರೆ

• ಬಿ.ಎಸ್.ಷಣ್ಮುಖಪ್ಪ

ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪಿಸಬೇಕೆಂಬ ಬೇಡಿಕೆ ಇತ್ತೀಚೆಗೆ ತೀವ್ರ ಕಾವು ಪಡೆದುಕೊಂಡಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಒಳಗೊಂಡಂತೆ ಕರಾವಳಿ ಮತ್ತು ಮಲೆನಾಡಿನ ಒಟ್ಟು ಆರು ಜಿಲ್ಲೆಗಳನ್ನು ಅವುಚಿಕೊಂಡು ಮಂಗಳೂರನ್ನು ಕೇಂದ್ರ ಸ್ಥಾನವಾಗಿಸಿಕೊಂಡ ಪೀಠವು ತಲೆ ಎತ್ತಬೇಕೆಂಬ ಸ್ಥಳೀಯರ ಹಕ್ಕೊತ್ತಾಯ ತಾರಕಕ್ಕೇರಿದೆ. ಇದಕ್ಕೆ ಇಂಬುಗೊಟ್ಟಂತೆ ಬಂದರು ನಗರಿಗೆ ಸಂಚಾರಿ ಪೀಠದ ಕಿರೀಟ ತೊಡಿಸಲು ಈ ಭಾಗದ ಸುಪ್ರೀಂ ಕೋರ್ಟ್‌ನ ಕೆಲವು ನಿವೃತ್ತ ನ್ಯಾಯಮೂರ್ತಿಗಳು, ಸ್ಥಳೀಯ ವಕೀಲರ ಸಂಘ ಮತ್ತು ರಾಜಕಾರಣಿಗಳು ತುದಿಗಾಲಲ್ಲಿ ನಿಂತಿದ್ದಾರೆ. ನ್ಯಾಯ ವಿತರಣಾ ವ್ಯವಸ್ಥೆಯ ವಿಕೇಂದ್ರೀಕರಣ, ಪ್ರಧಾನ ಪೀಠದ ಮೇಲಿನ ಒತ್ತಡ ನಿವಾರಣೆ ಹಾಗೂ ಬಾಕಿ ಪ್ರಕರಣಗಳನ್ನು ಕಡಿಮೆ ಮಾಡುವ ಮೂಲಕ ನ್ಯಾಯವನ್ನು ಕಕ್ಷಿದಾರರ ಮನೆ ಬಾಗಿಲಿಗೆ ಕೊಂಡೊಯ್ಯುವ ಉದ್ದೇಶ ಇದರ ಹಿಂದಿರುವುದು ಸ್ಪಷ್ಟ.

ಕರ್ನಾಟಕ ಹೈಕೋರ್ಟ್ ಇತಿಹಾಸವನ್ನು ಗಮನಿಸಿದಾಗ, ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಮಹಾರಾಜರು, ಮೈಸೂರು ಮುಖ್ಯ ನ್ಯಾಯಾಲಯ–1884ರ ನಿಯಮ 1ರ ಅಡಿಯಲ್ಲಿ ಮೈಸೂರು ಹೈಕೋರ್ಟ್ ಅನ್ನು, ಮೂವರು ನ್ಯಾಯಾಧೀಶರನ್ನು ಒಳಗೊಂಡಂತೆ ಪುನರ್‌ರಚಿಸಿದರು. ಈ ನ್ಯಾಯಾಲಯ, ಮೈಸೂರು ಪ್ರದೇಶಗಳಲ್ಲಿನ ಮೇಲ್ಮನವಿ, ಉಲ್ಲೇಖಗಳು ಮತ್ತು ಪರಿಷ್ಕರಣೆಯ ಅತ್ಯುನ್ನತ ನ್ಯಾಯಾಲಯವಾಗಿತ್ತು. ರಾಜ್ಯದ ಇತರ ನ್ಯಾಯಾಲಯಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನೂ ಹೊಂದಿತ್ತು. ಈ ಮುಖ್ಯ ನ್ಯಾಯಾಲಯವೇ ಮುಂದೆ ರಾಜ್ಯಗಳ ಪುನರ್‌ವಿಂಗಡಣಾ ಕಾಯ್ದೆ–1956ರ ಅನುಸಾರ ಹಾಗೂ ಕರ್ನಾಟಕ ಹೈಕೋರ್ಟ್ ಕಾಯ್ದೆ–1964ರ ಅಡಿಯಲ್ಲಿ ಈಗಿನ ಹೈಕೋರ್ಟ್ ಆಗಿ ಪರಿವರ್ತನೆಗೊಂಡಿತು. ಅಂದಿನ ಅಠಾರ ಕಚೇರಿಯ ಕಟ್ಟಡವೇ ಕರ್ನಾಟಕ ಹೈಕೋರ್ಟ್‌ನ ಇಂದಿನ ಬೆಂಗಳೂರು ಪ್ರಧಾನ ಪೀಠ.

ಸಂವಿಧಾನದ ಮೊದಲ ಪುಟದಲ್ಲೇ ಹೇಳುವಂತೆ, ಭಾರತವು ರಾಜ್ಯಗಳ ಒಕ್ಕೂಟವಾಗಿದೆ. 214ನೇ ವಿಧಿಯ ಅನುಸಾರ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಒಂದು ಹೈಕೋರ್ಟ್ ಹೊಂದಿರತಕ್ಕದ್ದು. ಈ ಶಾಶ್ವತ ಹೈಕೋರ್ಟ್ ಸ್ಥಾಪನೆಯ ಹೊಣೆ ಕೇಂದ್ರಕ್ಕೆ ಸೇರಿದೆ. ಆದರೆ, ಒಂದು ರಾಜ್ಯದಲ್ಲಿನ ಸಂಚಾರಿ ಪೀಠಗಳ ಬಗ್ಗೆ ಸ್ಥಳೀಯ ರಾಜ್ಯ ಸರ್ಕಾರ ಮತ್ತು ಅಲ್ಲಿನ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನಿರ್ಧಾರವೇ ಅಂತಿಮ.

ಸಂಚಾರಿ ಪೀಠದ ಕೂಗನ್ನು ಪರಿಶೀಲಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ 1981ರಲ್ಲಿ ಜಸ್ವಂತ್ ಸಿಂಗ್ ನೇತೃತ್ವದ ಮೂವರು ಸದಸ್ಯರ ಆಯೋಗವೊಂದನ್ನು ರಚಿಸಿತು. ಇದು 1985ರ ಏಪ್ರಿಲ್ 30ರಂದು ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತು. ಇದರ ಅನುಸಾರ ಹೊಸ ಕೋರ್ಟ್‌ಗಳ ಸ್ಥಾಪನೆಗೂ ಮುನ್ನ ಅನುಸರಿಸಬೇಕಾದ ಮಾರ್ಗಸೂಚಿಗಳು ಮತ್ತು ಮಾನದಂಡಗಳನ್ನು ಗುರುತಿಸಲಾಗಿದೆ.



* ಸಿಸಿಆರ್: ಪ್ರಕರಣ ವಿಲೇವಾರಿ ಪ್ರಮಾಣ

47 ನ್ಯಾಯಮೂರ್ತಿಗಳು

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ 62. ಸದ್ಯ 47 ನ್ಯಾಯಮೂರ್ತಿಗಳಿದ್ದಾರೆ. ಇವರಲ್ಲಿ ನೇರವಾಗಿ ವಕೀಲ ವೃಂದದಿಂದ (ಬಾರ್) ನೇಮಕಗೊಂಡವರು 36. ಜಿಲ್ಲಾ ನ್ಯಾಯಾಧೀಶರಾಗಿ (ಬೆಂಚ್) ಪದೋನ್ನತಿ ಪಡೆದವರು 11. ಈ ಸಂಖ್ಯೆಯಲ್ಲಿ 9 ಮಹಿಳಾ ನ್ಯಾಯಮೂರ್ತಿಗಳಿದ್ದಾರೆ. ಸದ್ಯ ಬೆಂಗಳೂರಿನ ಪ್ರಧಾನ ಪೀಠದಲ್ಲಿ 33, ಧಾರವಾಡದಲ್ಲಿ 9 ಮತ್ತು ಕಲಬುರಗಿ ಪೀಠದಲ್ಲಿ 5 ನ್ಯಾಯಮೂರ್ತಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ತಂತ್ರಜ್ಞಾನದಲ್ಲಿ ಮುಂದು

ತಾಂತ್ರಿಕ ಬೆಳವಣಿಗೆ ಇಂದು ನ್ಯಾಯಾಂಗವನ್ನು ಎಲ್ಲ ರೀತಿಯಲ್ಲೂ ಬಿಗಿದಪ್ಪಿಕೊಂಡಿದೆ. ಕೋವಿಡ್ ವರದಾನವೆಂದರೆ ವಿಡಿಯೊ ಕಾನ್ಫರೆನ್ಸಿಂಗ್ ಸೌಲಭ್ಯ. ವರ್ಚುವಲ್ ಆಗಿ ಕಾರ್ಯನಿರ್ವಹಿಸಲು ಅವಕಾಶ ನೀಡುವ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಹೈಕೋರ್ಟ್‌ಗಳಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನವಿದೆ. ಇ-ಫೈಲಿಂಗ್ ಕೂಡ ಜಾರಿಯಲ್ಲಿದೆ. ಕಾಗದರಹಿತ ನ್ಯಾಯಾಂಗ ಪ್ರಕ್ರಿಯೆಯನ್ನು ಇಲ್ಲಿ ಸಂಪೂರ್ಣ ಪ್ರಯೋಗಕ್ಕೆ ಒಳಪಡಿಸಲಾಗಿದೆ. ಈಗಿನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಸೇರಿದಂತೆ ಅನೇಕ ನ್ಯಾಯಮೂರ್ತಿಗಳು ಮತ್ತು ಬಹುಸಂಖ್ಯೆಯ ಹಿರಿಯ ವಕೀಲರು ಕೈಯಲ್ಲಿ ದಸ್ತಾವೇಜುಗಳನ್ನೇ ಮುಟ್ಟುವುದಿಲ್ಲ. ಸಂಪೂರ್ಣ ಕಲಾಪ ಡಿಜಿಟಲ್ ಆಗಿಯೇ ಸಾಗುತ್ತಿದೆ.

ಅವುಗಳಲ್ಲಿ ಮುಖ್ಯವಾಗಿ ಜನಸಂಖ್ಯೆ ಮತ್ತು ಎಷ್ಟು ಸಂಖ್ಯೆಯ ವ್ಯಾಜ್ಯಗಳು ಅಲ್ಲಿವೆ, ಕಕ್ಷಿದಾರರು ಹೈಕೋರ್ಟ್ ಸಂಪರ್ಕಿಸಲು ಎಷ್ಟು ಅಂತರದ ಪ್ರಯಾಣ ಮಾಡಬೇಕಾಗುತ್ತದೆ, ಅವರಿರುವ ಭೌಗೋಳಿಕ ಪ್ರದೇಶ ಯಾವ ರೀತಿಯದ್ದು, ಪ್ರಯಾಣಕ್ಕೆ ತೊಂದರೆ ಇದೆಯೇ ಮತ್ತು ಸಂಪರ್ಕ ಸಾಧನಗಳು, ಖಟ್ಲೆದಾರರಿಗೆ ತಗುಲುವ ಖರ್ಚುವೆಚ್ಚ ಎಷ್ಟು... ಎಂಬುದೆಲ್ಲಾ ಪ್ರಮುಖವಾಗಿ ಲೆಕ್ಕಕ್ಕೆ ಬರುತ್ತವೆ.

ದಾವಣಗೆರೆ–ಶಿವಮೊಗ್ಗಕ್ಕೂ ಹಬ್ಬಿದ ಕಿಚ್ಚು

ಮಂಗಳೂರು ಸಂಚಾರಿ ಪೀಠದ ಕಿಚ್ಚು ಈಗ ದಾವಣಗೆರೆ ಮತ್ತು ಶಿವಮೊಗ್ಗಕ್ಕೂ ಹಬ್ಬಿದೆ. ‘ನಾವು ಯಾಕೆ ಇಂತಹ ಸುವರ್ಣ ಅವಕಾಶದಿಂದ ವಂಚಿತವಾಗಬೇಕು’ ಎಂದು ದಾವಣಗೆರೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಗುರು ಬಸವರಾಜ್ ಮತ್ತು ನಿಕಟಪೂರ್ವ ಅಧ್ಯಕ್ಷ ಎಲ್.ಎಚ್.ಅರುಣ್ ಕುಮಾರ್ ಪ್ರಶ್ನಿಸುತ್ತಾರೆ. ‘ದಾವಣಗೆರೆ, ಚಿತ್ರದುರ್ಗ, ವಿಜಯನಗರ, ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳನ್ನು ಒಳಗೊಂಡ ಹೈಕೋರ್ಟ್ ಸಂಚಾರಿ ಪೀಠವನ್ನು ದಾವಣಗೆರೆಯಲ್ಲಿ ಮಾಡಲು ಇದು ಸಕಾಲ’ ಎಂಬುದು ದಾವಣಗೆರೆ ಜಿಲ್ಲಾ ವಕೀಲರ ಸಂಘದ ಆಗ್ರಹ.

‘ಬೇಕಾದರೆ ಕರಾವಳಿ ತೀರದ ಮಂಗಳೂರು, ಉಡುಪಿ ಮತ್ತು ಕಾರವಾರ ಜಿಲ್ಲೆಗಳನ್ನು ಸೇರಿಸಿಕೊಂಡು ಅವರು ಸಂಚಾರಿ ಪೀಠ ಮಾಡಿಕೊಳ್ಳಲಿ. ಶಿವಮೊಗ್ಗ ಜಿಲ್ಲೆಯನ್ನು ಮಾತ್ರ ಅಲ್ಲಿಗೆ ಸೇರಿಸುವುದು ಬೇಡ. ಮಾಡುವುದಾದರೆ ಶಿವಮೊಗ್ಗದಲ್ಲೇ ಸಂಚಾರಿ ಪೀಠ ಮಾಡಲಿ ಎಂದು ‘ಶಿವಮೊಗ್ಗ ಜಿಲ್ಲೆಯ ಬೆಂಗಳೂರು ನಿವಾಸಿ ವಕೀಲರ ವೇದಿಕೆ’ ಹೋರಾಟಕ್ಕೆ ಸಜ್ಜಾಗಿದೆ.

ಈ ದಿಸೆಯಲ್ಲಿ ಪದಾಂಕಿತ ಹಿರಿಯ ವಕೀಲರಾದ ಸುಬ್ರಹ್ಮಣ್ಯ ಜೋಯಿಸ್, ಕೆ.ದಿವಾಕರ್, ಜಿ.ಕೃಷ್ಣಮೂರ್ತಿ, ಎಸ್.ಶಿವಾನಂದ, ಕೆ.ಕೆ.ಚೈತನ್ಯ, ದಯಾನಂದ ಸರಸ್ವತಿ, ಕೆ.ಶ್ರೀಧರ್, ಎಲ್.ಪ್ರಸಾದ್, ಆರ್.ವಿ.ಎಸ್.ನಾಯಕ್, ಎಂ.ಚಾಮರಾಜ, ಗಂಗಾಧರ, ಎಂ.ವೈ.ರಾಘವೇಂದ್ರ ಮತ್ತು ವೀರೇಂದ್ರ ಪಾಟೀಲ್ ಸೇರಿದಂತೆ ನೂರಾರು ವಕೀಲರು ಹಲವು ಸುತ್ತಿನ ಮಹತ್ವದ ಸಭೆಗಳನ್ನು ನಡೆಸಿರುವುದು ಗಮನಾರ್ಹ.

ಧಾರವಾಡ ಮತ್ತು ಕಲಬುರಗಿಯಲ್ಲಿ ಎರಡು ಸಂಚಾರಿ ಪೀಠಗಳು ಕಾರ್ಯನಿರ್ವಹಿಸುತ್ತಿವೆ. ಈ ಪೀಠಗಳ ಸ್ಥಾಪನೆಯ ನಿರ್ಧಾರ ತೆಗೆದುಕೊಳ್ಳುವ ಮೊದಲು ವಿವರವಾದ ಅಧ್ಯಯನ ನಡೆಸಲಾಗಿತ್ತು. ಹೈಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಮಿತಿ ನೀಡಿದ ವರದಿ ಆಧರಿಸಿ ಮುಂದಿನ ಹೆಜ್ಜೆ ಇರಿಸಲಾಯಿತು.

‘ಮಂಗಳೂರಿನಲ್ಲಿ ಸಂಚಾರಿ ಪೀಠಕ್ಕೆ ಬೇಕಾದ ಸ್ಥಳ, ನ್ಯಾಯಮೂರ್ತಿಗಳ ವಸತಿ ಸೌಕರ್ಯಗಳನ್ನು ಈಗಾಗಲೇ ಗುರುತಿಸಲಾಗಿದೆ. ಈ ತರದೂದುಗಳು ಆತುರದಿಂದ ಕೂಡಿದಂತಿವೆ. ಪ್ರಸ್ತಾವನೆ ಮಂಡಿಸುವ ಮೊದಲು ಜಸ್ವಂತ್ ಸಿಂಗ್ ಸಮಿತಿಯ ಶಿಫಾರಸುಗಳ ಪಾಲನೆಯಾಗಿಲ್ಲ. ದತ್ತಾಂಶ, ತಾಂತ್ರಿಕ ಬೆಳವಣಿಗೆಯ ವಿಶ್ಲೇಷಣೆ, ಜನಸಂಖ್ಯಾ ವಿವರಗಳನ್ನು ಪರಿಗಣಿಸಿಲ್ಲ. ಪ್ರಸ್ತಾವಿತ ಪೀಠದ ರಚನೆಯಲ್ಲಿ ಧಾರವಾಡ ಪೀಠದ ಭಾಗವಾಗಿರುವ ಕೆಲವು ಜಿಲ್ಲೆಗಳನ್ನು ಸ್ಥಳಾಂತರಿಸಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ಧಾರವಾಡ ಪೀಠದ ಮುಂದೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಕುಗ್ಗುವ ಸಾಧ್ಯತೆಯಿದೆ’ ಎಂಬುದು ಎಎಬಿ ಆಕ್ಷೇಪ.

‘ಹೊಸ ಪೀಠದ ರಚನೆಯ ಅಗತ್ಯವನ್ನು ಮನಗಾಣುವ ಮುನ್ನ ಮೂಲಸೌಕರ್ಯ ವಿಸ್ತರಣೆಗೆ ಸಂಬಂಧಿಸಿದ ನಿರ್ಧಾರಗಳ ಬಗ್ಗೆ ಕಾನೂನು ಆಯೋಗ ನೀಡಿರುವ ಎಚ್ಚರಿಕೆಯನ್ನು ಮರೆಯಬಾರದು. ಇದು ವ್ಯವಸ್ಥೆಯ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಬದಲು ಹೆಚ್ಚಿನ ಆಡಳಿತಾತ್ಮಕ ಅವಶ್ಯಕತೆಗಳಿಗೆ ಕಾರಣವಾಗುತ್ತದೆ. ಧಾರವಾಡ ಮತ್ತು ಕಲಬುರಗಿ ಪೀಠಗಳನ್ನು ಸ್ಥಾಪಿಸಲು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಖರ್ಚು ಮಾಡಲಾಯಿತು. ಆದರೆ, ಕಲಬುರಗಿ ಪೀಠ ನಿರೀಕ್ಷಿತ ಫಲಿತಾಂಶವನ್ನು ಸಾಧಿಸದೆ ಸಂಪನ್ಮೂಲಗಳ ದುರುಪಯೋಗಕ್ಕೆ ಕಾರಣವಾಗಿದೆ’ ಎಂಬ ಶಿವಮೊಗ್ಗ ವಕೀಲರ ವೇದಿಕೆಯ ಟಿಪ್ಪಣಿಯನ್ನು ತಳ್ಳಿ ಹಾಕುವಂತಿಲ್ಲ.

ದೇಶದ ವಿವಿಧ ಪ್ರಮುಖ ಹೈಕೋರ್ಟ್‌ಗಳನ್ನು ಜನಸಂಖ್ಯೆ ಆಧಾರಿತ ಹೋಲಿಕೆಯಲ್ಲಿ ಗಮನಿಸಿದಾಗ, ಕರ್ನಾಟಕ ಸಾಕಷ್ಟು ಸುಧಾರಿತ ಸ್ಥಿತಿಯಲ್ಲಿದೆ. ಹಾಗೆ ನೋಡಿದರೆ, ವಿಪರೀತ ಜನಸಂಖ್ಯೆಯನ್ನು ಹೊಂದಿರುವ ರಾಜ್ಯಗಳು ಹೆಚ್ಚಿನ ಸಂಖ್ಯೆಯ ಪೀಠಗಳನ್ನು ಹೊಂದಿಲ್ಲ.

ವ್ಯಾಜ್ಯಗಳ ವಿಲೇವಾರಿ ದರವನ್ನು ಸುಧಾರಿಸಲು ಇರುವ ಪರಿಹಾರ ಎಂದರೆ ಪೂರ್ಣ ಪ್ರಮಾಣದಲ್ಲಿ ನ್ಯಾಯಮೂರ್ತಿಗಳ ನೇಮಕಾತಿ ಮತ್ತು ಅಸ್ತಿತ್ವದಲ್ಲಿರುವ ವ್ಯವಸ್ಥೆಯ ದಕ್ಷತೆಯನ್ನು ಹೆಚ್ಚಿಸುವುದೇ ಆಗಿದೆ. ಮಂಗಳೂರು ಪೀಠ ರಚನೆಯ ಆಲೋಚನೆಯಲ್ಲಿ ನ್ಯಾಯಾಂಗ ಆಡಳಿತ, ಸಾಂಸ್ಥಿಕ ದಕ್ಷತೆ, ನ್ಯಾಯ ವಿತರಣೆಯ ಗುಣಮಟ್ಟ ಮತ್ತು ಸಾರ್ವಜನಿಕ ಹಿತಾಸಕ್ತಿಯ ಪರಿಗಣನೆಗಳು ಪೂರ್ಣವಾಗಿ ಅಡಕವಾಗಬೇಕು. ಇದು ಸ್ಥಳೀಯ ಅಥವಾ ರಾಜಕೀಯ ಬೇಡಿಕೆಗಳನ್ನು ಆಧರಿಸಿರಬಾರದು ಅಥವಾ ನಿರ್ದಿಷ್ಟ ಪ್ರದೇಶದಲ್ಲಿ ಆಸಕ್ತಿ ಹೊಂದಿರಬಹುದಾದ ಅಥವಾ ಅಂತಹ ಪ್ರದೇಶದಿಂದ ಬಂದಿರುವ ಯಾವುದೇ ಉನ್ನತ ಹುದ್ದೆಯನ್ನು ಹೊಂದಿರುವ ವ್ಯಕ್ತಿಯ ಹಸ್ತಕ್ಷೇಪದಿಂದಾಗಿ ಆಗಕೂಡದು ಎಂಬುದೇ ಬಹುತೇಕರ ಇರಾದೆ.



ಆಧಾರ: ಶಿವಮೊಗ್ಗ ವಕೀಲರ ವೇದಿಕೆ ಸಿ.ಜೆಗೆ ನೀಡಿರುವ ಮನವಿ

ಸಾಮಾಜಿಕ ಮನ್ನಣೆ ಎಲ್ಲಿದೆ?



ಮಂಗಳೂರಿನಲ್ಲಿ ಕರ್ನಾಟಕ ಹೈಕೋರ್ಟ್‌ನ ಮೂರನೇ ಸಂಚಾರಿ ಪೀಠ ಸ್ಥಾಪಿಸುವ ನಿಟ್ಟಿನಲ್ಲಿ ಭರದ ಸಿದ್ಧತೆಗಳಾಗುತ್ತಿರುವುದು ಸರಿಯಾದ ಕ್ರಮ ಎನ್ನಲಾಗುವುದಿಲ್ಲ. ಸಾಮಾಜಿಕ ಮನ್ನಣೆ ಇಲ್ಲದಿರುವುದು ಇದರ ದೊಡ್ಡ ದೌರ್ಬಲ್ಯ. ಎಲ್ಲಕ್ಕೂ ಮೇಲಾಗಿ ಇದನ್ನು ಸಮರ್ಥಿಸಿಕೊಳ್ಳಲು ಜಸ್ವಂತ್ ಸಿಂಗ್ ವರದಿಯಲ್ಲಿ ಉಲ್ಲೇಖಿಸಲಾಗಿರುವ 21 ಅಂಶಗಳಿಗೆ ಹೊಂದಾಣಿಕೆ ಆಗದಿರುವುದು ಮತ್ತು ರಂಜೂಷ್ ಬಾಬುರಾವ್ ನಿಂಬಾಳ್ಕರ್ v/s ಮಹಾರಾಷ್ಟ್ರ ರಾಜ್ಯ ತೀರ್ಪಿನ ಸದಾಶಯ ಕಡೆಗಣನೆ ಮತ್ತೊಂದು ದೌರ್ಬಲ್ಯ. ಅಷ್ಟಾಗಿಯೂ ಅನುಷ್ಠಾನಗೊಳ್ಳುವ ಪ್ರಕ್ರಿಯೆಗಳು ಮುಂದುವರಿದು ಸುಪ್ರೀಂ ಕೋರ್ಟ್‌ನಲ್ಲಿ ಇದನ್ನು ಪ್ರಶ್ನಿಸಿದರೆ ಪೀಠ ರಚನೆ ಊರ್ಜಿತವಾಗಲು ಸಾಧ್ಯವಾಗದು.

ಸಿ.ಎಚ್.ಹನುಮಂತರಾಯ, ಹಿರಿಯ ವಕೀಲರು

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಸಿ.ಜೆ ವೈಯಕ್ತಿಕ ನಿರ್ಧಾರವಾಗದಿರಲಿ

ಮಂಗಳೂರಿನಲ್ಲಿ ಪೀಠವನ್ನು ರಚಿಸಬೇಕೆಂಬ ಪ್ರಸ್ತಾವದ ಪರಿಗಣನೆಯು ಈಗ ಕರ್ನಾಟಕ ಹೈಕೋರ್ಟ್ ಸಿ.ಜೆ ಅಂಗಳದಲ್ಲಿದೆ. ಈ ದೃಷ್ಟಿಯಿಂದ ಮಂಗಳೂರು ಸಂಚಾರಿ ಪೀಠದ ನಿರ್ಧಾರ ಅವರ ವೈಯಕ್ತಿಕ ಮತ್ತು ಏಕಪಕ್ಷೀಯ ಪ್ರಕ್ರಿಯೆಯಾಗಿರಬಾರದು; ಸಂಸ್ಥೆಯ ನಿರ್ಧಾರವಾಗಿರಬೇಕು. ಸಿ.ಜೆ ಅವರು ಈ ರೀತಿಯ ಆಡಳಿತಾತ್ಮಕ ಅಧಿಕಾರ ಚಲಾಯಿಸುವಾಗ ಉನ್ನತ ನ್ಯಾಯಮೂರ್ತಿಗಳ ಅಭಿಪ್ರಾಯಗಳು, ವಕೀಲರ ಸಂಘದ ಅಗತ್ಯಗಳು, ಸಂಬಂಧಪಟ್ಟ ಜಿಲ್ಲೆಗಳ ಜನರ ಅಹವಾಲುಗಳನ್ನು ಗಣನೆಗೆ ತೆಗೆದುಕೊಂಡು ಮುಂದುವರಿಯುತ್ತಾರೆ ಎಂಬ ಆಶಾಭಾವನೆ ಸಂಘದ್ದು.

ವಿವೇಕ ರೆಡ್ಡಿ, ಅಧ್ಯಕ್ಷರು, ಬೆಂಗಳೂರು ವಕೀಲರ ಸಂಘ (ಎಎಬಿ)

ಮಾನದಂಡ ಈಡೇರಿಕೆ ಮುಖ್ಯ



ಯಾವುದೇ ಪೀಠವನ್ನು ಸ್ಥಾಪಿಸಬೇಕೆಂದಾಗ ‘ಮಾಡಿ’ ಮತ್ತು ‘ಮಾಡಬೇಡಿ’ ಎಂಬ ಎರಡು ಪಂಗಡಗಳು ಇದ್ದೇ ಇರುತ್ತವೆ. ಈ ಪ್ರಕರಣದಲ್ಲಿ ಮಾನದಂಡಗಳು ಈಡೇರಿವೆಯೇ ಎಂಬುದು ಜಿಜ್ಞಾಸೆ. ಮಾನದಂಡಗಳು ಈಡೇರಿದ್ದರೆ ಪೀಠ ಸ್ಥಾಪನೆಗೆ ವಿರೋಧ ತರವಲ್ಲ.

ಪಿ.ಪ್ರಸನ್ನ ಕುಮಾರ್, ಹೈಕೋರ್ಟ್ ಸಿಬಿಐ ವಕೀಲರು

ಶಿವಮೊಗ್ಗವೇ ಸೂಕ್ತ

ಮಂಗಳೂರು ಭೌಗೋಳಿಕ ಅಥವಾ ಹವಾಮಾನದ ದೃಷ್ಟಿಯಿಂದ ಸಾಮಾನ್ಯಕ್ಕಿಂತಲೂ ಭಿನ್ನವಾದ ಪ್ರದೇಶ. ಉತ್ತರ ಕನ್ನಡ ಜಿಲ್ಲೆ ಸದ್ಯ ಧಾರವಾಡ ಹೈಕೋರ್ಟ್ ಪೀಠದ ವ್ಯಾಪ್ತಿಯಲ್ಲಿದೆ. ಕಂದಾಯ ಸೇರಿದಂತೆ ಎಲ್ಲ ವಿಭಾಗಗಳೂ ಧಾರವಾಡ ಅಥವಾ ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲೇ ಇವೆ. ಆದರೆ, ಈಗ ಹೈಕೋರ್ಟ್ ಪೀಠವನ್ನು ಮಂಗಳೂರಿಗೆ ಸೇರಿಸಿದರೆ ಜಿಲ್ಲೆಯ ಘಟ್ಟದ ಮೇಲಿನ ಹಲವು ತಾಲ್ಲೂಕುಗಳ ಜನರ ಓಡಾಟಕ್ಕೆ ತೀವ್ರ ಅನನುಕೂಲವಾಗಬಲ್ಲದು. ಅಂತೆಯೇ, ಶಿವಮೊಗ್ಗ ಜಿಲ್ಲೆಯನ್ನು ಮಂಗಳೂರು ಪೀಠಕ್ಕೆ ಸೇರ್ಪಡೆ ಮಾಡುವ ಬದಲಿಗೆ ಶಿವಮೊಗ್ಗದಲ್ಲೇ ಪೀಠ ಸ್ಥಾಪಿಸುವುದು ಉತ್ತಮ.

ಶ್ರೀರಂಗ ಸುಬ್ಬಣ್ಣ, ಪದಾಂಕಿತ ಹಿರಿಯ ವಕೀಲರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **ಭಾರಿ ಸಂಖ್ಯೆಯಲ್ಲಿ** ಜನರು ಸೇರಿರುವ ಡ್ರೋನ್ ವಿಡಿಯೊದ ತುಣುಕನ್ನು ಇನ್‌ಸ್ಟಾಗ್ರಾಂನಲ್ಲಿ ಮೊಹ್ಸಿನ್ ಸುಲ್ತಾನ್ (ಮೊಹ್ಸಿನ್_ಸುಲ್ತಾನ್_ಅಫೀಶಿಯಲ್) ಎಂಬ ಬಳಕೆದಾರ ಪೋಸ್ಟ್ ಮಾಡಿದ್ದು, ಅದು ಜೂನ್ 11ರಂದು ಪುಣೆಯಲ್ಲಿ ನಡೆದಿದ್ದ ಕಾಕ್ರೋಚ್ ಜನತಾ ಪಾರ್ಟಿಯ (ಸಿಜೆಪಿ) ಪ್ರತಿಭಟನೆಯ ವಿಡಿಯೊ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.

✅ **ಪುಣೆಯಲ್ಲಿ ಸಿಜೆಪಿ** ಪ್ರತಿಭಟನೆಯು ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯದ ಅಂಬೇಡ್ಕರ್ ಪ್ರತಿಮೆಯ ಮುಂಭಾಗ ನಡೆದಿತ್ತು. ಆ ಸ್ಥಳದ ಜಿಯೊಲೊಕೇಷನ್ ಪರಿಶೀಲಿಸಿದಾಗ, ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದ ಲೊಕೇಷನ್‌ಗೂ ಪ್ರತಿಭಟನೆ ನಡೆದ ವಾಸ್ತವ ಸ್ಥಳದ ಲೊಕೇಷನ್‌ಗೂ ಹೊಂದಾಣಿಕೆಯಾಗಲಿಲ್ಲ. ವಿಡಿಯೊ ತುಣುಕಿನ ಕೀಫ್ರೇಮ್‌ಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ದೃಶ್ಯಗಳಲ್ಲಿ ಹಲವು ದೋಷಗಳು ಇರುವುದು ಕಂಡು ಬಂತು. ಉದಾಹರಣೆಗೆ ಕಟ್ಟಡಗಳ ರಚನೆಯಲ್ಲಿ ವ್ಯತ್ಯಾಸವಿತ್ತು. ಹೀಗಾಗಿ ಇದು ಎಐ ಸೃಷ್ಟಿಯಾಗಿರಬಹುದು ಎಂಬ ಅನುಮಾನ ಬಂತು. ದೃಢಪಡಿಸುವುದಕ್ಕಾಗಿ ಈ ವಿಡಿಯೊವನ್ನು ಹಂಚಿಕೊಂಡ ಇನ್‌ಸ್ಟಾಗ್ರಾಂ ಬಳಕೆದಾರ ಮೊಹ್ಸಿನ್ ಸುಲ್ತಾನ್ ಅವರನ್ನು ಸಂಪರ್ಕಿಸಿದಾಗ, ಅದು ಎಐ ಮೂಲಕ ಸೃಷ್ಟಿಸಿದ ವಿಡಿಯೊ ಎಂಬುದನ್ನು ಖಚಿತಪಡಿಸಿದರು. ಎಐ ವಿಡಿಯೊವನ್ನು ನಿಜವಾದ ವಿಡಿಯೊ ಎಂದು ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ಪ್ರಕಟಿಸಿದೆ.

ನಿರಂತರ ಪ್ರಯತ್ನದ ಮಹತ್ವ

ನುಡಿ ಬೆಳಗು — ದೀಪಾ ಹಿರೇಗುತ್ತಿ

ಪಶ್ಚಿಮ ಘಟ್ಟಗಳ ದಟ್ಟ ಹಸಿರಿನ ಕಾಡಿನ ನಟ್ಟ ನಡುವೆ ಪುಟ್ಟ ತೊರೆಯೊಂದು ಹುಟ್ಟಿ ಹರಿಯುತ್ತಿತ್ತು. ಆ ಹೊಳೆಯಿಂದ ಸ್ವಲ್ಪ ದೂರದಲ್ಲೇ ಹಲವಾರು ಪುಟ್ಟ ಪುಟ್ಟ ಕಲ್ಲುಗಳು ಬಿದ್ದಿದ್ದವು. ಆ ರಾಶಿಯಲ್ಲಿದ್ದ ಒಂದು ಕಲ್ಲು ಬಹಳ ಮಹಾತ್ವಾಕಾಂಕ್ಷಿಯಾಗಿತ್ತು. ಅದು ಎಲ್ಲರ ಗಮನ ಸೆಳೆಯಬೇಕೆಂದು ಬಯಸುತ್ತಿತ್ತು. ಆದರೆ, ಅದರ ಸುತ್ತಲೂ ಅನೇಕ ಕಲ್ಲುಗಳಿದ್ದವು. ದೊಡ್ಡ ಬಂಡೆಗಳು ಕೂಡ ಇದ್ದವು. ಅವುಗಳಲ್ಲಿ ಕೆಲವು ಬಂಡೆಗಳ ಮೇಲೆ ಆರ್ಕಿಡ್ ಹೂಗಳು ಕೂಡ ಅರಳಿದ್ದವು. ದೊಡ್ಡ ದೊಡ್ಡ ಗಾತ್ರದ ಬಂಡೆಗಲ್ಲುಗಳು, ಅವುಗಳ ಮೇಲಿನ ಹೂವು, ಸುತ್ತಲೂ ಸುಂದರ ದೈತ್ಯ ಮರಗಳು, ಹರಿವ ಹೊಳೆ ಇವೆಲ್ಲವನ್ನೂ ನೋಡಿ ಮೆಚ್ಚುಗೆ ವ್ಯಕ್ತಪಡಿಸುವ ಜನರು ತನ್ನನ್ನು ಗಮನಿಸುತ್ತಿಲ್ಲವೆಂದು ಬೇಸರಪಡುತ್ತಿತ್ತು ಆ ಪುಟ್ಟ ಕಲ್ಲು. ತಾನೂ ಒಂದು ದಿನ ದೊಡ್ಡದಾಗಬೇಕು, ವಿಶೇಷವಾಗಬೇಕು ಎಂದು ಕನಸು ಕಾಣುತ್ತಿತ್ತು.

ಪ್ರತಿದಿನ ಬೆಳಿಗ್ಗೆ ಆ ಸಣ್ಣ ಹೊಳೆ ಹರಿಯುವಾಗ ದೂರದ ಕಣಿವೆಗಳ ಕಥೆಗಳನ್ನು ಕಲ್ಲುಗಳೊಂದಿಗೆ ಹಂಚಿಕೊಳ್ಳುತ್ತಿತ್ತು. ಪುಟ್ಟ ಕಲ್ಲುಗಳು ಆ ಕಥೆಗಳನ್ನು ಆಸಕ್ತಿಯಿಂದ ಕೇಳುತ್ತಿದ್ದವು. ಮಳೆಗಾಲ ಬಂದಾಗ ಹೊಳೆಯ ನೀರು ಕಲ್ಲನ್ನು ನಿಧಾನವಾಗಿ ಮುಂದೆ ತಳ್ಳಲು ಆರಂಭಿಸಿತು. ಕಲ್ಲಿಗೆ ಇಷ್ಟವಿಲ್ಲದಿದ್ದರೂ ಹೋಗಲಾರಂಭಿಸಿತು. ಕಾರಣ ಹೊಳೆಯ ಹರಿವಿನೊಂದಿಗೆ ಹೋದರೆ ತನ್ನ ಅಸ್ತಿತ್ವವೇ ಕಳೆದುಹೋಗಬಹುದೆಂಬ ಭಯ. ಆದರೆ, ಹೊಳೆ ಬಹುದೂರ ಕ್ರಮಿಸಿತ್ತಲ್ಲ, ಅದಕ್ಕೆ ಕಲ್ಲಿನ ತಳಮಳ ಅರ್ಥವಾಗುತ್ತಿತ್ತು. ಅದು ನಿಧಾನವಾಗಿ, ನೀರಿನ ಹರಿವಿನೊಂದಿಗೆ ಹೇಗೆ ಸಾಗಬೇಕೆಂದು ಆ ಪುಟ್ಟ ಕಲ್ಲಿಗೆ ಹೇಳಿಕೊಟ್ಟಿತು.

ಋತುಗಳು ಬದಲಾದವು. ಕಲ್ಲು ಏಳುತ್ತ ಬೀಳುತ್ತ ತನ್ನ ಪ್ರಯಾಣವನ್ನು ಮುಂದುವರಿಸಿತು. ನೀರಿನ ಹೊಡೆತಗಳಿಂದ ಅದರ ಚೂಪಾದ ಅಂಚುಗಳು ಸವೆದುಹೋದವು. ಅದರ ಮೇಲ್ಮೈಯಲ್ಲಿ ಸುಂದರವಾದ ವಿನ್ಯಾಸಗಳು ಮೂಡಿದವು. ಹಳ್ಳಿಯೊಂದರ ಬಾವಿಯ ಸುತ್ತ ನಿರ್ಮಿಸುತ್ತಿದ್ದ ಸುಂದರ ಕಟ್ಟೆಯಲ್ಲಿ ಈ ನುಣುಪು ಕಲ್ಲು ಮತ್ತು ಅದರ ಜತೆಯಿದ್ದ ಕೆಲವು ಕಲ್ಲುಗಳನ್ನು ಸುಂದರವಾಗಿ ಜೋಡಿಸಲಾಯಿತು. ಈ ಕಾರಣದಿಂದ ಬಾವಿಯ ಸೌಂದರ್ಯ ಇನ್ನಷ್ಟು ಹೆಚ್ಚಾಯಿತು.

ಆ ಕಲ್ಲು ದೊಡ್ಡದಾಗಲಿಲ್ಲ, ಎಲ್ಲವುಗಳಿಗಿಂತ ಎದ್ದು ಕಾಣುವ ಹಾಗೂ ಆಗಲಿಲ್ಲ. ಆದರೆ ಅದು ತನ್ನ ಕಲ್ಪನೆಗೂ ಮೀರಿದ ರೀತಿಯಲ್ಲಿ ಉಪಯುಕ್ತವಾಯಿತು.

ಸಣ್ಣ, ನಿರಂತರ ಬದಲಾವಣೆಗಳು ಕಣ್ಣಿಗೆ ತಕ್ಷಣಕ್ಕೆ ಗೋಚರಿಸುವುದಿಲ್ಲ. ಆದರೆ ಅವು ನಮ್ಮಲ್ಲಿ ಬದಲಾವಣೆ ತರುತ್ತವೆ. ಇದ್ದಕ್ಕಿದ್ದಂತೆ ಯಶಸ್ಸು ಸಿಗಬೇಕು, ರಾತ್ರಿ ಬೆಳಗಾಗುವುದರೊಳಗೆ ಖ್ಯಾತರಾಗಬೇಕು ಎಂದು ಜನರು ಬಯಸುತ್ತಾರೆ. ಆದರೆ, ಯಶಸ್ಸಿನ ಮಾನದಂಡ ಪ್ರತಿಯೊಬ್ಬರಿಗೂ ಭಿನ್ನವೇ. ಬಂಡೆಗಲ್ಲಾಗದ ಮಾತ್ರಕ್ಕೆ ಪುಟ್ಟ ಕಲ್ಲಿನ ಬದುಕು ವ್ಯರ್ಥವಲ್ಲ. ಪುಟ್ಟ ಕಲ್ಲು ಬಾವಿ ಕಟ್ಟೆಯನ್ನು ಸುಂದರಗೊಳಿಸಿದಂತೆ, ಬಂಡೆಗಲ್ಲು ಹೊಳೆಯ ತೀರವನ್ನು ಆಕರ್ಷಕವಾಗಿಸುತ್ತದೆ ಅಷ್ಟೇ. ನಾವು ಎಲ್ಲಿ ಪ್ರಾರಂಭಿಸುತ್ತೇವೆ ಎನ್ನುವುದಕ್ಕಿಂತ ನಿರಂತರವಾಗಿ ಪಯಣ ಮುಂದುವರಿಸುತ್ತಿದ್ದೇವೆಯೇ ಅನ್ನುವುದು ಮುಖ್ಯವಾಗುತ್ತದೆ. ದಿನನಿತ್ಯದ ಓದು, ತರಬೇತಿ, ಕೌಶಲವೊಂದರ ಅಭ್ಯಾಸ ಯಾವುದಾದರೂ ಆಗಿರಬಹುದು. ಕೆಲವರಿಗೆ ಆರಂಭದಲ್ಲಿಯೇ ಅನುಕೂಲಗಳಿರುತ್ತವೆ, ಮತ್ತೆ ಕೆಲವರು ಪ್ರಯತ್ನಪಟ್ಟು ಎಲ್ಲವನ್ನೂ ಪಡೆದುಕೊಳ್ಳಬೇಕಾಗುತ್ತದೆ. ಕೆಲವರಿಗೆ ದಾರಿಯನ್ನು ಯಾರೋ ನಿರ್ಮಿಸಿಟ್ಟಿರುತ್ತಾರೆ. ಮತ್ತೆ ಕೆಲವರು ಅವರೇ ಹಾದಿ ನಿರ್ಮಿಸಿಕೊಳ್ಳಬೇಕಾಗುತ್ತದೆ. ಆದರೆ ಪ್ರತಿಯೊಬ್ಬರೂ ಅವರವರೇ ನಡೆಯಬೇಕಾಗುತ್ತದೆ. ಗುರಿ ತಲುಪುವ ಸಮಯ ವ್ಯತ್ಯಾಸವಾಗಬಹುದಷ್ಟೇ. ತಾಳ್ಮೆ ಮತ್ತು ವಿಶ್ವಾಸದಿಂದ ನಡೆಯುತ್ತಿರುವುದು ಮುಖ್ಯ. ❖

ಗುಂಡಣ್ಣ

ಪದಬಂಧ 6435

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಂಗಳ ಕಾರ್ಯವಾದ ಮೇಲೆ ಮಾಡುವ ಜಳಕ (6)
4. ಗುರಿಯಿಟ್ಟು ಹೊಡೆಯುವುದರಲ್ಲಿ ನಿಪುಣನೀತ (4)
5. ಅಧಿಕಾರ ಪತ್ರವಿದು (3)
8. ದುಡ್ಡು ಪಡೆದು ಊಟ ನೀಡುವ ಸ್ಥಳ (4)
10. ತಾಳಿಯಲ್ಲಿ ಪೋಣಿಸಿರುವ ಮಣಿ (4)
12. ಚುರುಕ್ಕೆನ್ನುವ ಅಂತಃಕರಣ! (3)
14. ರುಚಿಕಟ್ಟಾದ ಅಡುಗೆ (4)
16. ಚರ್ಚಿಸುವ ಸ್ಥಳವಿದು (6)

ಮೇಲಿಂದ ಕೆಳಕ್ಕೆ

1. ಅಗಸೆ ಬಾಗಿಲಲ್ಲಿರುವ ಮಡಿವಾಳ (3)
2. ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
3. ಪರದೇಶಿ ಸರಿಸಿದ ತೆರೆ (3)
6. ಈತ ಕೆಟ್ಟ ನಡತೆಯವನು (4)
7. ಜಾಮಿತಿಯನ್ನು ಹೀಗೂ ಹೇಳುತ್ತಾರೆ (5)
9. ಪಿತೃಗಳಿಗೆ ವರ್ಷಕ್ಕೊಮ್ಮೆ ಮಾಡುವ ಶ್ರಾದ್ಧ (4)
11. ಹೆಣ್ಣು ಮಂಗ ಇಲ್ಲಿದೆ (3)
13. ತಿರುಗಿ ನಿಂತು ಹೀಗೆ ಸಿಟ್ಟಾಗು! (3)
15. ಕವಿತೆ ಬರೆಯುವವನು (2)



6434ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರೋಗನಿದಾನ 4.ಪಾಷಾಂಡಿ 5.ಗಣಿತ 6.ಕಶೇರು 8.ಸತತ 10.ಅಂಡಜ 11.ಕುಣಿಕೆ 15.ಲಕ್ಷಣ 16.ಆಯಾಸ 17.ಮರುಕಳಿಸು

ಮೇಲಿಂದ ಕೆಳಕ್ಕೆ: 1.ರೋದನ 2.ನಿಷ್ಪಕ್ಷಪಾತ 3.ನಗರ್ತ 4.ಪಾತಕ 7.ಶೇಕಡ 9ತರುಣಿ 10.ಅಂಗರಕ್ಷಕ 12.ಕೆಲಸ 13.ಕಣಮ 14.ಮುನಿಸು

ಸುಡೊಕು 6818

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				6				2
6		2	4		9		1	
	8					6		9
3		7	2		8	4		
		8		4			3	7
4					3	2		8
		9	8					4
8					4			
		3		2		7		6

6817 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಜೂನ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಬಿದಿಗೆ ಗಂ. 24-53 ನಕ್ಷತ್ರ : ಆರ್ದ್ರಾ ಗಂ. 16-13 ಯೋಗ : ವೈಧೃತಿ ಗಂ. 24-35 ಕರಣ : ಬಾಲವ ಗಂ. 14-40, ಮಿಥುನ ಮಾಸದ 01 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 30 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 6, 9

ಮೇಷ: ಹಿಡಿತಕ್ಕೆ ಸಿಕ್ಕಿರುವ ಕೆಲಸಗಳನ್ನು ಸಮರ್ಥವಾಗಿ ಕಾರ್ಯರೂಪಕ್ಕೆ ತರುವಲ್ಲಿ ಇಂದಿನ ಪ್ರಯತ್ನ ಯಶ ತರಲಿದೆ. ಕೆಲಸ ಮುಗಿಸಿದ ತೃಪ್ತಿ ತೋರಿಬರಲಿದೆ.

ವೃಷಭ: ಘೋರ ಆಪಾದನೆಗಳು ದೂರಾಗಿ, ಮೇಲಧಿಕಾರಿಗಳಿಂದ ಗೌರವವನ್ನು ಹಿಂತಿರುಗಿ ಪಡೆಯಲಿದ್ದೀರಿ. ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನೆ ನಡೆಯಬಹುದು.

ಮಿಥುನ: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆ ನಡೆಸುವುದು ಫಲಪ್ರದ. ತೆಂಗಿನಕಾಯಿ ಬೆಳೆಗಾರರಿಗೆ ಬೆಳೆಗೆ ಅಧಿಕ ಬೆಲೆ ಬರುತ್ತದೆ.

ಕರ್ಕಾಟಕ: ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡುಬರಲಿವೆ. ವ್ಯಾಪಾರದಲ್ಲಿ ಲಾಭಕ್ಕೋಸ್ಕರ ಇನ್ನೊಬ್ಬರಿಗೆ ಮೋಸ ಮಾಡುವುದು ಸರಿಯಲ್ಲ. ವಿದೇಶಕ್ಕೆ ಪ್ರಯಾಣ ಬೆಳೆಸಲಿದ್ದೀರಿ.

ಸಿಂಹ: ಅಭಿವೃದ್ಧಿಯಲ್ಲಿ ಶತ್ರುಗಳಿಂದ ಹಲವು ಅಡೆತಡೆಗಳು ಎದುರಾಗಲಿವೆ. ಹೆಚ್ಚಿನ ಸಮಯವೆಲ್ಲವನ್ನು ನಿಶ್ಚಿತ ಗುರಿ ತಲುಪಲು ಮೀಸಲಾಗಿಡುವುದು ಒಳ್ಳೆಯದು.

ಕನ್ಯಾ: ಸಮಸ್ಯೆಯಾಗಿದ್ದ ಕೆಲವು ಪ್ರಶ್ನೆಗಳಿಗೆ ತಂತ್ರಜ್ಞಾನಗಳ ಮೂಲಕ ಉತ್ತರ ದೊರೆಯಲಿದೆ. ಲಾಭಾಂಶದಿಂದ ಆಯಾಸ ಮಾಯವಾಗಲಿದೆ. ವೈವಾಹಿಕ ಜೀವನದಲ್ಲಿ ನೆಮ್ಮದಿ ಕಂಡುಬರಲಿದೆ.

ತುಲಾ: ಪೂರ್ವಾರ್ಧದಲ್ಲಿ ಶುಭ ಅನುಭವಿಸುವ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರಣ ಸವಿಯಬೇಕಾಗುತ್ತದೆ. ವ್ಯವಹಾರಗಳಲ್ಲಿ ಮೂಗು ತೂರಿಸುವಿಕೆಯಿಂದ ರೋಸಿ ಹೋಗುವಿರಿ.

ವೃಶ್ಚಿಕ: ಪ್ರಾದೇಶಿಕ ಹಾಗೂ ಅಳಿವಿನಂಚಿನಲ್ಲಿ ಇರುವ ಭಾಷೆಯ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಕೊಡುಗೆ ಬಹಳ ಶ್ಲಾಘನೀಯ. ಬಳೆ ಅಥವಾ ಅಲಂಕಾರಿಕ ವಸ್ತುಗಳ ಮಾರಾಟಗಾರರಿಗೆ ಲಾಭದಾಯಕ.

ಧನು: ಕೃಷಿಕರಿಗೆ ಕಾಡು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು. ಕೆಲಸಗಾರರಿಂದ ಅಸಹಕಾರವು ಕಂಡುಬರಲಿದೆ. ಅಲರ್ಜಿ ಹಾಗು ತುರಿಕೆಗಳ ವಿಷಯದಲ್ಲಿ ನಿರ್ಲಕ್ಷ್ಯ ಮಾಡುವುದು ಅಪಾಯಕಾರಿ.

ಮಕರ: ಗುತ್ತಿಗೆ ಕೆಲಸದ ವೃತ್ತಿಯವರಿಗೆ ಆಕಸ್ಮಿಕ ರೀತಿಯಲ್ಲಿ ಉದ್ಯೋಗ ದೊರೆತು ಸಂತೋಷ ಸಿಗಲಿದೆ. ಪೂರ್ವಜರ ಗೃಹ ಮಾರಾಟದ ತೀರ್ಮಾನಗಳಿಗೆ ಒಡಹುಟ್ಟಿದವರಿಂದ ಆಕ್ಷೇಪ ವ್ಯಕ್ತವಾಗಬಹುದು.

ಕುಂಭ: ಕುಟುಂಬ ನಿರ್ವಹಣೆಯಲ್ಲಿ ಅಸಹಾಯಕತನ ಮನೆಯ ಸದಸ್ಯರಿಗೆ ತೊಂದರೆ ಉಂಟುಮಾಡಿದರೂ ನೆಂಟರು ಅಪನಂಬಿಕೆಗಳು ಅಥವಾ ದುರಾಲೋಚನೆಗಳು ದೂರಾಗಲಿವೆ.

ಮೀನ: ಇತ್ತೀಚೆಗೆ ಚಿನ್ನಾಭರಣಗಳನ್ನು ಖರೀದಿ ಮಾಡಿ ತಂದಿದ್ದಲ್ಲಿ ಅದರ ತೂಕ ಅಥವಾ ಶುದ್ಧತೆಯಲ್ಲಿ ಅನುಮಾನಿಸುವ ಘಟನೆ ನಡೆಯಲಿದೆ. ವ್ಯಾಪಾರವನ್ನು ನಡೆಸುವಾಗ ಹಣಕಾಸಿನ ವಿಚಾರದಲ್ಲಿ ಗಮನವಿರಲಿ.

ಅರಣ್ಯ ಭೂಮಿ ಮುಟ್ಟುಗೋಲಿಗೆ ಕ್ರಮ

ಗೋಳಿಕಟ್ಟಾ: ₹400 ಕೋಟಿ ಮೌಲ್ಯದ 389.07 ಎಕರೆ ತೆರವಿಗೆ ಸಿಸಿಎಫ್ ಆದೇಶ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಶಿರಸಿ ತಾಲ್ಲೂಕಿನ ಗೋಳಿಕಟ್ಟಾದಲ್ಲಿ ಇರುವ ಕಾಮಧೇನು ಸಹಕಾರಿ ಸಂಘಕ್ಕೆ ಗುತ್ತಿಗೆ (ಲೀಸ್) ನೀಡಲಾಗಿದ್ದ 389.07 ಎಕರೆ ಕಾಯ್ದಿರಿಸಿದ ಅರಣ್ಯ ಭೂಮಿಯನ್ನು ತಕ್ಷಣವೇ ಇಲಾಖೆಯ ಸುಪರ್ದಿಗೆ ನೀಡುವಂತೆ ಕೆನರಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಕೋರ್ಟ್ ಜೂನ್ 9ರಂದು ಆದೇಶ ಹೊರಡಿಸಿದೆ.

ಇದರಿಂದ ₹400 ಕೋಟಿಗೂ ಹೆಚ್ಚು ಮೌಲ್ಯದ ಜಾಗದಲ್ಲಿ ನಿಯಮ ಬಾಹಿರವಾಗಿ ಅಡಿಕೆ ತೋಟ ಮಾಡಿಕೊಂಡಿದ್ದ ಹತ್ತಾರು ಪ್ರಭಾವಿಗಳಿಗೆ ಆತಂಕ ಎದುರಾಗಿದೆ.

1969ರಲ್ಲಿ ಈ ಜಾಗವನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಆದರೆ, 1976ರಲ್ಲಿ ಇದನ್ನು 20 ವರ್ಷಕ್ಕೆ ಇಳಿಸಿದ್ದರಿಂದ 1989ಕ್ಕೆ ಗುತ್ತಿಗೆ ಅವಧಿ ಮುಕ್ತಾಯಗೊಂಡಿತು. ನಂತರ 1980ರ ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಗುತ್ತಿಗೆ ನವೀಕರಣ ಸಾಧ್ಯ ಇಲ್ಲದಿದ್ದರೂ ಸಂಘವು ಜಾಗ ತೆರವುಗೊಳಿಸಿರಲಿಲ್ಲ.

ಇದೇ ಕಾರಣಕ್ಕೆ ಇಲಾಖೆಯು ನೀಡಿದ್ದ ನೋಟಿಸ್‌ಗಳನ್ನು ಪ್ರಶ್ನಿಸಿ ಸಂಘವು ಸಿವಿಲ್ ಹಾಗೂ ಜಿಲ್ಲಾ ಕೋರ್ಟ್‌ಗಳ ಮೆಟ್ಟಿಲೇರಿತ್ತು. ಬಳಿಕ 2013ರಲ್ಲಿ ರಾಜ್ಯ ಸರ್ಕಾರವು ₹1.17 ಕೋಟಿ ಬಾಕಿ ಗುತ್ತಿಗೆ ಹಣ ತುಂಬಿಸಿಕೊಂಡು ಜಾಗ ಮರಳಿಸಲು ಆದೇಶಿಸಿದರೂ ರಾಜಕೀಯ ಒತ್ತಡಗಳಿಂದ ಪ್ರಕರಣ ನನೆಗುದಿಗೆ ಬಿದ್ದಿತ್ತು.

2026ರ ಫೆಬ್ರುವರಿ 21ರಂದು ಎಸಿಎಫ್ ಕೋರ್ಟ್ ಅರಣ್ಯ ಕಾಯ್ದೆ ಸೆಕ್ಷನ್ 64ಎ ಅಡಿಯಲ್ಲಿ ಜಾಗ ತೆರವುಗೊಳಿಸಲು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಇದೀಗ ಸಿಸಿಎಫ್ ಕೋರ್ಟ್ ವಜಾಗೊಳಿಸಿದೆ. ಅಲ್ಲದೆ, ಪರಿಸರ ಸೂಕ್ಷ್ಮ ಹಾಗೂ ಆನೆ ಸಂಚಾರ ವಲಯವಾಗಿರುವ ಈ ಜಮೀನಿನಲ್ಲಿರುವ ಮನೆ, ಕಟ್ಟಡ ಮತ್ತು ಬೆಳೆಗಳನ್ನು ಅತಿಕ್ರಮಣದಾರರು ಸ್ವಂತ ಖರ್ಚಿನಲ್ಲಿಯೇ ತೆರವುಗೊಳಿಸಿ ಇಲಾಖೆಗೆ ಹಸ್ತಾಂತರಿಸಬೇಕು ಎಂದು ಆದೇಶಿಸಿದೆ.

'ಈ ವಿಚಾರವಾಗಿ ಪ್ರಭಾವಿಗಳು ಹೈಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ. ಈ ಕಾರಣ ಇಲಾಖೆಯು ಈಗಾಗಲೇ ಹೈಕೋರ್ಟ್‌ನಲ್ಲಿ ಕೇವಿಯಟ್ ಕೂಡ ದಾಖಲಿಸಿದೆ' ಎಂದು ಇಲಾಖೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

> ಕಾನೂನಿನ ಪ್ರಕಾರ, ಅಲ್ಲಿನ ನಿವಾಸಿಗಳಿಗೆ ಜಾಗ ಖಾಲಿ ಮಾಡಲು ಸೂಕ್ತ ಸಮಯವನ್ನು ನೀಡಿದ ತಕ್ಷಣ ಅರಣ್ಯ ಇಲಾಖೆಯು ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲಿದೆ
> **ಸಂದೀಪ ಸೂರ್ಯವಂಶಿ,** ಡಿಸಿಎಫ್, ಶಿರಸಿ

ಪಶ್ಚಿಮಘಟ್ಟ ವ್ಯಾಪ್ತಿಯ ಅರಣ್ಯ (ಸಂಗ್ರಹ)

ಪ್ರಕರಣ ನಡೆದು ಬಂದ ಹಾದಿ

1969	389.07 ಎಕರೆ ಕಾಮಧೇನು ಸಹಕಾರಿ ಸಂಘಕ್ಕೆ ಲೀಸ್
1976	ಗುತ್ತಿಗೆ ಅವಧಿ 30 ರಿಂದ 20 ವರ್ಷಗಳಿಗೆ ಕಡಿತ
1989	ಗುತ್ತಿಗೆ ಅವಧಿ ಮುಕ್ತಾಯ
1993	ಡಿಸಿಎಫ್ ವತಿಯಿಂದ ಸೊಸೈಟಿಗೆ ಜಾಗ ಖಾಲಿ ಮಾಡಲು ಸೂಚನೆ
2010-2013	ಸರ್ಕಾರದಿಂದ ಲೀಸ್ ನವೀಕರಿಸದಿರಲು ನಿರ್ಧಾರ
2026	ಸಿಸಿಎಫ್ ಕೋರ್ಟ್‌ನಿಂದ ತೆರವು ಆದೇಶ

ಚಿಟಿಕೆ ಸುದ್ದಿ

ಗಣಿಗಾರಿಕೆ ನಿರಾಕರಣೆ: ಸರ್ಕಾರದ ಆದೇಶಕ್ಕೆ ಅಸ್ತು

ಬೆಂಗಳೂರು: 'ಕೆರೆಯ ಭಾಗ ಒಣಗಿ ಹೋಗಿದೆ ಎಂಬ ಕಾರಣಕ್ಕೆ ಆ ಭಾಗದಲ್ಲಿ ಕಲ್ಲು ಗಣಿಗಾರಿಕೆ ನಡೆಸುವುದಕ್ಕೆ ಅನುಮತಿ ನೀಡಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಆದೇಶ ಪ್ರಶ್ನಿಸಿ ಗಣಿಗಾರಿಕೆಯ ಮೂಲ ಗುತ್ತಿಗೆದಾರರಾದ ಅನುಸೂಯಮ್ಮ ಮತ್ತು ಅವರ ಮಗ ಬಿ.ಜಿ.ಮಾರುತಿ ಪ್ರಸಾದ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಪರವಾನಗಿ ನವೀಕರಣಕ್ಕೆ ನಿರಾಕರಿಸಿದ್ದ ಸರ್ಕಾರದ ಕ್ರಮವನ್ನು ಎತ್ತಿಹಿಡಿದಿರುವ ನ್ಯಾಯಪೀಠ, 'ಕೆರೆ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡದಿರುವ ಕಂದಾಯ ಅಧಿಕಾರಿಗಳ ಕ್ರಮದಲ್ಲಿ ಯಾವುದೇ ಕಾನೂನಿನ ದೋಷವಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಕೆರೆಯು 1967-68ರಿಂದ ಸಂಪೂರ್ಣ ಒಣಗಿಹೋಗಿದೆ' ಎಂಬ ಅರ್ಜಿದಾರರ ವಾದವನ್ನು ತಿರಸ್ಕರಿಸಿರುವ ನ್ಯಾಯಪೀಠ, 'ಮಳೆಗಾಲದಲ್ಲಿ ಕನಿಷ್ಠ ಎರಡು ತಿಂಗಳು ಅಲ್ಲಿ ನೀರು ನಿಲ್ಲುತ್ತದೆ ಎಂಬುದು ದಾಖಲೆಗಳಿಂದ ತಿಳಿದುಬಂದಿದೆ' ಎಂದು ಹೇಳಿದೆ.

ಅರ್ಜಿ: ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಮದ್ದಕ್ಕನಹಳ್ಳಿಯ ಸರ್ವೆ ನಂಬರ್ 26ರಲ್ಲಿರುವ ಸರ್ಕಾರಿ ಕೆರೆ ಅಂಗಳದ 3 ಎಕರೆ 20 ಗುಂಟೆ ಪ್ರದೇಶದಲ್ಲಿ ಬೂದು ಗ್ರಾನೈಟ್ ಗಣಿಗಾರಿಕೆ ಗುತ್ತಿಗೆಯನ್ನು (ಕ್ಯೂಎಲ್-41) ನವೀಕರಿಸಲು ಅರ್ಜಿದಾರರು ಕೋರಿದ್ದರು. ಇದನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರಾಕರಿಸಿತ್ತು.

ಕಾದಾಟ: ಹೆಣ್ಣು ಹುಲಿ ಸಾವು

ಎಚ್.ಡಿ. ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಎರಡು ಹುಲಿಗಳ ಕಾದಾಟದಲ್ಲಿ ಹೆಣ್ಣು ಹುಲಿ (7 ವರ್ಷ) ಮೃತಪಟ್ಟಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಮಾಸ್ತಿಗುಡಿ ಗಸ್ತಿನ ಕುಂಬಳ ಗೊಲ್ಲಿ ಎಂಬ ಅರಣ್ಯ ಪ್ರದೇಶದಲ್ಲಿ ಘಟನೆ ನಡೆದಿದೆ.

ಹೆಣ್ಣು ಹುಲಿಯ ಕಳೇಬರವನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಮಾರ್ಗಸೂಚಿಗಳ ಅನ್ವಯ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಹೆಚ್ಚಿನ ತನಿಖೆಗಾಗಿ ಅಂಗಗಳ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಅಸಮರ್ಥ ಗೃಹ ಸಚಿವ ಅಮಿತ್ ಶಾ'

ಬೆಂಗಳೂರು: 'ಬಾಂಗ್ಲಾದೇಶದಿಂದ ಬೆಂಗಳೂರಿನವರೆಗೆ ವಲಸಿಗರು ಹೇಗೆ ಬರುತ್ತಿದ್ದಾರೆ? ನಾವೇನು ಅಂತರ ರಾಷ್ಟ್ರೀಯ ಗಡಿ ಹಂಚಿಕೊಂಡಿದ್ದೇವೆಯೇ'ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಸಮರ್ಥ ಗೃಹ ಸಚಿವ ಅಮಿತ್ ಶಾ ಎಂದು ಬಿಜೆಪಿಯವರೇ ಹೇಳುತ್ತಿದ್ದಾರಲ್ಲ' ಎಂದರು.

'ಅಕ್ರಮ ವಲಸಿಗರು ಇಲ್ಲಿಗೆ (ಕರ್ನಾಟಕಕ್ಕೆ) ಹೇಗೆ ಬರುತ್ತಿದ್ದಾರೆ. ಮಣಿಪುರದಲ್ಲಿ, ಪಶ್ಚಿಮ ಬಂಗಾಳದಲ್ಲಿ, ಅಸ್ಸಾಂನಲ್ಲಿ ಅವರದ್ದೇ (ಬಿಜೆಪಿ) ಸರ್ಕಾರ ಇದೆಯಲ್ಲ. ನಮಗೇನು ಬಾಂಗ್ಲಾದೇಶದ ಜೊತೆ ನಂಟು ಇದೆಯೇ' ಎಂದು ಕೇಳಿದರು.

ಸುದ್ದಿ 2 ನಿಮಿಷ

ಸಂಧಾನದ ನಂತರ ತಕರಾರು ₹25 ಸಾವಿರ ದಂಡ

ಬೆಂಗಳೂರು: ಭೂ ವಿವಾದಕ್ಕೆ ಸಂಬಂಧಿಸಿದ ಪ್ರಕರಣವನ್ನು ಲೋಕ ಅದಾಲತ್‌ನಲ್ಲಿ ಸಂಧಾನದಲ್ಲಿ ಬಗೆಹರಿಸಿಕೊಂಡು, ಮೂರು ವರ್ಷಗಳ ಬಳಿಕ ಅದನ್ನು ಪ್ರಶ್ನಿಸಿದ್ದ ಅರ್ಜಿದಾರರೊಬ್ಬರಿಗೆ ಹೈಕೋರ್ಟ್ ₹25 ಸಾವಿರ ದಂಡ ವಿಧಿಸಿದೆ.

'ಪ್ರಕರಣ ಲೋಕ ಅದಾಲತ್‌ನಲ್ಲಿ ಇತ್ಯರ್ಥವಾಗಿದೆ' ಎಂದು ಸಂಧಾನ ಅರ್ಜಿಯನ್ನು ಪುರಸ್ಕರಿಸಿ ಚಿಕ್ಕಮಗಳೂರಿನ ತರೀಕೆರೆಯ ಹಿರಿಯ ಸಿವಿಲ್ ನ್ಯಾಯಾಲಯ 2021ರ ಆಗಸ್ಟ್‌ನಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಅಸಲು ದಾವೆ ವಜಾಗೊಳಿಸಿತ್ತು. ಈ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ತರೀಕೆರೆ ತಾಲ್ಲೂಕು ಕಲ್ಲಹಳ್ಳಿಯ ಚೇತನ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಅರ್ಜಿದಾರರು ಸಂಧಾನದ ಅರ್ಜಿಗೆ ಸಹಿ ಹಾಕಿದ್ದಾರೆ. ನಂತರ ಅದರ ಫಲವನ್ನೂ ಪಡೆದಿದ್ದಾರೆ. ಆದರೆ, ಮೂರು ವರ್ಷಗಳ ಬಳಿಕ ಸಂಧಾನವನ್ನು ಪ್ರಶ್ನಿಸಿರುವುದು ಕಾನೂನು ಪ್ರಕ್ರಿಯೆ ದುರ್ಬಳಕೆಯಾಗಿದೆ' ಎಂಬ ಅಭಿಪ್ರಾಯದೊಂದಿಗೆ ದಂಡ ವಿಧಿಸಿತು. 'ದಂಡದ ಮೊತ್ತವನ್ನು ನಾಲ್ಕು ವಾರಗಳಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ (ಕೆಎಸ್‌ಎಲ್‌ಎಸ್‌ಎ) ಪಾವತಿಸಬೇಕು. ಜುಲೈ 14ರೊಳಗೆ ಪಾವತಿಸದಿದ್ದರೆ ಕೆಎಸ್‌ಎಲ್‌ಎಸ್‌ಎಯು ಅದನ್ನು ಭೂ ಕಂದಾಯ ಹಿಂಬಾಕಿ ಎಂದು ವಸೂಲಿ ಮಾಡಬಹುದಾಗಿದೆ' ಎಂದು ನಿರ್ದೇಶಿಸಿತು.

ಸರ್ಕಾರಕ್ಕೆ 10 ಸಾವಿರ ಪತ್ರ ಸಲ್ಲಿಕೆ

ಶಿರಸಿ: ಬೇಡ್ತಿ- ಅಘನಾಶಿನಿ ನದಿ ತಿರುವು ಯೋಜನೆಗಳನ್ನು ಕೈಬಿಡುವಂತೆ ಆಗ್ರಹಿಸಿ ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಹಮ್ಮಿಕೊಂಡ ಪತ್ರ ಚಳವಳಿಯ ಭಾಗವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸೋಮವಾರ ಇಲ್ಲಿನ ಉಪವಿಭಾಗಾಧಿಕಾರಿ ಚಂದ್ರಶೇಖರ.ಆರ್ ಅವರ ಮೂಲಕ 10 ಸಾವಿರ ಪತ್ರಗಳನ್ನು ರವಾನಿಸಲಾಯಿತು.

'ನದಿ ತಿರುವು ಯೋಜನೆಯಿಂದ ಪಶ್ಚಿಮ ಘಟ್ಟದ ಜೀವ ವೈವಿಧ್ಯಭರಿತ ನದಿತೀರದ ಅರಣ್ಯ ಮತ್ತು ಕೃಷಿಭೂಮಿ ನಾಶ ಆಗುತ್ತವೆ. ನದಿಯ ಕೆಳಭಾಗದಲ್ಲಿ ನೀರಿನ ಹರಿವು ಕಡಿಮೆಯಾಗಿ, ಕುಡಿಯುವ ಮತ್ತು ಕೃಷಿ ನೀರಿನ ತೀವ್ರ ಕೊರತೆ ಎದುರಾಗಲಿದೆ. ನದಿಯನ್ನೇ ನಂಬಿರುವ ಮೀನು, ಏಡಿ, ಕಪ್ಪೆಗಳೂ ಸೇರಿ ಅಸಂಖ್ಯ ಜಲಚರ ವಂಶಗಳು ಸಂಪೂರ್ಣ ಕಣ್ಮರೆಯಾಗಲಿವೆ' ಎಂಬ ಅಂಶ ಪತ್ರದಲ್ಲಿದೆ.

'ಭೂಕುಸಿತದ ಭೀತಿಯಲ್ಲಿರುವ ಈ ಇಳಿಜಾರು ಪ್ರದೇಶಗಳಲ್ಲಿ ಯೋಜನೆಯಿಂದ ಮತ್ತಷ್ಟು ಭೂಕುಸಿತ ಸಂಭವಿಸಲಿವೆ. ಯೋಜನೆಯಿಂದ ನಮ್ಮ ಪ್ರದೇಶದ ರೈತರು, ಮೀನುಗಾರರು ಮತ್ತು ವನವಾಸಿಗಳ ಜೀವನೋಪಾಯ ನಷ್ಟವಾಗಿ, ಬದುಕು ದುಸ್ತರವಾಗುತ್ತದೆ. ಆದ್ದರಿಂದ ಸರ್ಕಾರ ತಕ್ಷಣವೇ ಬೇಡ್ತಿ ನದಿ ತಿರುವು ಯೋಜನೆ ಕೈಬಿಡಬೇಕು' ಎಂದು ತಿಳಿಸಲಾಗಿದೆ.

ಈ ವೇಳೆ ಶಾಸಕ ಭೀಮಣ್ಣ ನಾಯ್ಕ, ಹೋರಾಟ ಸಮಿತಿ ಅಧ್ಯಕ್ಷ ಅನಂತ ಅಶೀಸರ ಹಾಗೂ ಇತರರು ಇದ್ದರು.

ಜಾಗೃತಿ

ಹೆಲ್ಮೆಟ್ ಜಾಗೃತಿ ಅಭಿಯಾನದ ಭಾಗವಾಗಿ, ಬೆಳಗಾವಿಯಲ್ಲಿ ಪೊಲೀಸ್ ಅಧಿಕಾರಿಗಳು ಸೋಮವಾರ ಬೈಕ್ ರ‍್ಯಾಲಿ ನಡೆಸಿದರು

ಪ್ರಜಾವಾಣಿ ಚಿತ್ರ:

₹2 ಕೋಟಿ ವಿಮೆಗಾಗಿ ಪತಿ ಕೊಲೆ: 9 ಮಂದಿ ಬಂಧನ

ಬೆಳಗಾವಿ: ₹2 ಕೋಟಿ ವಿಮೆ ಹಣ ಪಡೆಯಲು ಮಾಜಿ ಸೈನಿಕನನ್ನು ಆಸ್ಪತ್ರೆಯಲ್ಲೇ ಕೊಲೆ ಮಾಡಿದ ಆರೋಪದ ಮೇಲೆ ಮೃತನ ಪತ್ನಿ ಸೇರಿ 9 ಮಂದಿಯನ್ನು ಬಂಧಿಸಲಾಗಿದೆ. ಎಫ್‌ಎಸ್‌ಎಲ್ ಪ್ರಯೋಗಾಲಯದ ಸಿಬ್ಬಂದಿಯೂ ಶಾಮೀಲಾಗಿದ್ದನ್ನು ಯಮಕನಮರಡಿ ಠಾಣೆಯ ಪೊಲೀಸರು, ತನಿಖೆಯಿಂದ ಬಯಲಿಗೆಳೆದಿದ್ದಾರೆ.

ಹುಕ್ಕೇರಿ ತಾಲ್ಲೂಕಿನ ಘೋಡಗೇರಿ ಗ್ರಾಮದ, ಮಾಜಿ ಸೈನಿಕ ಸಂದೀಪ ಕಲಗೌಡ ಮಂಜರಗಿ (46) ಕೊಲೆಯಾದವರು.

ಸಂದೀಪ ಪತ್ನಿ ಸುಮಾ, ಆಕೆಯ ಪ್ರಿಯಕರ ಪುಂಡಲೀಕ ಡೊಂಬರ್, ಆರ್‌ಎಂಪಿ ಡಾಕ್ಟರ್ ಬಸವರಾಜ ಭಸ್ಮೆ, ಬೆಳಗಾವಿ ಕಮಿಷನರ್ ಕಚೇರಿ ಎಫ್‌ಡಿಎ ಅಶೋಕ ಗುಜನಾಳ, ಎಫ್‌ಎಸ್‌ಎಲ್ ಪ್ರಯೋಗಾಲಯದ ಗುಮಾಸ್ತ ಅಪ್ಪಾಸಾಹೇಬ ನಾಯಿಕ, ಸಹಾಯಕ ಚನ್ನಯ್ಯ ಅಡವಿಸ್ವಾಮಿಮಠ, ಹಿರಿಯ ವೈಜ್ಞಾನಿಕ ಅಧಿಕಾರಿ ಪಿ.ಎನ್. ನಾಗರಾಜ, ಪುಂಡಲೀಕ ಸ್ನೇಹಿತರಾದ ಸಚಿನ್ ಸೇಲಾರ, ರಾಹುಲ್ ಜೋಗಿ ಅವರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸಂದೀಪ ₹2 ಕೋಟಿ ವಿಮೆ ಮಾಡಿಸಿದ್ದರು. ಅಪಘಾತದಲ್ಲಿ ಮೃತಪಟ್ಟರೆ ವಿಮೆಯ ಪೂರ್ಣ ಹಣ ಪತ್ನಿಗೆ ಬರುವಂತೆ ಮಾಡಿದ್ದರು. ಹಣದ ಆಸೆ ಹಾಗೂ ಪ್ರಿಯಕರನ ಸಲುವಾಗಿ ಪತ್ನಿಯೇ ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ. ಕೃತ್ಯದಲ್ಲಿ ಎಫ್‌ಎಸ್‌ಎಲ್ ಸಿಬ್ಬಂದಿ ಸಹ ಹಣ ಪಡೆದು ಭಾಗಿಯಾಗಿದ್ದಾರೆ' ಎಂದರು.

'ಬಿತ್ತನೆ ಬೀಜ ಪೂರೈಕೆ ಖಾತರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಗೆ ಕೊರತೆಯಾಗದಂತೆ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದರು.

ವಿಧಾನಸೌಧದಲ್ಲಿ ಸೋಮವಾರ ಕೃಷಿ, ತೋಟಗಾರಿಕೆ, ರೇಷ್ಮೆ ಮೀನುಗಾರಿಕೆ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದರು. 'ಅತಿವೃಷ್ಟಿ- ಅನಾವೃಷ್ಟಿ ಪರಿಸ್ಥಿತಿಯನ್ನು ಎದುರಿಸಲು ಪೂರ್ವಸಿದ್ಧತೆ ನಡೆಸಬೇಕು. ರೈತರಿಗೆ ಸಕಾಲಕ್ಕೆ ಅಗತ್ಯ ಮಾಹಿತಿ, ಕ್ರಿಮಿನಾಶಕ ಸೇರಿ ಔಷಧ ಹಾಗೂ ಕೃಷಿ ಸಲಕರಣೆಗಳನ್ನು ಪೂರೈಸಬೇಕು' ಎಂದರು.

'ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವುದರಿಂದ ಬೇಲಿ ನಿರ್ಮಿಸಬೇಕು. ಬೇರೆ ರಾಜ್ಯಗಳ ಮಾದರಿ ಯೋಜನೆಗಳನ್ನು ಅಧ್ಯಯನ ಮಾಡಿ, ರಾಜ್ಯಕ್ಕೆ ಅನುಕೂಲಕರವಾಗಿ ಜಾರಿಗೊಳಿಸಬೇಕು. ಡ್ರೋನ್ ಮತ್ತು ಕೃತಕ ಬುದ್ಧಿಮತ್ತೆ ಸೇರಿ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸಬೇಕು' ಎಂದರು.

ಹುದ್ದೆ ಭರ್ತಿ ಮಾಡಿ; 'ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ರೈತರ ಆದಾಯ ಹೆಚ್ಚಿಸುವಲ್ಲಿ ಕ್ರಮ ಕೈಗೊಳ್ಳಬೇಕು. ಕೃಷಿ ಇಲಾಖೆಯ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ವರದಿ ಕೊಡಬೇಕು. ಎಲ್ಲ ಶೀತಲ ಗೃಹ ಮತ್ತು ಗೋದಾಮುಗಳ ಪಟ್ಟಿ ಕೊಡಬೇಕು' ಎಂದು ಹೇಳಿದರು.

'ರಫ್ತು ಉತ್ತೇಜನಕ್ಕೆ ಯೋಜನೆ ರೂಪಿಸಬೇಕು' ಎಂದು ಇದೇ ವೇಳೆ ತಮ್ಮ ಆರ್ಥಿಕ ಸಲಹೆಗಾರರಾದ ಎಲ್.ಕೆ. ಅತೀಕ್ ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ಸೂಚಿಸಿದರು.

'ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಗಳು ರಾಜ್ಯದಲ್ಲಿ ಜಾರಿಗೊಂಡ ಕುರಿತು ವರದಿ ಕೊಡಬೇಕು. ಅದನ್ನು ಆಧರಿಸಿ ಕೇಂದ್ರದ ಅನುದಾನ ಬರುವಂತೆ ಒತ್ತಡ ಹೇರೋಣ' ಎಂದರು.

'ಕಾಸ್ಕಾರ್ಡ್ ಬ್ಯಾಂಕ್‌ಗಳು ಕೊಡುವ ಬಡ್ಡಿ ರಹಿತ ಸಾಲದ ಸೌಲಭ್ಯ ಅಗತ್ಯವಿರುವವರಿಗೆ ತಲುಪುತ್ತಿಲ್ಲ. ₹5 ಲಕ್ಷದವರೆಗೂ ಬಡ್ಡಿ ರಹಿತ ಸಾಲ ಸೌಲಭ್ಯ ದುರುಪಯೋಗವಾಗುತ್ತಿದೆ. ಬ್ಯಾಂಕ್ ಪ್ರಮುಖರು ತಮಗೆ ಬೇಕಾದವರಿಗೆ ಸಾಲ ಕೊಡುತ್ತಿದ್ದಾರೆ ಎಂದು ರೈತರು ನನ್ನ ಬಳಿ ದೂರುತ್ತಿದ್ದಾರೆ. ಈ ಅಕ್ರಮಕ್ಕೆ ಕೂಡಲೇ ಕಡಿವಾಣ ಹಾಕಬೇಕು' ಎಂದು ಸೂಚಿಸಿದರು.

₹1,068 ಕೋಟಿ ಮೌಲ್ಯದ ಮಾವು ನಷ್ಟ

'ಪ್ರಸಕ್ತ ವರ್ಷ ₹ 1,068 ಕೋಟಿ ಮೌಲ್ಯದ ಮಾವು ಬೆಳೆ ನಾಶವಾಗಿದೆ. ಆ ಪೈಕಿ ಶೇ 25ರಷ್ಟು ಅಂದರೆ, ₹229 ಕೋಟಿ ಪರಿಹಾರ ಕೊಡಬೇಕಾಗಿದೆ' ಎಂದು ಶಿವಕುಮಾರ್ ತಿಳಿಸಿದರು.

'ರಾಜ್ಯ ಸರ್ಕಾರ ₹ 114 ಕೋಟಿ ಹಾಗೂ ಕೇಂದ್ರ ಸರ್ಕಾರ ₹ 115 ಕೋಟಿ ನಷ್ಟ ಪರಿಹಾರ ಭರಿಸಬೇಕಿದೆ. ಹೀಗಾಗಿ ಮಾವು ಬೆಳೆಗಾರರಿಗೆ ನಷ್ಟ ಪರಿಹಾರ ಸಿಗುವಂತೆ ನೋಡಿಕೊಳ್ಳಬೇಕು' ಎಂದು ಹೇಳಿದರು.

ರೆಸಾರ್ಟ್‌ನಲ್ಲಿ ಸಿಎಲ್‌ಪಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು/ರಾಮನಗರ: ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಬಿಡದಿ ಬಳಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಮಂಗಳವಾರ (ಜೂನ್ 16) ನಡೆಯಲಿದೆ.

ಚುನಾವಣೆಯಲ್ಲಿ ಅಡ್ಡ ಮತದಾನ ತಡೆಯಲು ಮುಂದಾಗಿರುವ ಕಾಂಗ್ರೆಸ್, ತನ್ನ ಎಲ್ಲ ಶಾಸಕರನ್ನು ಎರಡು ದಿನ ರೆಸಾರ್ಟ್‌ಗೆ ಸ್ಥಳಾಂತರಿಸುತ್ತಿದೆ. ಶಾಸಕರು ಅಲ್ಲಿಂದಲೇ ನೇರವಾಗಿ ವಿಧಾನಸೌಧಕ್ಕೆ ತೆರಳಿ ಮತ ಚಲಾಯಿಸಲಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್‌ನ ಐವರು ಅಭ್ಯರ್ಥಿಗಳನ್ನು ಶತಾಯಗತಾಯ ಗೆಲ್ಲಿಸಿಕೊಳ್ಳಲು ಸಿಎಲ್‌ಪಿ ಸಭೆಯಲ್ಲಿ ಕಾಂಗ್ರೆಸ್ ರಣತಂತ್ರ ರೂಪಿಸಲಿದೆ.

ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಆದ ಬಳಿಕ ನಡೆಯುತ್ತಿರುವ ಮೊದಲ ಶಾಸಕಾಂಗ ಪಕ್ಷದ ಸಭೆಯಾಗಿದ್ದು, ಸಂಜೆ 6.30 ಗಂಟೆಗೆ ಸಭೆ ಆರಂಭವಾಗಲಿದೆ. ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಶಾಸಕರು ಹಾಗೂ ಪರಿಷತ್ ಸದಸ್ಯರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ರೆಸಾರ್ಟ್‌ನಲ್ಲಿ ಶಾಸಕರ ವಾಸ್ತವ್ಯಕ್ಕೆ 135 ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ಸುಮಾರು 150 ಮಂದಿಗೆ ಊಟೋಪಚಾರ ಸೇರಿದಂತೆ ಸಕಲ ವ್ಯವಸ್ಥೆ ಮಾಡಲಾಗಿದೆ. ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಶ್ವಾನ ದಳದ ಸಿಬ್ಬಂದಿ ರೆಸಾರ್ಟ್ ಒಳಗೆ ಮತ್ತು ಹೊರಗೆ ಸೋಮವಾರ ದಿನವಿಡೀ ಭದ್ರತಾ ತಪಾಸಣೆ ನಡೆಸಿದರು. ರೆಸಾರ್ಟ್ ಪ್ರವೇಶದ್ವಾರದಲ್ಲೇ ಲೋಹ ಶೋಧಕ ಅಳವಡಿಸಲಾಗಿದೆ. ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆ ಹಾಗೂ ವಂಡರ್‌ಲಾ ರಸ್ತೆಯ ಅಲ್ಲಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಹಿನ್ನೆಲೆಯಲ್ಲಿ ರಾಮನಗರ ತಾಲ್ಲೂಕಿನ ಬಿಡದಿ ಬಳಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ನಡೆದಿರುವ ಸಿದ್ಧತೆಗಳನ್ನು ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ ಪರಿಶೀಲಿಸಿದರು

'ಸಿಎಲ್‌ಪಿ ಸಭೆಗೆ ಎಲ್ಲಾ ರೀತಿಯ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ. ಡಿವೈಎಸ್‌ಪಿ, ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳು ಸೇರಿದಂತೆ 100ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ್ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ನೂರೈವತ್ತು ಜನರಿಗೆ ಉಪಾಹಾರ, ಊಟಕ್ಕೆ ಮಾಂಸಾಹಾರ, ಸಸ್ಯಾಹಾರದ ವ್ಯವಸ್ಥೆ ಮಾಡಲಾಗಿದೆ. ಸಭೆ ನಡೆಸಲು ಹಾಲ್‌ನಲ್ಲಿ ಆಸನಗಳು, ಮೈಕ್ ಸೇರಿದಂತೆ ಎಲ್ಲಾ ರೀತಿಯ ಸಿದ್ಧತೆ ಮಾಡಲಾಗಿದೆ. ರೆಸಾರ್ಟ್ ಹೊರಗಡೆಯೂ ಟೆಂಟ್ ಅಳವಡಿಸಲಾಗಿದೆ. ಸಭೆಗೆ ಸಂಬಂಧಿಸಿದಂತೆ ಪಕ್ಷದ ನಾಯಕರು ಸ್ಥಳೀಯ ಮುಖಂಡರಿಗೆ ವಿವಿಧ ಜವಾಬ್ದಾರಿಗಳನ್ನು ವಹಿಸಿದ್ದಾರೆ ಎಂದು ಮುಖಂಡರೊಬ್ಬರು ಮಾಹಿತಿ ನೀಡಿದರು. ಸ್ಥಳೀಯ ಶಾಸಕ ಎಚ್‌.ಸಿ. ಬಾಲಕೃಷ್ಣ ರೆಸಾರ್ಟ್‌ಗೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು.

ಸರ್ಕಾರಿ ನೌಕರರಿಗೆ 'ಕರ್ತವ್ಯ' ಕಡ್ಡಾಯ

ಒಂದನೇ ಪುಟದಿಂದ...

ಮೂರು ದಿನಗಳಲ್ಲೇ ಮೊಬೈಲ್ ಆ್ಯಪ್ ಆಧಾರಿತ ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯನ್ನು (ಕಾಮ್ಸ್) ತ್ವರಿತವಾಗಿ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ಇದುವರೆಗೂ ಇದ್ದ ಬಯೊಮೆಟ್ರಿಕ್ ವ್ಯವಸ್ಥೆಯಲ್ಲಿ ನೌಕರರು ಕಚೇರಿಯಲ್ಲಿ ಇದ್ದಾರೋ, ಇಲ್ಲವೋ ಎಂಬ ಮಾಹಿತಿ ಸಿಗುತ್ತಿರಲಿಲ್ಲ. ಈ ದೋಷವನ್ನು ನಿವಾರಿಸಲು, ಉದ್ಯೋಗಿಗಳ ಭೌತಿಕ ಉಪಸ್ಥಿತಿ ಮತ್ತು ಕಚೇರಿಯ ಭೌಗೋಳಿಕ ಸ್ಥಳವನ್ನು ನಿಖರವಾಗಿ ಪತ್ತೆಹಚ್ಚುವ ಈ ಹೊಸ ವ್ಯವಸ್ಥೆಯನ್ನು ರೂಪಿಸಲಾಗಿದೆ. ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ದಕ್ಷತೆಯನ್ನು ಹೆಚ್ಚಿಸಲು, ಸಾರ್ವಜನಿಕರ ಕೆಲಸಗಳಿಗೆ ವೇಗ ನೀಡಲು ಸಹಕಾರಿಯಾಗುವ ಸ್ವದೇಶಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಒಳಗೊಂಡ ನೂತನ ಕ್ರಮವನ್ನು 'ಕರ್ತವ್ಯ' ಕ್ರಾಂತಿ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಬಣ್ಣಿಸಿದ್ದಾರೆ.

'ಕರ್ನಾಟಕದ ಅರ್ಹರಿಗಷ್ಟೆ ಗ್ಯಾರಂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹ ಲಕ್ಷ್ಮಿ, ಗೃಹ ಜ್ಯೋತಿ ಯೋಜನೆಗಳು ಕರ್ನಾಟಕದ ಅರ್ಹ ಫಲಾನುಭವಿಗಳಿಗೆ ತಲುಪಬೇಕು ಎಂಬುದು ಸರ್ಕಾರದ ಉದ್ದೇಶವೇ ಹೊರತು, ಯೋಜನೆಗಳನ್ನು ನಿಲ್ಲಿಸುವುದು ಅಲ್ಲ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುನರುಚ್ಚರಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಈ ಯೋಜನೆಗಳನ್ನು ಸರ್ಕಾರವು ಅನ್ಯ ರಾಜ್ಯದವರಿಗೆ ನೀಡುವುದಿಲ್ಲ. ಉಚಿತ ವಿದ್ಯುತ್ ಅನ್ನು ನಮ್ಮ ರಾಜ್ಯದ ಮತದಾರರಿಗೆ ನೀಡಬೇಕೇ ಹೊರತು, ಬೇರೆ ರಾಜ್ಯದವರಿಗೆ ಯಾಕೆ ಕೊಡಬೇಕು? ಹೀಗಾಗಿ, ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ' ಎಂದರು.

'ಗೃಹ ಲಕ್ಷ್ಮಿ ಹಣವನ್ನು ಕೆಲವರು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಇದಕ್ಕಾಗಿ ಗ್ರಾಮ ಪಂಚಾಯಿತಿಯಿಂದ ತಾಲ್ಲೂಕು ಪಂಚಾಯಿತಿವರೆಗೆ ಎಲ್ಲೆಲ್ಲಿ ಇಂತಹ ಯೋಜನೆಗಳಿವೆಯೊ ಅವುಗಳಿಗೆ ಕಡಿವಾಣ ಹಾಕಲು ನಿರ್ದೇಶನ ನೀಡಲಾಗಿದೆ' ಎಂದರು.

'ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ ಎಂದು ವಿರೋಧ ಪಕ್ಷಗಳು ಪ್ರಚಾರ ಮಾಡುತ್ತಿವೆಯಲ್ಲ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಯಾವ ಕಾರಣಕ್ಕೂ ನಿಲ್ಲಿಸುವುದಿಲ್ಲ. ಹೆಣ್ಣು ಕುಟುಂಬದ ಕಣ್ಣು ಎಂದು ಅವರಿಗೆ ಆರ್ಥಿಕ ಶಕ್ತಿ ಸಿಗಬೇಕು, ಅವರ ಮನೆಗಳು ಬೆಳಗಬೇಕು ಎಂದು ನೀಡಲಾಗಿದೆ. ವಿರೋಧ ಪಕ್ಷಗಳು ಹೀಗೆ ಮಾತನಾಡುತ್ತಿರಲಿ' ಎಂದರು.

'ಗ್ಯಾರಂಟಿ ಯೋಜನೆ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಲು ಸರ್ಕಾರ ಮುಂದಾಗಿದೆ. ಆರಂಭದಲ್ಲಿ ಕೆಲವು ಫಲಾನುಭವಿಗಳು ಬೇರೆಯವರ ದೂರವಾಣಿ ಸಂಖ್ಯೆ ಹಾಗೂ ಇತರೆ ಮಾಹಿತಿ ನೀಡಿದ್ದಾರೆ. ಬೇರೆಯವರ ಖಾತೆಗೆ ಹಣ ಹೋಗುತ್ತಿರುವ ಬಗ್ಗೆ ನಮಗೆ ಮಾಹಿತಿಯಿದೆ. ಫಲಾನುಭವಿಗಳ ಖಾತೆಗೆ ಹಣ ಹೋಗುವಂತೆ ಮಾಡುವುದು ಸರ್ಕಾರದ ಉದ್ದೇಶ' ಎಂದೂ ಅವರು ತಿಳಿಸಿದರು.

'ಬಿಜೆಪಿ ಅಪಪ್ರಚಾರ: ಆತಂಕಬೇಡ'

'ಗ್ಯಾರಂಟಿಗಳ ಅನುಷ್ಠಾನದಲ್ಲಿನ ದೋಷಗಳನ್ನು ಸರಿಪಡಿಸುವ ಕೆಲಸ ಮುಂದುವರೆದಿದೆ ಅಷ್ಟೆ. ಬಿಜೆಪಿಯ ಅಪಪ್ರಚಾರಕ್ಕೆ ಕಿವಿಗೊಟ್ಟು ಫಲಾನುಭವಿಗಳು ಆತಂಕಕ್ಕೆ ಒಳಗಾಗಬೇಕಿಲ್ಲ' ಎಂದು ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಎಕ್ಸ್' ಮಾಡಿರುವ ಅವರು, 'ಮುಂದಿನ ಎರಡು ವರ್ಷ ಮಾತ್ರವಲ್ಲ, ಮುಂದಿನ ಚುನಾವಣೆಯಲ್ಲಿಯೂ ನಾವು ಅಧಿಕಾರಕ್ಕೆ ಬರಲಿದ್ದೇವೆ. ನಂತರವೂ ಗ್ಯಾರಂಟಿ ಯೋಜನೆಗಳು ಮುಂದುವರಿಯಲಿವೆ' ಎಂದಿದ್ದಾರೆ.

'ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ಮೊದಲ ದಿನದಿಂದಲೇ ವಿರೋಧಿಸುತ್ತಾ ಬಂದಿದೆ. ಈ ಯೋಜನೆಗಳಿಂದ ಹಣಕಾಸಿನ ಕೊರತೆಯಾಗಿ ಸರ್ಕಾರ ದಿವಾಳಿಯಾಗಲಿದೆ ಎಂದೂ ಅವರು ಹೇಳಿದರು. ಈಗ ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳಲಿದೆ ಎಂದು ಪುಕಾರು ಹಬ್ಬಿಸುತ್ತಿದ್ದಾರೆ. ಇದು ರಾಜಕೀಯ ಹತಾಶೆಯ ಪ್ರತೀಕ' ಎಂದಿದ್ದಾರೆ.

'ಯೋಜನೆಗಳು ಅನರ್ಹರ ಪಾಲಾದಾಗ ತಡೆಗಟ್ಟುವುದು ಚುನಾಯಿತ ಸರ್ಕಾರದ ಕರ್ತವ್ಯ. ಜನರು ಕೂಡಾ ಈ ಬಗ್ಗೆ ಯೋಚನೆ ಮಾಡಬೇಕಾಗಿದೆ. ದುರಾಸೆಗೆ ಬಲಿಬಿದ್ದು ಸರ್ಕಾರಕ್ಕೆ ಮೋಸ ಮಾಡಿ ಗ್ಯಾರಂಟಿ ಯೋಜನೆಗಳ ಲಾಭ ತೆಗೆದುಕೊಳ್ಳುವುದು ಕಾನೂನಿನ ಉಲ್ಲಂಘನೆ. ಅಲ್ಲದೆ, ಜನರಿಗೆ ಬಗೆಯುವ ದ್ರೋಹ. ಇಂತಹ ವಿಷಯದಲ್ಲಿ ವಿರೋಧ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಅಪಪ್ರಚಾರ ಮಾಡಲು ಹೋಗದೆ, ಅರ್ಹರಿಗೆ ಯೋಜನೆಗಳನ್ನು ತಲುಪಿಸಲು ನೆರವಾಗಬೇಕು' ಎಂದು ಮನವಿ ಮಾಡಿದರು.

'ಗೃಹಲಕ್ಷ್ಮಿ'ಗೆ ಕತ್ತರಿ ಅಶೋಕ

'ಸತ್ತವರನ್ನು ಪತ್ತೆ ಮಾಡಲು ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ಬಳಸಿಕೊಳ್ಳಬೇಕಿತ್ತು. ಆದರೆ, ಈ ಸಮಿತಿ ವ್ಯರ್ಥವಾಗಿದೆ' ಎಂದು ವಿರೋಧ ಪಕ್ಷದ ನಾಯಕ ಅಶೋಕ ಟೀಕಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಗ್ಯಾರಂಟಿ ಸಮಿತಿಯನ್ನು ರದ್ದುಪಡಿಸಿ, ಖರ್ಚು ಮಾಡಿದ ಹಣ ಮರಳಿ ಪಡೆಯಬೇಕು. ಸತ್ತವರ ಹೆಸರು ಸ್ವಯಂಚಾಲಿತವಾಗಿ ರದ್ದಾಗಬೇಕು. ಅದನ್ನು ಬಿಟ್ಟು ಗೃಹಲಕ್ಷ್ಮಿ ಯೋಜನೆಯನ್ನು ಪರಿಷ್ಕರಿಸುವ ನೆಪದಲ್ಲಿ ಫಲಾನುಭವಿಗಳ ಸಂಖ್ಯೆ ಕಡಿತ ಮಾಡಲಾಗುತ್ತಿದೆ' ಎಂದು ಆರೋಪಿಸಿದರು. 'ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡುವಾಗಲೇ ಷರತ್ತುಗಳ ಬಗ್ಗೆ ತಿಳಿಸಬೇಕಿತ್ತು. ಸರ್ಕಾರ ದಿವಾಳಿ ಆಗಿರುವುದರಿಂದ ಈಗ ಇಂತಹ ಕ್ರಮಕ್ಕೆ ಮುಖ್ಯಮಂತ್ರಿ ಮುಂದಾಗಿದ್ದಾರೆ' ಎಂದರು.

ಮೈಸೂರಿನ ದಟ್ಟಗಳ್ಳಿಯ 'ಮಾರಾ' ರೆಸ್ಟೋಪಬ್‌ನಲ್ಲಿ ಘಟನೆ

ಪಬ್‌ನಲ್ಲಿ ಅಗ್ನಿ ಅವಘಡ: ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿಯ 'ಫಾಕ್ಸ್ ಡೆನ್ ಲಿಕ್ಕರ್ ಗ್ಯಾರೇಜ್'ನ 'ಮಾರಾ' ರೆಸ್ಟೋಪಬ್‌ನಲ್ಲಿ ಸೋಮವಾರ ಶಾರ್ಟ್ ಸರ್ಕಿಟ್‌ನಿಂದ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಸಜೀವ ದಹನವಾಗಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಪ್ರಕಾಶ್

ಶಾಹಿನ್

ಪಬ್‌ನಲ್ಲಿ ಮುಖ್ಯ ಅಡುಗೆ ಸಿಬ್ಬಂದಿಯಾಗಿದ್ದ ಡಾರ್ಜಿಲಿಂಗ್‌ನ ಸಾಹಿನ್ (26), ನೇಪಾಳದ ಪ್ರಕಾಶ್ (24) ಮೃತರು. ಪಬ್ ವ್ಯವಸ್ಥಾಪಕ ಮಹದೇವ ಪ್ರಸಾದ್ (32), ಸಿಬ್ಬಂದಿ ಯೋಗ (24), ಅವಿನಾಶ್ (27), ಗ್ರಾಹಕರಾದ ಸೋನು (25), ರಮೇಶ್ (25), ಪ್ರಜ್ವಲ್ (26) ಅವರಿಗೆ ಗಾಯಗಳಾಗಿವೆ.

'ಚಲನಚಿತ್ರ ನಟ ಪ್ರೀತಂ ಪುನೀತ್ ಅವರು ಕಟ್ಟಡದ 2ನೇ ಮಹಡಿಯಲ್ಲಿ ಒಣ ಹುಲ್ಲು ಮತ್ತು ಬಿದಿರು ಬಳಸಿ ದಕ್ಷಿಣ ಆಫ್ರಿಕಾದ 'ಮಾರಾ' ಜನಾಂಗದವರ ಶೈಲಿಯಲ್ಲಿ ಈ ರೆಸ್ಟೋಪಬ್ ಆರಂಭಿಸಿದ್ದರು. ಕೆಲ ದಿನಗಳಿಂದ ₹175ಕ್ಕೆ ಎಲ್ಲಾ ಬಗೆಯ ಆಹಾರ ದೊರೆಯುವುದಾಗಿ ವಿಶೇಷ ಆಫರ್ ನೀಡಿದ್ದರು. ಹೀಗಾಗಿ ಗ್ರಾಹಕರೂ ಹೆಚ್ಚಿದ್ದರು' ಎಂದು ಪೊಲೀಸರು ತಿಳಿಸಿದರು.

'ಸಂಜೆ 3ಕ್ಕೆ ಅಲಂಕಾರಕ್ಕಾಗಿ ಅಳವಡಿಸಲಾದ ವಿದ್ಯುತ್ ಬಲ್ಬ್‌ನಲ್ಲಿ ಶಾರ್ಟ್ ಸರ್ಕಿಟ್ ಉಂಟಾಗಿ ಬೆಂಕಿ ಕಾಣಿಸಿಕೊಂಡಿದ್ದು, ಒಣ ಹುಲ್ಲು ಇದ್ದ ಕಾರಣದಿಂದ ಕ್ಷಣಾರ್ಧದಲ್ಲಿ ಬೆಂಕಿ ವ್ಯಾಪಿಸಿದೆ. ಈ ವೇಳೆ ದಟ್ಟವಾದ ಹೊಗೆ ಹಾಗೂ ಬೆಂಕಿ ಕಾಣಿಸಿಕೊಂಡಿದ್ದು, ಗ್ರಾಹಕರು ಹಾಗೂ ಸಿಬ್ಬಂದಿ ಹೊರಬರಲು ಸಾಧ್ಯವಾಗದೇ ಕಿಟಕಿಯ ಮೂಲಕ ಜಿಗಿಯಲು ಯತ್ನಿಸಿದ್ದಾರೆ' ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ ನೀಡಿದರು.

'ಮಾಹಿತಿ ತಿಳಿದ ತಕ್ಷಣ ಅಗ್ನಿಶಾಮಕ ದಳದವರು ಸ್ಥಳಕ್ಕೆ ಬಂದು, ಪಬ್ ಒಳಗಿದ್ದವರನ್ನು ರಕ್ಷಿಸಿದರು. ಅಡುಗೆ ಕೋಣೆಯಲ್ಲಿದ್ದ ಇಬ್ಬರು ಹೊರ ಬರಲಾರದೆ ಸಜೀವ ದಹನವಾಗಿರುವುದು ಬೆಂಕಿ ನಂದಿಸಿದ ನಂತರ ಪರಿಶೀಲಿಸಿದಾಗ ಗೊತ್ತಾಗಿದೆ. ಗಾಯಗೊಂಡವರನ್ನು ಸಮೀಪದ ಖಾಸಗಿ ಆಸ್ಪತ್ರೆಗಳಿಗೆ ಸೇರಿಸಲಾಯಿತು. ಮಾಲೀಕರಾದ ಪ್ರೀತಂ ಸಹಿತ ಕೆಲವರಿಗೆ ಸಣ್ಣ- ಪುಟ್ಟ ಗಾಯಗಳಾಗಿವೆ. ಪಬ್ ಒಳಗಿರುವ ಪೀಠೋಪಕರಣ ಸಂಪೂರ್ಣ ಸುಟ್ಟು ಹೋಗಿವೆ' ಎಂದು ತಿಳಿಸಿದರು.

'ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ'

ನಗರದಲ್ಲಿ ಪಬ್‌ನಲ್ಲಿ ಸಂಭವಿಸಿದ ದೊಡ್ಡ ಅವಘಡ ಇದಾಗಿದೆ. ಅವುಗಳಲ್ಲಿನ ಸುರಕ್ಷತೆಯ ಬಗ್ಗೆಯೂ ಪ್ರಶ್ನೆಗಳು ಮೂಡುವಂತೆ ಮಾಡಿದೆ.

'ಅವಘಡದ ಬಗ್ಗೆ ಮಧ್ಯಾಹ್ನ 3.15ರ ಸುಮಾರಿಗೆ ಸರಸ್ವತಿಪುರಂ ಅಗ್ನಿಶಾಮಕ ಠಾಣೆಗೆ ಮಾಹಿತಿ ಬಂದಿದೆ. ಅಲ್ಲಿನ ಹಾಗೂ ಹೆಬ್ಬಾಳದ ಅಗ್ನಿಶಾಮಕ ಠಾಣೆ ಸಿಬ್ಬಂದಿ ತಕ್ಷಣವೇ ಬಂದು, ಕಾರ್ಯಾಚರಣೆ ಆರಂಭಿಸಿದರು. 2 ಏಣಿ ಬಳಸಿ 15 ಜನರನ್ನು ಕೆಳಗಿಳಿಸಲಾಯಿತು. ಬೆಂಕಿ ನಂದಿಸಿ ಒಳಭಾಗದಲ್ಲಿ ಹುಡುಕಾಡಿದಾಗ ಇಬ್ಬರ ಮೃತದೇಹ ಸಿಕ್ಕವು. ಅವುಗಳನ್ನು ಪೊಲೀಸರ ವಶಕ್ಕೆ ನೀಡಿದ್ದೇವೆ' ಎಂದು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ರಂಗನಾಥ್ ತಿಳಿಸಿದರು. 'ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ವ್ಯಾಪಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸುರಕ್ಷತಾ ಕ್ರಮಗಳು ಕೈಗೊಂಡಿರುವುದು ಕಂಡುಬಂದಿಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕುತ್ತಿದ್ದೇವೆ' ಎಂದರು.

ಸಂಗ್ರಹಿಸಿಟ್ಟಿದ್ದ ಸಿಲಿಂಡರ್‌ಗಳು ಸ್ಫೋಟ

ದಾವಣಗೆರೆ: ತಾಲ್ಲೂಕಿನ ಎಚ್.ಕಲ್ಪನಹಳ್ಳಿ ಗ್ರಾಮದ ಹೊರವಲಯದ ಕಟ್ಟಡವೊಂದರಲ್ಲಿ ಸಂಗ್ರಹಿಸಿ ಇಟ್ಟಿದ್ದ ಅಡುಗೆ ಅನಿಲದ ಹತ್ತಾರು ಸಿಲಿಂಡರ್‌ಗಳು ಸೋಮವಾರ ಸ್ಫೋಟಗೊಂಡಿದ್ದು, ಈ ವೇಳೆ ಕಟ್ಟಡದೊಳಗಿದ್ದ ಅನಿಲ್ ಎಂಬವರು ಗಾಯಗೊಂಡಿದ್ದಾರೆ.

ಗ್ರಾಮದ ದೊಗ್ಗಳ್ಳಿ ಶಿವಕುಮಾರ್ ಅವರಿಗೆ ಸೇರಿದ ಅಡಿಕೆ ತೋಟದಲ್ಲಿನ ಕಟ್ಟಡದಲ್ಲಿ ಈ ಅವಘಡ ಸಂಭವಿಸಿದೆ. ಅಡಿಕೆ ಸುಲಿಯುವ ಉದ್ದೇಶಕ್ಕೆ ನಿರ್ಮಿಸಿದ್ದ ಕಟ್ಟಡವನ್ನು ಬಾಡಿಗೆ ಪಡೆದಿದ್ದ ಅನಿಲ್, ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿಕೊಂಡಿದ್ದರು. ಸ್ಫೋಟದ ರಭಸಕ್ಕೆ ಕಟ್ಟಡ ಛಿದ್ರಗೊಂಡಿದೆ.

ಸ್ಫೋಟಗೊಂಡ ಸಿಲಿಂಡರ್‌ಗಳು 200 ಮೀಟರ್ ದೂರದವರೆಗೆ ಸಿಡಿದು ಬಿದ್ದಿವೆ. ಸಿಲಿಂಡರ್‌ಗಳಿಗೆ ಬಾಂಬ್‌ಗಳಂತೆ ಸ್ಫೋಟಿಸಿದ ಶಬ್ದ ಕೇಳಿ ಗ್ರಾಮಸ್ಥರು ಬೆಚ್ಚಿದ್ದಾರೆ. ಗೃಹ ಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆಗೆ ಮರುಪೂರಣ ಮಾಡುವಾಗ ಈ ಅನಾಹುತ ಸಂಭವಿಸಿದೆ ಎನ್ನಲಾಗಿದೆ. ಗ್ರಾಮೀಣ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ.

‘ಆರ್‌ಎಸ್‌ಎಸ್‌ನ ಕಾನೂನುಬದ್ಧತೆ ಏನು?’

ಮೋಹನ್ ಭಾಗವತ್‌ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಮುಖೇನ ಪ್ರಶ್ನೆ • ಲಿಖಿತ ಉತ್ತರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಾಂಸ್ಥಿಕ ಮತ್ತು ಕಾನೂನುಬದ್ಧ ಸ್ಥಿತಿಗತಿ ಕುರಿತು ಸ್ಪಷ್ಟನೆ ನೀಡಬೇಕು’ ಎಂದು ಕೋರಿ, ಆರ್‌ಎಸ್‌ಎಸ್‌ನ ಸರ ಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ.

ಪ್ರಿಯಾಂಕ್ ಖರ್ಗೆ

ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಗೃಹ ಖಾತೆ ವಹಿಸಿಕೊಂಡ ಬೆನ್ನಲ್ಲೇ, ‘ಆರ್‌ಎಸ್‌ಎಸ್ ನೋಂದಣಿಗೆ ದಾಖಲೆ ಸಿದ್ಧಪಡಿಸಿಟ್ಟುಕೊಳ್ಳಲಿ’ ಎಂದು ಪ್ರಿಯಾಂಕ್ ಎಚ್ಚರಿಕೆ ನೀಡಿದ್ದರು.

ಜೂನ್ 13ರಂದು ಭಾಗವತ್ ಅವರಿಗೆ ಎರಡು ಪುಟಗಳ ಪತ್ರವನ್ನು ಅವರು ಬರೆದಿದ್ದಾರೆ. ಆರ್‌ಎಸ್‌ಎಸ್ ಸ್ಥಾಪನೆಯಾಗಿ 100 ವರ್ಷಗಳನ್ನು ಪೂರೈಸಿರುವುದಕ್ಕೆ ಅಭಿನಂದನೆಯನ್ನೂ ಸಲ್ಲಿಸಿದ್ದಾರೆ.

‘ಶತಮಾನೋತ್ಸವವನ್ನು ಕೇವಲ ಸಂಭ್ರಮಾಚರಣೆಯಾಗಿ ಅಲ್ಲದೆ, ತನ್ನನ್ನು ತಾನು ನೋಂದಾಯಿಸಿಕೊಳ್ಳುವ ಜೊತೆಗೆ, ಸಂವಿಧಾನಾತ್ಮಕ ಆತ್ಮ ಪರಿಶೀಲನೆಯ ಅವಕಾಶವಾಗಿಯೂ ಬಳಸಿಕೊಳ್ಳಬೇಕು’ ಎಂದು ಸಲಹೆ ನೀಡಿದ್ದಾರೆ.

‘ಸಂಘದ ಕಾನೂನುಬದ್ಧ ಸ್ಥಾನಮಾನ, ಸಂಘಟನಾ ರಚನೆ, ಹಣಕಾಸು ಮೂಲಗಳು ಹಾಗೂ ಸಾರ್ವಜನಿಕ ಉತ್ತರದಾಯಿತ್ವಕ್ಕೆ ಸಂಬಂಧಿಸಿದ ಹಲವು ವಿಚಾರಗಳಿಗೆ ಸ್ಪಷ್ಟನೆ ನೀಡಬೇಕು. ಈ ವಿಷಯಗಳ ಕುರಿತು ಚರ್ಚಿಸಲು ಅಧಿಕೃತ ಪ್ರತಿನಿಧಿಗಳನ್ನು ನಿಯೋಜಿಸಿ, ಲಿಖಿತ ಉತ್ತರ ನೀಡುವಂತೆ ಸೂಚಿಸಬೇಕು’ ಎಂದೂ ಪ್ರಿಯಾಂಕ್ ಮನವಿ ಮಾಡಿದ್ದಾರೆ.

ಪತ್ರದಲ್ಲೇನಿದೆ?: ‘ದೇಶದ ಸಾರ್ವಜನಿಕ ಜೀವನದಲ್ಲಿ ಮಹತ್ವದ ಪ್ರಭಾವ ಮತ್ತು ವ್ಯಾಪಕ ಜಾಲ ಹೊಂದಿರುವ ಯಾವುದೇ ಸಂಸ್ಥೆಯು ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಸಂವಿಧಾನಬದ್ಧತೆಯ ಉನ್ನತ ಮಾನದಂಡಗಳನ್ನು ಪಾಲಿಸಬೇಕು’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

PRIYANK KHARGE

Date: 13.06.2026

To,
Sri. Mohan Bhagwat ji,
Sarsanghchalak
Rashtriya Swayamsevak Sangh
Nagpur

Subject: Congratulations on completing 100 years of existence and request for legal clarification on organizational status

Dear Sir,

ಪ್ರಿಯಾಂಕ್ ಖರ್ಗೆ ಬರೆದಿರುವ ಪತ್ರ

ಆರ್‌ಎಸ್‌ಎಸ್‌ನ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾದ ‘ಅಖಿಲ ಭಾರತೀಯ ಪ್ರತಿನಿಧಿ ಸಭೆ’ (ಎಬಿಪಿಎಸ್) ಬಿಡುಗಡೆ ಮಾಡಿರುವ 2025–26ರ ವರದಿಯಲ್ಲಿರುವ ಅಂಶಗಳನ್ನು ಉಲ್ಲೇಖಿಸಿರುವ ಪ್ರಿಯಾಂಕ್, ‘ಕರ್ನಾಟಕದಲ್ಲಿ ಆರ್‌ಎಸ್‌ಎಸ್‌ಗೆ ಸಾವಿರಾರು ಶಾಖೆಗಳು, ವಾರದ ಮಿಲನಗಳು ಮತ್ತು ಮಾಸಿಕ ಮಂಡಲಿಗಳಿವೆ. ಲಕ್ಷಾಂತರ ಜನರನ್ನು ಒಳಗೊಂಡ ಸಾರ್ವಜನಿಕ ಕಾರ್ಯಕ್ರಮಗಳು, ಸಮಾವೇಶಗಳು, ಪಥಸಂಚಲನಗಳನ್ನು ಆಯೋಜಿಸುತ್ತಿರುವುದಾಗಿ ಹೇಳಿಕೊಂಡಿದೆ’ ಎಂದಿದ್ದಾರೆ.

‘ಇಷ್ಟೊಂದು ವಿಸ್ತಾರವಾದ ಸಾಂಸ್ಥಿಕ ಅಸ್ತಿತ್ವ ಹೊಂದಿರುವಾಗ, ವಿಶೇಷವಾಗಿ ನಿಯಮಿತವಾದ ಸಾರ್ವಜನಿಕ ಒಗ್ಗೂಡುವಿಕೆ, ಸಮವಸ್ತ್ರಧಾರಿ ಪಥಸಂಚಲನಗಳು ಮತ್ತು ದೊಡ್ಡಮಟ್ಟದ ಸಾಮಾಜಿಕ ಕಾರ್ಯಕ್ರಮಗಳನ್ನು ಒಳಗೊಂಡಿರುವಾಗ, ಇದನ್ನು ಕೇವಲ ಖಾಸಗಿ ಅಥವಾ ಅನೌಪಚಾರಿಕ ವ್ಯವಸ್ಥೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದು ಸಂಘಟನೆಯ ಕಾನೂನುಬದ್ಧ ಸ್ಥಾನಮಾನ, ಹೊಣೆಗಾರಿಕೆ, ಆರ್ಥಿಕ ಪಾರದರ್ಶಕತೆ, ಹಣಕಾಸಿನ ಮೂಲಗಳು ಮತ್ತು ಭಾರತದ ಸಂವಿಧಾನ ಹಾಗೂ ಕಾನೂನುಗಳ ಪಾಲನೆಯ ಕುರಿತು ನ್ಯಾಯಸಮ್ಮತವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಆದ್ದರಿಂದ, ಇಷ್ಟೊಂದು ಬೃಹತ್ ಗಾತ್ರದ ಸಂಘಟನೆಯು ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಅಧಿಕೃತವಾಗಿ ಕಾನೂನುಬದ್ಧ ಘಟಕವಾಗಿ ಅಥವಾ ‘ವ್ಯಕ್ತಿಗಳ ಸಂಸ್ಥೆ’ಯಾಗಿ ನೋಂದಾಯಿಸಿಕೊಳ್ಳದೆ, ಅನಾಮಧೇಯವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತಿರುವುದರ ಹಿಂದಿನ ‘ಕಾನೂನು ಆಧಾರಗಳನ್ನು’ ವಿವರಿಸಲು ಅಧಿಕೃತ ಪದಾಧಿಕಾರಿಗಳನ್ನು ನಿಯೋಜಿಸಬೇಕು’ ಎಂದು ಪತ್ರದಲ್ಲಿ ಅವರು ಕೋರಿದ್ದಾರೆ.

‘ಯಾವುದೇ ಸಂಸ್ಥೆ ಕಾನೂನಿನ ವ್ಯಾಪ್ತಿಯಿಂದ ಹೊರತಾಗಿರಲು ಸಾಧ್ಯವಿಲ್ಲ. ಸಾಮಾನ್ಯ ನಾಗರಿಕರು, ಸ್ವಯಂಸೇವಾ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಟ್ರಸ್ಟ್‌ಗಳು ಮತ್ತು ಕಂಪನಿಗಳು ಪಾಲಿಸಬೇಕಾದ ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು’ ಎಂದು ಪ್ರಿಯಾಂಕ್ ಅಭಿಪ್ರಾಯಪಟ್ಟಿದ್ದಾರೆ.

ಪ್ರಿಯಾಂಕ್ ಕೇಳಿದ ಮಾಹಿತಿಗಳೇನು?

- ಆರ್‌ಎಸ್‌ಎಸ್‌ನ ಕಾನೂನುಬದ್ಧ ಸ್ಥಾನಮಾನ, ಸಂಘಟನಾ ರಚನೆ
- ಪದಾಧಿಕಾರಿಗಳು ಮತ್ತು ಅಧಿಕೃತ ಪ್ರತಿನಿಧಿಗಳ ವಿವರ
- ದೇಣಿಗೆ, ಕೊಡುಗೆ ಹಾಗೂ ಇತರೆ ಆದಾಯದ ಮೂಲ
- ವೆಚ್ಚ ಮತ್ತು ಆಸ್ತಿಗಳ ವಿವರ
- ಅನ್ವಯವಾಗುವ ತೆರಿಗೆಗಳನ್ನು ಕಾನೂನುಬದ್ಧವಾಗಿ ಪಾವತಿಸಲಾಗುತ್ತಿದೆಯೇ?
- ಅಧಿಕೃತ ನೋಂದಣಿ ಇಲ್ಲದೆ ಚಟುವಟಿಕೆ ನಡೆಸಲು ಕಾನೂನು ಆಧಾರ
- ಸಾರ್ವಜನಿಕ ಉತ್ತರದಾಯಿತ್ವ ಇಲ್ಲದೆ ವ್ಯಾಪಕವಾಗಿ ಕಾರ್ಯನಿರ್ವಹಿಸುವ ಹಕ್ಕು ಯಾವ ಕಾನೂನು ಅಥವಾ ಸಂವಿಧಾನಾತ್ಮಕ ಚೌಕಟ್ಟನಡಿ ದೊರೆತಿದೆ?
- ಸಾರ್ವಜನಿಕ ಸಭೆಗಳು, ಪಥಸಂಚಲನಗಳು ಹಾಗೂ ಇತರೆ ಸಂಘಟಿತ ಕಾರ್ಯಕ್ರಮಗಳಿಗೆ ಪಡೆದಿರುವ ಅನುಮತಿ ಮತ್ತು ಅನುಸರಣೆಯ ವ್ಯವಸ್ಥೆಗಳ ಮಾಹಿತಿ

‘ಹಿಂದೂ ಧರ್ಮವೂ ನೋಂದಣಿಯಾಗಿಲ್ಲ’

ತ್ರಿಶ್ಯೂರ್ (ಕೇರಳ) (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು (ಆರ್‌ಎಸ್‌ಎಸ್) ನೋಂದಣಿ ಮಾಡಬೇಕೆಂಬ ಒತ್ತಾಯವನ್ನು ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು ತಿರಸ್ಕರಿಸಿದ್ದಾರೆ.

ಸಂಘವು ರಹಸ್ಯವಾಗಿ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಸಾರ್ವಜನಿಕ ನಿಗಾದಿಂದಲೂ ದೂರ ಉಳಿದಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಮೋಹನ್ ಭಾಗವತ್

ಆರ್‌ಎಸ್‌ಎಸ್ ಶತಮಾನೋತ್ಸವದ ಜನಸಂಪರ್ಕ ಕಾರ್ಯಕ್ರಮದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮ್ಮ ಕಾರ್ಯಕರ್ತರು ಜನರೊಂದಿಗೆ ಇರುತ್ತಾರೆ. ಜನರು ಅವರನ್ನು ನಿತ್ಯ ನೋಡುತ್ತಿರುತ್ತಾರೆ. ನಾವು ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ರಹಸ್ಯವಾಗಿದ್ದರೆ ಇದೆಲ್ಲಾ ಸಾಧ್ಯವಾಗುವುದಿಲ್ಲ. ನಮ್ಮ ಬಳಿ ರಹಸ್ಯವಾಗಿ ಇಡುವಂಥದ್ದು ಏನೂ ಇಲ್ಲ’ ಎಂದು ಹೇಳಿದರು.

‘ನೋಂದಣಿ ವಿಷಯ ಕೇವಲ ರಾಜಕೀಯ. ಇಂತಹ ಪ್ರಯತ್ನಗಳು ಸಂಘಕ್ಕೆ ಹೊಸದೇನಲ್ಲ. ಸಂಘವು ಸ್ಥಾಪನೆಯಾದ 10 ವರ್ಷಗಳ ಬಳಿಕ ಇಂಥದ್ದನ್ನೆಲ್ಲ ಎದುರಿಸುತ್ತಿದ್ದೇವೆ. ಈ ರೀತಿ ಏನಾದರೊಂದು ಆಗದಿದ್ದರೆ ನಮಗೆ ಏನೋ ಕೊರತೆಯಿದೆ ಎಂದನಿಸುತ್ತದೆ’ ಎಂದು ಅವರು ತಿರುಗೇಟು ನೀಡಿದರು.

‘ಹಿಂದೂ ಧರ್ಮವೂ ನೋಂದಣಿಯಾಗಿಲ್ಲ. ಸರ್ಕಾರದ ನಿಧಿ ಪಡೆಯಲು ಬಯಸುವವರಿಗೆ ಮಾತ್ರ ನೋಂದಣಿಯಾಗುವ ಅಗತ್ಯವಿದೆ. ಸಂಘದ ಅಸ್ತಿತ್ವದ ಬಗ್ಗೆ ಸರ್ಕಾರಕ್ಕೂ ತಿಳಿದಿದೆ’ ಎಂದು ಹೇಳಿದರು.

‘ಈ ಹಿಂದೆ ಆರ್‌ಎಸ್‌ಎಸ್ ಮೇಲೆ ಎರಡು ಬಾರಿ ನಿಷೇಧ ಹೇರಲಾಗಿತ್ತು. ನ್ಯಾಯಾಲಯದ ಆದೇಶ ಮತ್ತು ಸತ್ಯಾಗ್ರಹಗಳ ಮೂಲಕ ಆ ನಿಷೇಧವನ್ನು ವಾಪಸ್ ಪಡೆಯಲಾಯಿತು. ಸಂಘವನ್ನು ನಿಷೇಧ ಮಾಡಿದ್ದರು ಎಂದರೆ, ಆರ್‌ಎಸ್‌ಎಸ್ ಅಸ್ತಿತ್ವದ ಬಗ್ಗೆ ಸರ್ಕಾರಕ್ಕೆ ಗೊತ್ತಿದೆ ಎಂದರ್ಥ’ ಎಂದು ಪ್ರತಿಪಾದಿಸಿದರು.

‘ಸಂಘವನ್ನು ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಸ್ಥಾಪಿಸಲಾಯಿತು. 100 ವರ್ಷಗಳಿಂದ ಯಾರೂ ನೋಂದಣಿ ಮಾಡಿ ಎಂದು ಹೇಳಿಲ್ಲ. ಸಂಘಕ್ಕೆ ತನ್ನದೇ ಆದ ಲಿಖಿತ ಸಂವಿಧಾನ ಇದ್ದು, 1950ರಲ್ಲಿ ಅದನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆಗ ಸರ್ಕಾರ, ಮೊದಲು ನೋಂದಣಿ ಮಾಡಿ ಆಮೇಲೆ ಸಂವಿಧಾನ ಒಪ್ಪಿಕೊಳ್ಳುತ್ತೇವೆ ಎಂದು ಹೇಳಿರಲಿಲ್ಲ’ ಎಂದು ಹೇಳಿದರು.

ಕೆಲವರಿಗೆ ಅಲ್ಪ ಸೌಲಭ್ಯ, ಉಳಿದವರಿಗೆ ಪುನರ್ವಸತಿ ಮರೀಚಿಕೆ • ಅಧ್ಯಯನ ವರದಿಯಲ್ಲಿ ಬಹಿರಂಗ

ರಾಜ್ಯದಲ್ಲಿ ಶೌಚಗುಂಡಿ ಕಾರ್ಮಿಕರ ಸ್ಥಿತಿ ಅತಂತ್ರ

• ಕೆ.ನರಸಿಂಹಮೂರ್ತಿ

ಬೆಂಗಳೂರು: ಕೇಂದ್ರ ಸರ್ಕಾರವು ಮಲಹೊರುವ ಪದ್ಧತಿ ನಿಷೇಧ ಮತ್ತು ಪುನರ್ವಸತಿಗಾಗಿ ಹೊಸ ಕಾಯ್ದೆಯನ್ನು ಜಾರಿಗೊಳಿಸಿ 13 ವರ್ಷಗಳಾದರೂ ರಾಜ್ಯದಲ್ಲಿ ಗುರುತಿಸಲಾಗಿರುವ ಶೌಚಗುಂಡಿ ಕಾರ್ಮಿಕರಿಗೆ ಪುನರ್ವಸತಿ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ.

ರಾಜ್ಯದ 24 ಜಿಲ್ಲೆಗಳಲ್ಲಷ್ಟೇ ಶೌಚಗುಂಡಿ ಕಾರ್ಮಿಕರಿದ್ದಾರೆ. ಉಳಿದ 7 ಜಿಲ್ಲೆಗಳಲ್ಲಿ ಇಲ್ಲ ಎಂದು ರಾಜ್ಯ ಸರ್ಕಾರ ವರದಿ ನೀಡಿದೆ. ಗುರುತಿಸಲಾದವರ ಪೈಕಿ 6,687 ಮಂದಿಗಷ್ಟೇ ಒಂದೇ ಬಾರಿ ನಗದು ನೆರವು ತಲಾ ₹40 ಸಾವಿರ ದೊರಕಿದೆ. ಇನ್ನೂ ನೂರಾರು ಮಂದಿಗೆ ಅದೂ ಸಿಕ್ಕಿಲ್ಲ. ಅದೊಂದಕ್ಕಾಗಿಯೇ ಕಾಯುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸಹಯೋಗದಲ್ಲಿ ‘ರಾಷ್ಟ್ರೀಯ ಕಾನೂನು ಶಾಲೆ’ಯ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರವು ನಡೆಸಿರುವ ಸಮೀಕ್ಷೆಯಲ್ಲಿ ಇದು ಬಹಿರಂಗಗೊಂಡಿದೆ.

ಈ ಸಮೀಕ್ಷಾ ವರದಿಯನ್ನು ಕಳೆದ ತಿಂಗಳು, ಅಂದು ಸಮಾಜ ಕಲ್ಯಾಣ ಸಚಿವರಾಗಿದ್ದ ಡಾ.ಎಚ್‌.ಸಿ. ಮಹದೇವಪ್ಪ ಅವರಿಗೆ ಸಲ್ಲಿಸಲಾಗಿತ್ತು. ವರದಿಯ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

60 ವರ್ಷ ಮೀರಿದರೂ ಇದ್ದಾರೆ: ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಈ ಕೆಲಸದಲ್ಲಿ ಪರಿಶಿಷ್ಟ ಜಾತಿಯ, ಕನ್ನಡ–ತೆಲುಗು ಭಾಷಿಕ ಮಧ್ಯವಯಸ್ಸಿನವರೇ ಹೆಚ್ಚಾಗಿದ್ದು, 60 ವರ್ಷ ಮೇಲ್ಪಟ್ಟವರೂ ತೊಡಗಿದ್ದಾರೆ. ಪುರುಷರು ಹೆಚ್ಚಿದ್ದರೂ, ಮಹಿಳೆಯರೂ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ವರದಿ ಉಲ್ಲೇಖಿಸಿದೆ.

ವಿವಿಧ ಇಲಾಖೆಗಳ ಅಡಿಯಲ್ಲಿ ಕೆಲವರಿಗಷ್ಟೇ ಅಲ್ಪ ಪ್ರಮಾಣದ ಸೌಲಭ್ಯಗಳು ದೊರಕಿವೆ. ಒಂದೇ ಬಾರಿಗೆ ಎಲ್ಲರಿಗೂ ಪುನರ್ವಸತಿ ಕಲ್ಪಿಸುವ ಪ್ರಯತ್ನ ನಡೆದೇ ಇಲ್ಲ. ಪರಿಣಾಮವಾಗಿ, ಬಹಳ ಮಂದಿ ಮುಖ್ಯವಾಹಿನಿಗೂ ಬರಲಾಗದೆ, ಹೀನಾಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅವರಲ್ಲಿ ಸಾವಿರಾರು ಮಂದಿಗೆ ಕಾಯ್ದೆಯ ಕುರಿತು ಅರಿವಿಲ್ಲ. ಹಲವರು ಸ್ವಚ್ಛತಾ ಕಾರ್ಯ ನಡೆಸುತ್ತಿದ್ದಾಗಲೇ ಮೃತಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಶೌಚಗುಂಡಿ ಕಾರ್ಮಿಕರೊಬ್ಬರ ಗುಡಿಸಲು

1974ರಲ್ಲೇ ನಿಷೇಧಿಸಿದ್ದ ಕರ್ನಾಟಕ

ಇಡೀ ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಮಲ ಬಾಚುವ/ಹೊರುವ ಪದ್ಧತಿಯನ್ನು 1974ರಲ್ಲೇ ನಿಷೇಧಿಸಲಾಗಿತ್ತು. ಅಂದು ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪ ಆದೇಶ ಹೊರಡಿಸಿದ್ದರು.

ಆ ನಂತರ ಈ ಕಾರ್ಮಿಕರು ಹಾಗೂ ಕುಟುಂಬವರ ಪುನರ್ವಸತಿ ಕುರಿತು ಐಪಿಡಿ ಸಾಲಪ್ಪ ಸಮಿತಿ ಶಿಫಾರಸುಗಳುಳ್ಳ ವರದಿಯ ಸಮರ್ಪಕ ಅನುಷ್ಠಾನವಾಗಿಲ್ಲ. 1993ರಲ್ಲಿ ಕೇಂದ್ರ ಸರ್ಕಾರ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ, ಕಾಯ್ದೆ ಜಾರಿಗೊಳಿಸಿತು. ಆದರೆ, ‘ಲೋಪದೋಷಗಳ ಕಾರಣಕ್ಕೆ ಕಾರ್ಮಿಕರ ಹಿತ ಕಾಡಲು ವಿಫಲವಾಗಿದೆ’ ಎಂದು ಮುಖಂಡರು, ಕಾರ್ಮಿಕರು ಪ್ರತಿಭಟಿಸಿದ್ದರಿಂದ, 2013ರಲ್ಲಿ ಪುನರ್ವಸತಿಗಾಗಿ ಹೊಸ ಕಾಯ್ದೆಯನ್ನು ಜಾರಿಗೊಳಿಸಿತು. 2014ರಲ್ಲಿ ಸುಪ್ರೀಂ ಕೋರ್ಟ್ ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕೆಂದು ಐತಿಹಾಸಿಕ ತೀರ್ಪು ನೀಡಿದೆ. ಹೀಗೆ ನಿಷೇಧ ಪ್ರಕ್ರಿಯೆ ಜಾರಿಯಾಗಿ 5 ದಶಕ ಕಳೆದರೂ, ಯಾವ ಕಾಯ್ದೆಯೂ ಪೂರ್ಣವಾಗಿ ಅನುಷ್ಠಾನಗೊಂಡಿಲ್ಲ ಎಂದು ವರದಿ ಅಭಿಪ್ರಾಯಪಟ್ಟಿದೆ.

ರಾಜ್ಯದಲ್ಲಿ ಶೌಚಗುಂಡಿ ಕಾರ್ಮಿಕರ ಜಿಲ್ಲಾವಾರು ಮಾಹಿತಿ	
ಜಿಬಿಎ ವ್ಯಾಪ್ತಿ	1,625
ಮೈಸೂರು	1,381
ಕೋಲಾರ	1,224
ಮಂಡ್ಯ	848
ರಾಮನಗರ	564
ದಾವಣಗೆರೆ	400
ಚಾಮರಾಜನಗರ	319
ಕಲಬುರ್ಗಿ	213
ರಾಯಚೂರು	172
ತುಮಕೂರು	157
ಬೆಂಗಳೂರು ನಗರ ಜಿಲ್ಲೆ	135

4,388 ಪುರುಷರು

2,734 ಮಹಿಳೆಯರು

ರಾಜ್ಯ ಸರ್ಕಾರವು ತಾನೇ ಗುರುತಿಸಿದ ಶೌಚಗುಂಡಿ ಕಾರ್ಮಿಕರಿಗೆ ಬಿಡಿ ಬಿಡಿಯಾಗಿ ವರ್ಷಗಟ್ಟಲೆ ಸೌಲಭ್ಯ ಕೊಡುವುದಕ್ಕಿಂತಲೂ, ಒಂದೇ ಬಾರಿಗೆ ಸಮಗ್ರ ಪುನರ್ವಸತಿ ಕಲ್ಪಿಸಬೇಕು

ಆರ್.ವಿ.ಚಂದ್ರಶೇಖರ್, ಸಮೀಕ್ಷೆಯ ಸಂಯೋಜಕ, ರಾಷ್ಟ್ರೀಯ ಕಾನೂನು ಶಾಲೆ

ಅಂಕಿ ಅಂಶಗಳು

24 ಶೌಚಗುಂಡಿ ಕಾರ್ಮಿಕರು ಇರುವ ಜಿಲ್ಲೆಗಳು

07 ಕಾರ್ಮಿಕರು ಇಲ್ಲದ ಜಿಲ್ಲೆಗಳು

ಸಮೀಕ್ಷೆ ಮಾಹಿತಿ

7,483 ರಾಜ್ಯದಲ್ಲಿರುವ ಶೌಚಗುಂಡಿ ಕಾರ್ಮಿಕರು

7,122 ಸಮೀಕ್ಷೆಯಲ್ಲಿ ಮಾಹಿತಿ ನೀಡಿದವರು

361 ಸಮೀಕ್ಷೆ ವೇಳೆ ಲಭ್ಯವಾಗದವರು

3 ತಿಂಗಳು ಸಮೀಕ್ಷೆ ಅವಧಿ

ವಾರ್ಷಿಕ ಆದಾಯ	
2,204	₹11 ಸಾವಿರಕ್ಕಿಂತ ಕಡಿಮೆ ಆದಾಯವುಳ್ಳವರು
1,765	₹20 ಸಾವಿರದವರೆಗೆ ಆದಾಯವುಳ್ಳವರು
1,580	₹50 ಸಾವಿರದವರೆಗೆ ಆದಾಯವುಳ್ಳವರು

6,507 ಮಂದಿಗೆ ಸೌಲಭ್ಯವಿಲ್ಲ

ವಿವಿಧ ಇಲಾಖೆಗಳ ಯೋಜನೆಗಳ ಸೌಲಭ್ಯಗಳು ಈ ಕಾರ್ಮಿಕರಿಗೆ ಸರಿಯಾಗಿ ತಲುಪಿಲ್ಲ ಎಂಬುದೂ ವರದಿಯಲ್ಲಿದೆ.

ಕೈಗಾರಿಕಾ ಫ್ಲಾಟ್, ಕೃಷಿ ಸಂಬಂಧಿತ ನೆರವು, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆ, ಸ್ವ ಉದ್ಯೋಗ, ಮನೆಗೆ ನೇರ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ ಅಡಿ ತಲಾ ಒಬ್ಬರಷ್ಟೇ ಸೌಲಭ್ಯ ಪಡೆದಿದ್ದಾರೆ. ಸಮೀಕ್ಷೆಗೆ ಒಳಗಾದವರ ಪೈಕಿ 6,507 ಮಂದಿಗೆ ಸೌಲಭ್ಯಗಳೇ ದೊರಕಿಲ್ಲ. 420 ಮಂದಿ ಗುಡಿಸಲುಗಳಲ್ಲೇ ವಾಸವಿದ್ದಾರೆ.

22 ಅಧಿಕಾರಿ ವಿರುದ್ಧ ಎಫ್‌ಐಆರ್

ಗೋಮಾಳಕ್ಕೆ ನಕಲಿ ದಾಖಲೆ ಸೃಷ್ಟಿಸಿ ₹15 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಹರಳೂರು ಗ್ರಾಮದ ಸರ್ಕಾರಿ ಗೋಮಾಳಕ್ಕೆ ನಕಲಿ ದಾಖಲೆ ಸೃಷ್ಟಿಸಿ, ಭೂ ಪರಿಹಾರ ಮಂಜೂರು ಮಾಡಿದ ಆರೋಪದ ಮೇಲೆ ಈ ಹಿಂದಿನ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಸೇರಿ 22 ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬದ್ರಿನಾಥ್ ಅವರು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಸಲ್ಲಿಸಿದ್ದ ವರದಿ ಆಧಾರದಲ್ಲಿ ಎಫ್‌ಐಆರ್ ದಾಖಲಾಗಿದೆ. ನ್ಯಾಯಾಲಯದ ಶೋಧನಾ ವಾರಂಟ್ ಪಡೆದು ವಿವಿಧ ಕಚೇರಿಗಳು ಮತ್ತು 11 ಮನೆಗಳಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಲಾಗಿದೆ.

ಹರಳೂರು ಗ್ರಾಮದ ಗೋಮಾಳದ ಜಮೀನನ್ನು ಕೆಲವು ವ್ಯಕ್ತಿಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಖಾತೆ ಮಾಡಿಕೊಡಲಾಗಿದೆ. ಕೆಐಎಡಿಬಿ ಭೂ ಸ್ವಾಧೀನ ಪಡಿಸಿಕೊಂಡ ಪ್ರದೇಶದ ವ್ಯಾಪ್ತಿಯಲ್ಲಿ ಈ ಗೋಮಾಳವೂ ಸೇರಿದೆ. ನಕಲಿ ದಾಖಲೆಗಳ ಆಧಾರದ ಮೇಲೆ ಕೆಐಎಡಿಬಿಗೆ ಭೂ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಸರ್ಕಾರದ ಅಧಿಸೂಚನೆ ಮತ್ತು ಜೆಎಂಸಿ ವರದಿಯಲ್ಲಿ ಈ ವ್ಯಕ್ತಿಗಳ ಹೆಸರು ನಮೂದಾಗದಿದ್ದರೂ ಅಧಿಕಾರಿಗಳು ಶಾಮೀಲಾಗಿ 6 ಮಂದಿಗೆ ಒಟ್ಟು ₹15 ಕೋಟಿ ಪರಿಹಾರ ಮಂಜೂರು ಮಾಡಿದ್ದಾರೆ. ಬೋಗಸ್ ಖಾತೆದಾರರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿದ್ದು, ನಂತರ ದಲ್ಲಾಳಿಗಳ ಖಾತೆಗೆ ಹಣ ವರ್ಗಾಯಿಸಲಾಗಿದೆ ಎಂದು ವರದಿಯಲ್ಲಿ ನಮೂದಿಸಲಾಗಿದೆ.

1962–63ನೇ ಸಾಲಿನಲ್ಲಿ ದೇವನಹಳ್ಳಿ ತಾಲ್ಲೂಕು ತಹಶೀಲ್ದಾರ್ ಆದೇಶದಂತೆ ಕೆಲವು ವ್ಯಕ್ತಿಗಳಿಗೆ ಸಾಗುವಳಿ ಚೀಟಿ ನೀಡಿದಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಒಟ್ಟು ಆರು ಮಂದಿ ಹೆಸರಿನಲ್ಲಿ ನಕಲಿ ಸಾಗುವಳಿ ಚೀಟಿ, ನಕ್ಷೆ ಮತ್ತು ವಿತರಣಾ ವಹಿ ತಯಾರಿಸಲಾಗಿದೆ. ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

1962–63ರಲ್ಲಿ ಜಮೀನು ಮಂಜೂರಾದಂತೆ ತೋರಿಸಲಾದ ಕೆಲ ವ್ಯಕ್ತಿಗಳು ಆ ಸಮಯದಲ್ಲಿ ಇನ್ನೂ ಜನಿಸಿರಲಿಲ್ಲ. ಕೆಲವರು 5 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರು ಎಂಬ ಅಂಶ ತನಿಖೆಯಿಂದ ದೃಢಪಟ್ಟಿದೆ.

ಆರೋಪಿಗಳಲ್ಲಿ ಒಬ್ಬರಾದ ಮುನಿಯಮ್ಮ ಎಂಬವರ ಆಧಾರ್ ಕಾರ್ಡ್ ಪ್ರಕಾರ ಅವರ ಜನ್ಮ ದಿನಾಂಕ 01.01.1962 ಆಗಿದ್ದು, ಅದೇ ದಿನ ಅವರ ಹೆಸರಿನಲ್ಲಿ ಜಮೀನು ಮಂಜೂರಾದಂತೆ ದಾಖಲೆ ಸೃಷ್ಟಿಸಲಾಗಿದೆ.

ಸ್ವಾಧೀನ ಪ್ರಮಾಣಪತ್ರ ಪರಿಶೀಲಿಸಿದಾಗ ಅದು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ಸೃಷ್ಟಿಸಿದ ದಾಖಲೆಯಾಗಿದ್ದು, 1962–63ರಲ್ಲಿ ಕಂಪ್ಯೂಟರ್ ಬಳಕೆ ಇರಲಿಲ್ಲ ಎಂಬುದು ಗೊತ್ತಾಗಿದೆ. ಜಮೀನು ಮಂಜೂರಾದ ಸುಮಾರು 57 ವರ್ಷಗಳ ನಂತರ ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಖಾತೆ ಮಾಡಿಕೊಡುವಂತೆ ಕೋರಿ ಮೇಲ್ಮನವಿ ಸಲ್ಲಿಸಿದ್ದಾರೆ. ಪೂರಕ ದಾಖಲೆ ಪರಿಶೀಲಿಸದೆ ಹಾಗೂ ಸ್ವಾಧೀನಾನುಭವ ವರದಿ ಸಲ್ಲಿಸದೆ ಇದ್ದರೂ ಆರ್‌ಟಿಸಿಯಲ್ಲಿ ನಮೂದಿಸಲು ಅಂದಿನ ಉಪವಿಭಾಗಾಧಿಕಾರಿ ಎ.ಎಸ್. ಮಂಜುನಾಥ್ ಆದೇಶಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಯಾರ ವಿರುದ್ಧ ಆರೋಪ?

ಉಪ ವಿಭಾಗಾಧಿಕಾರಿ ಸಿ.ಮಂಜುನಾಥ್, ತಹಶೀಲ್ದಾರ್‌ಗಳಾದ ಶಿವರಾಜ್, ಅಜಿತ್ ರೈ, ಬಾಲಕೃಷ್ಣ, ಶಿರಸ್ತೇದಾರ್ ಭರತ್, ತಾಲ್ಲೂಕು ಸರ್ವೆಯರ್ ಗಿರೀಶ್, ಸರ್ವೆಯರ್ ಅವಿನಾಶ್, ಸತ್ಯ ಪ್ರಕಾಶ್, ದಾಖಲೆ ಕೊಠಡಿಯ ಮಂಜುನಾಥ್, ಹೊನ್ನೇಶ್, ಕೆಐಎಡಿಬಿ ವಿಶೇಷ ಭೂ ಸ್ವಾಧೀನಾಧಿಕಾರಿ ತೇಜಸ್ ಕುಮಾರ್, ನೌಕರರಾದ ಶಿವಾನಂದ, ಮಾರುತಿ ಪ್ರಸಾದ್, ಮಂಜುನಾಥ್, ಶಶಿಪ್ರಭಾ, ನಂದಿನಿ ಮತ್ತು ತಾಲ್ಲೂಕು ಕಚೇರಿ ಸಿಬ್ಬಂದಿ ಸೇರಿ ಒಟ್ಟು 22 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಸೋಮವಾರ ಮುಂಜಾನೆ ಕೊಚ್ಚಿ ನಗರದ ಸುಬ್ರಮಣ್ಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿ ಇರುಮುಡಿ ಹೊತ್ತು ಶಬರಿಮಲೆಗೆ ಹೋಗಿ ಪೂಜೆ ಸಲ್ಲಿಸಿದರು. ಜೆಡಿಎಸ್ ನಾಯಕರಾದ ಸಿ.ಬಿ. ಸುರೇಶ್ ಬಾಬು, ಎಚ್‌.ಎಂ. ರಮೇಶ್ ಅವರ ಜತೆ ಉಪಸ್ಥಿತರಿದ್ದರು

ಸಿಇಟಿ: ಪರಿಶೀಲನಾ ಚೀಟಿ ಸಿಗದಿದ್ದರೆ ಕೆಇಎಗೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಲೇಮ್ ಹಾಗೂ ವಿವಿಧ ಕೋರ್ಸ್‌ಗಳ ರ‍್ಯಾಂಕ್ ಮಾಹಿತಿ ಒಳಗೊಂಡಿರುವ ಪರಿಶೀಲನಾ ಚೀಟಿ (ವೆರಿಫಿಕೇಷನ್ ಸ್ಲಿಪ್) ಡೌನ್‌ಲೋಡ್ ಆಗದವರು ಜೂನ್ 19ರ ಒಳಗೆ ಕೆಇಎ ಕಚೇರಿಗೆ ಖುದ್ದು ಭೇಟಿ ನೀಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಆಪ್ಷನ್ಸ್ ದಾಖಲಿಸುವ ಮುನ್ನ ಪರಿಶೀಲನಾ ಚೀಟಿ ಹೊಂದುವುದು ಕಡ್ಡಾಯ. ಪಿಯು ಅಂಕ ನಮೂದಿಸದೆ ಇರುವುದು, ವ್ಯಾಸಂಗದ ದಾಖಲೆಗಳು ಪರಿಶೀಲನೆ ಆಗದೇ ಇರುವವರಿಗೆ ಪರಿಶೀಲನಾ ಚೀಟಿ ಡೌನ್‌ಲೋಡ್ ಆಗುತ್ತಿಲ್ಲ. ಇದರ ಜತೆಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಒಳಮೀಸಲಾತಿ ಪ್ರಕಾರ (ಎಎಸ್‌ಸಿ–ಎ, ಬಿ, ಸಿ) ಪ್ರಮಾಣ ಪತ್ರಗಳ ಆರ್‌ಡಿ ಸಂಖ್ಯೆ ದಾಖಲಿಸದೇ ಇರುವುದು ಕೂಡ ಡೌನ್‌ಲೋಡ್ ಆಗದಿರುವುದಕ್ಕೆ ಕಾರಣ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌.ಪ್ರಸನ್ನ ಹೇಳಿದ್ದಾರೆ.

ದಾಖಲೆ ಪರಿಶೀಲನೆಯ ಅಗತ್ಯ ಇರುವವರು ಕೆಇಎ ವೆಬ್‌ಸೈಟ್‌ನಲ್ಲಿ ಇರುವ ಲಿಂಕ್ ಮೂಲಕ ದಿನಾಂಕ, ಸಮಯವನ್ನು ಮುಂಗಡವಾಗಿ ನಿಗದಿ ಮಾಡಿಕೊಂಡು ಕಚೇರಿಗೆ ಖುದ್ದು ಭೇಟಿ ನೀಡಬೇಕು. ಪಿಯು ಅಂಕಗಳನ್ನು ನಮೂದಿಸದೇ ಇರುವವರು ದಾಖಲಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಪರಿಶಿಷ್ಟ ಜಾತಿಯ ಸುಮಾರು 18 ಸಾವಿರ ಅಭ್ಯರ್ಥಿಗಳು ಒಳ ಮೀಸಲಾತಿ ಪ್ರಕಾರ ಆರ್‌ಡಿ ಸಂಖ್ಯೆಯನ್ನು ದಾಖಲಿಸಿಲ್ಲ. ಸೀಟು ಲಭ್ಯತಾ ಪಟ್ಟಿ ಒಳಮೀಸಲಾತಿ ಪ್ರಕಾರವೇ ಇರುತ್ತದೆ. ಇಂತಹವರು ಹೊಸ ಆರ್ ಡಿ ಸಂಖ್ಯೆ ನಮೂದಿಸುವವರೆಗೂ ಪರಿಶೀಲನಾ ಚೀಟಿ ಡೌನ್‌ಲೋಡ್ ಆಗುವುದಿಲ್ಲ ಎಂದಿದ್ದಾರೆ.

‘ಎಚ್‌ಡಿಕೆ ಯಾಕೆ ಸುಮ್ಮನಿದ್ದರು?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಿಡದಿ ವ್ಯಾಪ್ತಿಯಲ್ಲಿ ಒಂದು ಸಾವಿರ ಎಕರೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸ್ವಾಧೀನಪಡಿಸಿಕೊಂಡಾಗ ಎಚ್‌.ಡಿ. ಕುಮಾರಸ್ವಾಮಿ ಯಾಕೆ ಸುಮ್ಮನಿದ್ದರು’ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಬಿಡದಿ ಟೌನ್‌ಶಿಪ್ ಯೋಜನೆಗೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೇ ಅಧಿಸೂಚನೆ ಹೊರಡಿಸಿದ್ದರು. ಅವರ ಯೋಜನೆಯನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ’ ಎಂದು ಪುನರುಚ್ಚರಿಸಿದರು.

‘ಮಹಾರಾಷ್ಟ್ರದಲ್ಲಿ 90 ಸಾವಿರ ಎಕರೆ, ತೆಲಂಗಾಣದಲ್ಲಿ 40 ಸಾವಿರ ಎಕರೆಯಲ್ಲಿ ಟೌನ್‌ಶಿಪ್ ಮಾಡುತ್ತಿದ್ದಾರೆ. ಹಾರೋಹಳ್ಳಿ ಕೈಗಾರಿಕಾ ಪ್ರದೇಶ ಮಾಡಿದ್ದು ಯಾರು? ಆಗ ರೈತರನ್ನು ಒಕ್ಕಲೆಬ್ಬಿಸಲಿಲ್ಲವೇ’ ಎಂದೂ ಕೇಳಿದರು.

‘ಬಿಡದಿಯಲ್ಲಿ ರೈತರು ಜಮೀನು ನೀಡಲು ಮುಂದಾಗಿದ್ದಾರೆ. ಆದರೆ, ಅವರಿಗೆ (ಬಿಜೆಪಿ, ಜೆಡಿಎಸ್) ರಾಜಕಾರಣ ಮಾಡಬೇಕು, ಮಾಡುತ್ತಿದ್ದಾರೆ’ ಎಂದು ಅವರು ಹರಿಹಾಯ್ದರು.

‘ಬಿಡದಿ ಯೋಜನೆ ಕೈಬಿಡಿ’

ಆರ್. ಅಶೋಕ

‘ಬಿಡದಿ ಟೌನ್‌ಶಿಪ್ ಯೋಜನೆ ಪರಿಚಯ ಆದಾಗಲೇ ರೈತರ ಜೊತೆ ಹೋರಾಟದಲ್ಲಿ ನಾನು ಭಾಗವಹಿಸಿದ್ದೆ. ಹಿಂದಿನ ಎಲ್ಲ ಮುಖ್ಯಮಂತ್ರಿಗಳು ಈ ಯೋಜನೆಯನ್ನು ಕೈಬಿಟ್ಟಿದ್ದಾರೆ. ಎಚ್‌.ಡಿ. ಕುಮಾರಸ್ವಾಮಿಯವರ ಯೋಜನೆಯನ್ನು ನಾವು ಮುಂದುವರಿಸುತ್ತಿದ್ದೇವೆ ಎಂದು ಶಿವಕುಮಾರ್ ಹೇಳುತ್ತಾರೆ. ಅಂತಹ ಅಗತ್ಯವೇನೂ ಈಗ ಇಲ್ಲ. ಯೋಜನೆ ಕೈಬಿಟ್ಟರೆ ಸಾಕು’ ಎಂದು ಆರ್. ಅಶೋಕ ಹೇಳಿದರು.

‘ನಮ್ಮ ತೆರಿಗೆ ನಮ್ಮ ಹಕ್ಕು ಎಂದಂತೆ, ಈಗ ರೈತರು ನಮ್ಮ ಭೂಮಿ ನಮ್ಮ ಹಕ್ಕು ಎನ್ನುತ್ತಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಗ್ರೇಟ್ ನಿಕೋಬಾರ್‌ಗೆ ಹೋಗಿ ಸಸ್ಯಕಾಶಿಯನ್ನು ಹಾಳು ಮಾಡಿ ಯೋಜನೆ ಮಾಡುತ್ತಿದ್ದೀರಿ’ ಎಂದು ಟೀಕೆ ಮಾಡಿದ್ದಾರೆ. ಬಿಡದಿಯಲ್ಲಿ ರೈತರು ಕೃಷಿ ಮಾಡುತ್ತಿದ್ದು, ಇಲ್ಲಿ ಸಸ್ಯ ಸಂಪತ್ತು ಹಾಳಾದರೆ ರಾಹುಲ್ ಗಾಂಧಿ ಮಾತನಾಡುವುದಿಲ್ಲ’ ಎಂದರು.

‘ಸರ್ಕಾರಿ ಯೋಜನೆಗಳಡಿ ನಗರದೊಳಗೆ 7-8 ಸಾವಿರ ನಿವೇಶನಗಳು ಖಾಲಿ ಇವೆ. ಸೂರ್ಯನಗರ ಹಾಗೂ ಸುತ್ತಮುತ್ತ 8 ಲಕ್ಷ ಫ್ಲ್ಯಾಟ್‌ಗಳು ಖಾಲಿ ಇವೆ. ಎಲ್ಲ ಸೇರಿ ಸುಮಾರು 20 ಲಕ್ಷ ನಿವೇಶನ - ಫ್ಲ್ಯಾಟ್‌ಗಳು ಖಾಲಿ ಇವೆ. ಇಂತಹ ಸಮಯದಲ್ಲಿ ಬಿಡದಿ ಟೌನ್‌ಶಿಪ್ ಅಗತ್ಯವಿಲ್ಲ’ ಎಂದರು.

ಧರ್ಮಸ್ಥಳ ಗ್ರಾಮದಲ್ಲಿ ಶವಗಳನ್ನು ಹೂತುಹಾಕಲಾಗಿದೆ ಎನ್ನಲಾದ ಪ್ರಕರಣ

ಬೆದರಿಕೆ ಆರೋಪ: ಎಸ್‌ಐಟಿಗೆ ಚಿನ್ನಯ್ಯ ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಶವಗಳನ್ನು ಹೂತುಹಾಕಲಾಗಿದೆ ಎನ್ನಲಾದ ಪ್ರಕರಣ ಸಂಬಂಧ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ಸಾಕ್ಷಿ ದೂರುದಾರ ಚಿನ್ನ ಸಿ.ಎನ್. ಅಲಿಯಾಸ್ ಚಿನ್ನಯ್ಯ, ತನ್ನ ಮೇಲೆ ಮತ್ತು ಕುಟುಂಬದವರ ಮೇಲೆ ಬೆದರಿಕೆ ಒಡ್ಡುವ ಹಾಗೂ ಮಾನಸಿಕ ಒತ್ತಡ ಹೇರುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ಸಲ್ಲಿಸಿದ್ದಾರೆ.

‘ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಜೂ 8ರಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು ತನಿಖೆಯನ್ನು ಚುರುಕುಗೊಳಿಸಿ ಅಂತಿಮ ವರದಿ ಸಲ್ಲಿಸುವಂತೆಯೂ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣನವರ, ವಿಠ್ಠಲ ಗೌಡ, ಜಯಂತ್ ಟಿ. ಮತ್ತು ಸುಜಾತಾ ಭಟ್ ಮತ್ತು ಕೆಲವು ಯುಟ್ಯೂಬರ್‌ಗಳ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿದ್ದೆ. ತನಿಖೆ ಮತ್ತು ಒಟ್ಟಾರೆ ಸ್ಥಿತಿಗತಿಯ ವರದಿ ಸಲ್ಲಿಸುವಂತೆ ನ್ಯಾಯಮೂರ್ತಿಗಳು ಎಸ್‌ಐಟಿಗೆ ಸೂಚಿಸಿದ್ದಾರೆ. ಇದರ ನಂತರ ಆರೋಪಿಗಳು ಚುರುಕಾಗಿದ್ದಾರೆ. ಆರೋಪಿಗಳು ನನ್ನ ಕುಟುಂಬ ಸದಸ್ಯರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಲು ಮತ್ತು ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ’ ಎಂದು ಚಿನ್ನಯ್ಯ ಆರೋಪಿಸಿದ್ದಾರೆ.

‘ಜೂನ್ 12ರಂದು ರಾತ್ರಿ ಚಾನೆಲ್ ಒಂದರ ಹೆಸರು ಹೇಳಿ ಅಭಿಷೇಕ್ ಎಂಬಾತ ನನ್ನ ಸಂಬಂಧಿಕರಿಗೆ ಕರೆ ಮಾಡಿ ರಿಟ್ ಅರ್ಜಿಯ ಬಗ್ಗೆ ವಿವರಗಳನ್ನು ಕೇಳಿದ್ದಾನೆ. ಆತನ ಮಾತಿನಲ್ಲಿ ಬೆದರಿಕೆ ಮತ್ತು ಒತ್ತಡದ ಧ್ವನಿ ಇತ್ತು. ಅಂದು ರಾತ್ರಿ ಗಿರೀಶ್ ಮಟ್ಟೆಣ್ಣನವರ ಕೂಡ ಸಂಬಂಧಿಕರಿಗೆ ಕರೆ ಮಾಡಿ ಕುಟುಂಬದವರ ಮೇಲೆ ಬೆದರಿಕೆ ಹಾಕುವ ರೀತಿಯಲ್ಲಿ ಮಾತನಾಡಿದ್ದಾರೆ. ರಿಟ್ ಅರ್ಜಿಯನ್ನು ಹಿಂದಕ್ಕೆ ಪಡೆಯಲು ಪ್ರೇರೇಪಿಸುವ ಸಂಚು ಇದರ ಹಿಂದೆ ಇತ್ತು ಎಂಬ ಸಂದೇಹ ಇದೆ. ಇದೆಲ್ಲದರ ನಂತರ ಕುಟುಂಬ ಸದಸ್ಯರು ಆತಂಕಗೊಂಡಿದ್ದಾರೆ. ಆದ್ದರಿಂದ ಆರೋಪಿಗಳ ವಿರುದ್ಧ ಕ್ರಮ ಕೈಗೊಂಡು ನನ್ನ ಕುಟುಂಬ ಸದಸ್ಯರಿಗೆ ಭದ್ರತೆ ಒದಗಿಸಬೇಕು’ ಎಂದು ಚಿನ್ನಯ್ಯ ಕೋರಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಹೋರಾಟಗಾರ ಗಿರೀಶ್ ಮಟ್ಟೆಣ್ಣವರ ಮತ್ತು ಯೂಟ್ಯೂಬರ್ ಅಭಿಷೇಕ್, ‘ಚಿನ್ನಯ್ಯ ಸಲ್ಲಿಸಿರುವ ದೂರು ಸುಳ್ಳು ಮತ್ತು ಆಧಾರರಹಿತ. ಇದು ತನಿಖೆಯ ಹಾದಿ ತಪ್ಪಿಸುವ ಪ್ರಯತ್ನ’ ಎಂದು ತಿಳಿಸಿದ್ದಾರೆ.

‘ಫೋನಿನಲ್ಲಿ ನಡೆಸಿದ ಸಾಮಾನ್ಯ ಸಂಭಾಷಣೆಯನ್ನು ಬೆದರಿಕೆ ಕರೆ ಎಂದು ಬಿಂಬಿಸಲಾಗಿದೆ. ಪ್ರಭಾವಿ ವ್ಯಕ್ತಿಗಳು ಚಿನ್ನಯ್ಯನನ್ನು ಕೈಗೊಂಬೆಯನ್ನಾಗಿ ಬಳಸಿಕೊಂಡಿದ್ದಾರೆ’ ಎಂದು ಅವರು ಆರೋಪಿಸಿದ್ದಾರೆ.

ಧರ್ಮಸ್ಥಳ ಪ್ರಕರಣ ಸಿಬಿಐಗೆ: ಮುಖ್ಯಮಂತ್ರಿಗೆ ಸಿ.ಟಿ.ರವಿ ಪತ್ರ

ಬೆಂಗಳೂರು: ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಡೆದಿರುವ ಷಡ್ಯಂತ್ರದ ಕುರಿತು ಸಮಗ್ರ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿ ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

‘ಧರ್ಮಸ್ಥಳದ ಇತ್ತೀಚಿನ ಬೆಳವಣಿಗೆಗಳು ಕೋಟ್ಯಂತರ ಭಕ್ತರ ಮನಸ್ಸಿನಲ್ಲಿ ಆತಂಕ ಹುಟ್ಟುಹಾಕಿವೆ. ಶಿಕ್ಷಣ, ಆರೋಗ್ಯ, ಅನ್ನದಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಧರ್ಮಸ್ಥಳ ಸಲ್ಲಿಸಿರುವ ಸೇವೆ ದೇಶಕ್ಕೆ ಮಾದರಿಯಾಗಿದೆ. ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಆರೋಪಗಳು, ಅಪಪ್ರಚಾರಗಳು ಮತ್ತು ಅನುಮಾನಗಳ ವಾತಾವರಣ ಸೃಷ್ಟಿಮಾಡುತ್ತಿರುವುದನ್ನು ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಈಗ ಹೈಕೋರ್ಟ್ ಮುಂದೆ ಸಲ್ಲಿಕೆಯಾಗಿರುವ ಅರ್ಜಿಯಲ್ಲಿ ನಟ ಪ್ರಕಾಶ್ ರಾಜ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟಣ್ಣನವರ್, ವಿಠಲ್ ಗೌಡ, ಜಯಂತ್, ಸಮೀರ್ ಎಂ.ಡಿ, ಅಜಯ್, ದಿನೇಶ್ ಸೇರಿದಂತೆ ಹಲವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಸುಮಾರು ₹200 ಕೋಟಿ ವೆಚ್ಚದಲ್ಲಿ ಷಡ್ಯಂತ್ರ ರೂಪಿಸಲಾಗಿತ್ತು ಎಂಬ ಆರೋಪ ಇದೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

‘ರೈಲ್ವೆ ಪರೀಕ್ಷೆ: ಕನ್ನಡದಲ್ಲಿ ಅವಕಾಶ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೈರುತ್ಯ ರೈಲ್ವೆ ಮತ್ತೆ ಕನ್ನಡವಿಲ್ಲದೆ ಪದೋನ್ನತಿ ಪರೀಕ್ಷೆ ನಡೆಸಲು ಮುಂದಾಗಿದೆ. ಇದು ಕನ್ನಡಿಗರ ಮೇಲೆ ಹೂಡಲಾಗಿರುವ ಮೋಸದ ಯುದ್ಧ. ಇದಕ್ಕೆ ತಕ್ಕ ಉತ್ತರವನ್ನು ನೀಡುತ್ತೇವೆ’ ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ಎಚ್ಚರಿಸಿದ್ದಾರೆ.

ನೈರುತ್ಯ ರೈಲ್ವೆಯ ಮೈಸೂರು ವಿಭಾಗವು ಜೂನ್ 4ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ಗೂಡ್ಸ್ ರೈಲು ಮ್ಯಾನೇಜರ್ ಹುದ್ದೆಯನ್ನು ಲೆವೆಲ್-5ರಲ್ಲಿ ಶೇಕಡ 15ರಷ್ಟು ಎಲ್‌ಡಿಸಿಇ ಕೋಟಾ ಅಡಿಯಲ್ಲಿ ಭರ್ತಿ ಮಾಡಲಿದೆ. ಅದಕ್ಕೆ ಜೂನ್ 25ರಂದು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ನಡೆಸಲು ನಿರ್ಧರಿಸಿದೆ. ಇದೇ ರೀತಿ ಹುಬ್ಬಳ್ಳಿ ಮತ್ತು ಬೆಂಗಳೂರು ವಿಭಾಗಗಳಲ್ಲೂ ಪರೀಕ್ಷೆಗಳು ನಡೆಯುತ್ತಿವೆ. ಆದರೆ ಈ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಸಿದ್ಧಪಡಿಸಲಾಗುತ್ತಿದೆ. ಕನ್ನಡ ಭಾಷೆಯಲ್ಲಿ ಅವಕಾಶವನ್ನು ನೀಡದಿರುವುದು ಕನ್ನಡಿಗರಿಗೆ ಮಾಡುತ್ತಿರುವ ಅನ್ಯಾಯ ಮತ್ತು ಭಾಷಾ ಹಕ್ಕುಗಳನ್ನು ಕಿತ್ತುಕೊಳ್ಳುವ ದೊಡ್ಡ ಸಂಚು ಎಂದು ಅವರು ಆರೋಪಿಸಿದ್ದಾರೆ.

ಕನ್ನಡದಲ್ಲಿ ಅವಕಾಶ ನೀಡದೇ ಇದ್ದರೆ ಜೂನ್ 25ರಂದು ಈ ಪರೀಕ್ಷೆಯನ್ನು ನಡೆಸಲು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

‘ರೈಲ್ವೆ ಮಂಡಳಿ ಅವಕಾಶ ನೀಡಬೇಕು’

‘ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಇಂಗ್ಲಿಷ್, ಹಿಂದಿ ಅಲ್ಲದೇ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ನಡೆಸಲು ರೈಲ್ವೆ ಮಂಡಳಿ ಅವಕಾಶ ನೀಡಿದೆ. ಆದರೆ, ಇಲಾಖೆಯೊಳಗಿನ ಬಡ್ತಿ ಪರೀಕ್ಷೆಗಳಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಅವಕಾಶ ನೀಡಲಾಗಿದೆ. ರೈಲ್ವೆ ಮಂಡಳಿಯು ಪ್ರಾದೇಶಿಕ ಭಾಷೆಗಳಲ್ಲಿ ಬಡ್ತಿ ಪರೀಕ್ಷೆಗಳಿಗೂ ಅವಕಾಶ ಮಾಡಿ ಆದೇಶ ಹೊರಡಿಸುವವರೆಗೆ ನಾವು ಏನೂ ಮಾಡುವಂತಿಲ್ಲ’ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ತಾಯಿ ಮೇಲೆ ಹಲ್ಲೆ ಕುಪಿತ ಮಗನಿಂದ ತಂದೆಯ ಕೊಲೆ

ಚಿಕ್ಕಮಗಳೂರು: ತಾಲ್ಲೂಕಿನ ಹನುಮನಹಳ್ಳಿಯಲ್ಲಿ ತಾಯಿ ಮೇಲೆ ಹಲ್ಲೆ ಮಾಡಿದ್ದರಿಂದ ಕುಪಿತಗೊಂಡ ಮಗ ತಂದೆಯನ್ನು ಕೊಲೆ ಮಾಡಿದ್ದಾನೆ.

ಕೆಂಚೇಗೌಡ (55) ಮೃತ ವ್ಯಕ್ತಿ. ಆತನ ಮಗ, ಆರೋಪಿ ಕುಮಾರ (25) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಆತನಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

‘ಭಾನುವಾರ ಕುಡಿದ ಅಮಲಿನಲ್ಲಿ ಪತ್ನಿಯ ಮೇಲೆ ಕೆಂಚೇಗೌಡ ಹಲ್ಲೆ ನಡೆಸುತ್ತಿದ್ದ ವೇಳೆ ಬಂದ ಮಗ ಕುಮಾರ್ ತಂದೆಯ ತಲೆಗೆ ನೇಗಿಲ ಮೇಣಿಯಿಂದ ಹೊಡೆದಿದ್ದ. ಅವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು, ಹೆಚ್ಚಿನ ಚಿಕಿತ್ಸೆಗೆ ಹಾಸನಕ್ಕೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬೈಕ್‌ನಿಂದ ಬಿದ್ದು ಗಾಯಗೊಂಡು ತಂದೆ ಮೃತಪಟ್ಟಿದ್ದಾರೆ ಎಂದು ಕುಮಾರ ಮಾಹಿತಿ ನೀಡಿದ್ದ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸತ್ಯ ಒಪ್ಪಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,622
ಇಂದಿನ ಅಂತ್ಯ:	23,853
ದಿನದ ಕನಿಷ್ಠ:	23,817
	231

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹695
	12 ಕ್ಕೆ	₹94
ಮೈಸೂರು:	100 ಕ್ಕೆ	₹712

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹400- 695
ದ್ವಿತಳಿ (ಬಿ.ವಿ)	₹455-846

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹266
ಆರ್‌ಎಸ್‌ಎಸ್-5	₹260
ಗುಡ್ ಲಾಟ್	₹226

ಮುದ್ರೆ-ಮನೆ ಕಾಫಿ (50 ಕೆಜಿಗೆ)	
ಎಪಿ	₹22,600
ಎಸಿ	₹14,000
ಆರ್‌ಪಿ	₹18,400
ಆರ್‌ಸಿ	₹9,880

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹32,500-33,000
ತಿಪಟೂರು	₹30,500-33,010
ತುರುವೇಕೆರೆ	₹32,000-32,000

ಜಿ7 ಶೃಂಗ: ಫ್ರಾನ್ಸ್‌ಗೆ ಬಂದಿಳಿದ ಟ್ರಂಪ್

ಇವಿಯಾನ್ ಲಿ ಬಾನ್ (ಎಪಿ): ಇರಾನ್‌ನೊಂದಿಗೆ ಶಾಂತಿ ಒಪ್ಪಂದ ಏರ್ಪಟ್ಟಿದೆ ಎಂದು ಘೋಷಿಸಿದ ಬಳಿಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜಿ7 ಶೃಂಗಸಭೆಯಲ್ಲಿ ಭಾಗವಹಿಸಲು ಫ್ರಾನ್ಸ್‌ನ ಇವಿಯಾನ್ ಲಿ ಬಾನ್ ನಗರಕ್ಕೆ ಸೋಮವಾರ ಬಂದಿಳಿದಿದ್ದಾರೆ.

ಅಮೆರಿಕವು ಇರಾನ್‌ನೊಂದಿಗೆ ಯುದ್ಧ ಘೋಷಿಸುವ ಮೊದಲು ತಮ್ಮೊಂದಿಗೆ ಒಮ್ಮೆಯೂ ಚರ್ಚಿಸಲಿಲ್ಲ ಎಂಬ ಅಸಮಾಧಾನವು ಜಿ7ರ ಪ್ರಮುಖ ದೇಶಗಳ ನಾಯಕರಾದ ಫ್ರಾನ್ಸ್‌ನ ಇಮ್ಯಾನುಯೆಲ್ ಮ್ಯಾಕ್ರನ್, ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ಜರ್ಮನಿಯ ಛಾನ್ಸಲರ್ ಫ್ರೆಡ್‌ರಿಚ್ ಮೆರ್ಝ್ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರಲ್ಲಿ ಇತ್ತು.

ಯುದ್ಧದ ವೇಳೆ ಅಮೆರಿಕಕ್ಕೆ ಈ ದೇಶಗಳು ಸಹಕಾರ ನೀಡಿಲ್ಲ ಎಂಬ ಬಗ್ಗೆ ಟ್ರಂಪ್ ಅವರು ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದರು.

ಬಂಡವಾಳ ಸೆಳೆಯಲು ಮತ್ತಷ್ಟು ಕ್ರಮ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆ

ಮುಖ್ಯಾಂಶಗಳು

- ಬಂಡವಾಳ ಹಿಂದಕ್ಕೆ ಪಡೆಯುತ್ತಿರುವ ವಿದೇಶಿ ಹೂಡಿಕೆದಾರರು
- ಸಾಲಪತ್ರಗಳಲ್ಲಿ ಹೂಡಿಕೆಗೆ ಉತ್ತೇಜನ ಕ್ರಮ ಪ್ರಕಟಿಸಿರುವ ಕೇಂದ್ರ, ಆರ್‌ಬಿಐ

ನವದೆಹಲಿ (ಪಿಟಿಐ): 'ವಿದೇಶಿ ಬಂಡವಾಳವನ್ನು (ಎಫ್‌ಡಿಐ) ಪುನಃ ಆಕರ್ಷಿಸಲು ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಘೋಷಿಸಿರುವ ಕ್ರಮಗಳು 'ಮೊದಲ ಹೆಜ್ಜೆ' ಮಾತ್ರ, ಮುಂದಿನ ದಿನಗಳಲ್ಲಿ ಇನ್ನಷ್ಟು ಕ್ರಮಗಳ ಘೋಷಣೆ ಸಾಧ್ಯತೆ ಇದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

'ಪ್ರಮುಖ ಕಚ್ಚಾ ವಸ್ತುಗಳು, ಕಚ್ಚಾ ತೈಲ ಮತ್ತು ರಸಗೊಬ್ಬರ ಆಮದಿನ ಕಾರಣದಿಂದಾಗಿ ದೇಶದ ಅರ್ಥವ್ಯವಸ್ಥೆಯು ತೀವ್ರ ಸ್ವರೂಪದ ಒತ್ತಡವನ್ನು ಎದುರಿಸುತ್ತಿದೆ, ಜಾಗತಿಕ ಮಟ್ಟದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಯಿಂದಾಗಿ ಎದುರಾಗುವ ಸಂಕಷ್ಟಗಳನ್ನು ಎದುರಿಸಲು ಸಿದ್ಧವಾಗಿ ಇರಬೇಕಿದೆ' ಎಂದು ಅವರು ಹೇಳಿದ್ದಾರೆ.

ನಿರ್ಮಲಾ ಸೀತಾರಾಮನ್

ಸಾಲಪತ್ರಗಳ ಮಾರುಕಟ್ಟೆಯು ವಿದೇಶಿ ಬಂಡವಾಳವನ್ನು ಸೆಳೆಯಲು ಸೂಜಿಗಲ್ಲಿನಂತೆ ನೆರವಾಗಬಹುದು ಎಂಬುದನ್ನು ಸರ್ಕಾರ ಹಾಗೂ ಆರ್‌ಬಿಐ ನಡೆಸಿದ ವಿಶ್ಲೇಷಣೆಯೊಂದು ತೋರಿಸಿಕೊಟ್ಟಿದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಸರ್ಕಾರದ ಸಾಲಪತ್ರಗಳಲ್ಲಿ ಹೂಡಿಕೆ ಮಾಡಲು ಇರುವ ನಿಯಮಗಳ ಪಾಲನೆಯನ್ನು ಹಗುರವಾಗಿಸುವ ಉದ್ದೇಶದಿಂದ, ಅಮಿತ ಹೂಡಿಕೆಗೆ ಲಭ್ಯವಿರುವ ಸರ್ಕಾರಿ ಸಾಲಪತ್ರಗಳ ಪಟ್ಟಿಯನ್ನು ಕೇಂದ್ರ ಸರ್ಕಾರವು ಜೂನ್ 5ರಂದು ವಿಸ್ತರಿಸಿದೆ.

ಅಲ್ಲದೆ, ವಿದೇಶಿ ಹೂಡಿಕೆದಾರರು ಸರ್ಕಾರಿ ಸಾಲಪತ್ರಗಳಲ್ಲಿನ ಹೂಡಿಕೆಯಿಂದ ಪಡೆಯುವ ಬಡ್ಡಿ ಹಾಗೂ ಬಂಡವಾಳ ವೃದ್ಧಿ ಲಾಭಕ್ಕೆ ಆದಾಯ ತೆರಿಗೆ ವಿನಾಯಿತಿಗಳನ್ನು ಘೋಷಿಸಲಾಗಿದೆ.

'ಈಗಿನ ಕ್ರಮಗಳು ಸಾಲಪತ್ರಗಳ ಮಾರುಕಟ್ಟೆಗೆ ಸೀಮಿತವಾಗಿ ಇವೆಯಾದರೂ, ಇಷ್ಟಕ್ಕೇ ಎಲ್ಲವೂ ಕೊನೆಗೊಳ್ಳುವುದಿಲ್ಲ. ಇನ್ನೂ ಹಲವು ಕ್ರಮಗಳು ಬರಲಿವೆ. ಇನ್ನಷ್ಟು ವಿದೇಶಿ ಬಂಡವಾಳ ಬರಬೇಕು' ಎಂದಿದ್ದಾರೆ.

ವಿದೇಶಿ ವಿನಿಮಯ ಸಂಗ್ರಹವನ್ನು ಹೆಚ್ಚಿಸಲು ಹಾಗೂ ರೂಪಾಯಿ ಮೌಲ್ಯದಲ್ಲಿ ಸ್ಥಿರತೆ ತರಲು ನೆರವಾಗುವ ಇನ್ನೂ ಹಲವು ಕ್ರಮಗಳು ಜಾರಿಗೆ ಬರಲಿವೆ ಎಂದು ಕೇಂದ್ರ ಸರ್ಕಾರದ ಮೂಲಗಳು ಈಚೆಗೆ ಹೇಳಿದ್ದವು.

ಷೇರುಪೇಟೆಯಲ್ಲಿ ಕೂಡ ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ, ಬಂಡವಾಳವನ್ನು ಹಿಂಪಡೆಯುವುದಕ್ಕೆ ಹೆಚ್ಚಿನ ಗಮನ ನೀಡಿದ್ದಾರೆ. ಜೂನ್ ತಿಂಗಳ ಮೊದಲ ಪಾಕ್ಷಿಕದಲ್ಲಿ ವಿದೇಶಿ ಹೂಡಿಕೆದಾರರು ಷೇರುಪೇಟೆಯಿಂದ ಒಟ್ಟು ₹62,853 ಕೋಟಿ ಬಂಡವಾಳ ಹಿಂಪಡೆದಿದ್ದಾರೆ.

2025ರಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು ₹1.66 ಲಕ್ಷ ಕೋಟಿಯಷ್ಟು ಬಂಡವಾಳ ಹಿಂಪಡೆದಿದ್ದರು. ಆದರೆ, 2026ರಲ್ಲಿ ಜೂನ್ 14ರವರೆಗಿನ ಅಂಕಿ–ಅಂಶಗಳ ಪ್ರಕಾರ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ದೇಶದಿಂದ ಹಿಂಪಡೆದ ಬಂಡವಾಳದ ಮೊತ್ತ ₹2.87 ಲಕ್ಷ ಕೋಟಿಯಷ್ಟಾಗಿದೆ.

ಸುದ್ದಿ 2 ನಿಮಿಷ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಆಹಾರ ಉತ್ಪನ್ನಗಳು, ಇಂಧನ ಮತ್ತು ವಿದ್ಯುತ್ ಸಗಟು ಬೆಲೆ ಹೆಚ್ಚಳದ ಪರಿಣಾಮವಾಗಿ ಸಗಟು ಹಣದುಬ್ಬರ ಪ್ರಮಾಣವು ಮೇ ತಿಂಗಳಿನಲ್ಲಿ ಶೇ 9.68ಕ್ಕೆ ಹೆಚ್ಚಳ ಕಂಡಿದೆ. ಇದು ಏಪ್ರಿಲ್‌ನಲ್ಲಿ ಶೇ 8.26ರ ಮಟ್ಟದಲ್ಲಿತ್ತು.

2022–23ನ್ನು ಮೂಲವರ್ಷವಾಗಿ ಇರಿಸಿಕೊಂಡ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರ ದರದ ಮಾಹಿತಿಯನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಸೋಮವಾರ ಬಿಡುಗಡೆ ಮಾಡಿದೆ.

ಮೇ ತಿಂಗಳಲ್ಲಿ ಇಂಧನ ಮತ್ತು ವಿದ್ಯುತ್ ಸಗಟು ಹಣದುಬ್ಬರವು ಶೇ 30.33ಕ್ಕೆ ಜಿಗಿದಿದೆ. ಕಚ್ಚಾ ಪೆಟ್ರೋಲಿಯಂ ಹಣದುಬ್ಬರವು ಶೇ 61.51ರಷ್ಟು ಆಗಿದೆ.



ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಪರಿಣಾಮವು ಸಗಟು ಹಣದುಬ್ಬರ ಏರಿಕೆಯಲ್ಲಿ ಕಾಣಿಸಿದೆ. ಆಹಾರ ವಸ್ತುಗಳ ಸಗಟು ಹಣದುಬ್ಬರ ಪ್ರಮಾಣ ಶೇ 3.60 ಆಗಿದೆ. ತಯಾರಿಸಿದ ಉತ್ಪನ್ನಗಳ ಹಣದುಬ್ಬರವು ಶೇ 7.48ಕ್ಕೆ ಹೆಚ್ಚಳವಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ 16 ತಿಂಗಳುಗಳ ಗರಿಷ್ಠ ಮಟ್ಟವಾದ ಶೇ 3.93ಕ್ಕೆ ಜಿಗಿದಿದೆ.

ಜೆಪ್ಟೊ: ಐಪಿಒ ದಾಖಲೆ ಪರಿಷ್ಕರಣೆ

ಬೆಂಗಳೂರು: ಕ್ವಿಕ್–ಕಾಮರ್ಸ್ ವಲಯದ ಮುಂಚೂಣಿ ಕಂಪನಿಗಳ ಪೈಕಿ ಒಂದಾಗಿರುವ ಜೆಪ್ಟೊ ಲಿಮಿಟೆಡ್ ಐಪಿಒ ಮೂಲಕ ಬಂಡವಾಳ ಸಂಗ್ರಹಿಸುವ ಉದ್ದೇಶದಿಂದ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆಪತ್ರಗಳನ್ನು ಈಚೆಗೆ ಪರಿಷ್ಕರಿಸಿ ಸಲ್ಲಿಸಿದೆ.

ಐಪಿಒ ವೇಳೆ ಹೊಸದಾಗಿ ಷೇರುಗಳನ್ನು ಬಿಡುಗಡೆ ಮಾಡುವ ಮೂಲಕ ₹8,010 ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯನ್ನು ಕಂಪನಿಯು ಹೊಂದಿದೆ. ಬಂಡವಾಳವನ್ನು ಕಂಪನಿಯು ಉತ್ಪನ್ನಗಳನ್ನು ವಿತರಿಸಲು ಬಳಸುವ ಜಾಲ ವಿಸ್ತರಿಸಲು, ಈಗ ಬಳಕೆಯಾಗುತ್ತಿರುವ ಪೂರೈಕೆ ಕೇಂದ್ರಗಳನ್ನು ಗುತ್ತಿಗೆ ನೀಡಲು, ತಂತ್ರಜ್ಞಾನ ಮತ್ತು ಕ್ಲೌಡ್ ಮೂಲಸೌಕರ್ಯ ಅಭಿವೃದ್ಧಿಪಡಿಸಲು, ಜೆಪ್ಟೊ ಮಾರ್ಕೆಟ್‌ಪ್ಲೇಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಹೂಡಿಕೆ ಮಾಡಲು, ವಿಲೀನ ಹಾಗೂ ಸ್ವಾಧೀನ ಪ್ರಕ್ರಿಯೆ ಮೂಲಕ ವಹಿವಾಟು ವಿಸ್ತರಿಸಲು ಬಳಸಿಕೊಳ್ಳಲು ಉದ್ದೇಶಿಸಿದೆ ಎಂದು ಪ್ರಕಟಣೆ ತಿಳಿಸಿದೆ.

2025-26ನೆಯ ಹಣಕಾಸು ವರ್ಷದಲ್ಲಿ ಹಣ್ಣು-ತರಕಾರಿಗಳು, ಗೃಹೋಪಯೋಗಿ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಸೌಂದರ್ಯವರ್ಧಕ ಉತ್ಪನ್ನಗಳು ಸೇರಿ 46,623 ಬಗೆಯ ಉತ್ಪನ್ನಗಳು ಕಂಪನಿಯು ಗ್ರಾಹಕರಿಗೆ ತಲುಪಿಸಿದೆ.

ಅಡಿಕೆ ಧಾರಣೆ

ಕುಮಟಾ					
ಚಿಪ್ಪು	30699-34099	ಚಾಲಿ	30022-41619	ಬೆಟ್ಟೆ	38561-47969
ಕೋಕ	17509-33019	ಕೋಕ	10299-35101	ಬಿಳಿಗೋಟು	23600-34681
ಫ್ಯಾಕ್ಟರಿ	10289-25000	ಕೆಂಪುಗೋಟು	26699-40189	ಚಾಲಿ	44549-48760
ಹಳೆಚಾಲಿ	42099-47498	ರಾಶಿ	38500-59270	ಕೆಂಪುಗೋಟು	28499-36099
ಹೊಸಚಾಲಿ	40090-47019	ಸಿಪ್ಪೆಗೋಟು	9699-22089	ರಾಶಿ	50000-52200
ಶಿವಮೊಗ್ಗ		**ಸಿದ್ದಾಪುರ**		**ಯಲ್ಲಾಪುರ**	
ಸರಕು/ಹಸ	60199-86696	ಬಿಳಿಗೋಟು	26900-35079	ಆಪಿ	55179-55179
ಬೆಟ್ಟೆ	52399-62300	ಚಾಲಿ	39099-47839	ಬಿಳಿಗೋಟು	22899-34369
ರಾಶಿಇಡಿ	45149-54599	ಕೋಕ	22599-33699	ಚಾಲಿ	36499-47801
ಗೊರಬಲು	19499-41311	ಕೆಂಪುಗೋಟು	31700-37900	ಕೋಕ	14099-28499
ಸಾಗರ		ರಾಶಿ	44549-52499	ಕೆಂಪುಗೋಟು	16899-38111
ಬಿಳಿಗೋಟು	20022-34099	ತಟ್ಟಿಬೆಟ್ಟೆ	36300-46099	ರಾಶಿ	46299-53009
		ಶಿರಸಿ		ತಟ್ಟಿಬೆಟ್ಟೆ	37166-47899

ಏಪ್ರಿಲ್, ಮೇ ತಿಂಗಳಿನಲ್ಲಿ ಚಿನ್ನದ ಆಮದು ಶೇ 60ರಷ್ಟು ಹೆಚ್ಚಳ

ಹೆಚ್ಚಿದ ರಫ್ತು, ಹಿಗ್ಗಿದ ವ್ಯಾಪಾರ ಕೊರತೆ

ನವದೆಹಲಿ (ಪಿಟಿಐ): ಮೇ ತಿಂಗಳಲ್ಲಿ ದೇಶದ ರಫ್ತು ವಹಿವಾಟುಗಳು ಶೇ 18ರಷ್ಟು ಬೆಳವಣಿಗೆ ದಾಖಲಿಸಿವೆ. ರಫ್ತು ವಹಿವಾಟಿನ ಒಟ್ಟು ಮೊತ್ತವು 45.2 ಬಿಲಿಯನ್ ಅಮೆರಿಕನ್ ಡಾಲರ್ (₹4.27 ಲಕ್ಷ ಕೋಟಿ) ಆಗಿದ್ದು, ಆರು ತಿಂಗಳ ಗರಿಷ್ಠ ಮಟ್ಟ ತಲುಪಿದೆ.

ಕಚ್ಚಾ ತೈಲದ ಬೆಲೆ ಏರಿಕೆಯ ಕಾರಣದಿಂದಾಗಿ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಆಮದು ಹೆಚ್ಚಾಗಿದ್ದುದರಿಂದಾಗಿ ಇದೇ ಅವಧಿಯಲ್ಲಿ ದೇಶದ ವ್ಯಾಪಾರ ಕೊರತೆ ಅಂತರವು 28.21 ಬಿಲಿಯನ್ ಡಾಲರ್‌ಗೆ (₹ 2.66 ಲಕ್ಷ ಕೋಟಿ) ಹಿಗ್ಗಿದೆ. ಹಿಂದಿನ ವರ್ಷದ ಮೇ ತಿಂಗಳಲ್ಲಿ ವ್ಯಾಪಾರ ಕೊರತೆ ಅಂತರವು 21.88 ಬಿಲಿಯನ್ ಡಾಲರ್ (₹ 2.06 ಲಕ್ಷ ಕೋಟಿ) ಆಗಿತ್ತು.

ಈ ಬಾರಿಯ ಏಪ್ರಿಲ್ ತಿಂಗಳಲ್ಲಿ ದಾಖಲಾಗಿದ್ದ 28.38 ಬಿಲಿಯನ್ ಡಾಲರ್ (₹ 2.68 ಲಕ್ಷ ಕೋಟಿ) ವ್ಯಾಪಾರ ಕೊರತೆ ಅಂತರಕ್ಕೆ ಹೋಲಿಸಿದರೆ ಮೇ ತಿಂಗಳ ಕೊರತೆಯು ತುಸು ಕಡಿಮೆ ಇದೆ.

ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಇದ್ದಾಗಲೂ ದೇಶದ ರಫ್ತು ವಹಿವಾಟು ಒಳ್ಳೆಯ ಪ್ರಮಾಣದಲ್ಲಿ ಬೆಳವಣಿಗೆ ಕಾಣುತ್ತಿದೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹೇಳಿದ್ದಾರೆ. ಈವರೆಗಿನ ಗತಿಯನ್ನು ಗಮನಿಸಿದರೆ ಈ ವರ್ಷದಲ್ಲಿ ರಫ್ತು ವಹಿವಾಟುಗಳು ಚೆನ್ನಾಗಿ ಆಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಪೆಟ್ರೋಲಿಯಂ ಉತ್ಪನ್ನಗಳು, ಎಂಜಿನಿಯರಿಂಗ್ ಮತ್ತು ಫಾರ್ಮಾ ಉತ್ಪನ್ನಗಳು ರಫ್ತು ವಹಿವಾಟಿನಲ್ಲಿ ಹೆಚ್ಚಿನ ಪಾಲು ಪಡೆದಿವೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ಎರಡು ತಿಂಗಳಲ್ಲಿ ಚಿನ್ನದ ಆಮದು ಶೇ 60ರಷ್ಟು ಹೆಚ್ಚಾಗಿದೆ. ಕಚ್ಚಾ ತೈಲದ ಆಮದು ಶೇ 16.5ರಷ್ಟು ಹೆಚ್ಚಾಗಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕುಸುಮಾ ರಾಮಚಂದ್ರ

ಜನನ: 20-4-1960 ಮರಣ: 16-6-2023

ಜೀವನ ಸಾವಿನಲ್ಲಿ ಅಂತ್ಯ, ಸಂಬಂಧ ಅಜರಾಮರ

ಪ್ರೀತಿಯ ಹೆಂಡತಿ, ತಾಯಿ ಮತ್ತು ಅಜ್ಜಿ, ನಿಮ್ಮ ಪ್ರೀತಿ ನಮ್ಮ ಕುಟುಂಬದ ಹೃದಯವಾಗಿ ಉಳಿದಿದೆ. ನಾವು ಇನ್ನು ಮುಂದೆ ನಿಮ್ಮನ್ನು ನೋಡಲು ಸಾಧ್ಯವಾಗದಿದ್ದರೂ, ಪ್ರತಿಯೊಂದು ಪ್ರಾರ್ಥನೆ ಮತ್ತು ಪ್ರತಿಯೊಂದು ಪ್ರೀತಿಯ ಸ್ಮರಣೆಯಲ್ಲಿ ನಿಮ್ಮ ಉಪಸ್ಥಿತಿಯನ್ನು ನಾವು ಅನುಭವಿಸುತ್ತೇವೆ. ನಿಮ್ಮ ದಯೆ, ಶಕ್ತಿ ಮತ್ತು ಬೇಷರತ್ತಾದ ಪ್ರೀತಿ ಪ್ರತಿದಿನ ನಮಗೆ ಮಾರ್ಗದರ್ಶನ ನೀಡುತ್ತಲೇ ಇರುತ್ತದೆ. ನೀವು ದೇವರ ಶಾಶ್ವತ ಅಪ್ಪುಗೆಯಲ್ಲಿ ಶಾಂತಿಯುತವಾಗಿ ವಿಶ್ರಾಂತಿ ಪಡೆಯುತ್ತೀರಿ, ನೀವು ಪ್ರೀತಿಸಿದವರನ್ನು ನೋಡಿಕೊಳ್ಳುತ್ತೀರಿ ಎಂದು ನಾವು ನಂಬುತ್ತೇವೆ.

ಸದಾ ಸ್ಮರಿಸುವ ಕುಟುಂಬ ವರ್ಗದವರು

ಮುಂಬೈ ಧಾರಣೆ (ಶೇಂಗಾ)

15-06-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1595 (1585)
ಪಾಮ್ ವಾರದ ಡೆಲಿವರಿ	1463 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,400 (1,47,700)
ಬೆಳ್ಳಿ ಕೆ.ಜಿಗೆ	2,51,900 (2,46,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಕೇದಾರನಾಥಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು

ಡಿಜಿಟಲ್, ರಕ್ಷಣೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಹಕಾರ

ಸ್ಲೊವಾಕಿಯಾ: 11 ಒಪ್ಪಂದಕ್ಕೆ ಸಹಿ

ಬ್ರಾಟಿಸ್ಲಾವಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದ್ದು, ವಲಸೆ, ಡಿಜಿಟಲ್ ತಂತ್ರಜ್ಞಾನ ಹಾಗೂ ರಕ್ಷಣಾ ಕ್ಷೇತ್ರ ಸೇರಿದಂತೆ ಒಟ್ಟು 11 ಒಪ್ಪಂದಗಳಿಗೆ ಸೋಮವಾರ ಸಹಿ ಹಾಕಿದ್ದಾರೆ.

ಫ್ರಾನ್ಸ್ ಬಳಿಕ ಸ್ಲೊವಾಕಿಯಾ ಪ್ರವಾಸದಲ್ಲಿರುವ ಮೋದಿ ಭಾನುವಾರ ಇಲ್ಲಿಗೆ ಬಂದಿಳಿದರು.

'ಉಭಯ ದೇಶಗಳ ನಡುವಿನ ಸಂಬಂಧವನ್ನು ಸಮಗ್ರ ಪಾಲುದಾರಿಕೆಯ ಮಟ್ಟಕ್ಕೆ ಉನ್ನತೀಕರಿಸಿದ್ದೇವೆ. ಭಾರತ–ಯುರೋಪ್ ಒಕ್ಕೂಟದ ಮುಕ್ತ ವ್ಯಾಪಾರ ಒಪ್ಪಂದದ ಆರಂಭಿಕ ಅನುಷ್ಠಾನಕ್ಕೆ ಸಮ್ಮತಿಸಲಾಗಿದೆ. ಎರಡೂ ದೇಶಗಳ ಕೈಗಾರಿಕೆಗಳು, ನವೋದ್ಯಮಗಳು, ವ್ಯಾಪಾರಿಗಳು ಇದರ ಪ್ರಯೋಜನ ಪಡೆದುಕೊಳ್ಳಲಿದ್ದಾರೆ' ಎಂದು ಉಭಯ ನಾಯಕರು ತಿಳಿಸಿದ್ದಾರೆ.

ಇಂಧನ ಕ್ಷೇತ್ರದಲ್ಲಿನ ಸಹಕಾರವನ್ನು ಹೆಚ್ಚಿಸಲು ಒಪ್ಪಿಕೊಳ್ಳಲಾಗಿದೆ. ಎರಡೂ ದೇಶಗಳ ಜನರ ಅನುಕೂಲಕ್ಕಾಗಿ ಹಲವಾರು ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಎಲ್ಲಾ ವಿವಾದಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳುವುದನ್ನು ಬೆಂಬಲಿಸುತ್ತೇವೆ' ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸ್ಲೊವಾಕಿಯಾದ ಬ್ರಾಟಿಸ್ಲಾವಾಗೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಲ್ಲಿನ ಪ್ರಧಾನಿ ರಾಬರ್ಟ್ ಫಿಕೊ ಅವರು ಸ್ವಾಗತಿಸಿದರು – ಪಿಟಿಐ ಚಿತ್ರ

'ರಕ್ಷಣಾ ಸಹಕಾರವು ಪರಸ್ಪರ ನಂಬಿಕೆಗೆ ಸಾಕ್ಷಿಯಾಗಿದೆ. ಇದು ರಕ್ಷಣಾ ಕೈಗಾರಿಕೆಗಳಿಗೆ ಹೊಸ ಆವೇಗವನ್ನು ನೀಡುತ್ತದೆ. ಭಾರತ– ಯುರೋಪ್ ಒಕ್ಕೂಟದ ಮುಕ್ತ ವ್ಯಾಪಾರ ಒಪ್ಪಂದದ ಸಮ್ಮತಿಗಾಗಿ ರಾಬರ್ಟ್ ಫಿಕೊ ಅವರಿಗೆ ಕೃತಜ್ಞತೆಗಳು' ಎಂದು ಮೋದಿ ಹೇಳಿದರು.

1993ರಲ್ಲಿ ಸ್ಲೊವಾಕಿಯಾ ಸ್ವಾತಂತ್ರ್ಯ ಪಡೆದ ಬಳಿಕ ಆ ದೇಶಕ್ಕೆ ಭಾರತದ ಪ್ರಧಾನಿಯೊಬ್ಬರು ಭೇಟಿ ನೀಡುತ್ತಿರುವುದು ಇದೇ ಮೊದಲು.

> **ಭಾರತ– ಯುರೋಪ್ ಮುಕ್ತ ವ್ಯಾಪಾರ ಒಪ್ಪಂದವು ಈವರೆಗಿನ ಅತ್ಯಂತ ಮಹತ್ವಾಕಾಂಕ್ಷೆಯ ಒಪ್ಪಂದಗಳಲ್ಲಿ ಒಂದಾಗಿದೆ. ಇದರ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು**
> **ರಾಬರ್ಟ್ ಫಿಕೊ,** ಸ್ಲೊವಾಕಿಯಾ ಪ್ರಧಾನಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Wanted

REQUIRE ELECTRICIAN (ITI) / Wireman(ITI) For SW Railway Bangalore on Contract Base. ZK Enterprise. Mobile No. 9019059341

ವ್ಯಾಪಾರ

Business to Business

Business

ಶೂನ್ಯದಿಂದ ಶೂನ್ಯದವರೆಗೆ. ನೊಂದವರ ಜನ ಸೇವಾ ಟ್ರಸ್ಟ್ (ರಿ) ಶೇಷಾದ್ರಿಪುರಂ ಬೆಂಗಳೂರು. ಗೋಲ್ಡ್ ಚಿಟ್ ಫಂಡ್ 1ಲಕ್ಷದಿಂದ - 5 ಲಕ್ಷ , 10ಲಕ್ಷದವರೆಗೆ ಮತ್ತು 1 ಲಕ್ಷದಿಂದ - 5 ಲಕ್ಷದವರೆಗೆ , ಸ್ವಂತ ಮನೆ, ಮತ್ತು ಬಿಸಿನೆಸ್, ಲೋನ್ ಕೂಡಲಾಗುವುದು. ಸಂಪರ್ಕಿಸಿ : 9036316959

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಾಂತಿ ಒಪ್ಪಂದಕ್ಕೆ ಶುಕ್ರವಾರ ಸಹಿ

ಒಂದನೇ ಪುಟದಿಂದ...

ಇರಾನ್‌ನ ವಿದೇಶಾಂಗ ವ್ಯವಹಾರಗಳ ಉಪ ಸಚಿವ ಕಾಜೆಮ್ ಘರೀಬಾಬಾದಿ ಅವರು ಒಪ್ಪಂದದ ಕುರಿತು ಸರ್ಕಾರಿ ಒಡೆತನದ ಸುದ್ದಿ ಮಾಧ್ಯಮಕ್ಕೆ ಖಚಿತ ಪಡಿಸಿದ್ದರೂ, ಶುಕ್ರವಾರ ಸಹಿ ಹಾಕಿದ ಬಳಿಕವೇ ಒಪ್ಪಂದದ ಅಂಶಗಳನ್ನು ಅನುಷ್ಠಾನಗೊಳಿಸುವುದಾಗಿಯೂ ತಿಳಿಸಿದ್ದಾರೆ.

'ಅಪನಂಬಿಕೆ ಹೋಗಿಲ್ಲ'– ಟೆಹರಾನ್ (ಎಎಫ್‌ಪಿ): 'ಯುದ್ಧ ಕೊನೆಗೊಳಿಸುವುದಕ್ಕಾಗಿ ಒಪ್ಪಂದದ ಪ್ರತಿ ಸಿದ್ಧವಾಗಿದ್ದರೂ, ಅಮೆರಿಕದ ಮೇಲೆ ನಮಗೆ ತೀವ್ರ ಅಪನಂಬಿಕೆ ಇದೆ' ಎಂದು ಇರಾನ್ ಹೇಳಿದೆ. 'ದುರದೃಷ್ಟವಶಾತ್, ಅಮೆರಿಕದ ನಾಯಕರ ತಪ್ಪುಗಳ ದೀರ್ಘ ಇತಿಹಾಸದ ಕಾರಣಕ್ಕೆ ನಮಗೆ ಅವರ ಮೇಲೆ ಇನ್ನೂ ನಂಬಿಕೆ ಮೂಡುತ್ತಿಲ್ಲ. ಇರಾನ್‌ನ ನಾಗರಿಕರ ನಂಬಿಕೆ ಗಳಿಸಲು ಅಮೆರಿಕ ಇನ್ನೂ ಬಹುದೂರ ಸಾಗಬೇಕಿದೆ' ಎಂದು ವಿದೇಶಾಂಗ ಇಲಾಖೆಯ ವಕ್ತಾರ ಇಸ್ಮಾಯಿಲ್ ಬಕಾಯಿ ತಿಳಿಸಿದ್ದಾರೆ.

> **ಜಗತ್ತಿನಾದ್ಯಂತ ಆರ್ಥಿಕ ಸಂಕಷ್ಟ, ಜೀವಹಾನಿಗೆ ಕಾರಣವಾಗಿದ್ದ ಸಂಘರ್ಷ ಕೊನೆಗೊಳಿಸುವ ಒಪ್ಪಂದವನ್ನು ಸ್ವಾಗತಿಸುತ್ತೇನೆ. ಒಪ್ಪಂದವು ಪ್ರಾದೇಶಿಕ ಶಾಂತಿ ಮತ್ತು ಮುಕ್ತ ಸಂಚಾರವನ್ನು ಖಚಿತಪಡಿಸಲಿದೆ**
> **ನರೇಂದ್ರ ಮೋದಿ,** ಪ್ರಧಾನಿ

> **ಒಪ್ಪಂದವು ಅಮೆರಿಕಕ್ಕೆ ಮಹತ್ವದ್ದಾಗಿದ್ದು, ಇನ್ನೂ ಹಲವು ಕೆಲಸಗಳು ಬಾಕಿ ಇವೆ. ಆದರೆ, ತಾನು ನೀಡಿದ ಭರವಸೆಗಳನ್ನು ಇರಾನ್ ಪೂರೈಸಿದರೆ ಮಾತ್ರ ಇದು ಜಾರಿಗೆ ಬರಲಿದೆ**
> **ಜೆ.ಡಿ. ವ್ಯಾನ್ಸ್,** ಉಪಾಧ್ಯಕ್ಷ, ಅಮೆರಿಕ

ದಾಳಿ ಮುಂದುವರಿಸಿದ ಇಸ್ರೇಲ್

ಜೆರುಸಲೇಂ (ಎಪಿ): ಬೈರೂತ್‌ನಲ್ಲಿನ ಹಿಜ್ಬುಲ್ಲಾ ನೆಲೆಗಳ ಮೇಲೆ ದಾಳಿ ನಡೆಸಿದ್ದಾಗಿ ಇಸ್ರೇಲ್ ಸೇನೆ ಭಾನುವಾರ ಹೇಳಿಕೊಂಡಿದ್ದು, ಇದು ಶಾಂತಿ ಒಪ್ಪಂದದ ಪ್ರಯತ್ನವನ್ನು ಸಂಕೀರ್ಣಗೊಳಿಸುವ ಸಾಧ್ಯತೆ ದಟ್ಟವಾಗಿದೆ.

ದಾಳಿಯಲ್ಲಿ 16 ನಾಗರಿಕರು ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, 'ಬೈರೂತ್‌ನ ದಕ್ಷಿಣ ಉಪನಗರಗಳಲ್ಲಿ ನಡೆದ ದಾಳಿಯು ಉತ್ತರ ಇಸ್ರೇಲ್ ಮೇಲೆ ಹಿಜ್ಬುಲ್ಲಾ ನಡೆಸಿದ ದಾಳಿಗೆ ಪ್ರತಿಕ್ರಿಯೆ' ಎಂದಿದ್ದಾರೆ. ಇಸ್ರೇಲ್ ದಾಳಿಗೆ ಸೇನಾ ಪ್ರತಿಕ್ರಿಯೆ ಬರಲಿದೆ ಎಂದು ಇರಾನ್ ಎಚ್ಚರಿಸಿದ್ದು, ಲೆಬನಾನ್ ಮೇಲಿನ ದಾಳಿ ಮುಂದುವರಿದರೆ ಬಾಬ್ ಅಲ್ ಮಂಡಬ್ ಜಲಮಾರ್ಗವನ್ನು ಬಂದ್ ಮಾಡುವುದಾಗಿ ಹಿರಿಯ ಅಧಿಕಾರಿ ಅಲಿ ಅಕ್ಬರ್ ವಿಲಾಯಿತಿ ಬೆದರಿಕೆ ಹಾಕಿದ್ದಾರೆ.

ಇದರ ಬೆನ್ನಲ್ಲೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, 'ಲೆಬನಾನ್ ಸೇರಿದಂತೆ ಇಡೀ ಪ್ರದೇಶದಲ್ಲಿ ಶಾಂತಿ ನೆಲೆಗೊಳಿಸುವ ಒಪ್ಪಂದದ ಅಂತಿಮ ಹಂತದಲ್ಲಿ ನಾವಿದ್ದೇವೆ. ಇದನ್ನು ಹಾಳುಗೆಡವದಿರಿ' ಎಂದು ಎರಡೂ ಕಡೆಯವರನ್ನು ಒತ್ತಾಯಿಸಿದ್ದಾರೆ.

'ವಶಕ್ಕೆ ಪಡೆದ ಜಾಗ ಬಿಡುವುದಿಲ್ಲ'– (ಟೆಲ್ ಅವೀವ್) (ಎಪಿ): ಇರಾನ್ ಮತ್ತು ಅಮೆರಿಕದ ನಡುವಿನ ಮಧ್ಯಂತರ ಶಾಂತಿ ಒಪ್ಪಂದ ಏರ್ಪಟ್ಟರೂ ತಾವು ವಶಪಡಿಸಿಕೊಂಡ ಲೆಬನಾನ್‌ನ ಪ್ರದೇಶಗಳನ್ನು ಬಿಟ್ಟುಕೊಡುವುದಿಲ್ಲ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಸ್ಪಷ್ಟಪಡಿಸಿದ್ದಾರೆ.

ಒಪ್ಪಂದದ ಕುರಿತ ಹೇಳಿಕೆಗಳು ಹೊರಬಿದ್ದ ನಂತರ ಇಸ್ರೇಲ್‌ನಿಂದ ಬಂದ ಮೊದಲ ಪ್ರತಿಕ್ರಿಯೆ ಇದಾಗಿದೆ.

'ಸಿರಿಯಾ, ಗಾಜಾ ಪಟ್ಟಿ ಮತ್ತು ಲೆಬನಾನ್‌ನಲ್ಲಿ ವಶಪಡಿಸಿಕೊಂಡ ನೆಲದಿಂದ ಹಿಂದಕ್ಕೆ ಸರಿಯುವ ಯಾವುದೇ ಯೋಜನೆ ನಮಗಿಲ್ಲ. ಲೆಬನಾನ್ ಮೇಲಿನ ದಾಳಿಗೆ ಪ್ರತಿಯಾಗಿ ಇಸ್ರೇಲ್ ಮೇಲೆ ಇರಾನ್ ದಾಳಿ ಮಾಡಿದರೆ, ನಾವು ಇನ್ನಷ್ಟು ತೀವ್ರವಾಗಿ ದಾಳಿ ಮಾಡಲಿದ್ದೇವೆ' ಎಂದೂ ಎಚ್ಚರಿಸಿದ್ದಾರೆ.

ನಮ್ಮದೇ ಆತಿಥ್ಯ: ಪಾಕ್ ಪ್ರಧಾನಿ

'ಜೂನ್ 19ರಂದು ಸ್ವಿಟ್ಜರ್ಲೆಂಡ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಬೀಳಲಿದೆ' ಎಂದಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, 'ಜಿನೀವಾ ನಗರದಲ್ಲಿ ನಾವೇ ಆತಿಥ್ಯ ವಹಿಸಲಿದ್ದೇವೆ' ಎಂದು ಹೇಳಿದ್ದಾರೆ.

'ಎಲ್ಲ ರೀತಿಯ ಸೇನಾ ಕಾರ್ಯಾಚರಣೆಯನ್ನು ತಕ್ಷಣದಿಂದ ಮತ್ತು ಶಾಶ್ವತವಾಗಿ ಕೊನೆಗೊಳಿಸುವುದಾಗಿ ಎರಡೂ ಕಡೆಯವರು ಘೋಷಿಸಿದ್ದಾರೆ. ಇದರಲ್ಲಿ ಲೆಬನಾನ್ ಕೂಡ ಸೇರಿದೆ' ಎಂದು ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಒಪ್ಪಂದದ ತಾಂತ್ರಿಕ ಅಂಶಗಳ ಕುರಿತು ಮಾತುಕತೆ ನಡೆಸುವ ಸಲುವಾಗಿ ಈ ವಾರದಲ್ಲಿ ಅನೇಕ ಸಭೆಗಳು ಆಯೋಜನೆ ಆಗಲಿವೆ. ಮಧ್ಯಸ್ಥಿಕೆಯಲ್ಲಿ ಶ್ರಮಿಸಿದ ಕತಾರ್, ಸೌದಿ ಅರೇಬಿಯಾ ಮತ್ತು ಟರ್ಕಿ ನಾಯಕರಿಗೆ ನಾನು ಧನ್ಯವಾದ ಸಲ್ಲಿಸುತ್ತೇನೆ' ಎಂದು ಹೇಳಿದ್ದಾರೆ.

ಸ್ವಾಗತಿಸಿದ ಚೀನಾ

ಬೀಜಿಂಗ್ (ಪಿಟಿಐ): ಶಾಂತಿ ಒಪ್ಪಂದವನ್ನು ಸ್ವಾಗತಿಸಿರುವ ಚೀನಾ, ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಶೀಘ್ರವೇ ಮುಕ್ತಗೊಳಿಸಬೇಕು ಎಂದು ಹೇಳಿದೆ.

'ಒಪ್ಪಂದದಲ್ಲಿ ಪ್ರಮುಖ ಪಾತ್ರ ವಹಿಸಿರುವ ಪಾಕಿಸ್ತಾನದ ಪಾತ್ರ ಶ್ಲಾಘನೀಯ. ಬಿಕ್ಕಟ್ಟನ್ನು ಶಮನಕ್ಕೆ ಸಂಬಂಧಿಸಿದ ಎಲ್ಲರೂ ನಿಗದಿಯಂತೆ ಕಾರ್ಯೋನ್ಮುಖರಾಗುತ್ತಾರೆ ಎಂದು ನಾವು ನಂಬುತ್ತೇವೆ' ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ತಿಳಿಸಿದ್ದಾರೆ.

60 ದಿನಗಳ ಗಡುವು

'ಇರಾನ್‌ನ ಅಣು ಯೋಜನೆಗಳು ಮತ್ತು ಮುಟ್ಟುಗೋಲು ಹಾಕಿಕೊಂಡಿರುವ ಹಣದ ವಿಚಾರಗಳನ್ನು ಮುಂದಿನ 60 ದಿನಗಳಲ್ಲಿ ಚರ್ಚೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ' ಎಂದು ಪಾಕಿಸ್ತಾನದ ಇಬ್ಬರು ಅಧಿಕಾರಿಗಳು ತಿಳಿಸಿದ್ದಾರೆ.

'ಒಂದೊಮ್ಮೆ ಈ ಅವಧಿಯೊಳಗೆ ಅಂತಿಮ ನಿರ್ಧಾರಕ್ಕೆ ಬರಲು ವಿಫಲವಾದರೆ, ಗಡುವನ್ನು ವಿಸ್ತರಿಸುವ ಸಾಧ್ಯತೆಯೂ ಇದೆ' ಎಂದು ತಿಳಿಸಿದ್ದಾರೆ.

ಮಕ್ಕಳಿಗೆ ಜಾಲತಾಣ: ಬ್ರಿಟನ್ ನಿರ್ಬಂಧ

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸಲಾಗುತ್ತದೆ ಎಂದು ಅಲ್ಲಿನ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಸೋಮವಾರ ಘೋಷಿಸಿದ್ದಾರೆ.

ವಾಟ್ಸ್‌ಆ್ಯಪ್ ನಿಷೇಧಿಸಲಾಗುವುದಿಲ್ಲ. ಅಪರಿಚಿತರು ಮಕ್ಕಳನ್ನು ಸಂಪರ್ಕಿಸಬಹುದಾದ ಗೇಮಿಂಗ್ ಸೇವೆಗಳು ಮತ್ತು ಲೈವ್ ವ್ಯವಸ್ಥೆ ಇರುವ ವೇದಿಕೆಗಳಲ್ಲಿ ವಯಸ್ಸು ದೃಢೀಕರಣ ವ್ಯವಸ್ಥೆ ಮೂಲಕ ಮಕ್ಕಳನ್ನು ನಿರ್ಬಂಧಿಸಲಾಗುತ್ತದೆ ಎಂದಿದ್ದಾರೆ.

ಪಿಚೈ ಭಾಷಣ: ಹೊರನಡೆದ ವಿದ್ಯಾರ್ಥಿಗಳು

ನ್ಯೂಯಾರ್ಕ್ (ಪಿಟಿಐ): ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಗೂಗಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸುಂದರ್ ಪಿಚೈ ಅವರ ಮುಖ್ಯ ಭಾಷಣದ ವೇಳೆ, ಪ್ಯಾಲೆಸ್ಟೀನ್‌ಗೆ ಬೆಂಬಲ ವ್ಯಕ್ತಪಡಿಸಿ ಹಲವಾರು ವಿದ್ಯಾರ್ಥಿಗಳು ಹೊರನಡೆದಿದ್ದಾರೆ.

ಇದೇ ವಿಶ್ವವಿದ್ಯಾಲಯದಲ್ಲಿ ಮೆಟೀರಿಯಲ್ಸ್ ಸೈನ್ಸ್ ಮತ್ತು ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಪಿಚೈ, ಭಾನುವಾರ ಆಯೋಜಿಸಿದ್ದ 2026ರ ತರಗತಿಯ ಪ್ರಾರಂಭೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 3,600 ವಿದ್ಯಾರ್ಥಿಗಳು ಸೇರಿದಂತೆ 20 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಪಿಚೈ ಭಾಷಣ ಮಾಡುತ್ತಿದ್ದಂತೆ ಪ್ರೇಕ್ಷಕರ ಗ್ಯಾಲರಿಯಿಂದ ಸುಮಾರು 200 ವಿದ್ಯಾರ್ಥಿಗಳು ಸಣ್ಣ ಗುಂಪುಗಳಾಗಿ ಬ್ಯಾನರ್ ಬೀಸುತ್ತಾ, ಶಿಳ್ಳೆ ಹೊಡೆಯುತ್ತಾ, ಪ್ಯಾಲೆಸ್ಟೀನ್ ಧ್ವಜ ಹಾರಿಸುತ್ತಾ ಸಮಾರಂಭದಿಂದ ಹೊರನಡೆದಿದ್ದಾರೆ ಎಂದು 'ಎಸ್‌ಎಫ್‌ಗೇಟ್' ವರದಿ ಮಾಡಿದೆ.

ಗೂಗಲ್ ಕಂಪನಿಯು ಇಸ್ರೇಲ್‌ನೊಂದಿಗೆ ಹೊಂದಿರುವ ಸಂಬಂಧವನ್ನು ಪ್ರತಿಭಟನಕಾರರು ಖಂಡಿಸಿದ್ದಾರೆ. ಮುಖ್ಯವಾಗಿ 2021ರಲ್ಲಿ ಆ ದೇಶದೊಂದಿಗೆ ಮಾಡಿಕೊಂಡ 'ಪ್ರಾಜೆಕ್ಟ್ ನಿಂಬಸ್' ಎಂದು ಕರೆಯುವ, 1.2 ಬಿಲಿಯನ್ ಡಾಲರ್ (ಸುಮಾರು ₹11,347 ಕೋಟಿ) ಮೊತ್ತದ ಕ್ಲೌಡ್–ಕಂಪ್ಯೂಟಿಂಗ್ ಒಪ್ಪಂದವನ್ನು ಅವರು ವಿರೋಧಿಸಿದ್ದಾರೆ.

ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ಯುದ್ಧವನ್ನು ಖಂಡಿಸಿ ಮತ್ತು ಕ್ಯಾಂಪಸ್‌ನಲ್ಲಿ ಪ್ಯಾಲೆಸ್ಟೀನ್ ಪರ ಪ್ರತಿಭಟನೆಗಳ ವಿರುದ್ಧ ವಿ.ವಿ ಕೈಗೊಂಡ ಕಠಿಣ ಕ್ರಮಗಳನ್ನು ಖಂಡಿಸಿ ಕಳೆದ 3 ವರ್ಷಗಳಲ್ಲಿ ವಿದ್ಯಾರ್ಥಿಗಳು ಅನೇಕ ಪ್ರತಿಭಟನೆಗಳನ್ನು ನಡೆಸಿದ್ದರು. ಈಗ ಈ ಕಾರ್ಯಕ್ರಮದಿಂದ ಹೊರನಡೆದಿದ್ದಾರೆ ಎನ್ನಲಾಗಿದೆ.

ಮರ್ಸಿಡೀಸ್ ಬೆಂಜ್‌ನಿಂದ ಹೊಸ ಕಾರು

'ಎಸ್ 450ಇ' ಮಾರುಕಟ್ಟೆಗೆ ಬಿಡುಗಡೆ

• ಮಹಮ್ಮದ್ ನೂಮಾನ್

ಮುಂಬೈ: ಐಷಾರಾಮಿ ಕಾರು ತಯಾರಿಕೆಗೆ ಹೆಸರುವಾಸಿಯಾಗಿರುವ ಮರ್ಸಿಡೀಸ್ ಬೆಂಜ್ ಕಂಪನಿ, ತನ್ನ 'ಎಸ್-ಕ್ಲಾಸ್' ಸರಣಿಯ ಹೊಸ ಕಾರು 'ಎಸ್ 450ಇ' ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಮುಂಬೈನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮರ್ಸಿಡೀಸ್ ಬೆಂಜ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಂತೋಷ್ ಅಯ್ಯರ್ ಹಾಗೂ ಮಾರಾಟ ವಿಭಾಗದ ಉಪಾಧ್ಯಕ್ಷ ಬ್ರೆಂಡನ್ ಸಿಸ್ಸಿಂಗ್ ಅವರು ಕಾರು ಅನಾವರಣಗೊಳಿಸಿದರು.

'ಎಸ್ ಕ್ಲಾಸ್'ನ ಈ ಹಿಂದಿನ ಮಾದರಿಗೆ ಹೋಲಿಸಿದರೆ ಹೊಸ ಕಾರಿನ ಹೊರಗಿನ ಹಾಗೂ ಒಳಗಿನ ವಿನ್ಯಾಸದಲ್ಲಿ ಸಾಕಷ್ಟು ಬದಲಾವಣೆ ತರಲಾಗಿದೆ. 15 ಏರ್ ಬ್ಯಾಗ್ ಒಳಗೊಂಡಂತೆ ಹಲವು ಸುಧಾರಿತ ಸುರಕ್ಷತಾ ವೈಶಿಷ್ಟ್ಯಗಳನ್ನು ಇದು ಹೊಂದಿದೆ. ಹೊಸ ವಿನ್ಯಾಸದ ಹೆಡ್ ಲ್ಯಾಂಪ್, ಟೇಲ್ ಲ್ಯಾಂಪ್ ಹಾಗೂ ದೊಡ್ಡ ಗಾತ್ರದ ರೇಡಿಯೇಟರ್ ಗ್ರಿಲ್ ಕಾರಿಗೆ ಹೊಸ ನೋಟ ನೀಡಿವೆ.

ಮರ್ಸಿಡೀಸ್ ಬೆಂಜ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಅಯ್ಯರ್ ಹಾಗೂ ಮಾರಾಟ ವಿಭಾಗದ ಉಪಾಧ್ಯಕ್ಷ ಬ್ರೆಂಡನ್ ಸಿಸ್ಸಿಂಗ್ ಅವರು ನೂತನ ಕಾರು ಅನಾವರಣಗೊಳಿಸಿದರು.

ಕಂಪನಿಯು ಭಾರತದ ಮಾರುಕಟ್ಟೆಗೆ ಪರಿಚಯಿಸಿದ ಮೊಟ್ಟಮೊದಲ ಪಿಎಚ್ ಇವಿ (ಪ್ಲಗ್-ಇನ್ ಹೈಬ್ರಿಡ್ ಎಲೆಕ್ಟ್ರಿಕ್ ವೆಹಿಕಲ್) ಕಾರು ಇದಾಗಿದೆ. 3.0 ಲೀ. ಟರ್ಬೊ ಪೆಟ್ರೋಲ್ ಎಂಜಿನ್ ಹೊಂದಿರುವ ಕಾರಿನಲ್ಲಿ 22 ಕಿಲೋವಾಟ್ ಲೀಥಿಯಂ ಅಯಾನ್ ಬ್ಯಾಟರಿ ಅಳವಡಿಸಲಾಗಿದೆ. ಬ್ಯಾಟರಿ ಪೂರ್ಣ ಚಾರ್ಜ್ ಆದರೆ ಪೆಟ್ರೋಲ್ ಎಂಜಿನ್ ಬಳಸದೆ ಎಲೆಕ್ಟ್ರಿಕ್ ಮೋಡ್ ನಲ್ಲಿಯೇ 115 ಕಿ.ಮೀ ಪ್ರಯಾಣಿಸಬಹುದು. ನಿಂತ ಸ್ಥಿತಿಯಿಂದ 5.7 ಸೆಕೆಂಡುಗಳಲ್ಲಿ ಗಂಟೆಗೆ 100 ಕಿ.ಮೀ ವೇಗವನ್ನು ತಲುಪುವ ಸಾಮರ್ಥ್ಯ ಹೊಂದಿದೆ.

ಎಕ್ಸ್ ಷೋರೂಂ ಬೆಲೆ ₹2.20 ಕೋಟಿಯಿಂದ ₹2.38 ಕೋಟಿವರೆಗೆ ಇದೆ. ಮುಂಗಡ ಬುಕಿಂಗ್ ಈಗಾಗಲೇ ಆರಂಭವಾಗಿದ್ದು, ಗ್ರಾಹಕರಿಗೆ ಅಕ್ಟೋಬರ್‌ನಿಂದ ವಿತರಿಸಲಾಗುವುದು ಎಂದು ಕಂಪನಿ ಹೇಳಿದೆ.

'ಮರ್ಸಿಡೀಸ್ ಬೆಂಜ್ ಕಂಪನಿಯು ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಹೊಂದಿಕೊಳ್ಳುವ ವೈವಿಧ್ಯಮಯ ಎಂಜಿನ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಭಾರತದಲ್ಲಿ ಪ್ಲಗ್- ಇನ್ ಹೈಬ್ರಿಡ್ ಕಾರುಗಳಿಗೆ ಬೇಡಿಕೆ ಹೆಚ್ಚುತ್ತಿದೆ' ಎಂದು ಸಂತೋಷ್ ಅಯ್ಯರ್ ಅವರು ತಿಳಿಸಿದರು.

ನೆಚ್ಚಿನ ಹಾಡಿಗೆ ನೀಡಿ ಪ್ರಶಸ್ತಿಯ ಗರಿ

4ನೇ ಆವೃತ್ತಿ ಜೂನ್ 19ಕ್ಕೆ

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಹಾಡುಗಳೆಂದರೆ ಹಾಗೆ... ಸಂಭ್ರಮಕ್ಕೆ ಜೊತೆಯಾಗುತ್ತವೆ, ಕಣ್ಣೀರು ಒರೆಸುತ್ತವೆ, ನೆನಪುಗಳನ್ನು ಮರುಕಳಿಸುವಂತೆ ಮಾಡುತ್ತವೆ. ಅಂತಹ ನೂರಾರು ಗೀತೆಗಳು 2025ರಲ್ಲಿ ತೆರೆಕಂಡ ಸಿನಿಮಾಗಳಲ್ಲಿದ್ದವು.

ಈ ಹಾಡುಗಳ ಪೈಕಿ 'ಪ್ರಜಾವಾಣಿ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಗೆ ಇಂತಹ ಏಳು ಹಾಡುಗಳು ನಾಮನಿರ್ದೇಶನಗೊಂಡಿದ್ದವು. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮಿಂಚಿದ 'ಕಾಂತಾರ ಅಧ್ಯಾಯ 1'ರ ಬ್ರಹ್ಮಕಲಶ ಹಾಡು, ಎಲ್ಲರನ್ನೂ ಕುಣಿಸಿದ 'ಬ್ಯಾಂಗಲ್ ಬಂಗಾರಿ', ಮುಂಗಾರು ಮಳೆಯಲ್ಲಿ ನೆನೆಸಿದ 'ಅಂದೊಂದಿತ್ತು ಕಾಲ'ದ ಹಾಡು, 'ಸು ಫ್ರಮ್ ಸೋ'ದ ರವಿ ಅಣ್ಣನ ಡ್ಯಾಂಕ್ಸ್ ಆ್ಯಂಥಮ್ ಸ್ಟೆಪ್ಸ್, ನಾನೇ ನೀನಂತೆ ಎಂಬ 'ಬ್ರ್ಯಾಟ್'ನ ಇಂಪಾದ ಹಾಡು, ಹೂದುಂಬಿಯಂತೆ ಸೆಳೆದ ಮನದಕಡಲಿನ ಹಾಡು, 'ದೂರ ತೀರ ಯಾನ'ಕ್ಕೆ ಜೊತೆಯಾದ ಹಾಡು ನಾಮನಿರ್ದೇಶನಗೊಂಡಿದ್ದವು.

ಇವುಗಳಲ್ಲಿ ನಿಮ್ಮ ಇಷ್ಟದ ಹಾಡಿಗೆ ಪ್ರಶಸ್ತಿಯ ಗರಿ ನೀಡಿ. ನಿಮ್ಮ ನೆಚ್ಚಿನ ಹಾಡಿಗೆ ತಕ್ಷಣದಲ್ಲೇ ವೋಟ್ ಮಾಡಿ. ಜೂನ್ 17ರವರೆಗೆ ವೋಟ್ ಹಾಕಲು ಅವಕಾಶವಿದೆ.

ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಮತ ಚಲಾಯಿಸಬಹುದು. ಇಲ್ಲವಾದರೆ ಪ್ರಜಾವಾಣಿ ವೆಬ್‌ಸೈಟ್ (https://pvca.prajavani.net/cinesamman/season4) ಪ್ರವೇಶಿಸಿ ಮತ ಹಾಕಬಹುದು. ಜೂನ್ 19ರಂದು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಜೇತರ ಘೋಷಣೆಯಾಗಲಿದೆ.

ವೋಟ್ ಮಾಡಿ

ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

'ಹೊಸ ಜೀವನ'

ರಂಗಾಯಣ ರಘು 400ನೇ ಸಿನಿಮಾ

'ತಲೆ ಬಾಚ್ಕೊಳಿ...ಪೌಡ್ರು ಹಾಕೊಳಿ... ದುನಿಯಾ ತುಂಬಾ ಕಾಸ್ಟ್ಲಿ' ಅಂತ ಡೈಲಾಗ್ ಹೊಡೆದು ಕನ್ನಡ ಚಿತ್ರರಂಗದಲ್ಲಿ ಏಕಾಏಕಿ ಸ್ಟಾರ್ ಪಟ್ಟಕ್ಕೆ ಏರಿದವರು ಪೋಷಕ ನಟ ರಂಗಾಯಣ ರಘು.

ರಂಗಾಯಣದ ಮೂಲಕ ರಂಗಭೂಮಿ ಪ್ರವೇಶ ಮಾಡಿ ಇಂದು ಬಹುಬೇಡಿಕೆಯ ಪೋಷಕ ನಟನಾಗಿ ಬೆಳೆದಿರುವ ಅವರೀಗ 400ನೇ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ.

ಅಮೋಘ ನಟನೆ ಮೂಲಕ ಸಿನಿಮಾಪ್ರೇಮಿಗಳನ್ನು ರಂಜಿಸಿರುವ ರಂಗಾಯಣ ರಘು ಅವರ 400ನೇ ಸಿನಿಮಾ 'ಹೊಸ ಜೀವನ'. ಈ ಆಕರ್ಷಕ ಶೀರ್ಷಿಕೆ ಚಿತ್ರಕ್ಕೆ ಸಾಥ್ ಕೊಟ್ಟಿರುವ ಡಾಲಿ ಧನಂಜಯ ಚಿತ್ರದ ಟೈಟಲ್ ಅನ್ನು ಲಾಂಚ್ ಮಾಡುವ ಮೂಲಕ ಇಡೀ ತಂಡಕ್ಕೆ ಶುಭ ಕೋರಿದರು.

ಒಂದಷ್ಟು ಕಿರುಚಿತ್ರಗಳನ್ನು ನಿರ್ದೇಶನ ಮಾಡಿರುವ ಮೋಹನ್ ಕುಮಾರ್ ಹನುಮಯ್ಯ ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಬಡ್ತಿ ಹೊಂದಿದ್ದಾರೆ. ಇವರ ಸಾರಥ್ಯದಲ್ಲಿ ಮೂಡಿ ಬರುತ್ತಿರುವ ಸಿನಿಮಾದಲ್ಲಿ ರಂಗಾಯಣ ರಘು, ಪ್ರಭು ಮುಂಡ್ಕೂರ್, ಸ್ವಾತಿ ಮುಪ್ಪಾಲ, ಅಚ್ಯುತ್ ಕುಮಾರ್, ಶಿವರಾಜ್ ಕೆ.ಆರ್.ಪೇಟೆ, ಸುಹಾಸ್ ಅತ್ರೇಯಸ್, ಅಭಿ ಸಾಮ್ರಾಟ್, ಉದಯ್ ಆಚಾರ್ ಮುಖ್ಯ ಪಾತ್ರದಲ್ಲಿದ್ದಾರೆ.

ಜಿ.ಎಸ್ ಸಂಜೀವ್ ಪ್ರಸಾದ್ ಅವರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಿರ್ದೇಶನದ ಜವಾಬ್ದಾರಿಯನ್ನು ಹೊತ್ತು ಕೊಂಡಿರುವುದರ ಹೊರತಾಗಿ ಮೋಹನ್ ಕುಮಾರ್ ಹನುಮಯ್ಯ ಅವರು ನಿರ್ಮಾಣದಲ್ಲೂ ಸಾಥ್ ಕೊಟ್ಟಿದ್ದಾರೆ. ಅರ್ಜುನ್ ಪ್ರೊಡಕ್ಷನ್ ಹಾಗೂ ಚಿರು ಪ್ರೊಡಕ್ಷನ್ ಒಟ್ಟಿಗೆ ಸೇರಿ ಚಿತ್ರ ನಿರ್ಮಾಣ ಮಾಡುತ್ತಿವೆ.

ಸಿನಿಮಾಗೆ ಸುಮುಖ ರಾವ್ ಅವರು ಸಂಗೀತ ನಿರ್ದೇಶನ ಮಾಡಲಿದ್ದು, ಸುನಾದ್ ಗೌತಮ್ ಅವರ ಹಿನ್ನೆಲೆ ಸಂಗೀತ ಇರಲಿದೆ. ಸಂಕಲನದ ಜವಾಬ್ದಾರಿಯನ್ನು ಶಶಿಧರ್ ಗೌಡ ನಿಭಾಯಿಸಿದ್ದಾರೆ. ರಾಜ್ ಕಾಂತ್ ಎಸ್. ಅವರ ಛಾಯಾಚಿತ್ರ ಗ್ರಹಣದ ಹೊಣೆ ನಿಭಾಯಿಸಿದರೆ, ಪ್ರತಾಪ್ ಎಂ.ಆರ್. ಅವರು ಸಂಭಾಷಣೆ ಬರೆಯಲಿದ್ದಾರೆ.

ಸ್ನೇಹ, ಪ್ರೀತಿ, ಜೀವನದ ಹೋರಾಟ ಹಾಗೂ ಮೌಲ್ಯಗಳ ಸುತ್ತ ಮೋಹನ್ ಕುಮಾರ್ ಅವರು ಸಿನಿಮಾದ ಕಥೆಯನ್ನು ಎಣೆದಿದ್ದಾರೆ.

ಟೀಸರ್‌ನಲ್ಲೇ 'ನೀ ನಂಗೆ ಅಲ್ಲವಾ' ಮೋಡಿ

ಕಾಶಿ ಮಾ
ರಾಹುಲ್ ಆರ್ಕಟ್

'ನಿದ್ರಾದೇವಿ ನೆಕ್ಸ್ಟ್ ಡೋರ್' ಚಿತ್ರವನ್ನು ನಿರ್ಮಾಣ ಮಾಡಿದ್ದ ಸುರಮ್ ಮೂವೀಸ್ ಲಾಂಛನದಲ್ಲಿ ಜಯರಾಮ ದೇವಸಮುದ್ರ ನಿರ್ಮಿಸಿರುವ, ಮನೋಜ್ ಪಿ. ನಡಲುಮನೆ ನಿರ್ದೇಶನದ 'ನೀ ನಂಗೆ ಅಲ್ಲವಾ' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

ರಾಹುಲ್ ಆರ್ಕಟ್ ಹಾಗೂ ಕಾಶಿ ಮಾ ಜೋಡಿಯಾಗಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. 'ಆನ ಚಿತ್ರದ ಮೂಲಕ ನನ್ನ ಸಿನಿಮಾ ಯಾನ ಆರಂಭವಾಯಿತು. ಇದು ನನ್ನ ನಿರ್ದೇಶನದ ಮೂರನೇ ಚಿತ್ರ. ಇದೊಂದು ಪ್ರೇಮಕಥೆ. ಬೆಂಗಳೂರು, ಮಂಗಳೂರು, ಉಡುಪಿಯಲ್ಲಿ ಚಿತ್ರೀಕರಣ ನಡೆದಿದೆ. ಆಗಸ್ಟ್‌ನಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದಿದ್ದಾರೆ ಮನೋಜ್ ಪಿ. ನಡಲುಮನೆ.

'ಲಕ್ಕಿ' ಎಂಬ ಪಾತ್ರದಲ್ಲಿ ರಾಹುಲ್ ಆರ್ಕಟ್ ನಟಿಸಿದ್ದಾರೆ. ಕಾಶಿ ಮಾ 'ಖುಷಿ' ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಸೂರಜ್ ಜೋಯಿಸ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಉದಯಲೀಲಾ ಛಾಯಾಚಿತ್ರಗ್ರಹಣ, ನಾಗೇಂದ್ರ ಉಜ್ಜನಿ ಸಂಕಲನ ಸಿನಿಮಾಗಿದೆ.

Fashion Partner: TRENDS | Mobility Partner: Akshaya Motors | Banking Partner: ಕೆನರು ಬ್ಯಾಂಕ್ / Canara Bank, Together We Can | Wardrobe Partner: MALLESHWARAM Sudarshan Silks | Mobile Partner: HUMAN MOBILE DEVICES HMD | Knowledge Partners: GM UNIVERSITY DAVANAGERE, INSIGHTSIAS, GITAM | Travel Partner: ಅಡಿಗಾಸ್ ಯಾತ್ರಾ
Associate Sponsors: Amruth – ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್ | ಆರ್ಡ್‌ಕರ್ – ನಂಬಿಕೆ. ನಿರಂತರ. | MSIL ಚಿಟ್ಸ್ Chits | The Janatha Co-operative Bank Ltd., Malleswaram, Bangalore | AYURVEDIC MEDICINE KAYAM TABLET | Bindu | NBCC – A Navratna CPSE | Audit Partner: EY | Television Partner: Z ಕನ್ನಡ

ರಾಮಮಂದಿರ ಹಣ ನಾಪತ್ತೆ: ನೌಕರರ ಕೃತ್ಯ?

₹200 ಕೋಟಿ ದುರುಪಯೋಗ • ಭಾರಿ ಸಂಪತ್ತು ಗಳಿಕೆ; 50 ಮಂದಿ ಮೇಲೆ ನಿಗಾ

• ಸಂಜಯ್ ಪಾಂಡೆ

ಮುಖ್ಯಾಂಶಗಳು
- ಎಫ್‌ಐಆರ್ ದಾಖಲಿಸದ ಪೊಲೀಸರು
- ಈವರೆಗೆ ₹2 ಕೋಟಿ ನಗದು ವಶಕ್ಕೆ
- ಟ್ರಸ್ಟ್ ಕಾರ್ಯದರ್ಶಿ ವಜಾಕ್ಕೆ ಆಗ್ರಹ

ಲಖನೌ: ಅಯೋಧ್ಯೆಯ ರಾಮ ಮಂದಿರದ 'ಹಣ ನಾಪತ್ತೆ' ಪ್ರಕರಣವು ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆಯುತ್ತಿದ್ದು, ರಾಮಮಂದಿರ ಟ್ರಸ್ಟ್‌ನ ಹಲವು ನೌಕರರು, ವಿಶೇಷವಾಗಿ ಕಾಣಿಕೆ ರೂಪದಲ್ಲಿ ಬಂದ ಹಣದ ಎಣಿಕೆ ಕಾರ್ಯಕ್ಕೆ ನಿಯೋಜನೆಗೊಂಡಿದ್ದವರು ಇದರಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗಿದೆ.

ಅಂದಾಜು 50 ನೌಕರರ ಮೇಲೆ ಅನುಮಾನ ವ್ಯಕ್ತವಾಗಿದ್ದು, ಅವರ ಮೇಲೆ ನಿಗಾ ಇಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ನೌಕರರು ಅತ್ಯಂತ ಕಡಿಮೆ ಅವಧಿಯಲ್ಲಿ ಭಾರಿ ಪ್ರಮಾಣದ ಸಂಪತ್ತು ಗಳಿಸಿದ್ದಾರೆ ಎಂದು ಹೇಳಲಾಗಿದೆ.

ದುರುಪಯೋಗವಾದ ಕಾಣಿಕೆ ಹಣದ ಮೌಲ್ಯ ₹200 ಕೋಟಿಯಷ್ಟಿರ ಬಹುದು ಎಂದು ಅಂದಾಜಿಸಲಾಗಿದೆ. ಪೊಲೀಸರು ಇಲ್ಲಿಯವರೆಗೆ ಐವರು ಶಂಕಿತ ಆರೋಪಿಗಳ ಬಳಿಯಿಂದ ₹2 ಕೋಟಿ ನಗದು, ಒಂದು ಕಾರು ಮತ್ತು ಮೂರು ಐಫೋನ್‌ಗಳನ್ನು ವಶಪಡಿಸಿ ಕೊಂಡಿದ್ದಾರೆ. ಅಚ್ಚರಿಯ ಸಂಗತಿ ಎಂದರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಎಫ್‌ಐಆರ್ ದಾಖಲಾಗಿಲ್ಲ.

ಪ್ರಕರಣದ ಪ್ರಮುಖ ಶಂಕಿತರಲ್ಲಿ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ಒಬ್ಬರು. ಇವರು ಟ್ರಸ್ಟ್‌ನ ಕಾರ್ಯದರ್ಶಿ ಚಂಪತ್ ರಾಯ್ ಅವರ ಕಾರಿನ ಚಾಲಕ ಎಂದು ಹೇಳಲಾಗಿದೆ. ಅವರು ಕಡಿಮೆ ಅವಧಿಯಲ್ಲಿ ₹50 ಕೋಟಿಯಷ್ಟು ಸಂಪತ್ತು ಗಳಿಸಿದ್ದಾರೆ ಎಂದು ವರದಿಗಳು ಹೇಳಿವೆ.

ಪೊಲೀಸರು ಟಿನ್ನು ಯಾದವ್ ಸೋದರಳಿಯ ಮನೀಶ್ ಯಾದವ್ ಎಂಬವರ ಬಳಿಯಿಂದ ₹36 ಲಕ್ಷ ನಗದನ್ನು ವಶಕ್ಕೆ ಪಡೆದಿದ್ದಾರೆ. ಈ ಮನೀಶ್ ಯಾದವ್ ಕೂಡ ರಾಮಮಂದಿರದ ನೌಕರ.

ಇದಕ್ಕೂ ಮೊದಲು, ಪೊಲೀಸರ ತಂಡವು ಶುಕ್ರವಾರ ಅಯೋಧ್ಯೆ ಜಿಲ್ಲೆಯ ಮೀನಾಪುರ ಘಾಗೌಳಿ ಗ್ರಾಮ ದಲ್ಲಿ ಲವಕುಶ ಮಿಶ್ರಾ ಎಂಬವರ ಮನೆ ಯಲ್ಲಿ ಶೋಧ ನಡೆಸಿದ್ದು ₹12 ಲಕ್ಷ ನಗದು ವಶಪಡಿಸಿಕೊಂಡಿದೆ ಎಂದು ಹೇಳಲಾಗಿದೆ. ವರದಿಗಳ ಪ್ರಕಾರ, ಮಿಶ್ರಾ ಅವರು ಹುಂಡಿ ಕಾಣಿಕೆ ಎಣಿಕೆ ಕಾರ್ಯಕ್ಕೆ ನಿಯೋಜಿಸಲಾದ ನೌಕರರಲ್ಲಿ ಒಬ್ಬರು. ಟ್ರಸ್ಟ್‌ಗೆ ನೇಮಕಗೊಳ್ಳುವ ಮೊದಲು ಅವರು ಕಾರು ಮೆಕ್ಯಾನಿಕ್ ಆಗಿದ್ದರು.

ಮಿಶ್ರಾ ಅವರ ಬಾಮೈದ ಅನುಕಲ್ಪ್ ಮಿಶ್ರಾ ಎಂಬವರು ಕೂಡ ಭಾರಿ ಪ್ರಮಾಣದಲ್ಲಿ ಸಂಪತ್ತನ್ನು ಗಳಿಸಿದ್ದು, ಅವರ ಮೇಲೂ ಪೊಲೀಸರ ನಿಗಾ ಇಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಅನುಕಲ್ಪ್ ಅವರು ಅಯೋಧ್ಯೆಯಲ್ಲಿ ಒಂದು ತೋಟದ ಮನೆ ಮತ್ತು ಬಂಗಲೆ ಯನ್ನು ಹೊಂದಿದ್ದಾರೆ ಎನ್ನಲಾಗಿದೆ.

ಬಹಿರಂಗವಾಗಿದ್ದು ಹೇಗೆ?

ಹಣ ದುರುಪಯೋಗದ ಬಗೆಗಿನ ಮಾಹಿತಿಯನ್ನು ಇನ್ನೊಬ್ಬ ನೌಕರರೊಬ್ಬರು ಸಾರ್ವಜನಿಕವಾಗಿ ಬಹಿರಂಗಪಡಿಸದೇ ಇದ್ದಿದ್ದರೆ ಈ ಪ್ರಕರಣವು ಮುಚ್ಚಿ ಹೋಗುತ್ತಿತ್ತು. ಅಕ್ರಮವನ್ನು ಬಯಲಿಗೆಳೆದ ನೌಕರರ ಗುರುತನ್ನು ಬಹಿರಂಗ ಪಡಿಸಲಾಗಿಲ್ಲ. ಆರಂಭದಲ್ಲಿ ಸ್ಥಳೀಯ ಸಮಾಜವಾದಿ ಪಕ್ಷದ ಮುಖಂಡ ಪವನ್ ಪಾಂಡೆ ಅವರು ಈ ವಿಚಾರದ ಬಗ್ಗೆ ಧ್ವನಿ ಎತ್ತಿದ್ದರು. ನಂತರ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಈ ವಿಚಾರವನ್ನು ಕೈಗೆತ್ತಿಕೊಂಡು, ಈ ಪ್ರಕರಣದಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದ್ದರು.

'ಹಣ ದುರುಪಯೋಗದ ಹಿಂದೆ ಯಾರೆಲ್ಲ ಇದ್ದಾರೆ ಎಂಬುದನ್ನು ಎಸ್‌ಐಟಿ ಪತ್ತೆ ಹಚ್ಚಲಿದ್ದು, ಮುಂದೆ ಇಂತಹ ಘಟನೆಗಳು ಮರುಕಳಿಸಿದಂತೆ ಮಾಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಸಲಹೆ ನೀಡಲಿದೆ' ಎಂದು ರಾಮ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರು ಅಯೋಧ್ಯೆಯಲ್ಲಿ ಹೇಳಿದ್ದಾರೆ.

ವರದಿಗಳ ಪ್ರಕಾರ, ಟ್ರಸ್ಟ್ ಕಾರ್ಯದರ್ಶಿ ಚಂಪತ್ ರಾಯ್ ಅವರು ಅನಾರೋಗ್ಯದಿಂದ ಬಳಲುತ್ತಿದ್ದು, ಮತ್ತೊಬ್ಬ ಟ್ರಸ್ಟಿ ಅನಿಲ್ ಮಿಶ್ರಾ ಅವರು ಚಿಕಿತ್ಸೆಗಾಗಿ ಕೇರಳಕ್ಕೆ ತೆರಳಿದ್ದಾರೆ.

ಈ ಮಧ್ಯೆ, 'ಹಣ ದುರುಪಯೋಗಕ್ಕೆ ಕಾರಣರಾದವರು ನರಕ ಅನುಭವಿಸು ತ್ತಾರೆ' ಎಂದು ಬರೆದ ಹೋರ್ಡಿಂಗ್ ಅನ್ನು ಕಾಂಗ್ರೆಸ್ ಪಕ್ಷವು ಅಯೋಧ್ಯೆಯಲ್ಲಿ ಹಾಕಿದೆ.

> **ಹಣ ನಾಪತ್ತೆಯ ನಿಜಾಂಶವನ್ನು ಬಯಲಿಗೆಳೆಯಲು ನಿಷ್ಪಕ್ಷಪಾತ ಮತ್ತು ಪಾರದರ್ಶಕವಾದ ತನಿಖೆ ನಡೆಯಬೇಕು**
> **ಮಹಾಂತ ಕಮಲ್ ನಯನ ದಾಸ,** ರಾಮಮಂದಿರ ಟ್ರಸ್ಟ್ ಅಧ್ಯಕ್ಷರ ಉತ್ತರಾಧಿಕಾರಿ

ಬಿಜೆಪಿಯ ಮಾಜಿ ಸಂಸದ, ಹಿಂದೂ ಮುಖಂಡ ವಿನಯ್ ಕಟಿಯಾರ್ ಅವರು, ಹಣ ನಾಪತ್ತೆಗೆ ಚಂಪತ್ ರಾಯ್ ಅವರೇ ಕಾರಣ ಎಂದು ಹೇಳಿದ್ದು, ತಕ್ಷಣವೇ ಅವರನ್ನು ಟ್ರಸ್ಟ್‌ನಿಂದ ವಜಾ ಮಾಡುವಂತೆ ಆಗ್ರಹಿಸಿದ್ದಾರೆ.

ಅಯೋಧ್ಯೆಗೆ ತನಿಖಾ ತಂಡ: ಈ ನಡುವೆ, ಪ್ರಕಣದ ತನಿಖೆಗಾಗಿ ರಚಿಸಲಾಗಿ ರುವ ಮೂವರು ಸದಸ್ಯರನ್ನೊಳಗೊಂಡ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸೋಮವಾರ ಅಯೋಧ್ಯೆ ತಲುಪಿದೆ.

ಅರ್ಜಿಗಳ ವಿಚಾರಣೆಗೆ 'ಸುಪ್ರೀಂ' ತಡೆ

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ

ನವದೆಹಲಿ (ಪಿಟಿಐ): ಲಿಂಗತ್ವ ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ -2026ಕ್ಕೆ ಸಂಬಂಧಿಸಿ, ದೇಶದ ವಿವಿಧ ಹೈಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಕೇಂದ್ರ ಸರ್ಕಾರ ಮಾಡಿದ್ದ ಮನವಿಯನ್ನು ಪುರಸ್ಕರಿಸಿದೆ.

ಪ್ರಕರಣಗಳ ವರ್ಗಾವಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ಸಂಕ್ಷಿಪ್ತ ವಾದ ಆಲಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ವಿ. ಮೋಹನ ನೇತೃತ್ವದ ನ್ಯಾಯಪೀಠವು ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಗಳಿಗೆ ತಡೆ ನೀಡಿತು. ಪ್ರಕರಣ ಗಳ ವರ್ಗಾವಣೆಗೆ ಸಂಬಂಧಿಸಿ ನೋಟಿಸ್ ಜಾರಿಗೊಳಿಸಿದೆ.

'ನಾನು ವೈದ್ಯನಾಗಿದ್ದು, ನನ್ನ ಅರ್ಜಿ ಸಮಗ್ರತೆಯಿಂದ ಕೂಡಿದೆ' ಎಂದು ಅರ್ಜಿದಾರರೊಬ್ಬರು ನ್ಯಾಯಾಲಯದ ಗಮನಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಿಮ್ಮ ಸಹಾಯವೂ ನಮಗೆ ಅಗತ್ಯವಾಗಿ ಬೇಕಿದೆ. ಆದರೆ, ಈ ವಿಷಯಗಳನ್ನು ನಾವೇ ಕೈಗೆತ್ತಿಕೊಳ್ಳಲಿದ್ದೇವೆ. ವಿಭಿನ್ನ ಅಭಿಪ್ರಾಯಗಳಿಗಿಂತ ಒಂದೇ ಅಭಿಪ್ರಾಯ ಮೂಡಿಸುವ ನಿಟ್ಟಿನಲ್ಲಿ ನಾವು ನಿರ್ಧಾರ ಕೈಗೊಳ್ಳುತ್ತೇವೆ ಅಥವಾ ಒಂದೇ ಹೈಕೋರ್ಟ್‌ಗೆ ನೀಡುತ್ತೇವೆ' ಎಂದು ತಿಳಿಸಿ, ನೋಟಿಸ್ ಜಾರಿಗೊಳಿಸಿತು.

ಮಸೂದೆಯಲ್ಲಿ ಸ್ವಯಂ ಗುರುತಿಸಿ ಕೊಳ್ಳುವಿಕೆ ರದ್ದುಗೊಳಿಸಿರುವುದು ಟೀಕೆಗೆ ಕಾರಣವಾಗಿದೆ. 'ವ್ಯಕ್ತಿಯ ಘನತೆ, ಖಾಸಗಿತನ, ದೇಹದ ಮೇಲಿನ ಹಕ್ಕಿನ ಉಲ್ಲಂಘನೆ ಆಗಿದೆ' ಎಂದು ಅರ್ಜಿದಾರರು ದೂರಿದ್ದಾರೆ.

ನೀಟ್: ಪ್ರವೇಶಪತ್ರ ಡೌನ್‌ಲೋಡ್‌ಗೆ ತಾಂತ್ರಿಕ ಅಡ್ಡಿ

ನವದೆಹಲಿ: ಪ್ರಶ್ನೆಪತ್ರಿಕೆ ಸೋರಿಕೆಯಾದ ಕಾರಣ ನೀಟ್-ಯುಜಿ ಪರೀಕ್ಷೆಯನ್ನು ಮರುನಿಗದಿಪಡಿಸಲಾಗಿದ್ದು, ಸೋಮವಾರ ಮಧ್ಯಾಹ್ನದವರೆಗೆ 4 ಲಕ್ಷ ವಿದ್ಯಾರ್ಥಿಗಳು ಪ್ರವೇಶಪತ್ರ ವನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ತಿಳಿಸಿದೆ. ಈ ಮಧ್ಯೆ, ತಾಂತ್ರಿಕ ಸಮಸ್ಯೆಯಿಂದಾಗಿ ಪ್ರವೇಶಪತ್ರ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹಲವು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ಈ ಮುಂಚಿನ ಪರೀಕ್ಷೆ ರದ್ದುಪಡಿಸಿದ ನಂತರ ಪರೀಕ್ಷಾ ಶುಲ್ಕ ಮರುಪಾವತಿ ಮಾಡುವುದಾಗಿ ಸರ್ಕಾರ ಹೇಳಿತ್ತು. ಆದರೆ ಹಣ ಮರುಪಾವತಿಯಾಗಿಲ್ಲ ಎಂದೂ ಹಲವರು ದೂರಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎನ್‌ಟಿಎ, 'ಪೋರ್ಟಲ್ ಹ್ಯಾಕ್ ಮಾಡುವ ಯತ್ನ ನಡೆದಿದ್ದು, 19 ವರ್ಷದ ಬಿಹಾರ ವಿದ್ಯಾರ್ಥಿ-ಯನ್ನು ಬಂಧಿಸಲಾಗಿದೆ. ಆರೋಪಿಯು 150 ಅಭ್ಯರ್ಥಿಗಳ ಅಕೌಂಟ್‌ಗಳನ್ನು ಹ್ಯಾಕ್ ಮಾಡಿ, ಮರುಪಾವತಿ ಹಣವು ತನ್ನ ಬ್ಯಾಂಕ್ ಖಾತೆಗೆ ಬರುವಂತೆ ಮಾಡಿಕೊಂಡಿದ್ದ' ಎಂದು ತಿಳಿಸಿದೆ.

'ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ತಾಂತ್ರಿಕ ಸಮಸ್ಯೆ ಅಡ್ಡಿಯಾಗಿರುವುದು ಗಮನಕ್ಕೆ ಬಂದಿದೆ. ನಮ್ಮ ತಂಡವು ಸಮಸ್ಯೆಯನ್ನು ಪರಿಹರಿಸುವಲ್ಲಿ ಕಾರ್ಯನಿರತ-ವಾಗಿದೆ' ಎಂದು ಎನ್‌ಟಿಎ 'ಎಕ್ಸ್'ನಲ್ಲಿ ತಿಳಿಸಿದೆ.

'ಪರೀಕ್ಷಾ ಶುಲ್ಕ ಮರುಪಾವತಿಗಾಗಿ ಬ್ಯಾಂಕ್ ವಿವರವನ್ನು ಸಲ್ಲಿಸಲು ಸಮಸ್ಯೆ ಎದುರಾದವರಿಗೆ ಅಥವಾ ತಪ್ಪು ವಿವರ ಸಲ್ಲಿಸಿದವರಿಗೆ ಮತ್ತೊಮ್ಮೆ ವಿವರ ಸಲ್ಲಿಸಲು ಅವಕಾಶ ನೀಡಲಾಗುವುದು' ಎಂದು ತಿಳಿಸಿದೆ. ಬಂಧಿತ ನವೀನ್ ಕುಮಾರ್ ಶಂಕರ್ ಪ್ರಸಾದ್ ಯಾದವ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಹಮದಾಬಾದ್ ಸೈಬರ್ ಅಪರಾಧ ವಿಭಾಗ ಮಾಹಿತಿ ನೀಡಿದೆ.

ಮಹಿಳೆಯರ ಉಚಿತ ಬಸ್ ಪ್ರಯಾಣ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನೇಮಕಗೊಂಡ ಮೊದಲ ಮಹಿಳಾ ಚಾಲಕಿಯೊಡನೆ ತಿರುವನಂತಪುರದಲ್ಲಿ ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಸೋಮವಾರ ಸಂವಾದ ನಡೆಸಿದರು —ಪಿಟಿಐ ಚಿತ್ರ

ಕೇರಳಂ: ಉಚಿತ ಬಸ್ ಪ್ರಯಾಣ ಜಾರಿಗೆ

ತಿರುವನಂತಪುರ (ಪಿಟಿಐ): ಕೇರಳಂನ ಎಲ್ಲ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸುವ 'ಪ್ರಿಯದರ್ಶಿನಿ' ಯೋಜನೆಯನ್ನು ರಾಜ್ಯ ಸರ್ಕಾರವು ಸೋಮವಾರ ಜಾರಿ ಗೊಳಿಸಿದೆ.

'ಈ ಯೋಜನೆಯಡಿ ಎಲ್ಲಾ ವಯಸ್ಸಿನ ಮಹಿಳೆಯರೂ ಹಾಗೂ ಲಿಂಗತ್ವ ಅಲ್ಪಸಂಖ್ಯಾತರೂ 'ಕೇರಳಂ ರಾಜ್ಯ ರಸ್ತೆ ಸಾರಿಗೆ ನಿಗಮ'ದ (ಕೆಎಸ್‌ಆರ್‌ಟಿಸಿ) ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು. ಇದಕ್ಕೆ ಯಾವುದೇ ನೋಂದಣಿ, ಅರ್ಜಿ ಅಥವಾ ದಾಖಲೆಯನ್ನು ತೋರಿಸುವ ಅಗತ್ಯವಿಲ್ಲ. ಬಸ್ ಹತ್ತಿದ ಬಳಿಕ ಮಹಿಳೆಯರ ಶೂನ್ಯ ಟಿಕೆಟ್ ನೀಡಿ ಎಂದು ಕಂಡಕ್ಟರ್ ಬಳಿ ಕೇಳಿ ಪಡೆಯಬೇಕು' ಎಂದು ಸರ್ಕಾರ ಹೇಳಿದೆ.

ಇಲ್ಲಿನ ಥಂಪನೂರಿನ ಕೆಎಸ್‌ಆರ್‌ಟಿಸಿ ಬಸ್ ಟರ್ಮಿನಲ್‌ನಲ್ಲಿ ಮುಖ್ಯಮಂತ್ರಿ ವಿ.ಡಿ ಸತೀಶನ್ ಅವರು ಯೋಜನೆಗೆ ಚಾಲನೆ ನೀಡಿದರು.

ಸಿಜೆಪಿ ಸಂಸ್ಥಾಪಕ ದೀಪ್ಕೆ ಮೇಲೆ ಹಲ್ಲೆ

ಅಭಿಜೀತ್ ದೀಪ್ಕೆ

ಜೈಪುರ (ಪಿಟಿಐ): ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ನಿರುದ್ಯೋಗ ವಿರೋಧಿಸಿ ಕಾಕ್ರೋಚ್ ಜನತಾ ಪಾರ್ಟಿಯು (ಸಿಜೆಪಿ) ಇಲ್ಲಿ ನಡೆಸುತ್ತಿದ್ದ ಪ್ರತಿಭಟನೆ ವೇಳೆ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರಿಗೆ ಕೆಲ ಯುವಕರು ಕಪಾಳಕ್ಕೆ ಹೊಡೆದ ಘಟನೆ ಸೋಮವಾರ ನಡೆದಿದೆ. ಈ ಸಂಬಂಧ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ದೀಪ್ಕೆ ಅವರು ಪ್ರತಿಭಟನಾ ಸ್ಥಳಕ್ಕೆ ಬರುತ್ತಿದ್ದಂತೆ, ಬೆಂಬಲಿಗರು ತಮ್ಮ ಹೆಗಲ ಮೇಲೆ ಕೂರಿಸಿಕೊಂಡರು. ಕೆಲವು ಯುವಕರು ದೀಪ್ಕೆ ಅವರ ಕಪಾಳಕ್ಕೆ ಹೊಡೆದಿದ್ದಾರೆ. ತಕ್ಷಣವೇ ಆ ಯುವಕರನ್ನು ಸಿಜೆಪಿ ಬೆಂಬಲಿಗರು ಹಿಡಿದುಥಳಿಸಲು ಮುಂದಾ ದರು. ಆಗ ಪೊಲೀಸರು ಮಧ್ಯ ಪ್ರವೇಶಿಸಿದರು' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

'ನಾನು ಗಾಂಧಿ, ಅಂಬೇಡ್ಕರ್ ಅವರ ಅನುಯಾಯಿ. ಶಾಂತಿಯುತವಾಗಿ ಧ್ವನಿ ಎತ್ತುವೆ ಎಂದು 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಟಿಎಂಸಿ ಬಂಡಾಯ ಬಣದ ವಿಲೀನದಿಂದ ಸಣ್ಣ ಪಕ್ಷದ ಬಲ ಹೆಚ್ಚಳ

ರಾಷ್ಟ್ರ ರಾಜಕಾರಣದಲ್ಲಿ ಎನ್‌ಸಿಪಿಐ ಸಂಚಲನ

ನವದೆಹಲಿ (ಪಿಟಿಐ): 'ಪಕ್ಷಾಂತರಿ ಗಳನ್ನು ತಿರಸ್ಕರಿಸಿ ನಿಮ್ಮ ಹಕ್ಕನ್ನು ಉಳಿಸಿಕೊಳ್ಳಿ' ಎಂಬ ಘೋಷಣೆ ಯೊಂದಿಗೆ 2023ರ ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಕೇವಲ ನಾಲ್ಕು ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ನ್ಯಾಷನಲ್ ಸಿಟಿಜನ್ ಪಾರ್ಟಿ ಆಫ್ ಇಂಡಿಯಾವು(ಎನ್‌ಸಿಪಿಐ) ತೃಣಮೂಲ ಕಾಂಗ್ರೆಸ್‌ನ(ಟಿಎಂಸಿ) ಬಂಡಾಯ ಬಣವನ್ನು ವಿಲೀನ ಮಾಡಿಕೊಂಡ ಬೆನ್ನಲ್ಲೇ ರಾಷ್ಟ್ರ ಮಟ್ಟದಲ್ಲಿ ಸುದ್ದಿ ಮಾಡಿದೆ.

2023ರ ಜನವರಿಯಲ್ಲಿ ನೋಂದಾಯಿತವಾಗಿದ್ದರೂ ಮಾನ್ಯತೆ ಪಡೆಯದಿರುವ ಎನ್‌ಸಿಪಿಐ, ತ್ರಿಪುರಾದಲ್ಲಿ ಸ್ಪರ್ಧಿಸಿದ್ದರೂ ಅದರ ನೋಂದಾಯಿತ ವಿಳಾಸ ಪಶ್ಚಿಮ ಬಂಗಾಳದ ಹೌರಾದಲ್ಲಿದೆ. ಕಲ್ಕತ್ತ ಹೈಕೋರ್ಟ್‌ನ ವಕೀಲೆ ಎಂದು ಹೇಳಿಕೊಳ್ಳುವ ಶೆಪ್ಲಿ ಕುಂಡು ಅವರು ಪಕ್ಷದ ಅಧ್ಯಕ್ಷರಾಗಿದ್ದಾರೆ.

ಈ ಸ್ಥಳವು ಉತ್ತಿಯಾ ಕುಂಡು ಮತ್ತು ಅವರ ಪತ್ನಿ ಶೆಪ್ಲಿ ಅವರ ಹೆಸರಿನಲ್ಲಿದೆ. ಅಲ್ಲಿರುವ ಕಟ್ಟಡದಲ್ಲಿ ಗೋಡೆಗಳಲ್ಲಿ ಜಾಗೋ ಬಿಸ್ವಾ ಮತ್ತು ಅಸಂಘಟಿತ ಮಹಿಳಾ ಕಾರ್ಮಿಕರ ಸಂಘಟನೆ ಎಂಬ ಬರಹವಿದೆ.

ಆಸ್ತಿಯ ಮುಖ್ಯದ್ವಾರದಲ್ಲಿ ಉತ್ತಿಯಾ ಕುಂಡು ಅವರು ಬಂಗಾಳಿ ಪತ್ರಿಕೆಯ ಸಂಪಾದಕರು, ಗಣಿತ ಶಿಕ್ಷಕರು, ಲೆಕ್ಕಪರಿಶೋಧಕರು, ಆರೋಗ್ಯ ಸಲಹೆಗಾರರು ಮತ್ತು ಯೋಗ ಸ್ವಯಂಸೇವಕರು ಎಂದು ಬರೆಯಲಾಗಿದೆ.

ಪೆನ್ನಿನ ತುದಿಯ ಚಿಹ್ನೆ ಹೊಂದಿ ರುವ ಎನ್‌ಸಿಪಿಐ, 'ಸಾಮಾಜಿಕ ಕಾರ್ಯಕರ್ತರನ್ನು ಬೆಂಬಲಿಸಿ, ರಾಜಕಾರಣಿಗಳನ್ನಲ್ಲ' ಎಂಬ ಘೋಷಣೆಯನ್ನು ಪ್ರಚಾರದಲ್ಲಿ ಬಳಸಿತ್ತು.

ತ್ರಿಪುರಾದ ಚವಮನು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಬರ್ಜೇದಾ ಅವರು ಕೇವಲ 536 ಮತಗಳನ್ನು ಪಡೆದಿದ್ದರು. ಅವರು ದಿನಗೂಲಿ ಕಾರ್ಮಿಕರು.

ಪಕ್ಷವು 2023ರಲ್ಲಿ ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಗಳಲ್ಲೂ ಸ್ಪರ್ಧಿಸಿತ್ತು.

ಎನ್‌ಸಿಪಿಐ ಸಂಸ್ಥಾಪಕ ಸದಸ್ಯ ಮತ್ತು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಎಂದು ಹೇಳಿಕೊಂಡಿ ರುವ ಸಂತನು ದೇ ಅವರು, ವಿಲೀನ ಪ್ರಕ್ರಿಯೆ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಟಿಎಂಸಿಯ 20 ಸಂಸದರನ್ನೊಳಗೊಂಡ ಬಂಡಾಯ ಬಣದ ವಿಲೀನದೊಂದಿಗೆ ನಮ್ಮ ಪಕ್ಷ ಪಶ್ಚಿಮ ಬಂಗಾಳದ ಅತಿ ದೊಡ್ಡ ಸಂಸದೀಯ ಪಕ್ಷವಾಗಿದೆ ಎಂದು ಎನ್‌ಸಿಪಿಐ ಸೋಮವಾರ ಹೇಳಿದೆ.

ಕಾನೂನಾತ್ಮಕ ರಕ್ಷಣೆಗೆ ಎನ್‌ಸಿಪಿಐ ಮೊರೆ

ಟಿಎಂಸಿಯ ಬಂಡಾಯ ಬಣವು ಬಿಜೆಪಿಯನ್ನು ಸೇರುವ ನಿರೀಕ್ಷೆಯನ್ನು ಹುಸಿ ಮಾಡಿ ಎನ್‌ಸಿಪಿಐನೊಂದಿಗೆ ವಿಲೀನವಾಗುವ ಮೂಲಕ ಎಚ್ಚರಿಕೆಯ ನಡೆಯನ್ನು ಅನುಸರಿಸಿದೆ.

ಟಿಎಂಸಿಯ ಕಾನೂನಾತ್ಮಕ ಕ್ರಮದಿಂದ ರಕ್ಷಣೆಯನ್ನು ಪಡೆಯುವ ತಂತ್ರ ಇದಾಗಿದೆ ಎಂದು ರಾಜಕೀಯ ವಿಶ್ಲೇಷಕರು ತಿಳಿಸಿದ್ದಾರೆ.

ಕಾನೂನಾತ್ಮಕ ತೊಡಕುಗಳಿಂದ ತಪ್ಪಿಸಿಕೊಳ್ಳಲು ಬಿಜೆಪಿಗಿಂತ ಎನ್‌ಸಿಪಿಐ ಉತ್ತಮ ಆಯ್ಕೆ ಎಂಬ ಲೆಕ್ಕಾಚಾರವನ್ನು ಮಾಡಿದ್ದಾರೆ.



> **ಅಮಿತ್ ಶಾ ಅವರು 'ಅಕ್ರಮ ಪಕ್ಷಾಂತರ'ದ ಹಿಂದಿನ ಸೂತ್ರಧಾರ. ಲೋಕಸಭೆಯಲ್ಲಿ ಎನ್‌ಡಿಎಗೆ ಮೂರನೇ ಎರಡರಷ್ಟು ಬಹುಮತ ಪಡೆಯುವ ಕಾರ್ಯತಂತ್ರದ ಭಾಗವಾಗಿ ಈ ಬೆಳವಣಿಗೆಗಳು ನಡೆದಿವೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಎನ್‌ಸಿಪಿಐನಲ್ಲಿ ಇದ್ದದ್ದು ಕೇವಲ ₹75

2022–23ನೇ ಸಾಲಿನ ಅಂತ್ಯದಲ್ಲಿ ಎನ್‌ಸಿಪಿಐ ಪಕ್ಷದಲ್ಲಿ ಕೇವಲ ₹75 ನಗದು ಇತ್ತು.

ಚುನಾವಣಾ ಆಯೋಗಕ್ಕೆ ಸಲ್ಲಿಕೆಯಾಗಿರುವ ಲೆಕ್ಕ ಪರಿಶೋಧನಾ ವರದಿಯಲ್ಲಿ ಈ ಮಾಹಿತಿ ಇದೆ. 2022–23ನೇ ಸಾಲಿನಲ್ಲಿ ₹1,13,075 ದೇಣಿಗೆ ಸಂಗ್ರಹವಾಗಿತ್ತು. ತ್ರಿಪುರಾ ವಿಧಾನಸಭಾ ಚುನಾವಣೆಯ ಖರ್ಚು ಸೇರಿದಂತೆ ಆ ವರ್ಷ ಒಟ್ಟು ₹1.13 ಲಕ್ಷ ಖರ್ಚಾಗಿತ್ತು ಎಂದು ಎನ್‌ಸಿಪಿಐ ತಿಳಿಸಿದೆ.

'ಪಕ್ಷದ ಚಿಹ್ನೆಗಾಗಿ ಹೋರಾಟ': ಪಕ್ಷವನ್ನು ತೊರೆದಿಲ್ಲ. ಪಕ್ಷವನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆ ಮತ್ತು ಪಕ್ಷದ ಚಿಹ್ನೆಗಾಗಿ ಹೋರಾಡುತ್ತೇವೆ ಎಂದು ಬಂಡಾಯ ಸಂಸದ ಅರೂಪ್ ಚಕ್ರವರ್ತಿ ತಿಳಿಸಿದ್ದಾರೆ. 'ಆಟ ಈಗ ಶುರುವಾಗಿದೆ. ಕಾಕೋಲಿ ಘೋಷ್ ದಸ್ತಿದಾರ್ ಮತ್ತು ಸುದೀಪ್ ಬಂಡೋಪಾಧ್ಯಾಯ ಅವರು ನಮ್ಮ ಗುಂಪಿನ ನಾಯಕರು' ಎಂದಿದ್ದಾರೆ.

ಡಚ್ ಪಡೆಯ ಗೆಲುವಿಗೆ ಜಪಾನ್ ತಡೆ

ಕೊನೆ ಗಳಿಗೆಯ ಗೋಲಿನಿಂದ ಪಂದ್ಯ ಡ್ರಾ ಮಾಡಿಕೊಂಡ ಏಷ್ಯಾದ ತಂಡ

ಜಪಾನ್ ತಂಡದ ಮಿಡ್‌ಫೀಲ್ಡರ್ ದೈಚಿ ಕಮಾಡ (ಬಲ) ಹಾಗೂ ನೆದರ್ಲೆಂಡ್ಸ್ ತಂಡದ ಜಾನ್ ಪೌಲ್ ವಾನ್ ಹೆಕೆ ಅವರು ಚೆಂಡಿನ ಮೇಲೆ ನಿಯಂತ್ರಣಕ್ಕೆ ಪೈಪೋಟಿ ನಡೆಸಿದರು ಎಎಫ್‌ಪಿ ಚಿತ್ರ

ಅರ್ಲಿಂಗ್ಟನ್ (ಅಮೆರಿಕ), (ಎಎಫ್‌ಪಿ): ಪಂದ್ಯ ಮುಗಿಯಲು ಕೇವಲ ಎರಡು ನಿಮಿಷಗಳಿರುವಾಗ ಸ್ಕೋರ್ ಸಮ ಮಾಡಿಕೊಂಡ ಜಪಾನ್ ತಂಡ ಫಿಫಾ ವಿಶ್ವಕಪ್ ಅಭಿಯಾನವನ್ನು ಪ್ರಬಲ ನೆದರ್ಲೆಂಡ್ಸ್ ವಿರುದ್ಧ ಭಾನುವಾರ 2–2 ಡ್ರಾ ಮಾಡಿಕೊಳ್ಳುವ ಮೂಲಕ ಉಜ್ವಲವಾಗಿ ಆರಂಭಿಸಿತು.

ಪಂದ್ಯಗಳು
ಫ್ರಾನ್ಸ್–ಸೆನೆಗಲ್ ಮಂಗಳವಾರ ರಾತ್ರಿ 12.30
ಇರಾಕ್–ನಾರ್ವೆ ಬುಧವಾರ ನಸುಕಿನ ಜಾವ 3.30
ಅರ್ಜೆಂಟೀನಾ–ಅಲ್ಜೀರಿಯಾ ಬುಧವಾರ ಬೆಳಿಗ್ಗೆ 6.30

ಟೆಕ್ಸಾಸ್‌ನ ಹವಾನಿಯಂತ್ರಿತ ಎ ಆ್ಯಂಡ್ ಟಿ ಕ್ರೀಡಾಂಗಣದಲ್ಲಿ ನಡೆದ 'ಎಫ್' ಗುಂಪಿನ ಈ ಪಂದ್ಯದ ಮೊದಲಾರ್ಧ ಅಷ್ಟೇನೂ ಬಿರುಸಿನಿಂದ ಸಾಗಲಿಲ್ಲ. ಆದರೆ ಉತ್ತರಾರ್ಧವು ಗೋಲುಗಳೊಡನೆ ಜೀವಂತಿಕೆ ಪಡೆದುಕೊಂಡಿತು. ಜಪಾನ್ ತಂಡ ಎರಡು ಬಾರಿ ಹಿನ್ನಡೆಯಿಂದ ಚೇತರಿಸಿಕೊಂಡಿತು.

ನಾಯಕ ವರ್ಜಿಲ್ ವಾನ್ ಡಿಜಿಕ್ ಅವರು ಅಮೋಘ ಹೆಡರ್‌ನೊಡನೆ ಡಚ್ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಕೀಟೊ ನಕಾಮುರಾ ಅವರ ಗೋಲಿನಿಂದ ಜಪಾನ್ ಬೇಗನೇ ಸಮ ಮಾಡಿಕೊಂಡಿತು. ವಿಂಗರ್ ಕ್ರಿಸೆನ್ಸಿಯೊ ಸಮರ್‌ವಿಲೆ ಅವರ ಆಕರ್ಷಕ 'ಕರ್ವ್' ಹೊಡೆತದೊಂದಿಗೆ ಡಚ್ ತಂಡಕ್ಕೆ ಮತ್ತೊಮ್ಮೆ ಮುನ್ನಡೆ ಒದಗಿಸಿದ್ದರು. ಡಚ್ ತಂಡ ಈ ಮುನ್ನಡೆ ಕಾಪಾಡಿಕೊಂಡು ಪಂದ್ಯ ಗೆಲ್ಲಬಹುದೆನ್ನುವಂತೆ ಕಂಡಿತು. ಆದರೆ ಕೊನೆಗಳಿಗೆಯಲ್ಲಿ ದೈಚಿ ಕಮಾಡ ಅವರು ನೆದರ್ಲೆಂಡ್ಸ್ ಲೆಕ್ಕಾಚಾರ ತಲೆಕೆಳಗು ಮಾಡಿದರು.

ನೆದರ್ಲೆಂಡ್ಸ್	ಜಪಾನ್
2	2

ಎರಡೂ ತಂಡಗಳು ಗಾಯದ ಕಾರಣ ಪ್ರಮುಖ ಆಟಗಾರರನ್ನು ಕಳೆದುಕೊಂಡಿದ್ದವು. ಆದರೂ, ಈ ಪಂದ್ಯ ಗುಂಪು ಹಂತದಲ್ಲಿ ಕುತೂಹಲ ಮೂಡಿಸಬಹುದೆಂಬ ನಿರೀಕ್ಷೆಗಳಿದ್ದವು.

ಎರಡೂ ತಂಡಗಳು 'ಡಾರ್ಕ್ ಹಾರ್ಸ್' (ಫೇವರಿಟ್ ಎನಿಸದಿದ್ದರೂ, ಕೌಶಲ, ತಂತ್ರಗಾರಿಕೆ, ಶಿಸ್ತಿನ ಆಟದಿಂದ ಪ್ರಬಲ ತಂಡಗಳನ್ನು ಮಣಿಸುವ ಸಾಮರ್ಥ್ಯ ಹೊಂದಿರುವ) ತಂಡಗಳೆನಿಸಿದ್ದವು. ಡಚ್ ತಂಡ ಎರಡು ಬಾರಿ ರನ್ನರ್ ಅಪ್ ಆಗಿದ್ದರೆ, ಜಪಾನ್ ಒಮ್ಮೆಯೂ ಕ್ವಾರ್ಟರ್‌ಫೈನಲ್‌ಗಿಂತ ಮೇಲೇರಿಲ್ಲ.

ಪಂದ್ಯದ ಮೂರನೇ ನಿಮಿಷವೇ ಡೊನ್ವೆಲ್ ಮಲೆನ್ ಅವರು ಜಪಾನ್ ಗೋಲಿನತ್ತ ಮುನ್ನುಗ್ಗಿದ್ದರು. ಆದರೆ 'ಬಾಕ್ಸ್' ಒಳಗಿಂದ ಅವರ ಯತ್ನವನ್ನು ಜಪಾನ್‌ನ ಗೋಲ್ ಕೀಪರ್ ಝಿಯಾನ್ ಸುಝುಕಿ ಜಾಣ್ಮೆಯಿಂದ ತಡೆದರು. ಕೋಡಿ ಗಾಪ್ಕೊ ಅವರ ಪ್ರಯತ್ನದಲ್ಲಿ ಚೆಂಡು ಜಪಾನ್ ಗೋಲ್ ಅಡ್ಡ ಪಟ್ಟಿಯ ಮೇಲಿಂದ ಹಾದುಹೋಯಿತು.

ವಿರಾಮಕ್ಕೆ ಕ್ಷಣಗಣನೆ ನಡೆಯುವಾಗ ಜಪಾನ್‌ಗೆ ಉತ್ತಮ ಅವಕಾಶ ದೊರಕಿತ್ತು. ಆದರೆ ನಕಾಮುರಾ ಕೆಳಮಟ್ಟದಲ್ಲಿ ಒದ್ದ ಚೆಂಡು ಗೋಲಿನ ಆಚೆಯಿಂದ ಹೊರಹೋಯಿತು.

ವಿರಾಮದ ನಂತರ ಡಚ್ಚರು ಇನ್ನಿಲ್ಲದ ಯತ್ನ ನಡೆಸಿ, 51ನೇ ನಿಮಿಷ ಮುನ್ನಡೆಯನ್ನೂ ಸಾಧಿಸಿದರು. ಲಿವರ್‌ಪೂಲ್ ಕ್ಲಬ್‌ನ ರಯಾನ್ ಗ್ರೇವೆನ್‌ಬೆಚ್ ಅವರ ನಿಖರವಾದ ಕ್ರಾಸ್‌ನಲ್ಲಿ ಕ್ಲಬ್ ಸಹ ಆಟಗಾರ ವಾನ್ ಡಿಜಿಕ್ ಅವರು ಕರಾರುವಾಕ್ ಆಗಿ ಹೆಡ್ ಮಾಡಿದ ಚೆಂಡು ಗೋಲಿನ ಮೂಲೆ ಸೇರಿತು.

ಆದರೆ ಆರು ನಿಮಿಷಗಳ ನಂತರ ಸ್ಕೋರ್ ಸಮನಾಯಿತು. ನಕಾಮುರಾ ಅವರ ಮಿಂಚಿನಂತೆ ಒದ್ದ ಚೆಂಡು ಕೀಪರ್ ಬರ್ಟ್ ವೆರ್‌ಬ್ರುಗೆನ್ ಅವರನ್ನು ವಂಚಿಸಿ ಗೋಲಿನೊಳಗೆ ನುಗ್ಗಿತು. 64ನೇ ನಿಮಿಷ ಡಚ್ ಪಡೆಯ ಸಮರ್‌ವಿಲೆ ಅವರು ಎಡಗಾಲಿನಿಂದ ಒದ್ದ ಚೆಂಡು ವಕ್ರವಾಗಿ ತೇಲಿ ಗೋಲಿನೊಳಗೆ ಹೊಕ್ಕಿತು. ಎರಡೂ ತಂಡಗಳ ಪೈಪೋಟಿ ತೀವ್ರಗೊಂಡಿತು.

ಆದರೆ 88ನೇ ನಿಮಿಷ ಕಮಾಡ ಗೋಲಿನಿಂದ ಜಪಾನ್‌ನ ಸೋಲು ತಪ್ಪಿತು; ಜೊತೆಗೆ 'ಬ್ಲೂ ಸಮುರಾಯ್' ತಂಡದ ಅಭಿಮಾನಿಗಳಲ್ಲಿ ಮಿಂಚಿನ ಸಂಚಲನವೂ ಆಯಿತು.

ಜಪಾನ್ ಅಭಿಮಾನಿಗಳು ಕ್ರೀಡಾಂಗಣದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು ಎಎಫ್‌ಪಿ ಚಿತ್ರ

ಕ್ರೀಡಾಂಗಣ ಸ್ವಚ್ಛಗೊಳಿಸಿದ ಜಪಾನ್ ಅಭಿಮಾನಿಗಳು

ಅರ್ಲಿಂಗ್ಟನ್ (ಎಎಫ್‌ಪಿ): ನೆದರ್ಲೆಂಡ್ಸ್ ವಿರುದ್ಧ ಪಂದ್ಯ ಮುಗಿದ ಬಳಿಕ ಜಪಾನ್‌ನ ಅಭಿಮಾನಿಗಳೂ ಸ್ಟ್ಯಾಂಡ್‌ಗಳಲ್ಲಿ ಒಂದು ಚೂರೂ ಕಸ ಇಲ್ಲದಂತೆ ಚೊಕ್ಕಟಗೊಳಿಸಿದರು. 'ಇದು ಜಪಾನ್‌ನ ಸಂಸ್ಕೃತಿ' ಎಂದು ಅಭಿಮಾನದಿಂದ ಹೇಳಿಕೊಂಡರು.

ಪಂದ್ಯ ಡ್ರಾ ಆದ ನಂತರ ಅಲ್ಲೇ ಉಳಿದ ಜಪಾನ್‌ನ ಪ್ರೇಕ್ಷಕರ ಗುಂಪೊಂದು ಕಸ ಸಂಗ್ರಹಿಸಿ ನೀಲಿ ಬಣ್ಣದ ಬ್ಯಾಗ್‌ಗಳಲ್ಲಿ ತುಂಬಿತು. 'ಪ್ರಾಥಮಿಕ ಶಾಲೆಯಲ್ಲಿರುವಾಗ ಇಂಥ ಅಭ್ಯಾಸ ಕಲಿತಿದ್ದೆವು. ನಾವು ಉಳಿದವರ ಬಗ್ಗೆಯೂ ಯೋಚಿಸಬೇಕು' ಎಂದು ಐಟಾ ತನಾಕ ಅವರು ಎಎಫ್‌ಪಿಗೆ ತಿಳಿಸಿದರು. ಜಪಾನ್ ಸತತ ಎಂಟನೇ ಬಾರಿ ವಿಶ್ವಕಪ್ ಆಡುತ್ತಿದೆ. ಅಭಿಮಾನಿಗಳು ಈ ರೀತಿ ಮಾಡುತ್ತಿರುವುದು ಹೊಸದೇನಲ್ಲ. ಅಮೆರಿಕದ ಎನ್‌ಎಫ್‌ಎಲ್ ಆಟಗಾರ ಜೇಮಿಸ್ ವಿನ್‌ಸ್ಟನ್ ಸಹ ಜಪಾನ್‌ನ ನೀಲಿ ಪೋಷಾಕು ಧರಿಸಿ ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾದರು.

'ಬ್ಲ್ಯೂ ಶಾರ್ಕ್' ಗೋಲ್‌ಕೀಪರ್ ವಾಝೀನ್ಹಾ ಸಾಹಸ

ಸ್ಪೇನ್‌ಗೆ ಕೇಪ್ ವೆರ್ಡೆ ಅಡ್ಡಗಾಲು

ಸ್ಪೇನ್	ಕೇಪ್ ವೆರ್ಡೆ
0	0

ಕೇಪ್ ವೆರ್ಡೆ ತಂಡದ ಗೋಲ್‌ಕೀಪರ್ ವಾಝೀನ್ಹಾ ಎಎಫ್‌ಪಿ ಚಿತ್ರ

ಅಟ್ಲಾಂಟಾ (ಅಮೆರಿಕ) (ಎಎಫ್‌ಪಿ): ಈ ಬಾರಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದೆನಿರುವ ಸ್ಪೇನ್ ತಂಡವು ಸೋಮವಾರ ಎಚ್ ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಕೇಪ್ ವೆರ್ಡೆ ಜೊತೆಗೆ ಗೋಲು ರಹಿತ ಡ್ರಾಗೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

ಫಿಫಾ ವಿಶ್ವಕಪ್‌ನಲ್ಲಿ ಪದಾರ್ಪಣೆಯ ಪಂದ್ಯವಾಡಿದ ಆಫ್ರಿಕಾದ ತಂಡವು ಸ್ಪೇನ್ ತಂಡದ ಗೋಲು ಯತ್ನಗಳನ್ನು ಸಮರ್ಥವಾಗಿ ತಡೆದು ಪ್ರೇಕ್ಷಕರ ಮನ ಗೆದ್ದಿತು. ಗೋಲ್‌ಕೀಪರ್, 40 ವರ್ಷ ವಯಸ್ಸಿನ ವಾಝೀನ್ಹಾ ಅವರು ಪಂದ್ಯದ ಆಕರ್ಷಣೆಯ ಬಿಂದುವಾಗಿದ್ದರು.

90ನೇ ನಿಮಿಷದಲ್ಲಿ 'ಬ್ಲ್ಯೂ ಶಾರ್ಕ್' ತಂಡದ ಡಾನಿ ಬಾರ್ಜಸ್ ಅವರು ಅಮೋಘ ಹೆಡ್ಡರ್ ಮೂಲಕ ಗೋಲು ಗಳಿಸಿ ಚಾರಿತ್ರಿಕ ಗೆಲುವು ತಂದುಕೊಡಲು ಯತ್ನಿಸಿದರಾದರೂ, ಚೆಂಡು ಗೋಲು ಪೆಟ್ಟಿಗೆಯ ಪಕ್ಕದಲ್ಲಿಯೇ ಸಾಗಿತು. ಕೇವಲ 5 ಲಕ್ಷ ಜನಸಂಖ್ಯೆ ಹೊಂದಿರುವ ಕೇಪ್ ವೆರ್ಡೆ 'ಡ್ರಾ'ದಲ್ಲಿಯೂ ಮಿಂಚಿತು.

2010ರ ಚಾಂಪಿಯನ್ ಸ್ಪೇನ್ ತಂಡವು ವಿಶ್ವ ಕ್ರಮಾಂಕದಲ್ಲಿ 67ನೇ ಸ್ಥಾನದಲ್ಲಿರುವ ಕೇಪ್ ವೆರ್ಡೆ ಎದುರು ಗೋಲು ಗಳಿಸಲು ವಿಫಲವಾಗಿ, ಕೈಕೈ ಹಿಸುಕಿಕೊಂಡಿತು.

ಐವರಿಕೋಸ್ಟ್‌ಗೆ ರೋಚಕ ಜಯ

ಐವರಿಕೋಸ್ಟ್	ಇಕ್ವೆಡಾರ್
1	0

ಫಿಲಡೆಲ್ಫಿಯಾ: ಐವರಿಕೋಸ್ಟ್‌ನ 19 ವರ್ಷ ವಯಸ್ಸಿನ ಯುವತಾರೆ ಯಾನ್ ಜೊಮೊಂಡ್ ಅವರು ತಮ್ಮ ಸಾಮರ್ಥ್ಯ ಏನೆಂಬುದನ್ನು ಇಕ್ವೆಡಾರ್ ಎದುರಿನ ವಿಶ್ವಕಪ್ ಪಂದ್ಯದ ವೇದಿಕೆಯಲ್ಲಿ ಪ್ರದರ್ಶಿಸಿದರು. ಅವರನ್ನು ಒಳಗೊಂಡ ಯುವ ತಂಡ ಭಾನುವಾರ ನಡೆದ ಇ ಗುಂಪಿನ ಪಂದ್ಯದಲ್ಲಿ 1–0 ಜಯಗಳಿಸಿತು.

ಪಂದ್ಯದ ಕೊನೆಯ (90ನೇ) ನಿಮಿಷ ಅಮದ್ ಡಿಯಾಲೊ ಅವರ ಗೋಲು ಐವರಿಕೋಸ್ಟ್ ಗೆಲುವಿಗೆ ಕಾರಣವಾಯಿತು.

ಬಂಡೆಸ್‌ಲಿಗಾದಲ್ಲಿ ಆಡುವ ಜೊಮೊಂಡ್ ಗೋಲು ಗಳಿಸಲಿಲ್ಲ. ಆದರೆ ಅವರ ಆಟಕ್ಕೆ ಪಂದ್ಯದ ಆಟಗಾರ ಪ್ರಶಸ್ತಿ ಒಲಿಯಿತು. ಆಟಗಾರರ ವರ್ಗಾವಣೆಯ ಮೌಲ್ಯ ಲೆಕ್ಕಹಾಕುವ 'ಟ್ರಾನ್ಸ್‌ಫರ್‌ಮಾರ್ಕೆಟ್' ವೆಬ್‌ಸೈಟ್, ಜೊಮೊನ್ ಅವರ ಮೌಲ್ಯವನ್ನು ₹991 ಕೋಟಿ ಎಂದು ಅಂದಾಜಿಸಿದೆ.

ಸ್ವೀಡನ್‌ಗೆ ಸುಲಭ ತುತ್ತಾದ ಟ್ಯುನೀಷಿಯಾ

ಮಾಂಟೆರೆ (ಮೆಕ್ಸಿಕೊ), (ಎಪಿ): ಸ್ವೀಡನ್ ತಂಡದವರು ವಿಶ್ವಕಪ್ ಫುಟ್‌ಬಾಲ್ 'ಇ' ಗುಂಪಿನ ಪಂದ್ಯದಲ್ಲಿ ಭಾನುವಾರ ಟ್ಯುನೀಷಿಯಾ ತಂಡವನ್ನು 5–1 ಗೋಲುಗಳಿಂದ ಸದೆಬಡಿದರು. ಈ ವಿಶ್ವಕಪ್ ನಲ್ಲಿ ತಮ್ಮನ್ನು ಕಡೆಗಣಿಸುವಂತಿಲ್ಲ ಎಂಬ ಸಂದೇಶವನ್ನೂ ರವಾನಿಸಿದರು. ಯಾಸಿನ್ ಅಯಾರಿ ಎರಡು ಗೋಲುಗಳನ್ನು ಗಳಿಸಿದರು. ಅಲೆಕ್ಸಾಂಡರ್ ಐಸಾಕ್ ಮತ್ತು ವಿಕ್ಟರ್ ಗ್ಯೊಕರೆರೆಸ್ ತಲಾ ಒಂದೊಂದು ಗೋಲು ಗಳಿಸಿದರು, ಅಷ್ಟೇ ಅಲ್ಲ ಇತರ ಎರಡು ಗೋಲುಗಳಿಸಲು ಸಹಕರಿಸಿದರು. ಮತ್ತೊಂದು ಗೋಲನ್ನು ಮಥಾಯಸ್ ಸ್ವಾನ್‌ಬರ್ಗ್ ಗಳಿಸಿದರು.

ಸ್ವೀಡನ್	ಟ್ಯುನೀಷಿಯಾ
5	1

ಎಂಟು ವರ್ಷಗಳ ಹಿಂದೆ ರಷ್ಯಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ಎಂಟರ ಘಟ್ಟದಲ್ಲಿ ಆಡಿದ್ದ ಸ್ವೀಡನ್, 2022ರಲ್ಲಿ ಕತಾರ್ ವಿಶ್ವಕಪ್‌ಗೆ ಅರ್ಹತೆ ಪಡೆಯಲು ವಿಫಲವಾಗಿತ್ತು. ಈ ಬಾರಿ ಫಿಫಾ ಕ್ರಮಾಂಕಪಟ್ಟಿಯಲ್ಲಿ 39ನೇ ಸ್ಥಾನದೊಡನೆ ಆಡಲು ಇಳಿದಿದೆ. ಸೋತ ಬೆನ್ನಲ್ಲೇ ಟ್ಯುನೀಷಿಯಾವು ಹೆಡ್ ಕೋಚ್ ಸಬ್ರಿ ಲಮಾಚಿ ಅವರನ್ನು ವಜಾಗೊಳಿಸಿದೆ.

ಸ್ವೀಡನ್ ತನ್ನ ಮುಂದಿನ ಪಂದ್ಯವನ್ನು ಶನಿವಾರ ನೆದರ್ಲೆಂಡ್ಸ್ ವಿರುದ್ಧ ಹ್ಯೂಸ್ಟನ್‌ನಲ್ಲಿ ಆಡಲಿದೆ. ಅದೇ ದಿನ ಟ್ಯುನೀಷಿಯಾವು ಮಾಂಟೆರೆ ಕ್ರೀಡಾಂಗಣದಲ್ಲೇ ಜಪಾನ್ ತಂಡವನ್ನು ಎದುರಿಸಲಿದೆ.

ನ್ಯೂಜಿಲೆಂಡ್‌ಗೆ ಲಂಕಾ ಸವಾಲು

ಸೌತಾಂಪ್ಟನ್: ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ವನಿತೆಯರ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಮಂಗಳವಾರ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ತನ್ನ ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 7 ವಿಕೆಟ್‌ಗಳ ಆಘಾತಕಾರಿ ಸೋಲು ಅನುಭವಿಸಿದ್ದ ಕಿವೀಸ್ ತಂಡವು ಟೂರ್ನಿಯಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿದೆ.

ಚಾಮರಿ ಅಟಪಟ್ಟು ಪಡೆಯೂ ತನ್ನ ಮೊದಲ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ವಿರುದ್ಧ ಮುಗ್ಗರಿಸಿತ್ತು. ಇದೀಗ ಆ ತಂಡವು ಗೆಲುವಿನ ಹಳಿಗೆ ಮರಳುವ ಯತ್ನದಲ್ಲಿದೆ.

ದಿನದ ಮತ್ತೊಂದು ಬಿ ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಆಂಗ್ಲರ ಪಡೆಯು ಅಜೇಯ ಓಟ ಮುಂದುವರಿಸುವ ಹುಮ್ಮಸ್ಸಿನಲ್ಲಿದೆ.

ಇಂದಿನ ಪಂದ್ಯ

ನ್ಯೂಜಿಲೆಂಡ್	V/s	ಶ್ರೀಲಂಕಾ
ತಾಣ: ಸೌತಾಂಪ್ಟನ್ ಆರಂಭ: ಸಂಜೆ 7		
ಇಂಗ್ಲೆಂಡ್	V/s	ಐರ್ಲೆಂಡ್
ತಾಣ: ಸೌತಾಂಪ್ಟನ್ ಆರಂಭ: ರಾತ್ರಿ 11		
ಲೈವ್	ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್	

ಸೂಪರ್ ಓವರ್‌ನಲ್ಲಿ ಗೆದ್ದ ಲಂಕಾ ಎ

ಪಂದ್ಯದ ಕೊನೆಯಲ್ಲಿ ನಾಟಕೀಯ ಸನ್ನಿವೇಶ • ಫೀಲ್ಡರ್‌ನನ್ನು ತಳ್ಳಿದ ವೈಭವ್

ಶ್ರೀಲಂಕಾ ತಂಡದ ಫೀಲ್ಡರ್ ಜೊತೆ ವೈಭವ್ ಸೂರ್ಯವಂಶಿ ವಾಗ್ವಾದ 'ಎಕ್ಸ್' ಚಿತ್ರ

ದಂಬುಲ್ಲಾ (ಪಿಟಿಐ): ರೋಚಕತೆ, ಗೊಂದಲ, ನಾಟಕೀಯ ಸನ್ನಿವೇಶ ಇವೆಲ್ಲವನ್ನೂ ಒಳಗೊಂಡ ತ್ರಿಕೋನ ಸರಣಿಯ ಏಕದಿನ ಪಂದ್ಯದಲ್ಲಿ ಶ್ರೀಲಂಕಾ ಎ ತಂಡ ಸೂಪರ್ ಓವರ್‌ನಲ್ಲಿ ಸೋಮವಾರ ಭಾರತ ಎ ತಂಡವನ್ನು ಸೋಲಿಸಿತು.

ಲಂಕಾದ ವೇಗಿ ಕುಗತಾಸ್ ಮಥುಲನ್ ಅವರು ಸೂಪರ್ ಓವರ್‌ನಲ್ಲಿ ಭಾರತದ ಸ್ಫೋಟಕ ಬ್ಯಾಟರ್‌ಗಳಾದ ವೈಭವ್ ಸೂರ್ಯವಂಶಿ ಮತ್ತು ಸೂರ್ಯಾಂಶ್ ಶೆಡ್ಗೆ ಅವರನ್ನು ಕಟ್ಟಿಹಾಕಿ 16 ರನ್‌ಗಳನ್ನು ರಕ್ಷಿಸುವಲ್ಲಿ ಯಶಸ್ವಿಯಾದರು. ಆತಿಥೇಯ ಆಟಗಾರರು ಸಂಭ್ರಮಿಸಿದ್ದು ಈ ವೇಳೆ ವಾಗ್ವಾದವೂ ನಡೆಯಿತು.

ಶೆಡ್ಗೆ ಜೊತೆ ಪೆವಿಲಿಯನ್‌ನತ್ತ ಸಾಗುತ್ತಿದ್ದ ಸೂರ್ಯವಂಶಿ ಪ್ರಚೋದನೆಯಿಂದ ಕೋಪಗೊಂಡು ಲಂಕಾ ಆಟಗಾರನೊಬ್ಬನನ್ನು ದೂಡಿ ಬೌಲರ್ ಮಥುಲನ್ ಕಡೆ ನುಗ್ಗಿದರು. ಈ ವೇಳೆ ಶ್ರೀಲಂಕಾದ ಅನುಭವಿ ಆಟಗಾರ ನಿರೋಶನ್ ಡಿಕ್ವೆಲ್ಲಾ ಪರಿಸ್ಥಿತಿ ಕೈಮೀರದಂತೆ ನೋಡಿಕೊಂಡರು.

15 ವರ್ಷದ ಸ್ಫೋಟಕ ಹೊಡೆತಗಳ ಆಟಗಾರ ಸೂರ್ಯವಂಶಿ ಸೂಪರ್ ಓವರ್‌ನ ಮೊದಲ ಎಸೆತ ಎದುರಿಸದಿದ್ದುದು ಆಶ್ಚರ್ಯಕ್ಕೆ ಕಾರಣವಾಯಿತು.

ಇದಕ್ಕೆ ಮೊದಲು ಎಡಗೈ ವೇಗದ ಬೌಲರ್ ಅರ್ಷದ್ ಖಾನ್ ಮಿಂಚಿದ್ದರು. 266 ರನ್‌ಗಳ ಗುರಿ ಎದುರಿಸಿದ್ದ ಶ್ರೀಲಂಕಾ ಎ ತಂಡದ ಗೆಲುವಿಗೆ ಕೊನೆಯ ಓವರ್‌ನಲ್ಲಿ ಐದು ರನ್‌ಗಳಷ್ಟೇ ಬೇಕಿದ್ದವು. ಆದರೆ ಅತ್ಯುತ್ತಮವಾಗಿ ಯಾರ್ಕರ್‌ಗಳನ್ನು ಪ್ರಯೋಗಿಸಿದ ಅರ್ಷದ್ ನಾಲ್ಕು ರನ್‌ಗಳನ್ನಷ್ಟೇ ನೀಡಿದರು. ಗುರಿ ಬೆನ್ನಟ್ಟುವಾಗ ಶ್ರೀಲಂಕಾದ ಮಧ್ಯಮ ಕ್ರಮಾಂಕದ ಬ್ಯಾಟರ್ ಸದೀರ ಸಮರವಿಕ್ರಮ ಅವರ ಆಕರ್ಷಕ 93 ರನ್‌ಗಳ (113 ಎಸೆತ, 7 ಬೌಂಡರಿ) ಆಟ ಗಮನ ಸೆಳೆಯಿತು.

ಪಂದ್ಯ ಟೈ ಆದ ಕಾರಣ ಗೊಂದಲ ಕಾಣಿಸಿಕೊಂಡಿತು. ಭಾರತ ಎ ತಂಡದ ನಾಯಕ ತಿಲಕ್ ವರ್ಮಾ ಅವರು ಫಲಿತಾಂಶ ನಿರ್ಧರಿಸಲು ಸೂಪರ್ ಓವರ್ ಮೂಲಕ ಪಂದ್ಯ ಮುಂದುವರಿಸಬೇಕೆಂದು ಅಂಪೈರ್‌ಗಳಿಗೆ ಒತ್ತಾಯಿಸಿದರು. ಸಮಾಲೋಚನೆಯ ನಂತರ ಅಂಪೈರ್‌ಗಳು ಸೂಪರ್ ಓವರ್‌ಗೆ ಮನಸ್ಸು ಮಾಡಿದರು. ಆದರೆ ಅಷ್ಟರೊಳಗೆ ಬೆಳಕೂ ಮಂದವಾಗತೊಡಗಿ ಸವಾಲು ಎದುರಾಯಿತು.

ಸೂಪರ್ ಓವರ್‌ನಲ್ಲಿ ಅರ್ಷದ್ ಅವರು ದುಬಾರಿಯಾಗಿ 16 ರನ್ ನೀಡಿದರು. ಇದರಲ್ಲಿ ಒಂದು ವೈಡ್ ಮತ್ತು ನೋಬಾಲ್ ಸಹ ಇತ್ತು. ಆಮೇಲೆ ಮಥುಲನ್ ಅವರು ಒತ್ತಡದಲ್ಲೂ ಸಂಯಮ ವಹಿಸಿ ಬೌಲಿಂಗ್ ಮಾಡಿದರಲ್ಲದೇ, ವೈಭವ್ ಮತ್ತು ಸೂರ್ಯಾಂಶ್ ಅಬ್ಬರಿಸದಂತೆ ನೋಡಿಕೊಂಡರು. ಇವರಿಬ್ಬರು 9 ರನ್‌ಗಳನ್ನಷ್ಟೇ ಗಳಿಸಲು ಶಕ್ತರಾದರು.

ಮಿಂಚಿದ ಸೂರ್ಯಾಂಶ್, ವಿಪ್ರಜ್: ಭಾರತದ ಇನಿಂಗ್ಸ್‌ನಲ್ಲಿ ಸೂರ್ಯವಂಶಿ (21, 14 ಎಸೆತ) ದೊಡ್ಡಮೊತ್ತ ಗಳಿಸದಿದ್ದರೂ ತಂಡಕ್ಕೆ ಉತ್ತಮ ಆರಂಭ ನೀಡಿದರು. ಆದರೆ ಅಗ್ರ ಸರದಿಯ ಆಟಗಾರರು ದೊಡ್ಡ ಮೊತ್ತ ಗಳಿಸಲಿಲ್ಲ. ಬೌಲಿಂಗ್ ಆಲ್‌ರೌಂಡರ್‌ಗಳಾದ ಸೂರ್ಯಾಂಶ್ (72, 66ಎ, 4x3, 6x2) ಮತ್ತು ವಿಪ್ರಜ್ ನಿಗಮ್ (51, 49 ಎಸೆತ) ಅವರು ಸಕಾಲಿಕ ಅರ್ಧ ಶತಕಗಳಿಂದ ತಂಡವನ್ನು ಆಧರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ ಎ: 49.2 ಓವರುಗಳಲ್ಲಿ 265 (ಋತುರಾಜ್ ಗಾಯಕವಾಡ್ 37, ಸೂರ್ಯಾಂಶ್ ಶೆಡ್ಗೆ 72, ವಿಪ್ರಜ್ ನಿಗಮ್ 51; ಮೊಹಮ್ಮದ್ ಶಿರಾಜ್ 33ಕ್ಕೆ3, ವಿಜಯಕಾಂತ್ ವಿಯಸ್ಕಾಂತ್ 26ಕ್ಕೆ3); ಶ್ರೀಲಂಕಾ ಎ: 50 ಓವರುಗಳಲ್ಲಿ 9 ವಿಕೆಟ್‌ಗೆ 265 (ನಿರೋಶನ್ ಡಿಕ್ವೆಲ್ಲಾ 37, ಸದೀರ ಸಮರವಿಕ್ರಮ 93, ವನುಜ ಸಹನ್ 25; ಆಯುಷ್ ಬದೋನಿ 45ಕ್ಕೆ2, ಅರ್ಷದ್ ಖಾನ್ 36ಕ್ಕೆ1, ವಿಪ್ರಜ್ ನಿಗಂ 36ಕ್ಕೆ1, ಸೂರ್ಯಾಂಶ್ ಶೆಡ್ಗೆ 13ಕ್ಕೆ1). ಪಂದ್ಯದ ಆಟಗಾರ: ಸದೀರ ಸಮರವಿಕ್ರಮ.

ಅರ್ಜೆಂಟೀನಾಕ್ಕೆ ಅಲ್ಜೀರಿಯಾ ಸವಾಲು

ಕನ್ಸಾಸ್: ಸತತ ಎರಡನೇ ಫಿಫಾ ವಿಶ್ವಕಪ್ ಟ್ರೋಫಿ ಗೆಲುವಿನ ಯತ್ನದಲ್ಲಿರುವ ಅರ್ಜೆಂಟೀನಾ ತಂಡವು, 'ಜೆ' ಗುಂಪಿನ ಪಂದ್ಯದಲ್ಲಿ ಮಂಗಳವಾರ ಅಲ್ಜೀರಿಯಾ ತಂಡವನ್ನು ಎಲುದರಿಸುವ ಮೂಲಕ ದಂಡಯಾತ್ರೆ ಆರಂಭಿಸಲಿದೆ. ಎಲ್ಲರ ಕಣ್ಣು, ದಾಖಲೆಯ ಆರನೇ ವಿಶ್ವಕಪ್ ಆಡುತ್ತಿರುವ 38 ವರ್ಷ ವಯಸ್ಸಿನ ನಾಯಕ ಲಯೊನೆಲ್ ಮೆಸ್ಸಿ ಅವರ ಮೇಲಿದೆ.

ಲಯೊನೆಲ್ ಮೆಸ್ಸಿ

ಜುಲೈ 2025ರ ನಂತರ ಮೊದಲ ಬಾರಿ ಅರ್ಜೆಂಟೀನಾ ತಂಡ ಫಿಫಾ ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಆದರೆ ಅಗ್ರ ರ‍್ಯಾಂಕ್‌ನೊಡನೆ ವಿಶ್ವಕಪ್ ಆಡಿದ ಯಾವುದೇ ತಂಡ ಇದುವರೆಗೆ ವಿಶ್ವಕಪ್ ಗೆದ್ದಿಲ್ಲ. ಹೀಗಾಗಿ ಈ 'ಸಂಪ್ರದಾಯ' ಮುರಿಯುವ ಸವಾಲೂ ಮೆಸ್ಸಿ ಪಡೆಯ ಮುಂದಿದೆ. ತಂಡವು ಅನುಭವಿಗಳ ಪಡೆ ಹೊಂದಿದೆ.

ಅಭ್ಯಾಸ ಪಂದ್ಯಗಳಲ್ಲಿ ಜಯ ಗಳಿಸಿದ್ದರಿಂದ ಅಲ್ಜೀರಿಯಾವೂ ಉತ್ಸಾಹದಲ್ಲಿದೆ. ತಂಡವು 20 ವರ್ಷ ವಯಸ್ಸಿನ ಉದಯೋನ್ಮುಖ ತಾರೆ ಇಬ್ರಾಹಿಂ ಮಝಾ ಅವರನ್ನು ಒಳಗೊಂಡಿದ್ದು, ಅವರ ಓಡಾಟ, ಆಟದ ಶೈಲಿಯು ಅರ್ಜೆಂಟೀನಾದ ದಿಗ್ಗಜ ಮರಡೋನಾ ಅವರನ್ನು ಹೋಲುತ್ತಿದೆ. ಅವರನ್ನೂ ಮರಡೋನಾ ಎಂದು ಅಭಿಮಾನಿಗಳು ಕರೆಯುತ್ತಾರೆ.

'ಎದುರಾಳಿಗಳಿಗೆ ಅರ್ಜೆಂಟೀನಾವನ್ನು ಎದುರಿಸುವುದು ಕಡು ಕಠಿಣ. ಏಕೆಂದರೆ ನಮ್ಮ ತಂಡವು ಅತಿ ಪ್ರಬಲ, ಒಗ್ಗಟ್ಟಿನಿಂದ ಕೂಡಿ ಗುಂಪು' ಎಂದಿದ್ದಾರೆ ಮೆಸ್ಸಿ.

ಐಸ್ ಹಾಕಿ: ರಾಜ್ಯ ತಂಡಗಳಿಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡಗಳು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಭಾನುವಾರ ಮುಕ್ತಾಯಗೊಂಡ 12 ವರ್ಷದೊಳಗಿನವರ ಐಸ್ ಹಾಕಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್ ಆದವು.

ಬಾಲಕರ ಫೈನಲ್‌ನಲ್ಲಿ ಕರ್ನಾಟಕ ತಂಡವು 2–8 ಗೋಲುಗಳಿಂದ ಚಂಡೀಗಢ ತಂಡಕ್ಕೆ ಮಣಿದು, ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು. ರಾಜಸ್ಥಾನ ತಂಡವು ಕಂಚಿನ ಪದಕ ಗೆದ್ದುಕೊಂಡಿತು. ಬಾಲಕಿಯರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಕರ್ನಾಟಕ ತಂಡವು ಆಂಧ್ರಪ್ರದೇಶ ತಂಡಕ್ಕೆ ಮಣಿದು, ಬೆಳ್ಳಿ ಪದಕದೊಂದಿಗೆ ಅಭಿಯಾನ ಮುಗಿಸಿತು. ಚಂಡೀಗಢ ತಂಡವು ಮೂರನೇ ಸ್ಥಾನ ಗಳಿಸಿತು.

ನೇಷನ್ಸ್ ಕಪ್: ಭಾರತ ಶುಭಾರಂಭ

ಆಕ್ಲೆಂಡ್ (ಪಿಟಿಐ): ಅನುಭವಿಗಳಾದ ದೀಪಿಕಾ ಕುಮಾರಿ ಮತ್ತು ನವನೀತ್ ಕೌರ್ ಅವರ ಅಮೋಘ ಆಟದ ನೆರವಿನಿಂದ ಭಾರತ ವನಿತೆಯರ ಹಾಕಿ ತಂಡ ಎಫ್‌ಐಎಚ್ ನೇಷನ್ಸ್ ಕಪ್ ಟೂರ್ನಿಯಲ್ಲಿ ಸೋಮವಾರ ಶುಭಾರಂಭ ಮಾಡಿತು.

ಎರಡು ಗೋಲುಗಳ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತ ತಂಡವು 'ಎ' ಗುಂಪಿನ ಪಂದ್ಯದಲ್ಲಿ 3–2 ಅಂತರದಿಂದ ಅಮೆರಿಕ ತಂಡವನ್ನು ಮಣಿಸಿತು. ದೀಪಿಕಾ ಅವಳಿ ಗೋಲು ಗಳಿಸಿದರೆ, ನವನೀತ್ ನಿರ್ಣಾಯಕ ಗೋಲು ದಾಖಲಿಸಿದರು. ಅಮೆರಿಕದ ಪರ ಆ್ಯಶ್ಲೆ ಸೆಸ್ಸಾ ಮತ್ತು ಮೆಡೆಲಿನ್ ಜಿಮ್ಮರ್ ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ದೀಪಿಕಾ ಕುಮಾರಿ 'ಎಕ್ಸ್' ಚಿತ್ರ

ಅಮೆರಿಕ ತಂಡವು ಉತ್ತಮ ಆರಂಭವನ್ನು ಪಡೆಯಿತು. ಪಂದ್ಯದ ನಾಲ್ಕನೇ ನಿಮಿಷದಲ್ಲೇ ಆ್ಯಶ್ಲೆ ಅವರು ಫೀಲ್ಡ್ ಗೋಲು ಗಳಿಸುವ ಮೂಲಕ ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ಅದಾದ ಮೂರು ನಿಮಿಗಳ ನಂತರ ಜಿಮ್ಮರ್ (ನೇ) ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ, ಅಮೆರಿಕ ತಂಡದ ಮುನ್ನಡೆಯನ್ನು ದ್ವಿಗುಣಗೊಳಿಸಿದರು. ಇದರಿಂದಾಗಿ ಭಾರತ ತಂಡವು ತೀವ್ರ ಒತ್ತಡಕ್ಕೆ ಒಳಗಾಯಿತು.

ಎರಡನೇ ಕ್ವಾರ್ಟರ್‌ನಲ್ಲಿ ಡ್ರ್ಯಾಗ್-ಫ್ಲಿಕರ್ ದೀಪಿಕಾ (17ನೇ) ಪೆನಾಲ್ಟಿ ಕಾರ್ನರ್ ಅನ್ನು ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿ ಭಾರತದ ಗೋಲಿನ ಖಾತೆ ತೆರೆದರು. 24ನೇ ನಿಮಿಷದಲ್ಲಿ ದೀಪಿಕಾ ಮತ್ತೊಮ್ಮೆ ಪರಾಕ್ರಮ ಮೆರೆದರು. ಹೀಗಾಗಿ, ತಂಡಗಳ ಸ್ಕೋರ್ ಸಮಬಲಗೊಂಡಿತು. ಇದಾದ ನಾಲ್ಕೇ ನಿಮಿಷದಲ್ಲಿ ನವನೀತ್ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚಾಣಾಕ್ಷತೆ ಮೆರೆದು ಭಾರತಕ್ಕೆ ಮುನ್ನಡೆ ಒದಗಿಸಿದರು. ಇದು ಗೆಲುವಿಗೆ ನಿರ್ಣಾಯಕವಾಯಿತು. ನಂತರದ ಎರಡೂ ಕ್ವಾರ್ಟರ್‌ಗಳಲ್ಲಿ ಯಾವುದೇ ತಂಡಕ್ಕೆ ಗೋಲು ಲಭಿಸಲಿಲ್ಲ.

ದೋಹಾ ಡೈಮಂಡ್ ಲೀಗ್: ನೀರಜ್ ಕಣಕ್ಕೆ



ನವದೆಹಲಿ (ಪಿಟಿಐ): ಗಾಯದಿಂದ ಚೇತರಿಸಿಕೊಂಡಿರುವ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಇದೇ 19ರಂದು ದೋಹಾ ಡೈಮಂಡ್ ಲೀಗ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಜೂನ್ 12ರಂದು ಸಂಘಟಕರು ಘೋಷಿಸಿದ ಪಟ್ಟಿಯಲ್ಲಿ ಚೋಪ್ರಾ ಅವರ ಹೆಸರು ಇರಲಿಲ್ಲ. ಅವರ ಹೆಸರನ್ನು ತಡವಾಗಿ ಸೇರ್ಪಡೆ ಮಾಡಲಾಗಿದೆ. ಅವರು ಪ್ರಸ್ತುತ ಸ್ವಿಟ್ಜರ್ಲೆಂಡ್‌ನ ಒಲಿಂಪಿಕ್ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

28 ವರ್ಷ ವಯಸ್ಸಿನ ನೀರಜ್ ಬೆನ್ನುನೋವಿಗೆ ತುತ್ತಾಗಿದ್ದರು. ಹೀಗಾಗಿ, ಈ ಋತುವಿನಲ್ಲಿ ಈವರೆಗೆ ಸ್ಪರ್ಧಿಸಲು ಅವರಿಗೆ ಸಾಧ್ಯವಾಗಿರಲಿಲ್ಲ.

'ದೋಹಾದಲ್ಲಿ ಭೇಟಿಯಾಗೋಣ' ಎಂದು ಚೋಪ್ರಾ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿದ್ದಾರೆ.

ಟೋಕಿಯೊದಲ್ಲಿ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 84.03 ಮೀಟರ್ ದೂರ ಈಟಿ ಎಸೆಯುವ ಮೂಲಕ ಎಂಟನೇ ಸ್ಥಾನ ಪಡೆದ ನಂತರ ಅವರು ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿಲ್ಲ.

2020ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡಿರುವ ಅವರು 2025ರ ದೋಹಾ ಡೈಮಂಡ್ ಲೀಗ್‌ನಲ್ಲಿ 90.23 ಮೀ ಎಸೆಯುವ ಮೂಲಕ ಮೊದಲ ಬಾರಿ 90 ಮೀ. ಮೈಲಿಗಲ್ಲು ದಾಟಿದ್ದರು.

ಕಾಮನ್‌ವೆಲ್ತ್ ಕೂಟಕ್ಕೆ ಯಶಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಶಸ್ ಪಾಲಾಕ್ಷ ಹಾಗೂ ಲೋಕೇಶ್ ಸತ್ಯನಾಥನ್ ಅವರು ಸ್ಕಾಟ್ಲೆಂಡ್‌ನ ಗ್ಲಾಸ್ಗೊನಲ್ಲಿ ಜುಲೈ– ಆಗಸ್ಟ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. 32 ಅಥ್ಲೀಟ್‌ಗಳ ತಂಡವನ್ನು ಜಾವೆಲಿನ್ ತಾರೆ ನೀರಜ್ ಚೋಪ್ರಾ ಮುನ್ನಡೆಸಲಿದ್ದಾರೆ.

ಯಶಸ್ ಅವರು 400 ಮೀ. ಹರ್ಡಲ್ಸ್ ಓಟವನ್ನು 49 ಸೆಕೆಂಡುಗಳಲ್ಲಿ ಪೂರೈಸಿ ಈ ರೇಸ್‌ನಲ್ಲಿ ಭಾರತದ ಎರಡನೇ ವೇಗದ ಓಟಗಾರ ಎನಿಸಿದ್ದಾರೆ. ಲೋಕೇಶ್ ಅವರು ಲಾಂಗ್‌ಜಂಪ್‌ನಲ್ಲಿ ನಿಗದಿತ ಅರ್ಹತಾ ಮಾನದಂಡವನ್ನು (8.05 ಮೀ) ಪೂರೈಸದಿದ್ದರೂ, ಈ ಹಿಂದಿನ ಸಾಧನೆಯ ಆಧಾರದಲ್ಲಿ ಭಾರತ ಅಥ್ಲೆಟಿಕ್ ಫೆಡರೇಷನ್ ಅವರಿಗೆ ಅವಕಾಶ ನೀಡಿದೆ. ಅವರು ಈ ವರ್ಷದ ಮಾರ್ಚ್‌ನಲ್ಲಿ ಅಮೆರಿಕದ ಎನ್‌ಸಿಎಎ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ 8.21 ಮೀ. ಜಿಗಿದಿದ್ದರು.

ದೇಶದ ಅಗ್ರಮಾನ್ಯ ಸ್ಪ್ರಿಂಟರ್‌ಗಳಾದ ಗುರ್ವೀಂದರ್ ಸಿಂಗ್ ಹಾಗೂ ಅನಿಮೇಶ್ ಕುಜೂರ್ ಅವರು ಕ್ರಮವಾಗಿ ಪುರುಷರ 100 ಮೀ. ಮತ್ತು 200 ಮೀ. ಓಟದಲ್ಲಿ ಕಣಕ್ಕಿಯಲಿದ್ದಾರೆ.

ತಂಡ ಹೀಗಿದೆ: ಪುರುಷರು: 100 ಮೀ.: ಗುರ್ವೀಂದರ್ ಸಿಂಗ್; 200 ಮೀ.: ಅನಿಮೇಶ್ ಕುಜೂರ್; 400 ಮೀ.: ವಿಶಾಲ್ ಟಿ.ಕೆ., ರಾಜೇಶ್ ರಮೇಶ್; 110 ಮೀ. ಹರ್ಡಲ್ಸ್: ತೇಜಸ್ ಶಿರ್ಸೆ; 400 ಮೀ. ಹರ್ಡಲ್ಸ್: ಯಶಸ್ ಪಾಲಾಕ್ಷ, ಸಂತೋಷ್ ಕುಮಾರ್ ಟಿ.; 5,000 ಮೀ: ಗುಲ್ವೀರ್ ಸಿಂಗ್; 10,000 ಮೀ.: ಗುಲ್ವೀರ್ ಸಿಂಗ್; ಡೆಕಾತ್ಲಾನ್: ತೇಜಸ್ವಿನ್ ಶಂಕರ್; ಹೈಜಂಪ್: ಸರ್ವೇಶ್ ಅನಿಲ್ ಕುಶಾರೆ, ಆದರ್ಶ್ ರಾಮ್ ಜೆ., ತೇಜಸ್ವಿನ್ ಶಂಕರ್; ಪೋಲ್‌ವಾಲ್ಟ್: ದೇವ್ ಮೀನಾ, ಕುಲ್ದೀಪ್ ಕುಮಾರ್; ಲಾಂಗ್ ಜಂಪ್: ಮುರಳಿ ಶ್ರೀಶಂಕರ್, ಲೋಕೇಶ್ ಸತ್ಯನಾಥನ್; ಟ್ರಿಪಲ್ ಜಂಪ್: ಪ್ರವೀಣ್ ಚಿತ್ರವೇಲ್, ಸೆಲ್ವ ಪ್ರಭು; ಶಾಟ್‌ಪಟ್: ಸಮರ್‌ದೀಪ್ ಸಿಂಗ್ ಗಿಲ್, ತಜೀಂದರ್‌ಪಾಲ್ ಸಿಂಗ್ ತೂರ್; ಜಾವೆಲಿನ್ ಎಸೆತ: ನೀರಜ್ ಚೋಪ್ರಾ, ರೋಹಿತ್ ಯಾದವ್, ಯಶವೀರ್ ಸಿಂಗ್.

ಮಹಿಳೆಯರು: 3,000 ಮೀ. ಸ್ಟೀಪಲ್ ಚೇಸ್: ಪಾರುಲ್ ಚೌಧರಿ; 5,000 ಮೀ.: ಪಾರುಲ್ ಚೌಧರಿ; 4x400 ಮೀ. ರಿಲೇ: ಅನ್ಸಾ ಬಾಬು, ರಾಶ್‌ದೀಪ್ ಕೌರ್, ನೀರೂ ಪಾಠಕ್; 10,000 ಮೀ. ರೇಸ್‌ವಾಕ್: ರವೀನಾ, ಪ್ರಿಯಾಂಕಾ; ಹೈಜಂಪ್: ಪೂಜಾ; ಶಾಟ್‌ಪಟ್: ಮನ್‌ಪ್ರೀತ್ ಕೌರ್; ಡಿಸ್ಕಸ್ ಥ್ರೋ: ಸೀಮಾ, ಆರ್.ನಿಧಿ.

ಯಶಸ್ ಪಾಲಾಕ್ಷ

ಲೋಕೇಶ್ ಸತ್ಯನಾಥನ್